ಹಾಲಕ್ಕಿ ಮಹಿಳೆಯರ ಸಾಮಾಜಿಕ-ಆರ್ಥಿಕ ಪರಿವರ್ತನೆಯ ನೆಲೆಗಳು ಒಂದು ಅಧ್ಯಯನ

(ಅರ್ಥಶಾಸ್ತ್ರ ವಿಷಯಕ್ಕೆ ಸಂಬಂಧಿಸಿದಂತೆ ಪಿಹೆಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ
ಸಾದರಪಡಿಸಿದ ಸಂಶೋಧನ ಮಹಾಪ್ರಬಂಧ)

ಸಂಶೋಧಕರು
ಸಂಗೀತಾ ಗಾಂವಕರ
ಆಯ್ಕೆ ಶ್ರೇಣಿ ಉಪನ್ಯಾಸಕರು
ಎಸ್.ಯು.ಜಿ.ಎನ್. ಥಿಯೋಸಾಫಿಕಲ್ ಮಹಿಳಾ ಕಾಲೇಜು,
ಹೊಸಪೇಟೆ

ಮಾರ್ಗದರ್ಶಕರು
ಡಾ.ಟಿ.ಆರ್.ಚಂದ್ರಶೇಖರ
ಪ್ರಾಧ್ಯಾಪಕರು
ಅಭಿವೃದ್ಧಿ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

341

ಅಭಿವೃದ್ಧಿ ಅಧ್ಯಯನ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩೨೭೬
೨೦೦೯

ಪರಾಮರ್ಶೆಗೆ ಮಾತ್ರ

"ಸಿರಿಗನ್ನಡ" ಗ್ರಂಥಾಲಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

CORPUS ID
PH-111

341

AKSHARA GRANTHALAYA

ACC.NO. 049234

ಹಾಲಕ್ಕಿ ಮಹಿಳೆಯರ ಸಾಮಾಜಿಕ-ಆರ್ಥಿಕ ಪರಿವರ್ತನೆಯ ನೆಲೆಗಳು ಒಂದು ಅಧ್ಯಯನ

(ಅರ್ಥಶಾಸ್ತ್ರ ವಿಷಯಕ್ಕೆ ಸಂಬಂಧಿಸಿದಂತೆ ಪಿಹೆಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಸಂಶೋಧನ ಮಹಾಪ್ರಬಂಧ)

ಸಂಶೋಧಕರು

ಸಂಗೀತಾ ಗಾಂವಕರ

ಆಯ್ಕೆ ಶ್ರೇಣಿ ಉಪನ್ಯಾಸಕರು

ಎಸ್.ಯು.ಬಿ.ಎನ್. ಥಿಯೋಸಾಫಿಕಲ್ ಮಹಿಳಾ ಕಾಲೇಜು,

ಹೊಸಪೇಟೆ

ಮಾರ್ಗದರ್ಶಕರು

ಡಾ.ಟಿ.ಆರ್.ಚಂದ್ರಶೇಖರ

ಪ್ರಾಧ್ಯಾಪಕರು

ಅಭಿವೃದ್ಧಿ ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ಅಭಿವೃದ್ಧಿ ಅಧ್ಯಯನ ವಿಭಾಗ

ಸಮಾಜ ವಿಜ್ಞಾನಗಳ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩೨೭೬

೨೦೦೯

305.42
SAN h
049234

ಗಣಕೀಕರಣ ಆಗಿದೆ.

ಪ್ರಮಾಣ ಪತ್ರ

ಹಾಲಕ್ಕಿ ಮಹಿಳೆಯರ ಸಾಮಾಜಿಕ-ಆರ್ಥಿಕ ಪರಿವರ್ತನೆಯ ನೆಲೆಗಳು ಒಂದು ಅಧ್ಯಯನ ಎಂಬ ವಿಷಯದ ಕುರಿತು ಡಾ.ಟಿ.ಆರ್.ಚಂದ್ರಶೇಖರ ಅವರ ಮಾರ್ಗದರ್ಶನದಲ್ಲಿ ಸಂಶೋಧನಾತ್ಮಕ ಅಧ್ಯಯನ ಮಾಡಿ ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿದ್ದೇನೆ.

ಈ ಮಹಾಪ್ರಬಂಧವನ್ನು ಇದುವರೆಗೆ ಯಾವುದೇ ಪದವಿ ಅಥವಾ ಡಿಪ್ಲೋಮಗಾಗಿ ಪ್ರಸ್ತುತಪಡಿಸಿಲ್ಲ. ಅಲ್ಲದೇ ಇದು ಇಲ್ಲಿಯವರೆಗೆ ಎಲ್ಲಿಯೂ ಇಡಿಯೇಗಿ ಅಥವಾ ಬಿಡಿಯಾಗಿ ಪ್ರಕಟಗೊಂಡಿಲ್ಲ ಮತ್ತು ಇದು ನನ್ನ ಸ್ವತಂತ್ರ ಸಂಶೋಧನ ಅಧ್ಯಯನವಾಗಿದೆಯೆಂದು ಪ್ರಮಾಣೀಕರಿಸುತ್ತೇನೆ.

S. Gaonkar

ಸಂಶೋಧಕರು

ಸಂಗೀತಾ ಗಾಂವಕರ

ಆಯ್ಕೆ ಶ್ರೇಣಿ ಉಪನ್ಯಾಸಕರು

ಎಸ್.ಯು.ಬಿ.ಎನ್. ಥಿಯೋಸಾಫಿಕಲ್ ಮಹಿಳಾ ಕಾಲೇಜು,

ಹೊಸಪೇಟೆ

ಸ್ಥಳ : ವಿದ್ಯಾರಣ್ಯ

ದಿನಾಂಕ : .೦೮.೨೦೦೯

ದೃಢೀಕರಣ ಪತ್ರ

ಹಾಲಕ್ಕಿ ಮಹಿಳೆಯರ ಸಾಮಾಜಿಕ-ಆರ್ಥಿಕ ಪರಿವರ್ತನೆಯ ನೆಲೆಗಳು ಒಂದು ಅಧ್ಯಯನ ಎಂಬ ವಿಷಯದ ಕುರಿತು ಸಂಗೀತಾ ಗಾಂವಕರ ಅವರು ನನ್ನ ಮಾರ್ಗದರ್ಶನದಲ್ಲಿ ಸಂಶೋಧನಾತ್ಮಕ ಅಧ್ಯಯನ ಮಾಡಿ ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿದ್ದಾರೆ.

ಈ ಮಹಾಪ್ರಬಂಧವನ್ನು ಇದುವರೆಗೆ ಯಾವುದೇ ಪದವಿ ಅಥವಾ ಡಿಪ್ಲೋಮಗಾಗಿ ಪ್ರಸ್ತುತಪಡಿಸಿಲ್ಲ. ಅಲ್ಲದೇ ಇದು ಇಲ್ಲಿಯವರೆಗೆ ಎಲ್ಲಿಯೂ ಇಡಿಯಾಗಿ ಅಥವಾ ಬಿಡಿಯಾಗಿ ಪ್ರಕಟಗೊಂಡಿಲ್ಲ ಮತ್ತು ಇದು ಅವರ ಸ್ವತಂತ್ರ ಸಂಶೋಧನ ಅಧ್ಯಯನವಾಗಿದೆಯೆಂದು ದೃಢೀಕರಿಸುತ್ತೇನೆ.

ಸ್ಥಳ : ವಿದ್ಯಾರಣ್ಯ

ದಿನಾಂಕ : ..೦೮.೨೦೦೯

ಮಾರ್ಗದರ್ಶಕರು

ಡಾ.ಟಿ.ಆರ್.ಚಂದ್ರಶೇಖರ

ಪ್ರಾಧ್ಯಾಪಕರು

ಅಭಿವೃದ್ಧಿ ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ಕೃತಜ್ಞತೆಗಳು

ಕನ್ನಡ ವಿಶ್ವವಿದ್ಯಾಲಯದಲ್ಲಿ ಸಂಶೋಧನಾ ಅಧ್ಯಯನ ಕೈಗೊಳ್ಳಲು ಅವಕಾಶ ನೀಡಿದ ಹಿಂದಿನ ಕುಲಪತಿಗಳಾಗಿದ್ದ ಮಾನ್ಯ ಡಾ.ಬಿ.ಎ.ವಿವೇಕ ರೈ ಅವರಿಗೆ, ಈಗಿನ ಕುಲಪತಿಗಳಾದ ಮಾನ್ಯ ಡಾ.ಎ.ಮುರಿಗೆಪ್ಪ ಅವರಿಗೆ ನನ್ನ ವಂದನೆಗಳು.

ಕುಲಸಚಿವರಾದ ಮಾನ್ಯ ಶ್ರೀ ಎಸ್.ಎಸ್.ಪೂಜಾರ್ ಅವರಿಗೆ, ಅಧ್ಯಯನಾಂಗದ ನಿರ್ದೇಶಕರಾದ ಡಾ.ವೀರೇಶ ಬಡಿಗೇರ ಅವರಿಗೆ, ಹಾಗೂ ಅಭಿವೃದ್ಧಿ ಅಧ್ಯಯನ ವಿಭಾಗದ ಮುಖ್ಯಸ್ಥರಾದ ಡಾ.ಜನಾರ್ದನ ಅವರಿಗೆ ನಾನು ಆಭಾರಿ.

ಅಭಿವೃದ್ಧಿಯಲ್ಲಿ ನಿರ್ಣಾಯಕ ಪಾತ್ರ ನಿರ್ವಹಿಸುವ ಮಹಿಳೆಯರ ಪರಿವರ್ತನೆಯ ಕುರಿತು ಅಧ್ಯಯನ ಮಾಡಲು ತಮ್ಮ ಅಮೂಲ್ಯ ಜ್ಞಾನ ಮತ್ತು ಸಮಯವನ್ನು ನೀಡಿ ಮಾರ್ಗದರ್ಶನ ಮಾಡಿದ ಡಾ.ಟಿ.ಆರ್.ಚಂದ್ರಶೇಖರ ಅವರಿಗೆ, ಅಭಿವೃದ್ಧಿ ಅಧ್ಯಯನ ವಿಭಾಗದ ಪ್ರಾಧ್ಯಾಪಕರಾದ ಡಾ.ಎಂ.ಚಂದ್ರ ಪೂಜಾರಿ ಅವರಿಗೆ. ಡಾ.ಎಚ್.ಡಿ.ಪ್ರಶಾಂತ ಅವರಿಗೆ, ಡಾ.ಎ.ಶ್ರೀಧರ ಅವರಿಗೆ ಹಾಗೂ ಡಾ.ಸಿದ್ಧಗಂಗಮ್ಮ ಅವರಿಗೆ ನನ್ನ ಹೃದಯ ಪೂರ್ವಕ ಕೃತಜ್ಞತೆಗಳು.

ವಿಭಾಗದ ಶ್ರೀ ಶಂಕರ, ಶ್ರೀಮತಿ ಗಂಗಮ್ಮ ಗೌಳಿ ಅವರಿಗೆ ಹಾಗೂ ಬೇರೆ ಬೇರೆ ಸಂದರ್ಭಗಳಲ್ಲಿ ಸಹಕರಿಸಿದ ಕನ್ನಡ ವಿಶ್ವವಿದ್ಯಾಲಯದ ಎಲ್ಲಾ ಅಧ್ಯಾಪಕ ವರ್ಗ ಮತ್ತು ಸಿಬ್ಬಂದಿ ವರ್ಗಕ್ಕೆ ನನ್ನ ವಂದನೆಗಳು.

ಸಂಶೋಧನೆಗೆ ಅನುಕೂಲ ಮಾಡಿಕೊಟ್ಟ ನನ್ನ ಮಾತೃ ಸಂಸ್ಥೆಯಾದ ಥಿಯೋಸಾಫಿಕಲ್ ಸಂಸ್ಥೆಯ ಹಿಂದಿನ ಅಧ್ಯಕ್ಷರಾದ ದಿ.ಶ್ರೀ.ಜಿ.ಶಂಕರಗೌಡ, ಮಾಜಿ ಶಾಸಕರು ಅವರಿಗೆ ಇಂದಿನ ಅಧ್ಯಕ್ಷರಾದ ಶ್ರೀ ಬಾಬುಲಾಲ್ ಜಿ.ಜೈನ ಅವರಿಗೆ, ಕಾರ್ಯದರ್ಶಿಗಳಾದ ಶ್ರೀ ಕೆ.ಸ್ವಾಮಿರಾವ್ ಅವರಿಗೆ, ಶ್ರೀ ಅಶೋಕ ಜೀರೆ ಅವರಿಗೆ, ಶ್ರೀ ಹೆಚ್.ರಾಘವೇಂದ್ರಚಾರ್ಯ ಅವರಿಗೆ ಬಿ.ಬಿ.ಎಮ್. ಕೋರ್ಸಿನ ಸಂಚಾಲಕರಾದ ಶ್ರೀ ಎಮ್.ಬಾಲಚಂದ್ರರಾವ್ ಅವರಿಗೆ ಹಾಗೂ ಆಡಳಿತ ಮಂಡಳಿಯ ಎಲ್ಲಾ ಸದಸ್ಯರಿಗೆ, ನಾನು ಕಾರ್ಯನಿರ್ವಹಿಸುವ ಎಸ್.ಯು.ಬಿ.ಎನ್.


ಕೋಷ್ಟಕಸೂಚಿ

ನಕ್ಷೆ - 1 : ಉತ್ತರ ಕನ್ನಡ ಜಿಲ್ಲಾ ಭೌಗೋಳಿಕ ಪ್ರದೇಶ





ನಕ್ಷೆ - 2 : ಅಂಕೋಲಾ ತಾಲೂಕಿನ ಭೌಗೋಳಿಕ ಪ್ರದೇಶ





ನಕ್ಷೆ - 3 :   ಕುಮಟ ತಾಲೂಕಿನ ಭೌಗೋಳಿಕ ಪ್ರದೇಶ



ಅಧ್ಯಾಯ ೧

ವಿಷಯ ಪ್ರವೇಶ

೧.೧. ವಿಷಯದ ಸಮಸ್ಯೀಕರಣ

೧.೨. ಸಮುದಾಯದ ಹಿನ್ನೆಲೆ

೧.೩. ಹಾಲಕ್ಕಿ ಮಹಿಳೆಯರು

೧.೪. ಸಮುದಾಯದ ಹಿನ್ನೆಲೆ

೧.೫. ಕರ್ನಾಟಕದಲ್ಲಿ ಹಾಲಕ್ಕಿಗಳ ನೆಲೆ

೧.೬ ಅಧ್ಯಯನಗಳ ಮಾಹಿತಿ

೧.೭ ಸೈದ್ಧಾಂತಿಕ ಚೌಕಟ್ಟು

೧.೮. ಅಧ್ಯಯನದ ವಿಧಾನ

೧.೯. ಅಧ್ಯಯನದ ಉದ್ದೇಶಗಳು

೧.೧೦. ಅಧ್ಯಯನದ ಅವಶ್ಯಕತೆ ಮತ್ತು ಮಿತಿಗಳು

೧.೧೧. ಅಧ್ಯಯನದ ವಿನ್ಯಾಸ

ಅಧ್ಯಾಯ ೧

ವಿಷಯ ಪ್ರವೇಶ

ಪ್ರಸ್ತಾವನೆ

ಒಂದು ಪ್ರದೇಶದಲ್ಲಿ ವಾಸಿಸುವ ಜನ ಸಮುದಾಯದ ಅಭಿವೃದ್ಧಿಯನ್ನು ಅಲ್ಲಿನ ಸಾಮಾಜಿಕ-ಆರ್ಥಿಕ ಪರಿವರ್ತನೆಯ ಮಾನದಂಡದ ಮೂಲಕ ಅಳೆಯಬಹುದು. ಅಭಿವೃದ್ಧಿ ಅಧ್ಯಯನಗಳಲ್ಲಿ ಸಾಮಾಜಿಕ-ಆರ್ಥಿಕ ಪರಿವರ್ತನೆಯನ್ನು ರಾಚನಿಕ ಬದಲಾವಣೆಯೆಂದು ಗುರುತಿಸಲಾಗಿದೆ. ಇಂತಹ ಸಾಮಾಜಿಕ ಬದಲಾವಣೆಗೆ ಕಾರಣಗಳಾವವು? ಅವು ಯಾವ ಕಾರಣದಿಂದ ಉಂಟಾಗುತ್ತವೆ? ಹಾಗೂ ಯಾವ ಸೂಚಿಗಳ ಮೂಲಕ ಸಾಮಾಜಿಕ ಬದಲಾವಣೆಯನ್ನು ಅಳೆಯಬಹುದು? ಎಂಬುವುದರ ಕುರಿತು ಅಧ್ಯಯನಕಾರರಲ್ಲಿ ಭಿನ್ನಾಭಿಪ್ರಾಯ ಕಂಡುಬರುತ್ತದೆ. ಏಕೆಂದರೆ, ಸಾಮಾಜಿಕ ಆರ್ಥಿಕ ಪರಿವರ್ತನೆ ತುಂಬಾ ಸಂಕೀರ್ಣವಾದುದಾಗಿದೆ. ಪರಿವರ್ತನೆಯನ್ನು ಕೇವಲ ಒಂದೇ ಚಲದಿಂದ ಗುರುತಿಸಲು ಸಾಧ್ಯವಾಗದು. ಪರಿವರ್ತನೆಗೆ ಸಾಮಾಜಿಕ, ಆರ್ಥಿಕ, ರಾಜಕೀಯ, ಧಾರ್ಮಿಕ, ಸಾಂಸ್ಕೃತಿಕ, ತಾಂತ್ರಿಕ ಅಂಶಗಳು ಕಾರಣವಾಗಿರುತ್ತವೆ. ಪರಿವರ್ತನೆಯನ್ನು ವಿವಿಧ ಹಂತಗಳಲ್ಲಿ ಅಧ್ಯಯನಕಾರರು ವಿವರಿಸಿದ್ದಾರೆ. ಸಾಮಾಜಿಕ ಆರ್ಥಿಕ ಪರಿವರ್ತನೆಯು ಮಾನವನ ವಿಕಾಸದ ಹಂತದಿಂದ (ಡಾರ್ವಿನ್ ಸಿದ್ಧಾಂತ) ಬಂಡವಾಳ ಅರ್ಥ ವ್ಯವಸ್ಥೆಯ ಬೆಳವಣಿಗೆಯ ಹಂತದವರೆಗಿನ ಹಂತವನ್ನು ಒಳಗೊಂಡಿದೆ. ಹೀಗಾಗಿ ಹಾಲಿ ಅಸ್ತಿತ್ವದಲ್ಲಿ ಸಾಮಾಜಿಕ ಚೌಕಟ್ಟು, ಸಾಮಾಜಿಕ ಆಚಾರ, ವಿಚಾರ ಮತ್ತು ಮನೋವೃತ್ತಿಯಲ್ಲಿ ಆಮೂಲಾಗ್ರ ಬದಲಾವಣೆ ಕಂಡುಬರುತ್ತದೆ(ಕಾರ್ಲ್‌ಮಾರ್ಕ್ಸ್ ೧೮೪೫). ಈ ತರಹದ ಸಾಮಾಜಿಕ ಬದಲಾವಣೆಯನ್ನು ಕುಜ್ನೆಟ್ಸ್ (೧೯೫೫) ಹಾಗೂ ರೊಸ್ಟೋ (೧೯೬೦) ಸಹ ಗುರುತಿಸಿದ್ದಾರೆ. ಅಭಿವೃದ್ಧಿಯನ್ನು ಐದು ಹಂತಗಳ ಮೂಲಕ ಹಾದುಹೋಗುವ ಒಂದು ಪ್ರಕ್ರಿಯೆಯೆಂದು ರೋಸ್ಟೋ ಅವರು ಗುರುತಿಸಿದ್ದಾರೆ. ರೋಸ್ಟೋರವರ

ಪ್ರಕಾರ ಭಾರತವು (೧೯೫೨) ಬದಲಾವಣೆಯ ಹಂತವನ್ನು ತಲುಪಿದೆ. ಆಧುನಿಕತೆಯ ವಿಕಾಸವನ್ನು ರೊಸ್ಟೋರವರು ಸಾಮಾಜಿಕ ಸಾಂಸ್ಕೃತಿಕ ಹಾಗೂ ಮಾನವನ ವರ್ತನೆಯ ಮೂಲಕ ವಿವರಿಸಿದ್ದಾರೆ.

ರೋಸ್ಟೋರವರ ಪ್ರಕಾರ ಮೊದಲು ಸಾಂಪ್ರದಾಯಿಕ ಹಂತದಲ್ಲಿ ಸಮಾಜದಲ್ಲಿ ಹಳೆಯ ಮೌಲ್ಯಗಳು ಮತ್ತು ಕಂದಾಚಾರಗಳು ಇಡೀ ಸಮಾಜವನ್ನು ತನ್ನ ಹಿಡಿತದಲ್ಲಿಟ್ಟುಕೊಂಡಿರುತ್ತದೆ. ಇಂತಹ ಸಮಾಜದಲ್ಲಿ ನ್ಯೂಟನ್ ಪೂರ್ವದ ವಿಜ್ಞಾನ ಹಾಗೂ ತಂತ್ರಜ್ಞಾನವನ್ನು ಬಳಸಿಕೊಳ್ಳಲಾಗುತ್ತದೆ. ಈ ಹಂತದಲ್ಲಿ ಸಮಾಜ ಕೃಷಿಯನ್ನೆ ಅವಲಂಬಿಸಿದ್ದು, ಅಲ್ಲಿ ಊಳಿಗಮಾನ್ಯ ಸಂಬಂಧ ಇರುವುದು ಕಂಡುಬರುತ್ತದೆ. ರೋಸ್ಟೋರವರು ಎರಡನೆಯ ಹಂತವನ್ನು ಪರಿವರ್ತನೆಯ ಹಂತವೆಂದು ಗುರುತಿಸಿರುವರು. ಈ ಹಂತದಲ್ಲಿ ಸಮಾಜದಲ್ಲಿ ಆರ್ಥಿಕ, ಸಾಮಾಜಿಕ, ರಾಜಕೀಯಸ್ತರದಲ್ಲಿ ಬದಲಾವಣೆ ಉಂಟಾಗುತ್ತದೆ. ರೋಸ್ಟೋರವರ ಪ್ರಕಾರ ಭಾರತವು ಸ್ವಾತಂತ್ರ್ಯಾನಂತರದ ಕಾಲಾವಧಿಯನ್ನು ಎರಡನೆಯ ಹಂತವನ್ನು ತಲುಪಿದೆ. ಇಂತಹ ಪರಿವರ್ತನೆಯಿಂದ ಉದ್ಯೋಗದ ರಚನೆ, ಹಾಗೂ ವಿಸ್ತರಣೆಯಲ್ಲಿ ಶ್ರಮದ ಉತ್ಪಾದಕತೆಯಲ್ಲಿ, ಹೆಚ್ಚಳ, ತಂತ್ರಜ್ಞಾನದಲ್ಲಿ ಬದಲಾವಣೆ, ಆದಾಯದ ಅಸಮಾನತೆಯಲ್ಲಿ ಇಳಿಕೆ ಹಾಗೂ ಸಾಮಾಜಿಕ ಮೌಲ್ಯ ಮತ್ತು ಮನೋವ್ಯಕ್ತಿಯಲ್ಲಿ ಬದಲಾವಣೆ ಉಂಟಾಗುತ್ತವೆ.

ಸಾಂಪ್ರದಾಯಿಕ ನೆಲೆಯಲ್ಲಿ ಅಭಿವೃದ್ಧಿಯನ್ನು ಕೇವಲ ವರಮಾನದ ಹೆಚ್ಚಳದ ಮೂಲಕ ಗುರುತಿಸಲಾಗಿದೆ. ಅದನ್ನು ಒಂದು ಆರ್ಥಿಕ ಪ್ರಕ್ರಿಯೆಯಾಗಿ ಮಾತ್ರ ಪರಿಭಾವಿಸಿಕೊಳ್ಳಲಾಗಿದೆ. ಅಭಿವೃದ್ಧಿಯು ಮೇಲಿಂದ ಕೆಳಗೆ ಹರಿದು ಬರುವ ಒಂದು ಪ್ರಕ್ರಿಯೆಯೆಂದು ಪರಿಭಾವಿಸಲಾಗಿದೆ. ಆದ್ದರಿಂದ ಅಭಿವೃದ್ಧಿಯ ಫಲವೂ ಸಮಾಜದಲ್ಲಿ ಎಲ್ಲರಿಗೂ ನಿರಪೇಕ್ಷೆಯಾಗಿ ಹರಿದು ಬರುವುದೆಂದು ಬಗೆಯಲಾಯಿತು. ಅದರೆ ಹಾಗೆ ಆಗದ ಕಾರಣ ಅಭಿವೃದ್ಧಿಯ ಸಾಂಪ್ರದಾಯಿಕ ಸಿದ್ಧಾಂತವನ್ನು ಪ್ರಶ್ನಿಸಲಾಯಿತು. ಹೀಗಾಗಿ ಅಭಿವೃದ್ಧಿಯ ಪರಿಕಲ್ಪನೆಯಲ್ಲಿ ಕೂಡಾ ರಾಚನಿಕವಾದ ಬದಲಾವಣೆ ಉಂಟಾಯಿತು. ಅಭಿವೃದ್ಧಿಯು ಲಿಂಗ ತಾಟಸ್ಥವಾಗಿದೆ ಎಂಬ ಟೀಕೆಗೆ ಒಳಗಾಗಬೇಕಾಯಿತು. ಆರ್ಥಿಕ ಅಭಿವೃದ್ಧಿಗೆ ಮಹಿಳೆಯರ ಕೊಡುಗೆ ಮಹತ್ವದಾಗಿದ್ದರೂ ಕೂಡ, ಅದು ಪರಿಗಣನೆಗೆ ಒಳಪಟ್ಟಿಲ್ಲವೆಂದು ಈಸ್ತರ ಬೋಸರಪ್ (೧೯೭೦) ಅಭಿಪ್ರಾಯಪಟ್ಟಿರುವರು. ಅಭಿವೃದ್ಧಿಯನ್ನು ಕೇವಲ ಜಿ.ಎನ್.ಪಿ. ಮೂಲಕ ಅಳೆಯುವದರಿಂದ ಮಹಿಳೆಯರ ಗೋಚರ ಮತ್ತು ಅಗೋಚರವಾದ 'ದುಡಿಮೆ' ರಾಷ್ಟ್ರೀಯ ಆದಾಯದಲ್ಲಿ ಸೇರ್ಪಡೆ ಇದುವರೆಗೆ ಆಗಿಲ್ಲ. ಅಭಿವೃದ್ಧಿ ಯೋಜನೆಯಲ್ಲಿ ಪಾಲುದಾರಳಾದ ಮಹಿಳೆಯ ದುಡಿಮೆಯನ್ನು ರಾಷ್ಟ್ರೀಯ ಆದಾಯದಲ್ಲಿ ಸೇರಿಸಲು ಆಗಿಲ್ಲ.

ಹೀಗಾಗಿ ಇವತ್ತು ಸಿ.ಎಸ್.ಓ. ವರದಿ ಪ್ರಕಾರ ಕೇವಲ ಶೇ. ೪೯ರಷ್ಟು ಮಹಿಳೆಯ ದುಡಿಮೆ ಜಿ.ಎನ್.ಪಿ.ಯಲ್ಲಿ ಸೇರ್ಪಡೆಗೊಂಡಿದೆ. ವರದಿ ಒಂದರ ಪ್ರಕಾರ ದುಡಿಮೆಗೆ ಮಹಿಳೆಯ ಕೊಡುಗೆ ೨/೩ರಷ್ಟಿದೆ. ಆದರೆ ಗಳಿಸುವ ಸಂಪನ್ಮೂಲ ಮಾತ್ರ ೧/೧೦. ಗಂಭೀರವಾದ ಅಂಶವೆಂದರೆ ಆಸ್ತಿಯ ಒಡೆತನ ಮಾತ್ರ ಇವರಲ್ಲಿ ೧/೧೦೦ರಷ್ಟಿದೆ.

ಆದ್ದರಿಂದ ಆರ್ಥಿಕ ಅಭಿವೃದ್ಧಿಯ ಚಿಂತನೆಗಳು ಪುನರ್‌ಪರೀಕ್ಷೆಗೆ ಒಳಪಟ್ಟು, ಆರ್ಥಿಕೇತರ ಅಂಶಗಳು ಸೇರ್ಪಡೆಗೊಂಡವು. ಯು.ಎನ್.ಡಿ.ಪಿ. (೧೯೯೦) ಮಾನವ ಅಭಿವೃದ್ಧಿಯನ್ನು ಅಭಿವೃದ್ಧಿ ಸೂಚಿಯನ್ನಾಗಿ (ಹೆಚ್.ಡಿ.ಐ) ಬಳಸಿತು. ಜೀನ್ ಡ್ರೀಚ್ ಮತ್ತು ನೋಬೆಲ್ ಪಾರಿತೋಷಕ ವಿಜೇತರಾದ ಡಾ.ಅಮರ್ತ್ಯ ಸೇನ್‌ರವರ ಲಿಂಗ ಸಂಬಂಧಿ ಪ್ರಮೇಯವು ಅಭಿವೃದ್ಧಿಯ ಪರಿಕಲ್ಪನೆಯಲ್ಲಿ ಮಹತ್ವವನ್ನು ಪಡೆದುಕೊಂಡಿತು. ಹೀಗಾಗಿ ಅಭಿವೃದ್ಧಿಯಲ್ಲಿ ಗುಣಾತ್ಮಕ ಅಂಶಗಳು ಸೇರ್ಪಡೆಗೊಂಡವು. ಆರ್ಥಿಕ ಅಂಶದ ಜೊತೆಗೆ ಸಾಮಾಜಿಕ ಅಂಶಗಳಿಗೆ ಒತ್ತು ನೀಡಲಾಯಿತು. ಅಭಿವೃದ್ಧಿಯ ಪ್ರಕ್ರಿಯೆಯಲ್ಲಿ ಆದಾಯದ ಪ್ರಾಮುಖ್ಯತೆ ಕಡಿಮೆಯಾಯಿತು. ಅಭಿವೃದ್ಧಿಯ ಗುರಿ ಮಾನವರ ಸಾಮರ್ಥ್ಯ ವರ್ಧನೆ ಮಾಡಬೇಕು. ಆದ್ದರಿಂದ ಅಭಿವೃದ್ಧಿಯ ಸಾಮಾಜಿಕ ಪರಿವರ್ತನೆಯ ಪ್ರಕ್ರಿಯೆ ಎನ್ನಲಾಗುವುದು. ಅಭಿವೃದ್ಧಿಯ ಪರಿಕಲ್ಪನೆಯನ್ನು ಈ ಅಧ್ಯಯನದ ಹಿನ್ನೆಲೆಯಲ್ಲಿ ಜೀವನಮಟ್ಟ ಸುಧಾರಿಸುವ ಒಂದು ಪ್ರಕ್ರಿಯೆಯೆಂದು ತಿಳಿಯಲಾಗಿದೆ.

ಸಮಾಜಶಾಸ್ತ್ರದ ಅಧ್ಯಯನದಲ್ಲಿ ಸಾಮಾಜಿಕ ಬದಲಾವಣೆಯನ್ನು ಡಾರ್ವಿನ್ ವಿಕಾಸದ ಸಿದ್ಧಾಂತದಷ್ಟೆ ಅವಶ್ಯಕ ಎಂಬುದನ್ನು ಸೂಚಿಸಿದೆ. ಸಮಾಜಶಾಸ್ತ್ರ ಅಧ್ಯಯನದಲ್ಲಿ ಇಂತಹ ಪರಿವರ್ತನೆಯನ್ನು ಗುರುತಿಸಿರುವ ಪ್ರಮುಖರೆಂದರೆ ಕಾರ್ಲ್‌ಮಾರ್ಕ್ಸ್ (೧೮೧೮-೧೮೮೩) ವೇಬರ್ (೧೯೪೭) ಹಾಗೂ ಮೋರೆ(೧೯೬೭). ಸಾಮಾಜಿಕ ಪರಿವರ್ತನೆಯ ರೂಪ, ಕಾರಣ ಹಾಗೂ ವಿಧಾನದಲ್ಲಿ ಕೂಡಾ ಬದಲಾವಣೆ ಉಂಟಾಗುತ್ತಿರುವುದನ್ನು ಗುರುತಿಸಲಾಗಿದೆ.

ಸಮುದಾಯದ ಸಾಮಾಜಿಕ ರಚನೆಯ ಕಾರ್ಯ ಮತ್ತು ಸಂಬಂಧಗಳನ್ನು ಅನುಕ್ರಮವಾಗಿ ಜೋಡಿಸುವುದರ ಮೂಲಕ, ಪಟ್ಟಭದ್ರ ಹಿತಾಸಕ್ತಿಯನ್ನು ನಿರಂತರವಾಗಿ ಕಾಪಾಡಿಕೊಂಡು ಬರಲಾಗುವುದು. ಸಮುದಾಯದಲ್ಲಿ ವ್ಯಕ್ತಿ ವ್ಯಕ್ತಿಗಳ ನಡುವಿನ ಸಂಬಂಧಗಳನ್ನು ವ್ಯಾಖ್ಯಾನಿಸಲಾಗಿದೆ ಮತ್ತು ನಿಯಂತ್ರಿಸಲಾಗಿದೆ(ಬ್ರೌನ್: ೧೯೫೨). ಸಮಾಜದ ರಚನೆಯು ಅಧಿಕಾರ ಮತ್ತು ಆಸ್ತಿಯ ಹಂಚಿಕೆಯನ್ನು ಸಹ ಒಳಗೊಂಡಿದೆ. ಸಮಾಜದ ರಚನೆ ಕಾರ್ಯ ಸಂಬಂಧಗಳು ಸಹ ಲಿಂಗಾಧಾರಿತವಾಗಿದೆ. ಮಹಿಳೆ ಮತ್ತು ಪುರುಷರನ್ನು ಬೇರ್ಪಡಿಸುವ ಮತ್ತು ಸಂಯೋಜಿಸುವ ಅಂಶಗಳು, ಆದರ್ಶಗಳು, ನಿರೀಕ್ಷೆಗಳು, ಪಾತ್ರಗಳು, ಚಟುವಟಿಕೆಗಳು

ಸಮುದಾಯದ ಅವಶ್ಯಕತೆಗೆ ಅನುಗುಣವಾಗಿರುವುದು. ಇಂತಹ ಸಂಬಂಧದಲ್ಲಿ ಮತ್ತು ಕಾರ್ಯಗಳಲ್ಲಿ ಉಂಟಾದ ಮಾರ್ಪಾಡುಗಳನ್ನು ಸಹ ಸಾಮಾಜಿಕ ಬದಲಾವಣೆ ಎಂದು ಗುರುತಿಸಲಾಗಿದೆ.

ಈ ಅಧ್ಯಯನಗಳಲ್ಲಿ ಆಧುನೀಕರಣವನ್ನು ಪರಿವರ್ತನೆಯನ್ನಾಗಿ ಗುರುತಿಸಲಾಗಿದೆ. ಆಧುನೀಕರಣವು ಸಮಾಜದ ಸಂಘಟನೆಯಲ್ಲಿ ಹಾಗೂ ಮಾನವನ ವರ್ತನೆಯಲ್ಲಿ ಗುಣಾತ್ಮಕವಾದ ಬದಲಾವಣೆಯನ್ನು ಉಂಟು ಮಾಡುತ್ತದೆ. ಪ್ರತಿಯೊಂದು ರಾಷ್ಟ್ರವೂ ಕೂಡಾ ಇಂತಹ ರಾಚನಿಕವಾದ ಬದಲಾವಣೆಯಲ್ಲಿ ಹಾದು ಹೋಗುತ್ತದೆ. ಭಾರತದಲ್ಲಿ ಬ್ರಿಟಿಷ್ ಶಿಕ್ಷಣದಿಂದ, ಕೈಗಾರಿಕೀಕರಣದಿಂದ ಹಾಗೂ ಅಭಿವೃದ್ಧಿ ಯೋಜನೆಗಳಿಂದ ಆಧುನೀಕರಣದ ಪ್ರಕ್ರಿಯೆಗೆ ಒಳಗಾಗಿ ಉಂಟಾಗಿರುವ ಸಾಮಾಜಿಕ ಬದಲಾವಣೆ ಕುರಿತು ಸಾಕಷ್ಟು ಅಧ್ಯಯನಗಳು ನಡೆದಿವೆ. ತಮ್ಮ ಅಧ್ಯಯನದಲ್ಲಿ ಸಂಸ್ಕೃತೀಕರಣ ಮತ್ತು ಪಾಶ್ಚಿಮಾತ್ಯೀಕರಣದಿಂದ ಉಂಟಾದ ಸಾಮಾಜಿಕ ಬದಲಾವಣೆಯನ್ನು ಶ್ರೀನಿವಾಸ (೧೯೫೨–೧೯೭೨) ಗುರುತಿಸಿರುವರು.

ಭಾರತೀಯ ಸಮಾಜವು ವೇದೋಪನಿಷತ್ತು ಕಾಲದಲ್ಲಿ ತೆರೆದ ಸಮಾಜವಾಗಿತ್ತು ಎಂಬುದನ್ನು ಇತಿಹಾಸ ತಿಳಿಸುವುದು. ಮನು ಕಾಲದಿಂದ ಭಕ್ತಿಪಂಥದ ಕಾಲದವರೆಗೆ ಭಾರತೀಯರ ಸಮಾಜವು ಮುಚ್ಚಲ್ಪಟ್ಟ ಸಮಾಜವಾಗಿ ಮುಂದುವರೆಯಿತು. ಬ್ರಿಟಿಷರು ಭಾರತಕ್ಕೆ ಆಗಮಿಸುವ ಪೂರ್ವದಲ್ಲಿ ಪುರೋಹಿತರು ಪ್ರಭುತ್ವವನ್ನು ಹೊಂದಿದ್ದರು. ನಂತರ ಅವರ ಸ್ಥಾನವನ್ನು ಬ್ರಿಟಿಷರು ಆಕ್ರಮಿಸಿಕೊಂಡರು. ಗಾಂಧೀಜಿಯವರ ಕಾಲದಲ್ಲಿ ನಮ್ಮ ಸಮಾಜವು ತೆರೆದ ಸಮಾಜ ಎನ್ನಬಹುದು. ನಂತರ ನಾವು ನಮ್ಮ ಸಂವಿಧಾನ (೧೯೫೦) ರಚಿಸಿಕೊಂಡು ಆ ಮೂಲಕ ಎಲ್ಲರೂ ಸಮಾನರು ಎಂದು ಘೋಷಿಸಿಕೊಂಡಿದ್ದೇವೆ.

೧.೧. ವಿಷಯದ ಸಮಸ್ಯೀಕರಣ

ಭಾರತದ ಸಾಮಾಜಿಕ ರಚನೆಯು ವಿಶಿಷ್ಟವಾದದ್ದು. ಇಲ್ಲಿ ವಿವಿಧ ಸಂಸ್ಕೃತಿ, ವಿವಿಧ ಸಾಮಾಜಿಕ ಸಂಘಟನೆಗಳು, ಆರ್ಥಿಕತೆಗಳು, ಸಾಮಾಜಿಕ ನಿಯಂತ್ರಣಗಳು ಕಂಡುಬರುತ್ತದೆ. ಅದರಿಂದ 'ವಿವಿಧತೆಯಲ್ಲಿ ಏಕತೆ' ಎಂಬುದು ಸೂಕ್ತವಾಗಿದೆ. ಭಾರತದಲ್ಲಿ ಸಮುದಾಯ ಒಂದರ ಸಾಮಾಜಿಕ ಆರ್ಥಿಕ ಪರಿವರ್ತನೆಯನ್ನು ಅರ್ಥಮಾಡಿಕೊಳ್ಳವುದು ಹಾಗೂ ವಿವರಿಸುವುದು ಜಟಿಲವಾಗಿದೆ. ಭಾರತದಲ್ಲಿರುವ ಬುಡಕಟ್ಟುಗಳು ಸಹ ಸಾಮಾಜಿಕ ಬದಲಾವಣೆಯ ಪ್ರಕ್ರಿಯೆಗೆ ಒಳಗಾಗಿರುವುದನ್ನು ಅಧ್ಯಯನಗಳು ಗುರುತಿಸಿವೆ. ಇತಿಹಾಸದ ಪ್ರಕಾರ ಬುಡಕಟ್ಟಿನವರೆಂದರೆ ಆದಿವಾಸಿಗಳು, ಅರಣ್ಯವಾಸಿಗಳು, ಬೇಟೆ, ಆಹಾರ ಸಂಗ್ರಹಣೆಯಲ್ಲಿ ತೊಡಗಿಕೊಂಡವರು. ಭಾರತದಲ್ಲಿ ವಸಾಹತುಶಾಹಿ ಕಾಲದಲ್ಲಿ ಭೂಮಿ ವಾಣಿಜ್ಯೀಕರಣಕ್ಕೆ

ಒಳಗಾಯಿತು. ಆಗ ಬುಡಕಟ್ಟುಗಳು ಸಂಪನ್ಮೂಲದ ನಿಯಂತ್ರಣ ಹೊಂದಲು ಹೋರಾಟ ಮಾಡಿದ್ದು, ಸ್ವಾತಂತ್ರ್ಯದ ನಂತರ ಬುಡಕಟ್ಟುಗಳನ್ನು ಸಂವಿಧಾನದ ಪ್ರತ್ಯೇಕವಾದ ಅನುಸೂಚಿಯಲ್ಲಿ ಗುರುತಿಸಿದರು. ಅವರಲ್ಲಿ ಉಂಟಾಗಿರುವ ಸಾಮಾಜಿಕ ಬದಲಾವಣೆಯಿಂದ, ಬುಡಕಟ್ಟುಗಳು ತಮ್ಮ ಅನನ್ಯತೆಗಾಗಿ, ತಮ್ಮ ಸಂಸ್ಕೃತಿ, ಭಾಷೆ, ರೂಢಿ, ಸಾಂಪ್ರದಾಯಿಕ ಆಚರಣೆಯನ್ನು ರಕ್ಷಿಸಲು ಮುಂದಾಗಿವೆ. ಇಂದು ಬುಡಕಟ್ಟುಗಳು ತಮ್ಮ ಉಳಿವಿಗಾಗಿ, ಸಮಾನತೆಗಾಗಿ ಹಾಗೂ ಸಬಲೀಕರಣಕ್ಕಾಗಿ ಹೋರಾಟ ಮಾಡುತ್ತಿವೆ. ಬುಡಕಟ್ಟುಗಳು ಪ್ರಾದೇಶಿಕ ರಾಜಕೀಯ ಶಕ್ತಿಯಾಗಿ ಬೆಳೆಯುವಷ್ಟು ಸಾಮಾಜಿಕ ಬದಲಾವಣೆಯನ್ನು ಹೊಂದಿದೆ. ಇಂದು ಹಲವಾರು ಬುಡಕಟ್ಟುಗಳು ಮುಖ್ಯವಾಹಿನಿಯನ್ನು ಸೇರಿವೆ.

ಮಹಿಳೆಯರು ಸಮಾಜದ ಅವಿಭಾಜ್ಯ ಅಂಗವಾಗಿರುತ್ತಾರೆ. ಮಹಿಳೆಯರ ಹೊರತಾದ ಸಮಾಜವನ್ನು ಊಹಿಸಲು ಸಾಧ್ಯವಾಗದು. ಸಮುದಾಯದ ರಚನೆಯಲ್ಲಿ ಮಹಿಳೆಯ ಸ್ಥಾನವು ಅತ್ಯಂತ ಸೂಕ್ಷ್ಮ ಮತ್ತು ಮಹತ್ವದ ವಿಷಯ. ಸಮುದಾಯದಲ್ಲಿ ಮಹಿಳೆಯರಿಗೆ ನೀಡುವ ಸ್ಥಾನ ಎಲ್ಲರಿಗೂ ಗೊತ್ತಿರುವ ವಿಷಯ. ಯಾವುದೇ ಸಮಾಜವು ತನ್ನ ಅವಶ್ಯಕತೆಗೆ ಅನುಗುಣವಾಗಿ ಪುರುಷ ಮತ್ತು ಮಹಿಳೆಯರನ್ನು ಬೇರ್ಪಡಿಸುವ ಹಾಗೂ ಸಂಯೋಜಿಸುವ ಆದರ್ಶಗಳನ್ನು, ಪಾತ್ರ ಹಾಗೂ ಕಾರ್ಯವನ್ನು ಹೊಂದಿರುತ್ತವೆ. ಯಾವುದೇ ಸಮಾಜವು ಆರೋಗ್ಯ ಪೂರ್ಣವಾಗಿರಬೇಕಾದರೆ ಅವರಿಬ್ಬರಲ್ಲಿ ಸಮಾನತೆ ಅವಶ್ಯಕ. ಇಬ್ಬರಲ್ಲಿ ಒಬ್ಬರು ದುರ್ಬಲರಾದರೂ ಸಮಾಜದ ಮೇಲೆ ಪ್ರತಿಕೂಲ ಪರಿಣಾಮ ಉಂಟಾಗುತ್ತದೆ. ಸಮಾಜವು, ಮಹಿಳೆಯರನ್ನು ಹೇಗೆ ನಡೆಸಿಕೊಂಡಿರುತ್ತದೆ ಎಂಬುದು ಎಲ್ಲರಿಗೂ ತಿಳಿದ ವಿಷಯ. ಆದರೆ, ಅದನ್ನು ಸಾರ್ವತ್ರೀಕರಣಗೊಳಿಸಲು ಆಗದು. ಏಕೆಂದರೆ, ಎಲ್ಲಾ ಮಹಿಳೆಯರು ಏಕರೂಪದ ಪಾತ್ರವನ್ನು ನಿರ್ವಹಿಸುವುದಿಲ್ಲ. ಮಹಿಳೆಯರ ಪಾತ್ರವು ವಿವಿಧ ವರ್ಗ, ಜಾತಿ, ಧರ್ಮ, ಪ್ರದೇಶದಲ್ಲಿ ಭಿನ್ನವಾಗಿರುತ್ತದೆ. ಇಂದಿಗೂ ಸಹ ಸಾಂಪ್ರದಾಯಿಕವಾಗಿ ಪುರುಷರು ಮಹಿಳೆಯರ ಮೇಲೆ ಸಾಧಿಸಿದ ಹಿಡಿತವನ್ನು ಮುಂದುವರೆಸಿಕೊಂಡು ಹೋಗುತ್ತಿದ್ದಾರೆ. ಸಂಸ್ಕೃತೀಕರಣದ ಸಂದರ್ಭದಲ್ಲಿ, ಹಿಂದೂ ಧರ್ಮದ ನಿಯಮವನ್ನು ಬುಡಕಟ್ಟುಗಳು ಪಾಲಿಸಿಕೊಂಡು ಬಂದಿದೆ. ಹೀಗಾಗಿ ಹಿಂದೂ ಧರ್ಮದ ರಚನೆಯಂತೆ ಬುಡಕಟ್ಟುಗಳ ಸಾಮಾಜಿಕ ರಚನೆಯಾಗಿದೆ. ಈ ಹಿನ್ನೆಲೆಯಲ್ಲಿ ಹಾಲಕ್ಕಿ ಬುಡಕಟ್ಟಿನ ಮಹಿಳೆಯರು ಅಭಿವೃದ್ಧಿಯ ಪ್ರಕ್ರಿಯೆಯಲ್ಲಿ ಹಿಂದುಳಿಯಲು ಕಾರಣವೇನು? ಎಂಬುದನ್ನು ಅರಿಯಲು ಹಾಲಕ್ಕಿ ಬುಡಕಟ್ಟಿನ ಮಹಿಳೆಯರಲ್ಲಿ ಉಂಟಾಗುತ್ತಿರುವ ಸಾಮಾಜಿಕ, ಆರ್ಥಿಕ ಪರಿವರ್ತನೆಯ ನೆಲೆಗಳನ್ನು ಅರಿಯಲು ಪ್ರಸ್ತುತ ಅಧ್ಯಯನದಲ್ಲಿ ಪ್ರಯತ್ನಿಸಲಾಗಿದೆ.

೧.೨. ಸಮುದಾಯದ ಹಿನ್ನೆಲೆ

ಹಾಲಕ್ಕಿಗಳು ಕರ್ನಾಟಕ ರಾಜ್ಯದ ಉತ್ತರ ಕನ್ನಡ ಜಿಲ್ಲೆಯ ಕರಾವಳಿ ಪ್ರದೇಶದಲ್ಲಿ ಕಂಡುಬರುವ ವಿಶಿಷ್ಟ ಜನ ಸಮುದಾಯವಾಗಿದೆ. ಸಮಾಜದ ಅಂಚಿನಲ್ಲಿರುವ ಹಾಲಕ್ಕಿಗಳು ಶ್ರಮಿಕರು. ಉತ್ತರ ಕನ್ನಡ ಜಿಲ್ಲೆಯ ಶೇಕಡಾ ೮೦ರಷ್ಟು ಭಾಗವು ಅರಣ್ಯ ಪ್ರದೇಶವಾಗಿದೆ. ಪಶ್ಚಿಮಕ್ಕೆ ಅರಬ್ಬಿ ಸಮುದ್ರ, ಹಾಲಕ್ಕಿಗಳು ಸಹ್ಯಾದ್ರಿಯ ತಪ್ಪಲಿನಲ್ಲಿ ರಕ್ತ ಸಂಬಂಧಿಕರೊಂದಿಗೆ ಗುಂಪುಗುಂಪಾಗಿ ಇತರೆ ಜನ ಸಮುದಾಯದಿಂದ ಪ್ರತ್ಯೇಕವಾಗಿ ವಾಸಿಸುತ್ತಾರೆ.

'ಹಾಲಕ್ಕಿ' ಎಂಬ ಹೆಸರು ಹೇಗೆ ಬಂತು? ಎಂಬ ಬಗ್ಗೆ ಹಲವಾರು ಜನಪದೀಯ ದಂತ ಕತೆಗಳಿವೆ ೧. ನಾರಾಯಣಸ್ವಾಮಿ –ಲಕುಮಿ ದೇವಿ ಕತೆ– ಹಾಲು ಅನ್ನದಿಂದ ಹುಟ್ಟಿದ್ದು ೨. ಶಿವಪಾರ್ವತಿ ಕತೆ– ಹಾಲು ಅನ್ನದಿಂದ ಹುಟ್ಟಿದ್ದು ೩. ನಾಗಕನ್ಯೆ– ನಾಗಪಟ್ಟವನ್ನು ಹಾಲಕ್ಕಿ ಮಗುವಿಗೆ ಧಾರೆಯೆರೆದು ಕೊಟ್ಟದ್ದು ೪. ಮಾದೇವ ರಾಯನು ತಾನುಣ್ಣುವ ಹಾಲು ಅನ್ನದ ತುತ್ತನ್ನು ಬದಿಗಿಟ್ಟು, ಅದರಿಂದ ಹಾಲಕ್ಕಿ ಮಕ್ಕಳನ್ನು ಪಡೆದ ಕತೆ. ಇವರು ಹಾಲಿನಂತಹ ಬಿಳಿಯ ಅಕ್ಕಿಯನ್ನು ಬೆಳೆಯುವುದರಿಂದ ಇವರಿಗೆ ಹಾಲಕ್ಕಿ ಎಂದು ಕರೆದಿರುವರೆಂದು ಮುಂಬಯಿ ಗೆಜೆಟಿಯರ್‌ನಲ್ಲಿದೆ. ಈ ಪದದ ನಿಷ್ಪತ್ತಿಯ ಕುರಿತು ಹೆಚ್ಚಿನ ಚರ್ಚೆಯನ್ನು ಮುಂದುವರೆಸುವುದಿಲ್ಲ. ಈ ಬಗ್ಗೆ ಸಾಕಷ್ಟು ಅಧ್ಯಯನಗಳು ನಡೆದಿವೆ (ಎನ್.ಆರ್.ನಾಯಕ್ ೧೯೯೩, ಡಾ.ಹಿ.ಚಿ.ದೋರಲಿಂಗಯ್ಯ ೨೦೦೧).

ಉತ್ತರ ಕನ್ನಡ ಜಿಲ್ಲೆಯ ಹಾಲಕ್ಕಿಗಳು ಇತರೆ ಜನವರ್ಗದ ಜೊತೆಯಲ್ಲಿ ಇದ್ದುಕೊಂಡು, ತಮ್ಮದೇ ಆದ ವಿಶಿಷ್ಟತೆಯನ್ನು ಹೊಂದಿದ್ದಾರೆ. ಹಾಲಕ್ಕಿಗಳು ತಮ್ಮ ವಿಶಿಷ್ಟತೆಯ ಮೂಲಕ ಸಮಾಜದಲ್ಲಿ, ಕರ್ನಾಟಕದಲ್ಲಿ ತಮ್ಮನ್ನು ತಾವು ಗುರುತಿಸಿಕೊಂಡವರು. ಈ ಹಾಲಕ್ಕಿಗಳ ಬಗ್ಗೆ ಪ್ರಥಮ ಮಾಹಿತಿಯನ್ನು ಗೆಜೆಟಿಯರ್‌ನಿಂದ(೧೮೮೩) ಪಡೆಯಬಹುದು. ಹಾಲಕ್ಕಿಗಳ ಕುರಿತು ವಿವರಣಾತ್ಮಕವಾದ ಮಾಹಿತಿ ಅಲ್ಲಿದೆ. ಹಾಲಕ್ಕಿಗಳು ತೀರಾ ಸರಳರು, ಪ್ರಾಮಾಣಿಕರು ಹಾಗೂ ಶ್ರಮ ಜೀವಿಗಳು, ಬೇಟೆ–ಕೊಡಲಿ ಸಂಸ್ಕೃತಿಯಲ್ಲಿ ಪರಿಣಿತರು. ಹಗ್ಗ–ಚಾಪೆ ಮಾಡುವುದರಲ್ಲಿ ನುರಿತವರು. ಮನೆ–ದೇವಸ್ಥಾನದ ಮೇಲ್ಛಾವಣೆಯನ್ನು ಹೊಂದಿಸುವಲ್ಲಿ ಕೃಷಿಯ ಜೊತೆಗೆ ಅರಣ್ಯದ ಮರ, ಬಳ್ಳಿ ಬೇರು, ಎಲೆಕಾಂಡದ ಬಗ್ಗೆ ಅಪಾರ ಜ್ಞಾನ ಉಳ್ಳವರು. ಇದರಿಂದಾಗಿ ಅವರು ನಾಟೀ ವೈದ್ಯರಾಗಿದ್ದಾರೆ. ಹಾಲಕ್ಕಿಗಳು ಪಾರ್ಶ್ವವಾಯು (ಲಕ್ವ), ಗಂಟುನೋವು, ಜ್ವರ, ದನಕರುಗಳಿಗೆ ಔಷಧವನ್ನು ನೀಡುತ್ತಿದ್ದರು ಎಂಬುದು ಐತಿಹಾಸಿಕ ದಾಖಲೆಯಿಂದ ತಿಳಿದುಬರುವುದು.

ಈ ಪ್ರದೇಶವು ಅರಣ್ಯದಿಂದ ಆವೃತ್ತವಾಗಿದೆ. ಹೀಗಾಗಿ ಹಾಲಕ್ಕಿಗಳು ಕುಂಬ್ರಿ ಬೇಸಾಯವನ್ನು ಕೈಕೊಂಡಿದ್ದರು. ಆದರೆ ಅಂದಿನ ಬ್ರಿಟಿಷ್ ಸರಕಾರವು ಕುಂಬ್ರಿ ಬೇಸಾಯವನ್ನು

ನಿಷೇಧಿಸಿತ್ತು. ಈ ನಿಷೇಧವು ಭ್ರಷ್ಟಾಚಾರಕ್ಕೆ ಎಡೆಮಾಡಿತ್ತು. ಸುಶಿಕ್ಷಿತ ಮೇಲ್ವರ್ಗದವರು ಹಾಲಕ್ಕಿ ರೈತರ ಅನಕ್ಷರತೆಯನ್ನು ದುರುಪಯೋಗಪಡಿಸಿಕೊಂಡರು. ಈ ಕೆಲಸದಲ್ಲಿ ಮೇಲ್ವರ್ಗದವರಿಗೆ ಶ್ಯಾನುಭೋಗರು ಸಹಾಯ ಮಾಡಿದರು. ಹಾಲಕ್ಕಿಗಳು ಶ್ಯಾನುಭೋಗರು ಹೇಳಿದ ಕಡೆ ಹೆಬ್ಬೆಟ್ಟನ್ನು ಒತ್ತಿದರು(ದೇಸಾಯಿ ೧೯೪೮). ಹೀಗೆ ಹಾಲಕ್ಕಿಗಳೂ ಭೂಮಿಯ ಮೇಲೆ ತಮ್ಮ ಒಡೆತನವನ್ನು ಕಳೆದುಕೊಂಡು ಕೃಷಿ ಕಾರ್ಮಿಕರಾದರು.

ಕೃಷಿಯೊಂದನ್ನು ಬಿಟ್ಟು ಬೇರೆ ಯಾವುದೇ ಕೆಲಸವೂ ಹಾಲಕ್ಕಿಗಳಿಗೆ ಗೊತ್ತಿರಲಿಲ್ಲ. ಕರಾವಳಿಯ ಬೇಸಾಯವು ಪೂರ್ಣ ಮಳೆಯನ್ನು ಅವಲಂಬಿಸಿದೆ. ಅಲ್ಲದೇ ಭೂಮಿಯ ಫಲವತ್ತತೆಯೂ ಕಡಿಮೆ. ಹೀಗಾಗಿ ಕೃಷಿಯಲ್ಲಿ ಅಧಿಕ ಶ್ರಮ ಮಾಡಬೇಕಾಗುತ್ತಿತ್ತು. ಆದ್ದರಿಂದ, ಮೇಲ್ವರ್ಗದವರು ತಮ್ಮ ಭೂಮಿಯನ್ನು ಗೇಣಿಗೆ ನೀಡುತ್ತಿದ್ದರು. ಹಾಲಕ್ಕಿಗಳು ಭೂಮಿಯನ್ನು ಗೇಣಿಗೆ ಪಡೆದುಕೊಂಡು ದುಡಿಮೆಯಲ್ಲಿ ತೊಡಗಿದರು. ಭೂ ಒಡೆಯ ಮತ್ತು ಹಾಲಕ್ಕಿಗಳ ನಡುವಿನ ಸಂಬಂಧ ಕೇವಲ ಗೇಣಿ ಭೂಮಿಗೆ ಮಾತ್ರ ಸೀಮಿತವಾದುದಲ್ಲ. ಗೇಣಿದಾರರು ಭೂ ಒಡೆತನದ ತೆಂಗು, ಅಡಿಕೆ-ಬಾಳೆ ಮಾವಿನ ತೋಟದಲ್ಲಿ ದುಡಿಮೆಯನ್ನು ಕೃಷಿಯ ಜೊತೆಯೇ ಮಾಡುತ್ತಿದ್ದರು. ಇದರ ಜೊತೆಯಲ್ಲಿ ಭೂ ಒಡೆಯನ ಮನೆಯ ದನ-ಕರುಗಳನ್ನು ನೋಡಿಕೊಳ್ಳುವುದು ಸೇರಿರುತ್ತದೆ. ಬಡವರಾದ ಹಾಲಕ್ಕಿಗಳು ಕೃಷಿ ಚಟುವಟಿಕೆ ಮದುವೆ-ಹಬ್ಬಕ್ಕಾಗಿ ಒಡೆಯನಿಂದ ಸಾಲ ಪಡೆಯುತ್ತಿದ್ದರು. ಕೊನೆಗೆ ಅಸಲನ್ನು ತೀರಿಸಲಾಗದೇ ತಲೆಮಾರಿನಿಂದ ತಲೆಮಾರಿಗೆ ಸಾಲದ ಭಾರ ಹರಿದು ಬರುವುದನ್ನು (ಗೆಜೆಟಿಯರ್ ೧೮೮೩) ದಾಖಲಿಸಲಾಗಿದೆ.

ಹಾಲಕ್ಕಿಗಳ ವಿಶಿಷ್ಟತೆಯನ್ನು ಅವರ ಸಾಮಾಜಿಕ ವ್ಯವಸ್ಥೆಯಲ್ಲಿ ಕೂಡಾ ಕಂಡುಬರುತ್ತದೆ. ಈ ವಿಶಿಷ್ಟತೆಯ ಮೂಲಕ ಅವರು ತಮ್ಮ ಸಮಾಜದ ಸಂಘಟನೆಯನ್ನು ಸಂರಕ್ಷಣೆ ಮಾಡಿಕೊಂಡು ಬಂದಿದ್ದಾರೆ. ಹಾಲಕ್ಕಿಗಳು ಇತರೆ ಜನ ಸಮುದಾಯದಿಂದ ಪ್ರತ್ಯೇಕವಾಗಿ ತಮ್ಮ ರಕ್ತ ಸಂಬಂಧಿಕರೊಂದಿಗೆ, ನಿರ್ದಿಷ್ಟ ಪ್ರದೇಶದಲ್ಲಿ ಗುಂಪು ಗುಂಪಾಗಿ ವಾಸಿಸುತ್ತಾರೆ. ತಮ್ಮದೇ ಆದ ವಿಶಿಷ್ಟ ಗ್ರಾಮ್ಯ ಕನ್ನಡದಲ್ಲಿ ಮಾತನಾಡುತ್ತಾರೆ. ತಮ್ಮದೇ ಆದ ವಿಶಿಷ್ಟ ಹೆಸರುಗಳ ಬಳಕೆ ಮಾಡುತ್ತಾರೆ. ಅವರ ಉಡುಗೆ ತೊಡುಗೆಯ ವಿಶಿಷ್ಟತೆಯು ಕರ್ನಾಟಕಕ್ಕೆ ಗೊತ್ತಿರುವ ವಿಷಯ. ತಮ್ಮದೇ ಆದ ಆಹಾರ ಪದ್ಧತಿ, ಸಾಂಪ್ರದಾಯವನ್ನು ರೂಢಿಸಿಕೊಂಡಿದ್ದಾರೆ. ತಮ್ಮ ವಂಶ ಪರಂಪರೆಯಿಂದ ಬಂದ ರೀತಿ ರಿವಾಜುಗಳನ್ನು ಮುಂದುವರೆಸಿ ಕೊಂಡು ಹೋಗುವಂತೆ ಸಾಮಾಜಿಕ ವ್ಯವಸ್ಥೆಯನ್ನು ಹೊಂದಿರುವರು. ಈ ಸಮುದಾಯದ ಸಮಾಜವು ವಿವಿಧ ಪದಾಧಿಕಾರಿಗಳನ್ನು ಹೊಂದಿದೆ. ಈ ಪದಾಧಿಕಾರಿಗಳ ಅಧಿಕಾರವು ವಂಶಪರಂಪರೆಯಿಂದ

ಬರುವುದು. ಈ ಪದಾಧಿಕಾರಿಗಳು ಸಮುದಾಯದ ಇತರ ಸದಸ್ಯರಿಗೆ ದಂಡ ಹಾಕುವ ಹಾಗೂ ಬಹಿಷ್ಕಾರ ಹಾಕುವ ಅಧಿಕಾರ ಹೊಂದಿರುತ್ತಾರೆ.

ಹಾಲಕ್ಕಿಗಳ ವಿಶಿಷ್ಟತೆಯನ್ನು ಅವರಲ್ಲಿ ಇರುವ ಸೀಮೆ ಪದ್ಧತಿಯಲ್ಲಿ ನಾವು ಕಾಣುತ್ತೇವೆ. ಕರಾವಳಿಯ ನಾಲ್ಕು ತಾಲೂಕಿನಲ್ಲಿ ಆಡಳಿತದ ದೃಷ್ಟಿಯಿಂದ ಏಳು ಸೀಮೆಗಳನ್ನು ಹೊಂದಿರುವರು. ಈ ಸೀಮೇಗಳೆಂದರೆ ೧. ಕಡವಾಡ ೨. ಅಂಕೋಲ ೩. ನುಸಿಕೋಟೆ ೪. ಕುಂಬಾರ ಗದ್ದೆ ೫. ಗೋಕರ್ಣ ೬. ಹರೀಟೆ ೭. ಚಂದಾವರ. ಈ ಏಳು ಸೀಮೆಗಳನ್ನು ಒಟ್ಟು ೧೬೪ ಊರುಗಳಿವೆ. ಪ್ರತಿ ಸೀಮೆಗೂ ಅರಸುಗೌಡ, ಗುರುಗೌಡ, ಪ್ರಧಾನಿಗೌಡ, ಸೀಮೆ ಬುದ್ಧವಂತ, ಸೀಮೆ ಕೋಲ್ಕರ ಹೀಗೆ ವಿವಿಧ ಪದಾಧಿಕಾರಿಗಳು ಇರುವರು. ಕೊಪ್ಪದ ಕೂಟದಲ್ಲಿ ಬಗೆಹರಿಯದ ವಿಷಯಗಳು ಸೀಮೆ ಕೂಟದಲ್ಲಿ ಚರ್ಚೆಗೆ ಬರುತ್ತದೆ.

ಹಾಲಕ್ಕಿಗಳ ವಿಶಿಷ್ಟತೆಯು ಅವರ ಸಾಂಸ್ಕೃತಿಕ ಆಚರಣೆಯಲ್ಲಿ ಸಹ ಕಂಡು ಬರುತ್ತದೆ. ಹಾಲಕ್ಕಿಗಳು ವಿವಿಧ ಕಲೆಗಳಲ್ಲಿ ಪರಿಣಿತಿಯನ್ನು ಪಡೆದವರು. ಹಾಲಕ್ಕಿಗಳ ಕಲೆಗಳನ್ನು ಮೂರು ಬಗೆಯಲ್ಲಿ ವಿಂಗಡಿಸಬಹುದು. ೧. ಅಭಿನಯ ಪ್ರಧಾನ ಕಲೆಗಳು ೨. ನೃತ್ಯ ಪ್ರಧಾನವಾದ ಕಲೆಗಳು ೩. ಚಿತ್ರ ಪ್ರಧಾನ ಕಲೆಗಳು. ಅಭಿನಯ ಪ್ರಧಾನ ಕಲೆಯಲ್ಲಿ ಗುಮಟೆ ಪಾಂಗು, ಸಣ್ಣಾಟ, ಯಕ್ಷಗಾನ ಮೊದಲಾದವು. ನೃತ್ಯ ಪ್ರಧಾನ ಕಲೆಯಲ್ಲಿ ಸುಗ್ಗಿ ಕುಣಿತ-ಪುಗಡೀ ಕುಣಿತ, ಬಿದ್ರಂಡೆ ಕುಣಿತಗಳು ಒಳಗೊಂಡಿವೆ. ಚಿತ್ರಕಲೆಯು ಮನೆ ಹಾಗೂ ದೇವರ ಮನೆಯ ಗೋಡೆಗಳ ಮೇಲೆ ರಂಗೋಲಿಯಲ್ಲಿ ಅಭಿವ್ಯಕ್ತವಾಗಿದೆ. ಹಾಲಕ್ಕಿಗಳ ಸುಗ್ಗಿಯ ಕುಣಿತ ಕರ್ನಾಟಕದಲ್ಲಿ ಜನಪ್ರಿಯವಾಗಿದೆ. ಈ ವಿಶಿಷ್ಟ ಸುಗ್ಗಿಯ ಕುಣಿತ ಕಂಡು ಅಂದಿನ ಬ್ರಿಟಿಷ್ ಅಧಿಕಾರಿಗಳು ಅಂಕೋಲೆಯು ತಾಲೂಕು ಆಫೀಸಿನಲ್ಲಿ ಪ್ರತಿ ವರ್ಷವು ಸುಗ್ಗಿ ಕುಣಿದು ಗೌರವ ಸ್ವೀಕರಿಸುವಂತೆ ಮಾಡಿ ಹೋಗಿರುವರು. ಇವತ್ತಿಗೂ ಸಹ ಹಾಲಕ್ಕಿಗಳು ಪ್ರತಿ ವರ್ಷ ತಾಲೂಕು ಕಛೇರಿಯ ಮುಂದೆ ಸುಗ್ಗಿಯನ್ನು ಕುಣಿದು ಗೌರವವನ್ನು ಸ್ವೀಕರಿಸುತ್ತಿದ್ದಾರೆ.

ಹಾಲಕ್ಕಿಗಳು ನಾಟಿ ಔಷಧಗಳನ್ನು ನೀಡುವಲ್ಲಿ ಸಹ ತಮ್ಮ ವಿಶಿಷ್ಟತೆಯನ್ನು ಉಳಿಸಿಕೊಂಡಿದ್ದಾರೆ. ಕರ್ನಾಟಕದಲ್ಲಿ ಪಾರ್ಶ್ವವಾಯುವಿಗೆ ಔಷಧ ನೀಡುವಲ್ಲಿ ಬೆಳಂಬಾರ ಮತ್ತು ತೋಡೂರು ಮದ್ದು (ಔಷಧ) ವಿಶಿಷ್ಟವಾಗಿದೆ. ಹಾಲಕ್ಕಿಗಳು ಪಾರ್ಶ್ವವಾಯು, ಗಂಟುನೋವುಗಳಿಗೆ ಔಷಧ ನೀಡುವುದಲ್ಲದೇ ಮಕ್ಕಳಿಗೆ ಹಾಗೂ ಪಶುಗಳಿಗೆ ಉತ್ತಮ ಔಷಧವನ್ನು ನೀಡುತ್ತಾ ಬಂದಿರುವರು.

ಇಷ್ಟೆಲ್ಲಾ ವಿಶಿಷ್ಟತೆಯ ನಡುವೆ ಕಂಡುಬರುವ ಕೊರತೆ ಎಂದರೆ, ಇಂದಿಗೂ ಸಹ ಹಾಲಕ್ಕಿಗಳು ಶೈಕ್ಷಣಿಕವಾಗಿ, ಸಾಮಾಜಿಕವಾಗಿ, ಆರ್ಥಿಕವಾಗಿ ತೀರಾ ಹಿಂದುಳಿದಿರುವರು. ಜನಸಂಖ್ಯೆಯಲ್ಲಿ ೧.೫೦ ಲಕ್ಷದಷ್ಟು ಇರುವ ಹಾಲಕ್ಕಿಗಳು ಸರ್ಕಾರಿ ನೌಕರಿಯಲ್ಲಿ ಪಡೆದುಕೊಂಡಿರುವ ಪಾಲು ಶೇಕಡಾ ೧ರಷ್ಟು

೧.೩. ಹಾಲಕ್ಕಿ ಮಹಿಳೆ

ಹಾಲಕ್ಕಿ ಮಹಿಳೆಯರು ಕರ್ನಾಟಕದಲ್ಲೇ ವಿಶಿಷ್ಟವಾದವರು. ಕರ್ನಾಟಕದ ಜನಪದ ಸಾಹಿತ್ಯಕ್ಕೆ ಹಾಲಕ್ಕಿ ಮಹಿಳೆಯರ ಕೊಡುಗೆ ಅಪಾರ. ಕರ್ನಾಟಕ ಸರಕಾರದ ಜಾನಪದಶ್ರೀ ಪ್ರಶಸ್ತಿ ವಿಜೇತೆ ಸುಕ್ರಿ ಗೌಡರಂತವರು ಜಾನಪದ ಲೋಕದಲ್ಲಿ ಮಿಂಚಿದ್ದಾರೆ. ಹಾಲಕ್ಕಿ ಮಹಿಳೆಯರು ತಮ್ಮ ವಿಶಿಷ್ಟವಾದ ಉಡುಗೆ ತೊಡುಗೆಯಿಂದ ಗುರುತಿಸಿಕೊಂಡವರು.

ಜನಪದದ ಅಧ್ಯಯನದಲ್ಲಿ ಹಾಲಕ್ಕಿ ಮಹಿಳೆಯರು ಕುರಿತು ರಮ್ಯತೆ ಕಂಡು ಬರುವುದು (ಎನ್.ಆರ್.ನಾಯ್ಕ ೧೯೯೩, ಹಿ.ಚಿ.ಬೋರಲಿಂಗಯ್ಯ ೨೦೦೨). ಜನಪದದ ಅಧ್ಯಯನದಲ್ಲಿ ಹಾಲಕ್ಕಿ ಮಹಿಳೆಯರ ವಿಶಿಷ್ಟತೆಯನ್ನು ಅವರ ಸಂಪ್ರದಾಯದಲ್ಲಿ ಗುರುತಿಸಲಾಗಿದೆ. ಈ ಸಮುದಾಯದಲ್ಲಿನ ವಧುದಕ್ಷಿಣೆ ಪದ್ಧತಿ ಹಾಗೂ ವಿಧವಾ ವಿವಾಹ ಪದ್ಧತಿಯಿಂದ ಮಹಿಳೆಯರು ಸಬಲರು ಹಾಗೂ ಮುಕ್ತ ಚಲನೆ ಹೊಂದಿದವರು ಎಂಬ ಅಭಿಪ್ರಾಯಕ್ಕೆ ಬರಲಾಗಿದೆ.

ಅವರಲ್ಲಿ ಇರುವ ಇನ್ನೊಂದು ಸಾಂಪ್ರದಾಯವೆಂದರೆ, ಕುಟುಂಬವನ್ನು ಬಳಿ ಮೂಲಕ ಗುರುತಿಸುವುದು. ತಾಯಿಯಿಂದ ಬಳಿ ಬರುವುದು. ಈ ಪದ್ಧತಿಯಿಂದ ಹಾಲಕ್ಕಿಗಳು ಮಾತೃ ಪ್ರಧಾನ ಕುಟುಂಬಕ್ಕೆ ಸೇರಿದವರು ಎಂಬುದು ಜನಪದೀಯ ಅಧ್ಯಯನಕಾರರ ಅಭಿಪ್ರಾಯವಾಗಿದೆ.

ಅಧ್ಯಯನದಲ್ಲಿ ಹಾಲಕ್ಕಿ ಜನಸಮುದಾಯದಲ್ಲಿ ಮಹಿಳೆಯರು ಪುರುಷರಿಗೆ ಸಮಾನರು ಎಂದು ಗುರುತಿಸಲಾಗಿದೆ. ಈ ಮಾತು 'ದುಡಿಮೆ' ವಿಷಯದಲ್ಲಿ ಸೂಕ್ತವಾಗುತ್ತದೆ. ಹಾಲಕ್ಕಿ ಮಹಿಳೆಯರ ವಿಶಿಷ್ಟತೆಯನ್ನು ಅವರ ದುಡಿಮೆಯಲ್ಲಿ ಗುರುತಿಸಬಹುದು. ಪುರುಷರಿಗೆ ಸಮವಾಗಿ ಕೃಷಿ ಚಟುವಟಿಕಯಲ್ಲಿ, ತೋಟಗಾರಿಕೆಯಲ್ಲಿ, ಅರಣ್ಯದ ಉತ್ಪನ್ನದ ಸಂಗ್ರಹಣೆ ಮತ್ತು ಮಾರಾಟದಲ್ಲಿ ಕಾಣಬಹುದು. ಹಾಲಕ್ಕಿ ಮಹಿಳೆಯರು ತಮ್ಮ ಕುಟುಂಬದ ಆರ್ಥಿಕತೆಗೆ ದುಡಿಮೆಯ ಮೂಲಕ ಮಹತ್ವದ ಕೊಡುಗೆಯನ್ನು ನೀಡುತ್ತಿದ್ದಾರೆ.

ಹಾಲಕ್ಕಿ ಸಮುದಾಯವು ಸುವ್ಯವಸ್ಥಿತವಾದ ಸಾಮಾಜಿಕ ರಚನೆಯನ್ನು ಹೊಂದಿದೆಯಾದರೂ ಸಮುದಾಯದ ಸಂಘಟನೆಯ ಪದಾಧಿಕಾರವನ್ನು ಪಡೆದುಕೊಳ್ಳುವಲ್ಲಿ ಹಾಲಕ್ಕಿ ಮಹಿಳೆಯರು ಕಾಣೆಯಾಗಿರುವುದು ಕಂಡುಬರುತ್ತದೆ.

೧.೪. ಸಮಕಾಲೀನ ಸ್ಥಾನ

ಕರ್ನಾಟಕದಲ್ಲಿ ಇದುವರೆಗೆ ಸುಮಾರು ಐವತ್ತು ಬುಡಕಟ್ಟುಗಳನ್ನು ಗುರುತಿಸಲಾಗಿದೆ. ಅದರೆ ಹಾಲಕ್ಕಿಗಳನ್ನು ಸರಕಾರವು ಇದುವರೆಗೆ ಅಧಿಕೃತವಾಗಿ ಬುಡಕಟ್ಟಿನವರೆಂದು ಗುರುತಿಸಿಲ್ಲ. ಆಡಳಿತದ ಅವೈಜ್ಞಾನಿಕ ತಾರತಮ್ಯತೆಯಿಂದ ಕೂಡಿದ ವರ್ಗೀಕರಣದಿಂದ ಕೆಲ ಸಮುದಾಯಗಳಿಗೆ (ಹಾಲಕ್ಕಿಗಳಂತಹ) ಅನ್ಯಾಯವಾಗಿದೆ. ಕರ್ನಾಟಕ ಸರಕಾರವು ನೇಮಿಸಿದ ಡಾ.ನಾಗನಗೌಡ ಸಮಿತಿ, ಹಾವನೂರು ಆಯೋಗ, ವೆಂಕಟಸ್ವಾಮಿ ಆಯೋಗ, ಒ.ಚೆನ್ನಪ್ಪ ಆಯೋಗ ಇವರನ್ನು ಹಿಂದುಳಿದವರೆಂದು ಗುರುತಿಸಿದೆ. ಹಿಂದುಳಿದವರ ಯಾದಿಯಲ್ಲಿ ಬಲಿಷ್ಠವಾದ ಅನೇಕ ಜಾತಿಗಳು ಸೇರ್ಪಡೆಗೊಂಡಿವೆ. ಇದರಿಂದ ಹಾಲಕ್ಕಿಗಳು ಮೀಸಲಾತಿಯ ಪ್ರಯೋಜನ ಪಡೆದುಕೊಳ್ಳಲು ಆಗದ ಸ್ಥಿತಿಯಲಿದ್ದಾರೆ. ಕರ್ನಾಟಕದಲ್ಲಿ ಇತ್ತೀಚೆಗೆ ಜಾತಿ ಮತ್ತು ಬುಡಕಟ್ಟುಗಳ ಉನ್ನತ ಶ್ರೇಣಿ ಕ್ರಮದಲ್ಲಿ ಬದಲಾವಣೆಯಾಗಿದೆ. ಉದಾ: ಲಂಬಾಣಿಗಳನ್ನು, ಸಿದ್ಧಿಗಳನ್ನು ಬುಡಕಟ್ಟು ಪಂಗಡಕ್ಕೆ ಸೇರಿಸಲಾಗಿದೆ. ಗೋವಾ ರಾಜ್ಯದಲ್ಲಿ ಕೊಂಕಣಿ ಮಾತಾಡುವ ಕುಣಬಿಗಳು ಹಾಗೂ ಕರ್ನಾಟಕದಲ್ಲಿ ಕನ್ನಡ ಮಾತನಾಡುವ ಹಾಲಕ್ಕಿಗಳು ಒಂದೇ ಪಂಗಡಕ್ಕೆ ಸೇರಿದವರು. ಗೋವಾ ಸರಕಾರ ಕುಣಬಿಗಳನ್ನು ಪರಿಶಿಷ್ಟ ಪಂಗಡವೆಂದು ಪರಿಗಣಿಸಿದೆ. ಇಂದಿಗೂ ಸಹ ಹಾಲಕ್ಕಿಗಳಲ್ಲಿ ಸಾಕ್ಷರತೆ ಕಡಿಮೆಯಿದೆ. ಶೈಕ್ಷಣಿಕವಾಗಿ ಆರ್ಥಿಕವಾಗಿ, ಸಾಮಾಜಿಕವಾಗಿ ಹಿಂದುಳಿದ ಇವರನ್ನು ಬುಡಕಟ್ಟುಗಳೆಂದು ಅಧಿಕೃತವಾಗಿ ಗುರುತಿಸುವ ಅವಶ್ಯಕತೆಯಿದೆ. ಸಮಾಜದ ಅಂಚಿನಲ್ಲಿರುವ ಹಾಲಕ್ಕಿಗಳು ಬಹುಶಃ ಸರ್ಕಾರದ ಮೇಲೆ ಒತ್ತಡ ತರುವಲ್ಲಿ ವಿಫಲರಾಗುತ್ತಿದ್ದಾರೆ.

ನಮ್ಮ ಅಭಿವೃದ್ಧಿ ಯೋಜನೆಗಳಾದ ಕೊಂಕಣ ರೈಲ್ವೆ, ಕಾರವಾರದ ಸೀಬರ್ಡ್ ನೌಕಾನೆಲೆ ಯೋಜನೆಯಿಂದ ಹಾಲಕ್ಕಿಗಳು ತಮ್ಮ ಕೃಷಿ ಭೂಮಿಯನ್ನು ಕಳೆದುಕೊಳ್ಳಬೇಕಾಯಿತು. ಭೂಮಿ ಕಳೆದುಕೊಂಡವರಿಗೆ ಪರಿಹಾರಾರ್ಥವಾಗಿ ನೀಡುವ ಉದ್ಯೋಗವನ್ನು ಹಾಲಕ್ಕಿಗಳಿಂದ ಪಡೆದುಕೊಳ್ಳಲು ಅವಕಾಶ ದೊರಕಿಸಿಕೊಳ್ಳಲು ಆಗಲಿಲ್ಲ. ಏಕೆಂದರೆ ಉದ್ಯೋಗಕ್ಕೆ ಅವಶ್ಯಕವಾದಷ್ಟು ಶಿಕ್ಷಣದ ಮಟ್ಟವನ್ನು ಹೊಂದಿಲ್ಲದೇ ಇರುವುದು.

ಇಂದಿಗೂ ಸಹ ಶೇಕಡ ೯೮ರಷ್ಟು ಹಾಲಕ್ಕಿಗಳು ಅತಿಸಣ್ಣ ಕೃಷಿಕರು ಹಾಗೂ ಕೃಷಿ ಕಾರ್ಮಿಕರು, ಕೃಷಿಯು ಒಣ ಭೂಮಿ ಬೇಸಾಯವಾದ್ದರಿಂದ, ವರ್ಷದಲ್ಲಿ ಆರು ತಿಂಗಳು ಮಾತ್ರ ಕೃಷಿಯಲ್ಲಿ ಕೆಲಸ. ನಂತರ ಕೂಲಿಯನ್ನು ಅರಸಿ ಹೋಗುತ್ತಾರೆ. ಅರಣ್ಯ ಕಾಯಿದೆಯಿಂದಾಗಿ, ಅರಣ್ಯದ ಉತ್ಪನ್ನಗಳನ್ನು ಪಡೆಯುವಲ್ಲಿ ತೊಂದರೆಯನ್ನು ಎದುರಿಸುತ್ತಿದ್ದಾರೆ. ಇಂದಿನ ಬದಲಾದ ಪರಿಸ್ಥಿತಿಯಲ್ಲಿ ಮಾರುಕಟ್ಟೆಯ ಪೈಪೋಟಿಯನ್ನು ಎದುರಿಸಲು ಸಾಧ್ಯವಾಗುತ್ತಿಲ್ಲ.

ಹೀಗಾಗಿ ತಮ್ಮ ಸಾಂಪ್ರದಾಯ ವೃತ್ತಿಯನ್ನು ಮುಂದುವರೆಸಿಕೊಂಡು ಹೋಗುವಲ್ಲಿ ಸಂಕಷ್ಟವನ್ನು ಎದುರಿಸುತ್ತಿರುವರು.

ಇವರಲ್ಲಿ ಕೆಲವರು ಶಿಕ್ಷಣ ಪಡೆದು ಶಾಲಾ ಶಿಕ್ಷಕರು, ಪೊಲೀಸ್ ಪೇದೆ, ಗುಮಾಸ್ತರು ಹಾಗೂ 'ಡಿ' ಗುಂಪಿನ ನೌಕರರಾಗಿ ಸರ್ಕಾರಿ ಮತ್ತು ಖಾಸಗಿ ಸಂಘ ಸಂಸ್ಥೆಗಳಲ್ಲಿ ಉದ್ಯೋಗದಲ್ಲಿದ್ದಾರೆ.

೧.೫. ಕರ್ನಾಟಕದಲ್ಲಿ ಹಾಲಕ್ಕಿಗಳ ನೆಲೆ

ಹಾಲಕ್ಕಿಗಳು ಉತ್ತರ ಕನ್ನಡ ಜಿಲ್ಲೆಯ ಕರಾವಳಿ ಪ್ರದೇಶದ ಸಹ್ಯಾದ್ರಿಯ ತಪ್ಪಲಿನಲ್ಲಿ ನೆಲೆಗೊಂಡಿದ್ದಾರೆ. ಹಾಲಕ್ಕಿಗಳು ತಮ್ಮ ಕುಲ ಸಂಬಂಧಿಕರೊಡನೆ, ನಿರ್ದಿಷ್ಟವಾದ ಸರಹದ್ದಿನಲ್ಲಿ (ಪ್ರದೇಶದಲ್ಲಿ) ಇತರೆ ಜನಸಮುದಾಯದಿಂದ ಪ್ರತ್ಯೇಕವಾಗಿ ಗುಂಪು ಗುಂಪಾಗಿ ಗ್ರಾಮೀಣ ಪ್ರದೇಶದಲ್ಲಿ ನೆಲೆಗೊಂಡಿರುವರು. ಉತ್ತರಕ್ಕೆ ಕಾಳಿನದಿಯಿಂದ ದಕ್ಷಿಣಕ್ಕೆ ಶರಾವತಿಯ ನದಿಯವರೆಗಿನ ಪ್ರದೇಶದಲ್ಲಿ ವಾಸಿಸಿರುವರು. ಇವರು ಉತ್ತರ ಕನ್ನಡ ಜಿಲ್ಲೆಯ ಕರಾವಳಿಯ ಪ್ರದೇಶವಾದ ಕಾರವಾರ, ಅಂಕೋಲಾ, ಕುಮಟಾ ಹಾಗೂ ಹೊನ್ನಾವಾರ ತಾಲೂಕುಗಳಲ್ಲಿ ನೆಲೆಗೊಂಡಿದ್ದಾರೆ. ಮೊದಲು ಹಾಲಕ್ಕಿಗಳು ಐದು ಸಾಮಾಜಿಕ ಗುಂಪುಗಳಾಗಿ ೧. ಹೊನ್ನಾವರ (ಹೆದ್ಲಾನ್ಕೇರಿ) ೨. ಚಂದಾವರ (ಕುಮಟ) ೩. ಗೋಕರ್ಣ (ಕತ್ತಗಾಲ್) ೪. ಅಂಕೋಲಾ ಮತ್ತು ಕಾರವಾರದಲ್ಲಿ ನೆಲೆಗೊಂಡಿದ್ದರು ಎಂದು ಮುಂಬಯಿ ಗೆಜೆಟಿಯರ್‌ನಲ್ಲಿ ನಮೂದಿಸಲಾಗಿದೆ. ಇಂದು ಹಾಲಕ್ಕಿಗಳು ಏಳು ಸೀಮೆಯನ್ನು ರಚಿಸಿಕೊಂಡು ವಾಸವಾಗಿದ್ದಾರೆ. ಈ ಏಳು ಸೀಮೆಗಳು ೧೬೪ ಗ್ರಾಮಗಳನ್ನು ಒಳಗೊಂಡಿದೆ. ಕೃಷಿ ಕಾರ್ಮಿಕರಾಗಿ ಘಟ್ಟದ ಮೇಲೆ ಹೋದ ಹಾಲಕ್ಕಿಗಳು ಸಿರಸಿ, ಸಿದ್ದಾಪುರ ಹಾಗೂ ಯಲ್ಲಾಪುರದ ಗ್ರಾಮೀಣ ಪ್ರದೇಶದಲ್ಲಿ ನೆಲೆಗೊಂಡಿದ್ದಾರೆ.

ಕರ್ನಾಟಕದಲ್ಲಿ ಹಾಲಕ್ಕಿಗಳ ಸಂಖ್ಯೆಯು ಖಚಿತವಾದ ಜನಗಣತಿಯ ದಾಖಲೆಯಾಗಿಲ್ಲ. ಹಾಲಕ್ಕಿ ಒಕ್ಕಲಿಗ ಸಂಘದವರ ಅಂದಾಜಿನ ಪ್ರಕಾರ ಒಟ್ಟು ಹಾಲಕ್ಕಿ ಜನ ಸಂಖ್ಯೆಯು ೧,೦೨,೫೦೦(೨೦೦೧)ರಷ್ಟಿತ್ತು.

೧.೬. ಅಧ್ಯಯನಗಳ ಮಾಹಿತಿ

ಭೌಗೋಳಿಕವಾಗಿ ಹಾಲಕ್ಕಿಗಳು, ತಮ್ಮನ್ನು ಉತ್ತರದ ಮಾಂಡವಿ(ಗೋವಾ ರಾಜ್ಯ) ನದಿಯಿಂದ ದಕ್ಷಿಣಕ್ಕೆ ಶರವಾತಿ ನದಿಯವರೆಗೆ ನೆಲೆಯನ್ನು ಗುರುತಿಸಿಕೊಂಡಿರುವರು. ಗೋವಾದ ಮಾಂಡವಿ ನದಿಯಿಂದ ಕಾಳಿನದಿಯವರೆಗೆ ನೆಲೆಸಿದ್ದ ಹಾಲಕ್ಕಿಗಳು ಕೊಂಕಣಿ ಮಾತನಾಡುತ್ತಾರೆ. ಇವರನ್ನು ಕುಣಬಿ ಎಂದು ಕರೆಯುತ್ತಾರೆ. ಗೋವಾದಲ್ಲಿ ಇವರನ್ನು ಪರಿಶಿಷ್ಟರ ಯಾದಿಯಲ್ಲಿ ಸೇರ್ಪಡೆ ಮಾಡಿರುವರು.

ಉತ್ತರ ಕನ್ನಡ ಜಿಲ್ಲೆಯ ಒಕ್ಕಲಿಗರಲ್ಲಿ ಐದು ಪ್ರಕಾರಗಳಿರುವುದು ಗೆಜೆಟಿಯರ್ (೧೬೮೩) ಹಾಗೂ ದೇಸಾಯಿಯವರು (೧೯೪೫) ಕಿರುಗ್ರಂಥದಲ್ಲಿ ದಾಖಲಿಸಲಾಗಿದೆ. ಒಕ್ಕಲಿಗರನ್ನು ಐದು ಉಪ ವಿಭಾಗಗಳಲ್ಲಿ ಗುರುತಿಸಲಾಗಿದೆ. ಅವುಗಳೆಂದರೆ ೧. ಹಾಲಕ್ಕಿ ಒಕ್ಕಲಿಗರು ೨. ಗಾಮೊಕ್ಕಲಿಗರು ೩. ಕರೆ ಒಕ್ಕಲಿಗರು ೪. ಕುಂಚ ಒಕ್ಕಲಿಗರು ೫. ಕೊಟ್ಟೆ ಒಕ್ಕಲಿಗರು. ಈ ಐದು ಪ್ರಕಾರದ ಒಕ್ಕಲಿಗರು ಸಾಮಾಜಿಕವಾಗಿ ಆರ್ಥಿಕವಾಗಿ ಒಂದೇ ಸ್ತರದಲ್ಲಿರುವರು.

ಈ ಸಮುದಾಯದ ಸಾಮಾಜಿಕ ಆರ್ಥಿಕ ಜೀವನದ ವಿವರಣಾತ್ಮಕವಾದ ಮಾಹಿತಿಯನ್ನು ಗೆಜೆಟಿಯರ್ (೧೮೮೩) ಒದಗಿಸುತ್ತದೆ. ಈ ಒಕ್ಕಲಿಗರ ಸಮುದಾಯವು ಸದೃಢವಾದ ಸಾಮಾಜಿಕ ರಚನೆಯನ್ನು ಹೊಂದಿದೆ. ಆಡಳಿತ ದೃಷ್ಟಿಯಿಂದ ವಿವಿಧ ಪದಾಧಿಕಾರಿಗಳನ್ನು ಹೊಂದಿದೆ. ಪದಾಧಿಕಾರಿಗಳಿಗೆ ಶಿಕ್ಷಿಸುವ ಹಾಗೂ ಬಹಿಷ್ಕರಿಸುವ ಅಧಿಕಾರವಿದೆ. ಆದರೆ ಇವರು ತಮ್ಮ ಮಕ್ಕಳಿಗೆ ಶಿಕ್ಷಣ ಕೊಡುವಲ್ಲಿ ಆಸಕ್ತಿಯನ್ನು ಹೊಂದಿರಲಿಲ್ಲ. ಇವರಲ್ಲಿ ಮಹಿಳೆಯರು ಪುರುಷರಿಗೆ ಸಮಾನವಾಗಿ ದುಡಿಮೆ ಮಾಡುತ್ತಾರೆ. ಆದರೆ ತಮ್ಮ ಆದಾಯಕ್ಕಿಂತ ಹೆಚ್ಚು ವೆಚ್ಚ ಮಾಡಿ ಸಾಲಗಾರರಾಗಿ ಉಳಿಯುವರು. ಇವರು ಬಲವಾದ ಧಾರ್ಮಿಕ ನಂಬಿಕೆಯುಳ್ಳವರು.

ಹಾಲಕ್ಕಿಗಳ ಶೋಷಣೆಯ ಬಗ್ಗೆ ಪ್ರಪ್ರಥಮವಾಗಿ ದಾಖಲಿಸಿದವರು ದಿನಕರ ದೇಸಾಯಿಯವರು (೧೯೪೫). ಇವರು ಸುಶಿಕ್ಷಿತ ಮೇಲ್ವರ್ಗದವರು ಹಾಲಕ್ಕಿಗಳನ್ನು ಯಾವ ರೀತಿಯಲ್ಲಿ ಶೋಷಿಸಿದರು ಎಂಬ ಬಗ್ಗೆ ವಿವರಣಾತ್ಮಕವಾಗಿ ವಿವರಿಸಿದ್ದಾರೆ. ಶೈಕ್ಷಣಿಕವಾಗಿ ಹಿಂದುಳಿದಿದ್ದ ಇವರು ಸರಕಾರದಿಂದ ನಿರ್ಲಕ್ಷ್ಯಕ್ಕೆ ಒಳಗಾಗಿರುವ ಬಗೆಯನ್ನು ವಿವರಿಸಿದ್ದಾರೆ. ಹಾಲಕ್ಕಿಗಳನ್ನು ಬುಡಕಟ್ಟಿನವರೆಂದು ಪರಿಗಣಿಸಲು ಸೂಕ್ತವಾದ ದಾಖಲೆಗಳನ್ನು ದೇಸಾಯಿಯವರು ತಮ್ಮ ಪ್ರಬಂಧದಲ್ಲಿ ಮಂಡಿಸಿರುವರು.

ಜನಪದದ ಅಧ್ಯಯನಕಾರರು ಸಹ ಹಾಲಕ್ಕಿಗಳನ್ನು ಬುಡಕಟ್ಟಿನವರೆಂದು ತಮ್ಮ ಅಧ್ಯಯನದಲ್ಲಿ ಗುರುತಿಸಿರುವರು(ಎನ್.ಆರ್.ನಾಯ್ಕ(೧೯೯೩), ಹಿ.ಚಿ.ಬೋರಲಿಂಗಯ್ಯ(೨೦೦೨), ಸಣ್ಣರಾಮ(೨೦೦೧), ಎಸ್.ಆರ್.ಹೆಗಡೆ(೧೯೭೧), ಜಿ.ಎಸ್.ಭಟ್(೧೯೮೪), ಕಾಮತ್(೧೯೯೯), ಜೋಷಿ(೧೯೮೪).

ಡಾ.ಹಿ.ಚಿ.ಬೋರಲಿಂಗಯ್ಯನವರು ತಮ್ಮ ಅಧ್ಯಯನದಲ್ಲಿ ಹಾಲಕ್ಕಿ ಸಂಸ್ಕೃತಿಯ ಅನನ್ಯತೆಯನ್ನು ಸೃಷ್ಟಿ, ಸ್ಥಿತಿ ಹಾಗೂ ಲಯ ಎಂಬ ಮೂರು ಅಧ್ಯಯನಗಳ ಮೂಲಕ ಅವರ ಲೋಕದೃಷ್ಟಿಯನ್ನು ಪ್ರತಿವಾದಿಸಿದರು. ಡಾ.ಎನ್.ಆರ್.ನಾಯ್ಕರವರು ತಮ್ಮ ಅಧ್ಯಯನದಲ್ಲಿ

ಹಾಲಕ್ಕಿಗಳ ಸಂಸ್ಕೃತಿಯ ಕುರಿತು ವಿವರಣಾತ್ಮಕ ಮಾಹಿತಿಯನ್ನು ನೀಡಿದ್ದಾರೆ. ಹಾಲಕ್ಕಿಗಳ ಮೂಲಸ್ಥಾನ, ಕಸುಬು, ಕಲೆ, ಸಂಸ್ಕಾರ, ಸಾಮಾಜಿಕ ವ್ಯವಸ್ಥೆ, ಕೌಟುಂಬಿಕ ವ್ಯವಸ್ಥೆ ಕುರಿತು ವಿವರಿಸಿದ್ದಾರೆ.

ವಿಷ್ಣು ನಾಯ್ಕರು (೨೦೦೪) ತಮ್ಮ ಗ್ರಂಥದಲ್ಲಿ ಡಾ.ದೇಸಾಯಿಯವರು ನಡೆಸಿದ ರೈತ ಕಾರ್ಮಿಕರ (೧೯೩೬-೧೯೬೨) ಆಂದೋಲನದಲ್ಲಿ ಹಾಲಕ್ಕಿಗಳ ಪಾತ್ರದ ವಿವರಣೆಯನ್ನು ಒದಗಿಸಿರುತ್ತಾರೆ.

ಡಾ. ಶೈಲಜ ಹಿರೇಮಠ (೨೦೦೬) ತಮ್ಮ ಸಂಶೋಧನಾ ಪ್ರಬಂಧದಲ್ಲಿ ಹಾಲಕ್ಕಿ ಮಹಿಳೆಯ ಲಿಂಗ ಸಂಬಂಧೀಯ ವ್ಯವಸ್ಥೆಯ ಸ್ವರೂಪವನ್ನು ಗುರುತಿಸುವ ಅವಶ್ಯಕತೆಯನ್ನು ಸೂಚಿಸಿರುವರು.

೧.೭. ಸೈದ್ಧಾಂತಿಕ ಚೌಕಟ್ಟು

ನಾವು ಸ್ವಾತಂತ್ರ್ಯ ಪಡೆದು ೬೦ ವರ್ಷಗಳು ಕಳೆದವು. ಆದರೂ ದುರ್ಬಲರ ಸಮಸ್ಯೆಗಳಿಗೆ ಪರಿಹಾರ ಸಿಕ್ಕಿಲ್ಲ. ಏಕೆಂದರೆ ನಾವು ಸಮಸ್ಯೆಗಳನ್ನು ಸರಿಯಾಗಿ ಅರ್ಥಮಾಡಿಕೊಂಡಿಲ್ಲ. ನಾವು ಅಭಿವೃದ್ಧಿಯನ್ನು ಸಾಂಪ್ರದಾಯಿಕ ನೆಲೆಯಲ್ಲಿ ಗುರುತಿಸುತ್ತಾ ಬಂದೆವು. ವರಮಾನದ ಏರಿಕೆಯನ್ನು ಅಭಿವೃದ್ಧಿ ಎಂದು ತಿಳಿದೆವು. ಕಾಲಾನುಕ್ರಮದಲ್ಲಿ ಅಭಿವೃದ್ಧಿಯ ಫಲಗಳು ಸಮಾಜದ ಎಲ್ಲ ವರ್ಗ, ಗುಂಪುಗಳಿಗೂ ದೊರೆಯಲಿದೆ ಎಂದು ಭಾವಿಸಿದ್ದೆವು. ಆದ್ದರಿಂದ ದುರ್ಬಲರ ಸಮಸ್ಯೆಗಳಿಗೆ ಪರಿಹಾರ ದೊರೆಯಲ್ಲಿಲ್ಲ. ಹೀಗಾಗಿ ಅಭಿವೃದ್ಧಿಯನ್ನು ಸಾಮಾಜಿಕ ನೆಲೆಯಲ್ಲಿ ನೋಡಬೇಕಾಯಿತು.

ಈ ಅಧ್ಯಯನದಲ್ಲಿ ಮಹಿಳೆಯರ ಸ್ಥಾನವನ್ನು ಸೈದ್ಧಾಂತಿಕವಾಗಿ ಸಾಂಪ್ರದಾಯ ಸಮಾಜದ ಚೌಕಟ್ಟಿನೊಳಗೆ ಪರಿಭಾವಿಸಿಕೊಳ್ಳಲಾಗಿದೆ. ಸಮಾಜದಲ್ಲಿ ಮಹಿಳೆಯರು ಕೆಳಗಿನ ಸ್ಥಾನವನ್ನು ನಿರ್ವಹಿಸುತ್ತಾ ಬಂದಿರುವುದನ್ನು ಪಾತ್ರದಿಂದ ಅರಿಯಬಹುದಾಗಿದೆ. ಮಹಿಳೆಯರ ಬದುಕಿನಲ್ಲಿ ಉಂಟಾಗುತ್ತಿರುವ ಪರಿವರ್ತನೆಯನ್ನು ಅರ್ಥಮಾಡಿಕೊಳ್ಳುವ ದೃಷ್ಟಿಯಿಂದ ಅಮರ್ತ್ಯಸೇನ್‌ರ ಲಿಂಗ ಸಂಬಂಧಿ ಅಭಿವೃದ್ಧಿ ಪರಿಭಾವನೆಯ ಚೌಕಟ್ಟನ್ನು ಬಳಸಿಕೊಳ್ಳಲಾಗಿದೆ.

ಈ ನಮ್ಮ ಅಧ್ಯಯನದಲ್ಲಿ 'ಸ್ಥಾನ'ದ ಬದಲಿಗೆ 'ಪಾತ್ರ' ಸೂಕ್ತ ಎನಿಸುವುದು. 'ಸ್ಥಾನ' ಎಂಬುದು ತುಲನಾತ್ಮಕವಾದ ಅಂಶವಾಗಿದೆ. ಸಮಾಜ ರಚನೆಯಲ್ಲಿ ಸ್ಥಾನದ ಸ್ಥಿತಿಯು ಮೇಲಿನದು ಮತ್ತು ಕೆಳಗಿನದು ಎಂದು ವಿಶ್ಲೇಷಿಸುತ್ತದೆ. ಸ್ಥಾನ ಗುರುತಿಸಲು ಇತರೆ ಗುಂಪಿನೊಂದಿಗೆ ಹೋಲಿಸಿ ನೋಡಲಾಗಿದೆ. ಇದರಿಂದ ಮೇಲಿನವರು, ಸಮಾನರು ಹಾಗೂ ಕೆಳಗಿನವರು ಎಂದು ತಿಳಿಯುತ್ತದೆ. ಹೀಗಾಗಿ ಸಮಜದಲ್ಲಿ ಮಹಿಳೆಯರ ಸ್ಥಾನದ ಮೌಲೀಕರಣದಲ್ಲಿ

ವಿವಿಧ ಸಮುದಾಯದೊಂದಿಗೆ ವಿವಿಧ ಅವಧಿಯಲ್ಲಿ ಹೋಲಿಸಿ ನೋಡಲಾಗಿದೆ. ಹೀಗಾಗಿ ಸ್ಥಾನವನ್ನು ತುಲನಾತ್ಮಕವಾದ ವಿಧಾನದ ಮೂಲಕ ಅಳೆಯಲಾಗುತ್ತದೆ.

ಪುರುಷ ಮತ್ತು ಮಹಿಳೆಯರು ಜೈವಿಕವಾಗಿ ಭಿನ್ನವಾಗಿದ್ದನ್ನು ಬಿಟ್ಟರೆ ಇಬ್ಬರು ಸಮಾನರು. ಆದರೆ ಇಬ್ಬರ ಸಮಾನತೆಯು ಸ್ಥಾನ ಮತ್ತು ಪಾತ್ರವನ್ನು ಅವಲಂಬಿಸಿವೆ. ಆದುದರಿಂದ ಸ್ಥಾನ ಎಂಬುದು ಸಾಮಾಜಿಕವಾಗಿ ವ್ಯಾಖ್ಯಾನಿಸಿದ ಸ್ಥಿತಿ ಎನ್ನಬಹುದು. ಸಾಮಾಜಿಕ ಸ್ಥಿತಿಯು ಸಮಾಜದಲ್ಲಿ ಒದಗಿಸಿಕೊಟ್ಟಿರುವ ಅವಕಾಶ ಮತ್ತು ಕಟ್ಟಳೆಯನ್ನು ಒಳಗೊಂಡಿರುವುದು. ಸಾಮಾಜಿಕ ಸ್ಥಾನ ಎಂಬುದು ವ್ಯಕ್ತಿಯ ಸಾಮಾಜಿಕ, ಆರ್ಥಿಕ, ರಾಜಕೀಯ ಅಂಶದಿಂದ ಗುರುತಿಸಬಹುದು. ಯಾವುದೇ ಸಮಾಜದಲ್ಲಿ ಮಹಿಳೆಯ ಪಾತ್ರ ಮತ್ತು ಸ್ಥಾನವು ಸಾಮಾಜಿಕ, ಸಾಂಸ್ಕೃತಿಕ ಪದ್ಧತಿಯಿಂದ ರೂಪಿತವಾಗಿರುತ್ತದೆ. ಸ್ಥಾನ ಎಂಬುದು ಶಿಕ್ಷಣ, ಉದ್ಯೋಗ, ಆರ್ಥಿಕ ಅಂಶದಿಂದ ಗುರುತಿಸಲಾಗಿದೆ. ಬುಡಕಟ್ಟು ಸಮಾಜದಲ್ಲಿ ಮಹಿಳೆಯರಿಗೆ ಉತ್ತಮ ಸ್ಥಾನವಿದೆ ಎನ್ನಲಾಗಿದೆ. ಅವಳ ಸ್ಥಾನವನ್ನು ಆಯ್ಕೆಯ ಸ್ವಾತಂತ್ರ್ಯದ ಮೂಲಕ ಗುರುತಿಸಲಾಗುತ್ತದೆ. ಹೀಗಾಗಿ ಬುಡಕಟ್ಟು ಮಹಿಳೆಗೆ ಸ್ಥಾನ ಎಂಬ ಪದಕ್ಕಿಂತ ಸ್ಥಿತಿ ಎಂಬುದು ಹೆಚ್ಚು ಸೂಕ್ತವಾಗಿರುತ್ತದೆ. ಸ್ಥಿತಿ ಎಂಬುದು ಪಾತ್ರವಾಗಿದೆ.

ಸ್ಥಾನ ಎಂಬುದು ವಯಸ್ಸು, ಲಿಂಗ, ಉದ್ಯೋಗ, ವರ್ಗ ಹಾಗೂ ಜಾತಿ ಎಲ್ಲಾ ಆಗಿದೆ. ಹೀಗಾಗಿ ಸ್ಥಾನ ಎಂಬುದು ವಿವಿಧ ಸೂಚಿಗಳಿಂದ ನಿರ್ಧಾರಿತವಾಗುತ್ತದೆ. ಸ್ಥಾನ ಎಂದರೆ, ಸಾಮಾಜಿಕವಾದದ್ದು, ಸ್ಥಾನ ಎಂಬುದು ಸಾಧಿಸಿದ್ದು, ಪಾತ್ರ ಎನ್ನುವುದು ಒಪ್ಪಿಸಿರುವ ಕೆಲಸ ಎನ್ನಲಾಗಿದೆ. ಸ್ಥಾನದ ಪಾತ್ರ ವಿವಾದಾತ್ಮಕವಾದದ್ದು, ಸಮಾಜದಲ್ಲಿ ಮಹಿಳೆಯರ ವಿವಿಧ ಪಾತ್ರದಲ್ಲಿ ನಿರ್ವಹಿಸುತ್ತಾರೆ. ವಿವಿಧ ಪಾತ್ರದ ಸ್ಥಾನ ಕೂಡಾ ಬೇರೆ ಬೇರೆಯಾಗಿರುತ್ತದೆ. ಬುಡಕಟ್ಟು ಸಮಾಜದಲ್ಲಿ ಯಾವ ಸೂಚಿಯನ್ನು ಬಳಸಿಕೊಂಡು ಉತ್ತಮವಾಗಿದೆ ಅಥವಾ ಉತ್ತಮವಾಗಿಲ್ಲ ಎನ್ನಲಾಗಿದೆ. ಅದೇ ಸೂಚಿಯಿಂದ ಅವರ ಸ್ಥಾನವನ್ನು ಅಳೆಯುವುದು ಸೂಕ್ತವಾದ ವಿಧಾನ ಎನ್ನಲಾಗುತ್ತದೆ. ಆದರೂ, ಬುಡಕಟ್ಟು ಮಹಿಳೆಯ ಸ್ಥಾನ ಅಳೆಯಲು ಸೂಕ್ತವಾದ ಬೇರೆ ವಿಧಾನದ ಅವಶ್ಯಕತೆಯಿದೆ.

ಈ ಅಧ್ಯಯನದ ಮಾಹಿತಿಯ ನಿರೂಪಣೆ ಹಾಗೂ ವಿಶ್ಲೇಷಣೆಯನ್ನು ಅಭಿವೃದ್ಧಿಯ ಲಿಂಗ ಪರಿಕಲ್ಪನೆಯಿಂದ ನಿರೂಪಿಸಲಾಗಿದೆ. ಹಾಲಕ್ಕಿ ಸಮುದಾಯದ ವ್ಯಕ್ತಿ–ವ್ಯಕ್ತಿಗಳ ನಡುವೆ, ಪುರುಷರು–ಮಹಿಳೆಯರ ನಡುವೆ ಪರಸ್ಪರರ ಸಂಬಂಧವನ್ನು ಸಾಂಪ್ರದಾಯಿಕ ಚೌಕಟ್ಟಿನೊಳಗೆ ಪರಿಭಾವಿಸಿಕೊಳ್ಳಲಾಗಿದೆ. ಇದು ವಾಸ್ತವ ರೂಪದಲ್ಲಿ ಸಮಾಜದಲ್ಲಿ ಸಾಮಾಜಿಕ ಸಂಸ್ಥೆಯ ಸಾಂಪ್ರದಾಯಿಕ ನಂಬಿಕೆ, ಮೌಲ್ಯ ಆಚರಣೆಗಳು ನಿರಂತರತೆಯನ್ನು ಕಾಪಾಡಿಕೊಳ್ಳಲು

ಸಹಾಯಕವಾಗಿರುವುದನ್ನು ಅರ್ಥಮಾಡಿಕೊಳ್ಳಲು ಸಾಂಪ್ರದಾಯಿಕ ಚೌಕಟ್ಟನ್ನು ಬಳಸಿಕೊಳ್ಳಲಾಗಿದೆ.

ಮಹಿಳೆಯರ ಬದುಕಿನಲ್ಲಿ ಉಂಟಾಗುತ್ತಿರುವ ಪರಿವರ್ತನೆಯನ್ನು ಅರ್ಥಮಾಡಿಕೊಳ್ಳುವ ದೃಷ್ಟಿಯಿಂದ ಅಮರ್ತ್ಯ ಸೇನ್‌ರ ಲಿಂಗ ಸಂಬಂಧಿ ಅಭಿವೃದ್ಧಿ ಪರಿಭಾವನೆಯ ಚೌಕಟ್ಟನ್ನು ಇಲ್ಲಿ ಬಳಸಿಕೊಳ್ಳಲಾಗಿದೆ.

೧.೮. ಅಧ್ಯಯನದ ವಿಧಾನ

ಈ ಮಹಾ ಪ್ರಬಂಧವು ಹಾಲಕ್ಕಿ ಮಹಿಳೆಯರಲ್ಲಿ ಉಂಟಾಗುತ್ತಿರುವ ಸಾಮಾಜಿಕ ಬದಲಾವಣೆಯನ್ನು ಗುರುತಿಸುವುದರ ಕುರಿತ ಅಧ್ಯಯನವಾಗಿದೆ. ಹಾಲಕ್ಕಿ ಸಮುದಾಯದಲ್ಲಿನ ಲಿಂಗ ಸಮಾನತೆಯ ನೆಲೆಯನ್ನು ಗುರುತಿಸುವ ಪ್ರಯತ್ನ ಇದಾಗಿದೆ. ಈ ಅಧ್ಯಯನವು ಲಿಂಗ ಸಂವೇದಿಯ ನೆಲೆಯನ್ನು ಅಳವಡಿಸಿಕೊಂಡಿರುವುದರಿಂದ, ಇದೊಂದು ಗುಣಾತ್ಮಕ ಅಧ್ಯಯನವು ಆಗಿದೆ. ಅಧ್ಯಯನದ ವಿಧಾನವು ವಿಷಯದ ಹಿನ್ನೆಲೆಯಿಂದ ನಿರ್ಧಾರಿತವಾಗಿದೆ. ಇದೊಂದು ಎಂಪಿರಿಕಲ್ ಅಧ್ಯಯನವಾಗಿದ್ದು, ಸೈದ್ಧಾಂತಿಕ ಚೌಕಟ್ಟಿನೊಳಗೆ ಕಟ್ಟಿಕೊಡಲು ಪ್ರಯತ್ನಿಸಲಾಗಿದೆ.

ಇದೊಂದು ಎಂಪಿರಿಕಲ್ ಅಧ್ಯಯನವಾಗಿರುವುದರಿಂದ ಎರಡೂ ಮೂಲಗಳಿಂದ ಮಾಹಿತಿಯನ್ನು ಪಡೆಯಲಾಗಿದೆ. ವಸ್ತು ವಿಶ್ಲೇಷಣೆಗೆ ಅನುಷಂಗಿಕ ಮೂಲಗಳಾದ ಪ್ರಕಟಿತ–ಅಪ್ರಕಟಿತ ಮೂಲಗಳನ್ನು ಬಳಸಿಕೊಳ್ಳಲಾಗಿದೆ. ಉತ್ತರ ಕನ್ನಡ ಜಿಲ್ಲೆ ಅಂಕಿ–ಸಂಖ್ಯೆ ನೋಟ ೨೦೦೫–೦೬, ಕರ್ನಾಟಕ ಸರ್ಕಾರದ ವರದಿಗಳು, ಪತ್ರಿಕಾ ಪ್ರಕಟಣೆಗಳನ್ನು ಬಳಸಿಕೊಳ್ಳಲಾಗಿದೆ. ಅನೌಪಚಾರಿಕ ಚರ್ಚೆ, ವಿಚಾರ ಸಂಕೀರ್ಣದಲ್ಲಿ ಮಂಡಿಸಿದ ಉಪನ್ಯಾಸದ ಅಂಶಗಳನ್ನು ಅಧ್ಯಯನದಲ್ಲಿ ಬಳಸಿಕೊಳ್ಳಲಾಗಿದೆ. ಧಾರವಾಡದ ಸಿ.ಎಂ.ಡಿ.ಆರ್.ನ ಪ್ರಾಧ್ಯಾಪಕರೊಂದಿಗೆ ನಡೆಸಿದ ಚರ್ಚೆಯ ಮಾಹಿತಿಯನ್ನು ಸಹ ಬಳಸಿಕೊಳ್ಳಲಾಗಿದೆ.

ಈ ಅಧ್ಯಯನವು ರ್‍ಯಾಂಡಮ್ ಸ್ಯಾಂಪ್ಲಿಂಗ್ ವಿಧಾನವನ್ನು ಅಳವಡಿಸಿಕೊಂಡಿದೆ. ಉತ್ತರ ಕನ್ನಡ ಜಿಲ್ಲೆಯು ಒಟ್ಟು ಹನ್ನೊಂದು ತಾಲೂಕುಗಳನ್ನು ಹೊಂದಿದೆ. ಉತ್ತರ ಕನ್ನಡ ಜಿಲ್ಲೆಯ ಒಟ್ಟು ಹನ್ನೊಂದು ತಾಲೂಕುಗಳ ಪೈಕಿ ಕೇವಲ ನಾಲ್ಕು ತಾಲೂಕುಗಳಲ್ಲಿ ಮಾತ್ರ ಹಾಲಕ್ಕಿಗಳು ನೆಲೆಗೊಂಡಿರುವರು. ಈ ನಾಲ್ಕು ತಾಲೂಕುಗಳು ಉತ್ತರ ಕನ್ನಡ ಜಿಲ್ಲೆಯ ಕರಾವಳಿಯ ಪ್ರದೇಶವಾಗಿದೆ. ಈ ನಾಲ್ಕು ತಾಲೂಕುಗಳೆಂದರೆ, ಕಾರವಾರ, ಅಂಕೋಲಾ, ಕುಮಟಾ ಮತ್ತು ಹೊನ್ನಾವರ. ಹಾಲಕ್ಕಿಗಳು ಈ ನಾಲ್ಕು ತಾಲೂಕು ಪ್ರದೇಶದಲ್ಲಿ ತಮ್ಮದೇ ಆದ ಏಳು ಸೀಮೆಗಳನ್ನು ಹೊಂದಿದ್ದಾರೆ.

ಕೋಷ್ಟಕ ೧.೧

ಹಾಲಕ್ಕಿ ಬುಡಕಟ್ಟಿನವರ ತಾಲೂಕಾವಾರು ಮಾಹಿತಿ

ಕ್ರಸಂ.	ತಾಲೂಕು	ಸೀಮೆಗಳು	ಗ್ರಾಮಗಳ ಸಂಖ್ಯೆ	ಕುಟುಂಬದ ಸಂಖ್ಯೆ	ಜನಸಂಖ್ಯೆ
೦೧.	ಕಾರವಾರ	ಕಡವಾಡ	೪೦	೨೫೦೦	೧೮೦೦೦
೦೨.	ಅಂಕೋಲಾ	ಅಂಕೋಲಾ			
		ನುಶಿಕೋಟೆ	೩೪	೩೭೨೫	೨೬೫೦೦
೦೩.	ಕುಮಟಾ	ಕುಂಬಾರಗದ್ದೆ	೮೫	೪೨೨೫	೩೮೦೦೦
		ಗೋಕರ್ಣ			
		ಹರಟೆ			
೦೪.	ಹೊನ್ನಾವರ	ಚಂದಾವರ	೪೦	೨೫೫೦	೧೮೫೦೦

(ಮೂಲ: ಹಾಲಕ್ಕಿ ಒಕ್ಕಲಿಗರ ಸಂಘ)

ಈ ಅಧ್ಯಯನವು ಹಾಲಕ್ಕಿಗಳು ನೆಲೆಗೊಂಡಿರುವ ಉತ್ತರ ಕನ್ನಡ ಜಿಲ್ಲೆಯ ಎರಡು ತಾಲೂಕುಗಳನ್ನು ಅಧ್ಯಯನಕ್ಕೆ ಆಯ್ಕೆ ಮಾಡಿಕೊಳ್ಳಲಾಗಿದೆ. ಈ ಎರಡು ತಾಲೂಕುಗಳೆಂದರೆ ಅಂಕೋಲಾ ಮತ್ತು ಕುಮಟಾ. ಹಾಲಕ್ಕಿಗಳ ಜನಸಂಖ್ಯೆಯ ಆಧಾರದ ಮೇಲೆ ಈ ಎರಡೂ ತಾಲೂಕುಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಈ ಎರಡೂ ತಾಲೂಕಿನಲ್ಲಿ ಒಟ್ಟು ಹಾಲಕ್ಕಿಗಳ ಜನಸಂಖ್ಯೆ ಶೇ. ೭೦ರಷ್ಟು ನೆಲೆಗೊಂಡಿದ್ದಾರೆ.

ಈ ಎರಡೂ ತಾಲೂಕಿನಲ್ಲಿ ಹಾಲಕ್ಕಿಗಳ ಒಟ್ಟು ಏಳು ಸೀಮೆಗಳಲ್ಲಿನ ಐದು ಸೀಮೆಗಳನ್ನು ಒಳಗೊಂಡಿದೆ. ಅಂಕೋಲಾ ತಾಲೂಕಿನಲ್ಲಿ ಬರುವ ಎರಡು ಸೀಮೆಗಳೆಂದರೆ ಅಂಕೋಲಾ ಸೀಮೆ ಮತ್ತು ನುಶಿಕೋಟೆ ಸೀಮೆ. ಕುಮಟಾ ತಾಲೂಕಿನಲ್ಲಿ ಬರುವ ಮೂರು ಸೀಮೆಗಳೆಂದರೆ ಕುಂಬಾರಗದ್ದೆ ಸೀಮೆ ಗೋಕರ್ಣ ಸೀಮೆ ಮತ್ತು ಹರಟೆ ಸೀಮೆ. ಅಧ್ಯಯನದಲ್ಲಿ ಅಂಕೋಲಾ ತಾಲೂಕಿನಲ್ಲಿ ಬರುವ ಎರಡು ಸೀಮೆಗಳನ್ನು ಸೇರಿಸಿ, ಅಂಕೋಲಾ ಸೀಮೆಯೆಂದು ಹಾಗೂ ಕುಮಟಾ ತಾಲೂಕಿನಲ್ಲಿ ಬರುವ ಮೂರು ಸೀಮೆಗಳನ್ನು ಸೇರಿಸಿ, ಕುಮಟಾ ಸೀಮೆಯೆಂದು ಬಳಸಿಕೊಳ್ಳಲಾಗಿದೆ.

ಕೋಷ್ಟಕ ೧.೨

ಅಧ್ಯಯನಕ್ಕೆ ಒಳಪಟ್ಟ ಸೀಮೆಯ ಗ್ರಾಮಗಳು

ಕ್ರಸಂ.	ತಾಲೂಕು	ಸೀಮೆ	ಗ್ರಾಮಗಳು	ಆಯ್ದುಕೊಂಡ ಕುಟುಂಬದ ಸಂಖ್ಯೆ
೧.	ಅಂಕೋಲಾ	೧. ಅಂಕೋಲಾ	ತಳಗದ್ದೆ	೧೫
			ಹಡಾವ	೧೫
			ಹೊಸಗದ್ದೆ	೧೫
			ಬೆಳಸೆ	೧೫
		೨. ನುಶಿಕೋಟೆ	ನೇವಳಸೆ	೧೦
			ನುಶಿಕೋಟೆ	೧೫
೨.	ಕುಮಟಾ	೧. ಕುಂದಾರಗದ್ದೆ	ಕಡಿಮೆ	೨೦
			ಜುಗಾ	೧೫
		೨. ಗೋಕರ್ಣ	ದೇವಣಿ	೧೫
			ತಲಗೇರಿ	೧೫
		೩. ಹರಟೆ	ಮಿರ್ಜಾನ್	೨೦
			ಶಿರಗುಂಜಿ	೧೫
ಒಟ್ಟು	೦೨	೦೫	೧೨	೧೮೫

(ಮೂಲ: ಹಾಲಕ್ಕಿ ಒಕ್ಕಲಿಗರ ಸಂಘ)

ಸೀಮೆಗಳಲ್ಲಿನ ಗ್ರಾಮಗಳನ್ನು ನಗರ ಪ್ರದೇಶ ಅಂತರ ಹಾಗೂ ಗ್ರಾಮಗಳ ಕುಟುಂಬಗಳ ಸಂಖ್ಯೆಯ ಆಧಾರದ ಮೇಲೆ ಆಯ್ಕೆ ಮಾಡಿಕೊಳ್ಳಲಾಗಿದೆ. ಗ್ರಾಮದಲ್ಲಿ ಕುಟುಂಬಗಳ ಬಗ್ಗೆ ಮಾಹಿತಿಯನ್ನು ಮೊದಲು ಅಂಗನವಾಡಿಯ ಕಾರ್ಯಕರ್ತೆಯರಿಂದ ಪಡೆಯಲಾಗಿದೆ. ಆ ನಂತರ ಮಹಿಳೆಯರ ವಯಸ್ಸು ಮತ್ತು ವಿವಿಧ ಆರ್ಥಿಕತೆಯ ಆಧಾರದ ಮೇಲೆ ಕುಟುಂಬಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಗ್ರಾಮಗಳಲ್ಲಿನ ಕುಟುಂಬಗಳ ಸಂಖ್ಯೆಯ ಆಧಾರದ ಮೇಲಿಂದ ಕುಟುಂಬದ ಸಂಖ್ಯೆಯನ್ನು ನಿರ್ಧರಿಸಲಾಗಿದೆ. ಒಟ್ಟು ೧೮೫ ಕುಟುಂಬಗಳನ್ನು ಅಧ್ಯಯನಕ್ಕೆ ಆಯ್ಕೆ ಮಾಡಿಕೊಳ್ಳಲಾಗಿದೆ. ಹಾಲಕ್ಕಿಗಳ ಜನಸಂಖ್ಯೆ ಹೆಚ್ಚಿರುವ ಕುಮಟಾ ಸೀಮೆಯಿಂದ ೧೦೦ ಕುಟುಂಬಗಳನ್ನು ಹಾಗೂ ಅಂಕೋಲಾ ಸೀಮೆಯಿಂದ ೮೫ ಕುಟುಂಬಗಳನ್ನು ಆಯ್ಕೆ ಮಾಡಿಕೊಳ್ಳಲಾಯಿತು.

ಈ ಅಧ್ಯಯನದ ಪ್ರಾಥಮಿಕ ಮಾಹಿತಿಯ ಸಂಗ್ರಹವನ್ನು ನಾಲ್ಕು ವಿಧಾನಗಳ ಮೂಲಕ ಪಡೆಯಲಾಗಿದೆ. ಪ್ರಾಥಮಿಕ ಮಾಹಿತಿಯನ್ನು ಮಾದರಿ ಪ್ರಶ್ನಾವಳಿ ಮೂಲಕ ಪಡೆಯಲಾಯಿತು. ಈ ಮಾದರಿಯ ಪ್ರಶ್ನಾವಳಿಯಲ್ಲಿ ಐದು ಸೂಚಿಗಳನ್ನು ಬಳಸಿಕೊಳ್ಳಲಾಗಿದೆ. ಅವೆಂದರೆ ಡೆಮೋಗ್ರಾಫಿ ಸೂಚಿ, ಆರ್ಥಿಕಸೂಚಿ,ಸಾಮಾಜಿಕಸೂಚಿ, ರಾಜಕೀಯಸೂಚಿ ಮತ್ತು ಧಾರ್ಮಿಕ ಸೂಚಿ. ಆಯ್ದ ೧೮೫ ಕುಟುಂಬಗಳ ಪ್ರಶ್ನಾವಳಿಯನ್ನು ಪಡೆದುಕೊಳ್ಳಲಾಗಿದೆ. ಮಹಿಳೆಯರ ಮನೋಭಾವವನ್ನು ಅರ್ಥಮಾಡಿಕೊಳ್ಳುವ ದೃಷ್ಟಿಯಿಂದ ವ್ಯಕ್ತಿಗತವಾಗಿ ಮತ್ತು ಗುಂಪಾಗಿ ಮಹಿಳೆಯರ ವರ್ತನೆಯನ್ನು ಅವಲೋಕಿಸಲಾಗಿದೆ.

ಪ್ರಾಥಮಿಕ ಮಾಹಿತಿಯನ್ನು ಸಂದರ್ಶನ ಮತ್ತು ಗುಂಪು ಚರ್ಚೆಯನ್ನು ನಡೆಸುವುದರ ಮೂಲಕ ಸಹ ಪಡೆಯಲಾಗಿದೆ. ಹಾಲಕ್ಕಿ ಒಕ್ಕಲಿಗರ ಸಂಘದ ಅಧ್ಯಕ್ಷರನ್ನು, ಹಾಲಕ್ಕಿ ಮಾಜಿ ಶಾಸಕರನ್ನು ಊರ ಗೌಡರನ್ನು ಪ್ರಶಸ್ತಿ–ಪುರಸ್ಕೃತರನ್ನು, ಶಿಕ್ಷಕ–ಶಿಕ್ಷಕಿಯರನ್ನು ಸ್ವ–ಉದ್ಯೋಗಿಗಳನ್ನು ಲೇಖಕರನ್ನು ಸಂದರ್ಶಿಸಿ, ಹಾಲಕ್ಕಿಗಳ ಸಾಮಾಜಿಕ ವ್ಯವಸ್ಥೆಯ ಮಾಹಿತಿಯನ್ನು ಪಡೆಯಲಾಗಿದೆ.

ಕ್ಷೇತ್ರಕಾರ್ಯದ ಕೊನೆಯಲ್ಲಿ ಸಣ್ಣ ಪ್ರಮಾಣದ ಗುಂಪು ಚರ್ಚೆಯನ್ನು ಬೆಳಸೆ ಗ್ರಾಮದಲ್ಲಿ ನಡೆಸಲಾಗಿದೆ. ಒಟ್ಟು ಹತ್ತು ಮಂದಿ ಭಾಗವಹಿಸಿದ ಈ ಗುಂಪು ಚರ್ಚೆಯಲ್ಲಿ ಮಹಿಳೆಯರ ನಿರ್ವಹಿಸುತ್ತಿರುವ ಪಾತ್ರ ಕುರಿತು ಚರ್ಚಿಸಲಾಯಿತು.

ಕ್ಷೇತ್ರಕಾರ್ಯದಿಂದ ಸಂಗ್ರಹಿಸಿದ ಮಾಹಿತಿಯನ್ನು ವಿಶ್ಲೇಷಣೆ ಮಾಡುವಾಗ ಅಗತ್ಯವಾದ ಮಾಹಿತಿಗಳನ್ನು ಪಟ್ಟಿ ಅಥವಾ ಕೋಷ್ಟಕದ ರೂಪದಲ್ಲಿ ನೀಡಲಾಗಿದೆ. ಬದಲಾವಣೆಯನ್ನು ಗುರುತಿಸಲು ಕೋಷ್ಟಕದ ಅಂಕಿಸಂಖ್ಯೆಯನ್ನು ಸರಾಸರಿ ಪ್ರಮಾಣದಲ್ಲಿ ಮಾಹಿತಿ ನೀಡಲಾಗಿದೆ. ಈ ಮಹಾ ಪ್ರಬಂಧಗಳನ್ನು ರಚಿಸಲು ಅನುಕೂಲವಾಗುವಂತೆ ಹಲವು ಅಧ್ಯಾಯಗಳನ್ನು ರಚಿಸಿಕೊಳ್ಳಲಾಗಿದೆ.

೧.೯. ಅಧ್ಯಯನದ ಉದ್ದೇಶಗಳು

೧. ಹಾಲಕ್ಕಿ ಮಹಿಳೆಯರ ಸಾಮಾಜಿಕ, ಆರ್ಥಿಕ ಪರಿವರ್ತನೆಯ ನೆಲೆಗಳನ್ನು ಅರಿಯುವುದು.

೨. ಹಾಲಕ್ಕಿ ಮಹಿಳೆಯರ ದುಡಿಮೆಯ ಸ್ವರೂಪವನ್ನು ಅರಿಯುವುದು.

೩. ದುಡಿಮೆಯಲ್ಲಿ ಲಿಂಗ ಸಮಾನತೆಯಲ್ಲಿನ ಬದಲಾವಣೆಯನ್ನು ಗುರುತಿಸುವುದು.

೪. ಶಿಕ್ಷಣಕ್ಕೂ ಅವರ ಸಾಮಾಜಿಕ ಆರ್ಥಿಕ ಪರಿವರ್ತನೆಯ ನೆಲೆಗಳ ನಡುವಿನ ಸಂಬಂಧವನ್ನು ವಿಶ್ಲೇಷಿಸುವುದು.

ಹಾಲಕ್ಕಿ ಮಹಿಳೆಯರ ಸಾಮಾಜಿಕ ಆರ್ಥಿಕ ಪರಿವರ್ತನೆಯ ನೆಲೆಯನ್ನು ಚರ್ಚಿಸುವುದೇ ಈ ಅಧ್ಯಯನದ ಮುಖ್ಯ ಉದ್ದೇಶವಾಗಿದೆ. ಅಧ್ಯಯನದಲ್ಲಿ ಸಾಮಾಜಿಕ, ಆರ್ಥಿಕ,

ಪರಿವರ್ತನೆಯು ಮಾನವನ ವಿಕಾಸದ ಹಂತದಿಂದ ಬಂಡವಾಳಷಾಹಿ ಅರ್ಥವ್ಯವಸ್ಥೆವರೆಗಿನ ಬೆಳವಣಿಗೆಯ ಹಂತದವರೆಗೆ ಒಳಗೊಂಡಿದೆ. ಸಾಂಪ್ರದಾಯ ವ್ಯವಸ್ಥೆಯಲ್ಲಿ ರಾಚನಿಕವಾದ ಬದಲಾವಣೆ ಉಂಟಾಗುವುದನ್ನು ಕಾರ್ಲಮಾರ್ಕ್ಸ (೧೮೮೫) ಸೈಮನ್ ಕುಜ್ನೆಟ್ಸ್ (೧೯೬೫) ಹಾಗೂ ರೋಸ್ಟೋ (೧೯೬೦) ಗುರುತಿಸಿರುವರು. ಅಭಿವೃದ್ಧಿ ಎಂಬುದನ್ನು ಕೇವಲ ಆದಾಯದಿಂದ ನೋಡುವ ದೃಷ್ಟಿ ಕೂಡಾ ಬದಲಾಗಿದೆ. ಸಾಮಾಜಿಕ ಅಂಶವೂ ಕೂಡಾ ಆರ್ಥಿಕ ಅಂಶದಷ್ಟೇ ಮುಖ್ಯವಾಗಿದೆ. ಈ ಹಿನ್ನೆಲೆಯಲ್ಲಿ ಡಾ. ಸೇನ್‌ರವರ ಲಿಂಗಸಂಬಂಧೀ ಪರಿಕಲ್ಪನೆ ಮಹತ್ವವನ್ನು ಪಡೆದಿದೆ. ಈ ನಮ್ಮ ಅಧ್ಯಯನದಲ್ಲಿ ಹಾಲಕ್ಕಿಗಳಲ್ಲಿ ಉಂಟಾಗುತ್ತಿರುವ ಪರಿವರ್ತನೆಯನ್ನು ಗುರುತಿಸಲು ಲಿಂಗಸಂಬಂಧೀ ಪರಿಕಲ್ಪನೆಯನ್ನು ಬಳಸಿಕೊಳ್ಳಲಾಯಿತು.

೧೯೯೦ರಲ್ಲಿ ಅಭಿವೃದ್ಧಿ ಅಳೆಯಲು ಒಟ್ಟು ನಿವ್ವಳ ಆದಾಯ ಒಂದು ಪರಿಪೂರ್ಣ ಮಾಪನವಲ್ಲ ಎಂದು ತಿಳಿದ ಮೇಲೆ ಆರ್ಥಿಕೇತರ ಅಂಶಗಳು ಅಭಿವೃದ್ಧಿ ಮಾಪನದಲ್ಲಿ ಸೇರ್ಪಡೆಗೊಂಡವು. ಆರ್ಥಿಕೇತರ ಅಂಶಗಳು ಅಭಿವೃದ್ಧಿಯ ಪರಿಕಲ್ಪನೆಯಲ್ಲಿ ಸೇರ್ಪಡೆಗೊಂಡ ನಂತರ ಸಾಮಾಜಿಕ ಬದಲಾವಣೆ ಎನ್ನುವುದು ಸಾಮಾಜಿಕ ರಚನೆಯಲ್ಲಿ ಉಂಟಾದ ಬದಲಾವಣೆ ಎಂದು ಗುರುತಿಸಲಾಗಿದೆ. ಮಹಿಳೆಯರನ್ನು ಮುಖ್ಯವಾಹಿನಿಯಲ್ಲಿ ತೆಗೆದುಕೊಂಡು ಹೋಗಬೇಕು ಎಂಬುದು ಚರ್ಚಿಸಿರುವ ವಿಷಯವಾಗಿದೆ. ಏಕೆಂದರೆ, ಪುರುಷರು ಮತ್ತು ಮಹಿಳೆಯರು ಸಾಮಾಜಿಕ ಗುಂಪುಗಳಾಗಿದ್ದು, ಈ ಎರಡು ಸಾಮಾಜಿಕ ಗುಂಪಿನಲ್ಲಿ ಅಸಮಾನತೆ ಸಾಮಾನ್ಯವಾಗಿದೆ. ಈ ಹಿನ್ನೆಲೆಯಲ್ಲಿ ಹಾಲಕ್ಕಿ ಸಮುದಾಯದ ಮಹಿಳೆಯರ ಸಾಮಾಜಿಕ, ಆರ್ಥಿಕ ಪರಿವರ್ತನೆಯ ನೆಲೆಯನ್ನು ಅರಿಯುವ ಉದ್ದೇಶವನ್ನು ಈ ಅಧ್ಯಯನವು ಹೊಂದಿದೆ.

ಹಾಲಕ್ಕಿಗಳು ಗ್ರಾಮವಾಸಿಗಳು. ಈ ಸಮುದಾಯದ ಅರ್ಧದಷ್ಟಿರುವ ಮಹಿಳೆಯರು ಕುಟುಂಬದ ಸಮುದಾಯದ ಅಭಿವೃದ್ಧಿಯಲ್ಲಿ ಮಹತ್ವದ ಪಾತ್ರವನ್ನು ನಿರ್ವಹಿಸುತ್ತಿದ್ದಾರೆ. ಹಾಲಕ್ಕಿ ಸಾಮಾಜಿಕ ರಚನೆಯಲ್ಲಿ ಮಹಿಳೆಯರ ಪಾತ್ರವನ್ನು ಮತ್ತು ಕಾರ್ಯವನ್ನು ಅರಿಯಬೇಕಿದೆ. ಗ್ರಾಮೀಣ ಪ್ರದೇಶದಲ್ಲಿ ಹಾಲಕ್ಕಿ ಮಹಿಳೆಯರು ಶ್ರಮಿಕ ಶಕ್ತಿಯಾಗಿ ಭಾಗವಹಿಸುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಮಹಿಳೆಯರ ದುಡಿಮೆಯ ಸ್ವರೂಪವನ್ನು ಅರಿಯುವುದು ಅಧ್ಯಯನದ ಉದ್ದೇಶವಾಗಿದೆ.

ಲಿಂಗ ಸಮಾನತೆ ಮತ್ತು ಅಭಿವೃದ್ಧಿ ಎಂಬುದು ಎಲ್ಲೆಡೆಯಲ್ಲಿಯೂ ಚರ್ಚಿತವಾಗುತ್ತಿರುವ ವಿಷಯವಾಗಿದೆ. ಆದರೆ ತಳಮಟ್ಟದಲ್ಲಿರುವ ಮಹಿಳೆಯರು ಅಭಿವೃದ್ಧಿಯಿಂದ ಕಡೆಗಣಿಸಲ್ಪಟ್ಟಿದ್ದಾರೆ. ಈ ಹಿನ್ನೆಲೆಯಲ್ಲಿ ಹಾಲಕ್ಕಿ ಮಹಿಳೆಯರ ದುಡಿಮೆಯ ಸ್ವರೂಪ ಹಾಗೂ ಲಿಂಗ

ಸಮಾನತೆಯಲ್ಲಿ ಉಂಟಾಗುತ್ತಿರುವ ಬದಲಾವಣೆಯನ್ನು ಚರ್ಚಿಸುವ ಉದ್ದೇಶವನ್ನು ಈ ಅಧ್ಯಯನವು ಹೊಂದಿದೆ.

ಅಭಿವೃದ್ಧಿ ಅಧ್ಯಯನದಲ್ಲಿ ಶಿಕ್ಷಣವನ್ನು ಅಭಿವೃದ್ಧಿ ಸೂಚಿಯಾಗಿ ಬಳಸಲಾಗಿದೆ. ಉತ್ತರ ಕನ್ನಡ ಜಿಲ್ಲೆಯ ಸಾಮಾಜಿಕ ಅಭಿವೃದ್ಧಿಯಲ್ಲಿ ಕರ್ನಾಟಕದಲ್ಲಿ ಐದನೆಯ ಸ್ಥಾನದಲ್ಲಿದೆ. ಉತ್ತರ ಕನ್ನಡ ಜಿಲ್ಲೆಯ ಸಾಕ್ಷರತೆಯ ಮಟ್ಟವು ಕರ್ನಾಟಕದ ಸಾಕ್ಷರತೆಯ ಮಟ್ಟಕ್ಕಿಂತ ಹೆಚ್ಚಿದೆ. ಹಾಲಕ್ಕಿಗಳು ಶೈಕ್ಷಣಿಕವಾಗಿ ಮುಂದುವರೆದ ಜನಸಮುದಾಯದೊಂದಿಗೆ ನೇರ ಸಂಪರ್ಕದಲ್ಲಿದ್ದವರು. ಆದರೂ ಅವರ ಸಾಕ್ಷರತೆಯ ಮಟ್ಟವು ಕಡಿಮೆಯಿದೆ. ಇದು ಗಂಭೀರವಾದ ವಿಷಯವಾಗಿದೆ. ಆದ್ದರಿಂದ ಹಾಲಕ್ಕಿಗಳ ಶಿಕ್ಷಣ ಮಟ್ಟಕ್ಕೂ ಮತ್ತು ಪರಿವರ್ತನೆಯ ನಡುವೆ ಇರುವ ಸಂಬಂಧವನ್ನು ಗುರುತಿಸುವ ಉದ್ದೇಶವನ್ನು ಈ ಅಧ್ಯಯನ ಹೊಂದಿದೆ.

೧.೧೦. ಅಧ್ಯಯನದ ಅವಶ್ಯಕತೆ ಮತ್ತು ಮಿತಿಗಳು

ಸಮುದಾಯಗಳ ಬಗ್ಗೆ ನಡೆದಿರುವ ಸಾಂಪ್ರದಾಯಿಕ ಅಧ್ಯಯನಗಳು ಸ್ವಲ್ಪಮಟ್ಟಿನ ಬದಲಾವಣೆಯನ್ನು ಗುರುತಿಸಿವೆ. ಪ್ರತಿ ಸಮುದಾಯದಲ್ಲಿ ಮಹಿಳೆಯರು ಪ್ರಮುಖ ಅಂಶವಾಗಿದ್ದಾರೆ. ಆರ್ಥಿಕ ಅಭಿವೃದ್ಧಿಯ ಪ್ರಕ್ರಿಯೆಯಿಂದ ಮಹಿಳೆಯರಲ್ಲಿ ಉಂಟಾಗುತ್ತಿರುವ ಪರಿವರ್ತನೆಯ ಸ್ವರೂಪವನ್ನು ಗುರುತಿಸುವ ಅವಶ್ಯಕತೆಯಿದೆ. ಈ ಹಿನ್ನೆಲೆಯಲ್ಲಿ ನಮ್ಮ ಅಧ್ಯಯನದ ಚೌಕಟ್ಟು ಭಿನ್ನವಾಗಿದೆ. ಇತ್ತೀಚೆಗೆ ಗ್ರಾಮಗಳು, ಸಮುದಾಯಗಳು ಹೊಸ ಅವಕಾಶಗಳಿಂದ ಆದಾಯದಲ್ಲಿ ಹೆಚ್ಚಳ, ಹೊಸ ಉತ್ಪಾದನಾ ಚಟುವಟಿಕೆಗಳನ್ನು ಅವಲೋಕಿಸಿದಾಗ, ಅಭಿವೃದ್ಧಿಯು ಮೇಲಿಂದ ಕೆಳಮುಖವಾಗಿ ಬರುವುದು ತಿಳಿಯುವುದು. ಈ ನಿಟ್ಟಿನಲ್ಲಿ ಇದೊಂದು ಚಿಕ್ಕ ಪ್ರಯತ್ನ ಎನ್ನಬಹುದು. ಈಗಾಗಲೇ ಹಾಲಕ್ಕಿಗಳ ಕುರಿತು ನಡೆದ ಅಧ್ಯಯನಗಳಲ್ಲಿ ಈ ಜನರ ಜನಪದ ಸಾಂಪ್ರದಾಯ, ಆಚಾರ-ವಿಚಾರ, ಕಲೆ-ನಂಬಿಕೆಗಳು ಹಾಗೂ ಮೌಲ್ಯಗಳು, ದೃಷ್ಟಿಕೋನಗಳಿಗೆ ಒತ್ತು ನೀಡಿರುವುದು ಕಂಡುಬರುತ್ತದೆ. ಹಾಲಕ್ಕಿಗಳನ್ನು ಬೇರೆ ಬೇರೆ ದೃಷ್ಟಿಕೋನದಿಂದ ಅಧ್ಯಯನವನ್ನು ನಡೆಸಿಲ್ಲ. ಜನಪದದ ಅದ್ಯಯನದಲ್ಲಿ ಹಾಲಕ್ಕಿ ಮಹಿಳೆಯ ಕುರಿತು ರಮ್ಯತೆಯ ಕಲ್ಪನೆಗಳಿವೆ. ಈ ಹಿನ್ನೆಲೆಯಲ್ಲಿ ಮಹಿಳೆಯ ವಾಸ್ತವಿಕ ಸ್ಥಿತಿಗತಿಯನ್ನು ಅರಿಯಲು ಹಾಲಕ್ಕಿ ಸಮುದಾಯದಲ್ಲಿನ ಲಿಂಗ ಸಂಬಂಧೀ ಸ್ವರೂಪವನ್ನು ಅಧ್ಯಯನ ಮಾಡುವ ಅವಶ್ಯಕತೆಯಿದೆ.

ಬದಲಾವಣೆಯ ಈ ಯುಗದಲ್ಲಿ ಹಾಲಕ್ಕಿಗಳಂತ ಅತಿ ಚಿಕ್ಕ ಗುಂಪುಗಳು ಸಾಂಪ್ರದಾಯಿಕ ಜೀವನ ಶೈಲಿಯನ್ನು ಬದಲಾಯಿಸುವ ಸಾಧ್ಯತೆಯಿದೆ. ಹಾಲಕ್ಕಿ ಬುಡಕಟ್ಟಿನವರಿಗೆ ಸಂಬಂಧಪಟ್ಟ ಮತ್ತು ಸಂಬಂಧಪಡದ ವಿಷಯಗಳ ಅಂತರ್ಸ್ಪರ್ಷಣೆಯ ಒತ್ತಡದಿಂದಾಗಿ ಸ್ಥಿತ್ಯಂತರಕ್ಕೆ

ಒಳಗಾಗುತ್ತಾರೆ. ಇಂತಹ ಸ್ಥಿತ್ಯಂತರವು ಸಕಾರಾತ್ಮಕ ಬದಲಾವಣೆಯ ಜೊತೆಗೆ ನಕಾರಾತ್ಮಗಳ ಬದಲಾವಣೆಯನ್ನು ಉಂಟುಮಾಡುತ್ತದೆ. ಸ್ಥಿತ್ಯಂತರದಿಂದ ಮಹಿಳೆಯರ ಮೇಲೆ ಉಂಟಾದ ಸಾಮಾಜಿಕ ಸಾಂಸ್ಕೃತಿಕ ಸಂಬಂಧವನ್ನು ಅರಿಯುವ ಅವಶ್ಯಕತೆಯಿದೆ.

ದೇಶದ ಆರ್ಥಿಕ ಬೆಳವಣಿಗೆಯಲ್ಲಿ ಮಹಿಳೆಯರು ನಿರ್ಣಾಯಕ ಪಾತ್ರವಹಿಸುವರು. ಅವರು ಅಭಿವೃದ್ಧಿಗೆ ಗೋಚರ ಮತ್ತು ಅಗೋಚರ ಕೊಡುಗೆ ನೀಡುವರು. ಜಗತ್ತಿನ ಜನಸಂಖ್ಯೆಯ ಅರ್ಧದಷ್ಟಿರುವ ಮಹಿಳೆಯರು, ದುಡಿಮೆಗೆ ೨/೩ರಷ್ಟು ಕೊಡುಗೆ ನೀಡುತ್ತಾರೆ. ಆದರೆ ಅವರು ಗಳಿಸುವ ಸಂಪನ್ಮೂಲದ ಪ್ರಮಾಣ ೧/೧೦ರಷ್ಟು ಇದೆ. ನಮ್ಮ ಸರಕಾರವು ಮಹಿಳೆಯರ ಸಬಲೀಕರಣಕ್ಕೆ ಒತ್ತು ನೀಡಿದೆ. ಈ ಹಿನ್ನೆಲೆಯಲ್ಲಿ ಮಹಿಳೆಯ ದುಡಿಮೆಯ ಸ್ವರೂಪವನ್ನು ಅರಿಯುವ ಅವಶ್ಯಕತೆಯಿದೆ.

ಪ್ರಸ್ತುತ ಅಧ್ಯಯನವು ಸೈದ್ಧಾಂತಿಕ ಮತ್ತು ನಿರ್ದೇಶನಾತ್ಮಕ ಅಧ್ಯಯನವಾಗಿದೆ. ಹಾಲಕ್ಕಿ ಮಹಿಳೆಯರ ಸಾಮಾಜಿಕ ಆರ್ಥಿಕ ಪರಿವರ್ತನೆಯ ನೆಲೆಯನ್ನು ಕುರಿತು ಈ ಮಹಾ ಪ್ರಬಂಧವು ಚರ್ಚಿಸುತ್ತದೆ. ಈ ಅಧ್ಯಯನವು ಕರ್ನಾಟಕ ರಾಜ್ಯದ ಕರಾವಳಿ ಪ್ರದೇಶವಾದ ಅಂಕೋಲಾ ಮತ್ತು ಕುಮಟಾ ತಾಲೂಕುಗಳನ್ನು ಮಾತ್ರ ಒಳಗೊಂಡಿದೆ. ಕಾಲದ ಮಿತಿಯಿಂದ ಹಾಲಕ್ಕಿಗಳು ನೆಲೆಗೊಂಡಿರುವ ಇತರೆ ಪ್ರದೇಶಗಳನ್ನು ಅಧ್ಯಯನದ ವ್ಯಾಪ್ತಿಯಲ್ಲಿ ಸೇರಿಸಿಕೊಳ್ಳಲು ಸಾಧ್ಯವಾಗದೇ ಇರುವುದು ಅಧ್ಯಯನದ ಒಂದು ಮಿತಿಯಾಗಿದೆ.

ಈ ಅಧ್ಯಯನ ಕ್ಷೇತ್ರದಲ್ಲಿ ಲಭ್ಯವಾಗುವ ಮಾಹಿತಿಯ ನಿಖರತೆಯ ಆಧಾರದ ಮೇಲೆ ಸಂಶೋಧನಾ ವಿಷಯದ ಫಲಿತಗಳು ವಿಶ್ಲೇಷಣೆಯಾಗುತ್ತದೆ. ಆದರೆ ಮಾಹಿತಿ ನೀಡುವವರು ವಿಷಯಗಳನ್ನು ಮರೆಮಾಚಿದರೆ ನಿಖರತೆ ಸಾಧ್ಯವಾಗದೇ ಇರಬಹುದು. ಇದು ಅಧ್ಯಯನದ ಒಂದು ಮಿತಿಯಾಗಿದೆ.

೧.೧೧. ಅಧ್ಯಯನದ ವಿನ್ಯಾಸ

ಮೊದಲನೆಯ ಅಧ್ಯಾಯದಲ್ಲಿ ಪ್ರಸ್ತಾವನೆಯ ಭಾಗವಿದೆ. ಅದರಲ್ಲಿ ವಿಷಯದ ಸಮಸ್ಯೀಕರಣ, ಸಮುದಾಯದ ಹಿನ್ನೆಲೆ, ಹಾಲಕ್ಕಿ ಮಹಿಳೆಯರ ಸಮಕಾಲೀನ ಸ್ಥಿತಿ ಕರ್ನಾಟಕದಲ್ಲಿ ಹಾಲಕ್ಕಿಗಳ ನೆಲೆ, ಅಧ್ಯಯನದ ಮಾಹಿತಿ, ಅಧ್ಯಯನ ಉದ್ದೇಶ, ಸಂಶೋಧನಾ ಚೌಕಟ್ಟು, ಅಧ್ಯಯನದ ಅವಶ್ಯಕತೆ ಮತ್ತು ಮಿತಿಗಳು, ಅಧ್ಯಯನದ ವಿಧಾನ ಹಾಗೂ ಅಧ್ಯಯನದ ವಿನ್ಯಾಸಗಳನ್ನು ನೀಡಲಾಗಿದೆ. ಒಟ್ಟಾರೆ ಮೊದಲನೆಯ ಅಧ್ಯಾಯದಲ್ಲಿ ಈ ಅಧ್ಯಯನದ ರೂಪುರೇಷೆಗಳನ್ನು ನೀಡಲಾಗಿದೆ.

ಎರಡನೆಯ ಅಧ್ಯಾಯವು ಅಧ್ಯಯನಗಳ ಸಮೀಕ್ಷೆ ಎಂದಿದ್ದು, ಈ ಅಧ್ಯಯನದಲ್ಲಿ ಇಲ್ಲಿಯವರೆಗೆ ನಡೆದಿರುವ ಅಧ್ಯಯನಗಳನ್ನು ವಿಶ್ಲೇಷಿಸಲಾಗಿದೆ. ಮುಖ್ಯವಾಗಿ ಬುಡಕಟ್ಟು

ಮಹಿಳೆಯರ ಕುರಿತು ನಡೆದಿರುವ ಅಧ್ಯಯನಗಳಿಗೆ ಹೆಚ್ಚಿನ ಪ್ರಾಮುಖ್ಯತೆ ನೀಡಲಾಗಿದೆ. ಈಗಾಗಲೇ ನಡೆದಿರುವ ಅಧ್ಯಯನಗಳು ವರ್ತಮಾನದ ಅಧ್ಯಯನಕ್ಕೆ ಮಾರ್ಗದರ್ಶಕವಾಗುತ್ತವೆ. ಮಹಿಳೆಯರ ಪರಿವರ್ತನೆ ಎಂಬ ಪರಿಕಲ್ಪನೆಯಲ್ಲಿ ಸಾಮಾಜಿಕ, ಆರ್ಥಿಕ, ರಾಜಕೀಯ, ಭೌಗೋಳಿಕ, ಸಾಂಸ್ಕೃತಿಕ ಹೀಗೆ ಅನೇಕ ಅಂಶಗಳು ಅಡಕವಾಗಿವೆ. ಆದರೆ ಕಾಲದ ಮಿತಿಯಿಂದ ಎಲ್ಲಾ ಅಧ್ಯಯನಗಳನ್ನು ಸಮೀಕ್ಷಿಸಲು ಸಾಧ್ಯವಿಲ್ಲ. ಪ್ರಸ್ತುತ ಅಧ್ಯಯನಕ್ಕೆ ವಿಶಿಷ್ಟವೆನಿಸುವ ಅಧ್ಯಯನಗಳ ಸಮೀಕ್ಷೆಯನ್ನು ನಾಲ್ಕು ಭಾಗಗಳಾಗಿ ನೀಡಲಾಗಿದೆ. ಮೊದಲ ಭಾಗದಲ್ಲಿ ಬುಡಕಟ್ಟುಗಳನ್ನು ಗುರುತಿಸುವ ಸಮಸ್ಯೆಗಳ ಕುರಿತಾದ ಅಧ್ಯಯನಗಳ ಸಮೀಕ್ಷೆಯನ್ನು ಮಾಡಲಾಗಿದೆ. ಬುಡಕಟ್ಟುಗಳ ಮೇಲೆ ಅಭಿವೃದ್ಧಿಯ ಪರಿಣಾಮದ ಕುರಿತಾದ ಅಧ್ಯಯನಗಳ ಸಮೀಕ್ಷೆಯನ್ನು ಎರಡನೆಯ ಭಾಗದಲ್ಲಿ ಮತ್ತು ಮೂರನೆಯ ಭಾಗದಲ್ಲಿ ಬುಡಕಟ್ಟು ಮಹಿಳೆಯರ ಸಾಮಾಜಿಕ ಬದಲಾವಣೆಯ ಕುರಿತಾದ ಅಧ್ಯಯನಗಳ ಸಮೀಕ್ಷೆಯನ್ನು ಹಾಗೂ ಬುಡಕಟ್ಟು ಮಹಿಳೆಯರ ಸ್ಥಿತಿಗತಿಯ ಕುರಿತಾದ ಅಧ್ಯಯನದ ಸಮೀಕ್ಷೆಯನ್ನು ನಾಲ್ಕನೆಯ ಭಾಗದಲ್ಲಿ ಚರ್ಚಿಸಲಾಗಿದೆ.

ಮೂರನೆಯ ಅಧ್ಯಾಯದಲ್ಲಿ ಅಧ್ಯಯನ ಕ್ಷೇತ್ರವಾದ ಉತ್ತರ ಕನ್ನಡ ಜಿಲ್ಲೆಯ ಪರಿಚಯವನ್ನು ಮಾಡಿಕೊಡಲಾಗಿದೆ. ಈ ಅಧ್ಯಯನವು ಉತ್ತರ ಕನ್ನಡ ಜಿಲ್ಲೆಯ ಚಾರಿತ್ರಿಕ ಹಿನ್ನೆಲೆ, ಜಿಲ್ಲೆಯು ಪ್ರಾಕೃತಿಕ ಸಂಪನ್ಮೂಲಗಳು ಮತ್ತು ಹವಾಮಾನ. ಉತ್ತರ ಕನ್ನಡ ಜಿಲ್ಲೆಯ ಕೃಷಿ ಮತ್ತು ಸಾಗುವಳಿ ಪದ್ಧತಿ. ಉತ್ತರ ಕನ್ನಡ ಜಿಲ್ಲೆಯ ನೀರಾವರಿ ವ್ಯವಸ್ಥೆ. ಉತ್ತರ ಕನ್ನಡ ಜಿಲ್ಲೆಯ ಜನಸಂಖ್ಯೆಯ ವಿಶಿಷ್ಟತೆ. ಜಿಲ್ಲೆಯ ದುಡಿಮೆಗಾರರ ವಿಂಗಡನೆ ಹಾಗೂ ಅಧ್ಯಯನಕ್ಕೆ ಒಳಪಟ್ಟ ಸೀಮೆಗಳ ಪರಿಚಯವನ್ನು ಒಳಗೊಂಡಿದೆ.

ನಾಲ್ಕನೆಯ ಅಧ್ಯಾಯವು ಹಾಲಕ್ಕಿಗಳ ಸಾಮಾಜಿಕತೆ ಮತ್ತು ಪರಿವರ್ತನೆ ಎಂದಿದ್ದು, ಈ ಅಧ್ಯಾಯದಲ್ಲಿ ಸುಮಾರು ಅರವತ್ತು ವರ್ಷಗಳ ಹಿಂದಿನ ಸಾಮಾಜಿಕ ಜೀವನವು ಹೇಗೆ ಪರಿವರ್ತನೆಗೊಳ್ಳುತ್ತಿದೆ ಎಂಬುದನ್ನು ಚರ್ಚಿಸಲಾಗಿದೆ. ಇಲ್ಲಿ ವಿಶೇಷವಾಗಿ ಹಾಲಕ್ಕಿಗಳ ಸಮುದಾಯದ ಸಾಮಾಜಿಕ ಸಂಘಟನೆಯಲ್ಲಿ ಸಾಂಪ್ರದಾಯಿಕ ನಿಯಂತ್ರಣದಲ್ಲಿ ಅವರ ಧಾರ್ಮಿಕ ವ್ಯವಸ್ಥೆಗಳಲ್ಲಿ ಹಾಗೂ ರಾಜಕೀಯ ವ್ಯವಸ್ಥೆಯಲ್ಲಿ ಆಗಿರುವ ಬದಲಾವಣೆಯನ್ನು ಚರ್ಚಿಸಲಾಗಿದೆ.

ನಾಲ್ಕನೆಯ ಅಧ್ಯಾಯದಲ್ಲಿ ಅಂಕೋಲ ಸೀಮೆ ಮತ್ತು ಕುಮಟಾ ಸೀಮೆಯ ಹಾಲಕ್ಕಿಗಳ ಸಾಮಾಜಿಕತೆಯ ಪ್ರಧಾನ ಲಕ್ಷಣಗಳನ್ನು ವಿವರಿಸಲಾಗಿದೆ. ಮೊದಲಿಗೆ ಹಿಂದಿನ ಸಾಮಾಜಿಕ ಲಕ್ಷಣಗಳನ್ನು ವಿಶ್ಲೇಷಿಸಲಾಗಿದೆ. ನಂತರದಲ್ಲಿ ಸಾಮಾಜಿಕ ಸಂಸ್ಥೆಯಲ್ಲಿನ

ಪರಿವರ್ತನೆಯನ್ನು ವಿಶ್ಲೇಷಿಸಲಾಗಿದೆ. ಕುಟುಂಬದ ಸ್ವರೂಪದಲ್ಲಿ, ಕುಟುಂಬದ ಗಾತ್ರದಲ್ಲಿ, ವಿವಾಹದ ವಯಸ್ಸಿನ ಏರಿಕೆಯಲ್ಲಿ ಶಿಕ್ಷಣದ ಪ್ರಭಾವವು ಉಂಟಾಗಿದೆ. ಹಾಲಕ್ಕಿಗಳಲ್ಲಿರುವ ವಧುದಕ್ಷಿಣೆ ಪದ್ಧತಿಯನ್ನು ಬಿಟ್ಟುಕೊಟ್ಟು ವರದಕ್ಷಿಣೆ ಪದ್ಧತಿಯನ್ನು ಅಳವಡಿಸಿಕೊಂಡಿದ್ದಾರೆ. ಗೌಡನ ಹಿರಿತನದಲ್ಲಿ ನಡೆಯುತ್ತಿದ್ದ ವಿವಾಹವನ್ನು ಅಳವಡಿಸಿಕೊಂಡಿದ್ದಾರೆ. ಗೌಡನ ಹಿರಿತನದಲ್ಲಿ ನಡೆಯುತ್ತಿದ್ದ ವಿವಾಹವನ್ನು ಇಂದು ಪುರೋಹಿತರಿಂದ ನಡೆಸಲ್ಪಡುತ್ತಿದೆ.

ಹಾಲಕ್ಕಿಗಳ ವಿಶಿಷ್ಟವಾದ ಸಾಮಾಜಿಕ ಸಂಘಟನೆಯಲ್ಲಿ ಸಾಂಪ್ರದಾಯಿಕ ಸಾಮಾಜಿಕ ನಿಯಂತ್ರಣ, ಧಾರ್ಮಿಕ ಮತ್ತು ನಂಬಿಕೆ ವ್ಯವಸ್ಥೆಯಲ್ಲಿ ಆಗಿರುವ ಬದಲಾವಣೆಯ ಕುರಿತು ಚರ್ಚಿಸಲಾಗಿದೆ. ಶಿಕ್ಷಣದ ಪ್ರಭಾವವು ಮೇಲಿನ ಎಲ್ಲಾ ಅಂಶಗಳ ಮೇಲೆ ಕಂಡುಬರುತ್ತದೆ.

ಪಂಚಾಯಿತಿ ವ್ಯವಸ್ಥೆಯು ಹಾಲಕ್ಕಿ ಮಹಿಳೆಯರಿಗೆ ಹೊಸ ಅವಕಾಶ ನೀಡಿದೆ. ಶಿಕ್ಷಣ ಪಡೆದವರು ತಮ್ಮ ಸಮುದಾಯದ ಆಸಕ್ತಿಯನ್ನು ಕಾಪಾಡಲು ಮುಂದಾಗುತ್ತಿದ್ದಾರೆ. ನಿರ್ಧಾರ ತೆಗೆದುಕೊಳ್ಳುವ ಪ್ರಕ್ರಿಯೆಯಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆಯನ್ನು ವಿಶ್ಲೇಷಿಸಲಾಗಿದೆ.

ಹಾಲಕ್ಕಿಯವರ ಸಾಮಾಜಿಕ ಸಂಸ್ಥೆಯಲ್ಲಿ ಪರಿವರ್ತನೆಯನ್ನು ಗುರುತಿಸಲು ಕುಟುಂಬ, ವಿವಾಹ ಪದ್ಧತಿ, ವಧುದಕ್ಷಿಣೆ, ಪಿತ್ರಾರ್ಜಿತ ಹಕ್ಕುದಾರಿಕೆ, ಸಾಮಾಜಿಕ ರಚನೆ ಮುಂತಾದ ಸೂಚಿಗಳನ್ನು ಬಳಸಿಕೊಳ್ಳಲಾಗಿದೆ. ಈ ಅಧ್ಯಾಯದ ಕೊನೆಯ ಭಾಗದಲ್ಲಿ ಹಾಲಕ್ಕಿ ಮಹಿಳೆಯರ ಮನೋಭಾವನೆಯಲ್ಲಿ ಉಂಟಾಗುತ್ತಿರುವ ಪರಿವರ್ತನೆಯನ್ನು ಹಲವಾರು ಸೂಚಿಗಳನ್ನು ಬಳಸಿಕೊಂಡು ಕೋಷ್ಟಕದ ಮುಖಾಂತರ ವಿಶ್ಲೇಷಿಸಲಾಗಿದೆ.

ಐದನೆಯ ಅಧ್ಯಾಯವು ಹಾಲಕ್ಕಿಗಳ ಆರ್ಥಿಕತೆ ಮತ್ತು ಪರಿವರ್ತನೆ ಎಂದಿದ್ದು, ಈ ಅಧ್ಯಾಯದಲ್ಲಿ ಸುಮಾರು ಅರವತ್ತು ವರ್ಷಗಳ ಹಿಂದಿನ ಹಾಲಕ್ಕಿಗಳ ಆರ್ಥಿಕ ಜೀವನವು ಸಾಮಾಜಿಕ ಅಂಶಗಳ ಶಕ್ತಿಯಿಂದ ಹೇಗೆ ಪರಿವರ್ತನೆಗೆ ಒಳಗಾಗುತ್ತದೆ ಎಂಬುದನ್ನು ವಿಶ್ಲೇಷಿಸಲಾಗಿದೆ. ಹಾಲಕ್ಕಿಗಳ ಆರ್ಥಿಕ ನೆಲೆಯಲ್ಲಿ ಉಂಟಾಗುತ್ತಿರುವ ಪರಿವರ್ತನೆಯನ್ನು ಡೆಮೋಗ್ರಾಫಿ, ಶಿಕ್ಷಣ, ದುಡಿಮೆ, ಭೂ ಒಡೆತನ, ಉದ್ಯೋಗದ ರಚನೆ, ಕೃಷಿ, ಕುಟುಂಬದ ಆದಾಯ, ಜೀವನಮಟ್ಟ ಮುಂತಾದ ಸೂಚಿಗಳ ಮುಖಾಂತರ ಚರ್ಚಿಸಲಾಗಿದೆ.

ಅಧ್ಯಾಯದ ಮೊದಲ ಭಾಗದಲ್ಲಿ ಅಂಕೋಲಾ ಮತ್ತು ಕುಮಟಾ ಸೀಮೆಗಳಲ್ಲಿ ಹಾಲಕ್ಕಿಗಳ ಆರ್ಥಿಕತೆಯ ಪ್ರಧಾನ ಲಕ್ಷಣಗಳನ್ನು ವಿವರಿಸಲಾಗಿದೆ. ಮೊದಲಿಗೆ ಹಾಲಕ್ಕಿಗಳ ಹಿಂದಿನ ಆರ್ಥಿಕ ಲಕ್ಷಣಗಳನ್ನು ವಿವರಿಸಲಾಗಿದೆ. ಮೊದಲಿಗೆ ಹಾಲಕ್ಕಿಗಳ ಹಿಂದಿನ ಆರ್ಥಿಕ ಲಕ್ಷಣಗಳನ್ನು ವಿಶ್ಲೇಷಿಸಲಾಗಿದೆ. ನಂತರದಲ್ಲಿ ಶಿಕ್ಷಣದ ಪ್ರಕ್ರಿಯೆಯಿಂದ ಇಂದಿನ ಹಾಲಕ್ಕಿ ಆರ್ಥಿಕ ವ್ಯವಸ್ಥೆಯಲ್ಲಿ ಉಂಟಾಗುತ್ತಿರುವ ಪರಿವರ್ತನೆಯನ್ನು ವಿಶ್ಲೇಷಣಾತ್ಮಕವಾಗಿ ವಿವರಿಸಲಾಗಿದೆ.

ಶಿಕ್ಷಣದಿಂದಾಗಿ ಹಾಲಕ್ಕಿಗಳ ಉದ್ಯೋಗದ ರಚನೆಯಲ್ಲಿ, ಕೃಷಿಯಲ್ಲಿ, ಆದಾಯದಲ್ಲಿ, ಜೀವನಮಟ್ಟದಲ್ಲಿ ಮಹಿಳೆಯರ ದುಡಿಮೆಯಲ್ಲಿ ಉಂಟಾಗುತ್ತಿರುವ ಬದಲಾವಣೆಯನ್ನು ಚರ್ಚಿಸಲಾಗಿದೆ.

ಅಧ್ಯಾಯದ ಕೊನೆಯ ಭಾಗದಲ್ಲಿ ಶಿಕ್ಷಣವು ಹೇಗೆ ಹಾಲಕ್ಕಿಗಳಲ್ಲಿ ಸಾಮಾಜಿಕ ಬದಲಾವಣೆಗೆ ಕಾರಣವಾಗಿದೆ ಎಂಬುದನ್ನು ವಿಶ್ಲೇಷಿಸಲಾಗಿದೆ. ಶಿಕ್ಷಣವು ಹಾಲಕ್ಕಿಗಳ ಆರ್ಥಿಕತೆ, ರಾಜಕೀಯತೆ, ಸಂಸ್ಕೃತಿ, ವಿವಾಹ, ಕುಟುಂಬದ ಗಾತ್ರ ಮುಂತಾದ ಎಲ್ಲಾ ಅಂಶಗಳ ಮೇಲೆ ಪರಿಣಾಮ ಬೀರಿದೆ. ಮೊದಲಿಗೆ ಹಾಲಕ್ಕಿಗಳು ನಿರಕ್ಷರಿಗಳಾಗಿದ್ದವರು. ಈ ಪ್ರದೇಶದ ಚಾರಿತ್ರಿಕ ಹಿನ್ನೆಲೆಯು ಶಿಕ್ಷಣದ ಪ್ರಕ್ರಿಯೆಯಲ್ಲಿ ಹಾಲಕ್ಕಿಗಳು ಪಾಲ್ಗೊಳ್ಳುವಂತೆ ಮಾಡಿದೆ. ಮೊದಲ ಹಂತದಲ್ಲಿ ಅಧ್ಯಯನಕ್ಕೆ ಆಯ್ದುಕೊಂಡಿರುವ ಅಂಕೋಲಾ ಮತ್ತು ಕುಮಟಾ ಸೀಮೆಯಲ್ಲಿನ ಪರಿವರ್ತನೆಗೆ ಶಿಕ್ಷಣವನ್ನು ಸಾಮಾನ್ಯ ಅಂಶವಾಗಿ ಗುರುತಿಸಲಾಗಿದೆ. ಎರಡನೆಯ ಹಂತದಲ್ಲಿ ಅಧ್ಯಯನ ಸೀಮೆಗಳಲ್ಲಿ ಸಾಮಾನ್ಯ ಅಂಶವಾಗಿರುವ ಶಿಕ್ಷಣದ ಪ್ರಗತಿಯನ್ನು ತುಲನಾತ್ಮಕವಾಗಿ ವಿಶ್ಲೇಷಿಸಲಾಗಿದೆ. ಮೂರನೆಯ ಹಂತದಲ್ಲಿ ಆಯ್ದುಕೊಂಡಿರುವ ಎರಡೂ ಸೀಮೆಗಳಲ್ಲಿ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡು ಐದು ಸೂಚಿಗಳ ಮೇಲೆ ಶಿಕ್ಷಣದ ಪರಿಣಾಮವನ್ನು ತುಲನಾತ್ಮಕವಾಗಿ ವಿಶ್ಲೇಷಿಸಲಾಗಿದೆ. ನಾಲ್ಕನೆಯ ಹಂತದಲ್ಲಿ ಶಿಕ್ಷಣದ ಸೂಚಿಯನ್ನು ಬಿಟ್ಟು ಇತರೆ ಅಂಶಗಳ ಪ್ರಭಾವವನ್ನು ಗಮನಿಸಲಾಯಿತು. ಶಿಕ್ಷಣದ ಮಟ್ಟವು ಹೆಚ್ಚಿರುವಲ್ಲಿ ಪರಿವರ್ತನೆಯು ಹೆಚ್ಚಿನ ಮಟ್ಟದಲ್ಲಿರುವುದನ್ನು ಗುರುತಿಸಲಾಯಿತು.

ಕೊನೆಯ ಅಧ್ಯಾಯ ಉಪಸಂಹಾರ ಎಂದಿದ್ದು, ಈ ಅಧ್ಯಾಯದಲ್ಲಿ ಅಧ್ಯಯನದ ಸಾರಾಂಶ. ಮುಖ್ಯ ತಥ್ಯಗಳನ್ನು ಶಿಫಾರಸ್ಸುಗಳನ್ನು ಹಾಗೂ ಭವಿಷ್ಯದಲ್ಲಿ ಕೈಗೊಳ್ಳಬಹುದಾದ ಅಧ್ಯಯನದ ಹೊಸ ಸಾಧ್ಯತೆಯನ್ನು ನೀಡಲಾಗಿದೆ. ಈ ಅಧ್ಯಯನದಲ್ಲಿ ಕೆಲವು ವಿಶೇಷವಾದ ಅಧ್ಯಯನದ ಉತ್ಪತ್ತಿಯ ರಚನಾಕ್ರಮಗಳನ್ನು ಒಂದರ ಹಿಂದೆ ಒಂದರಂತೆ ವ್ಯವಸ್ಥಿತವಾಗಿ ವಿಶ್ಲೇಷಣೆ ಮಾಡಿ ಸಾರಾಂಶವನ್ನು ನೀಡಲಾಗಿದೆ.

ಅಧ್ಯಾಯ ೨

ಅಧ್ಯಯನಗಳ ಸಮೀಕ್ಷೆ

೨.೧. ಬುಡಕಟ್ಟುಗಳನ್ನು ಗುರುತಿಸುವ ಸಮಸ್ಯೆಗಳು

೨.೨. ಬುಡಕಟ್ಟುಗಳ ಅಭಿವೃದ್ಧಿ ಕುರಿತು

೨.೩. ಬುಡಕಟ್ಟುಗಳ ಸಾಮಾಜಿಕ ಬದಲಾವಣೆ

೨.೪. ಬುಡಕಟ್ಟು ಮಹಿಳೆಯರ ಅಧ್ಯಯನದ ಸಮೀಕ್ಷೆ

ಅಧ್ಯಾಯ ೨

ಅಧ್ಯಯನಗಳ ಸಮೀಕ್ಷೆ

ಪ್ರಸ್ತಾವನೆ

ಪ್ರಸ್ತುತ ಅಧ್ಯಾಯದಲ್ಲಿ ಬುಡಕಟ್ಟು ಮಹಿಳೆಯರ ಕುರಿತು ನಡೆದಿರುವ ಅಧ್ಯಯನಗಳನ್ನು ವಿಶ್ಲೇಷಿಸಲಾಗಿದೆ. ಭಾರತದಲ್ಲಿ ಮಹಿಳೆಯರ ಕುರಿತು ಸಾಕಷ್ಟು ಅಧ್ಯಯನಗಳು ನಡೆದಿವೆ. ಆದರೂ ತಳಭಾಗದಲ್ಲಿರುವ ಮಹಿಳೆಯರ ಅಧ್ಯಯನದ ಕೊರತೆ ಕಂಡುಬರುವುದು. ಈಗಾಗಲೇ ಈ ವಿಷಯಕ್ಕೆ ಸಂಬಂಧಿಸಿದಂತೆ ನಡೆದಿರುವ ಅಧ್ಯಯನಗಳು ನಮಗೆ ಮಾರ್ಗದರ್ಶನವಾಗುತ್ತದೆ. ಹೀಗಾಗಿ ಹಿಂದೆ ದೊರೆತ ಫಲಿತಾಂಶಗಳನ್ನು ಚರ್ಚಿಸಲು ಹಾಗೂ ಇಂದಿನ ವಾಸ್ತವ ಸ್ಥಿತಿಗತಿಗಳನ್ನು ತುಲನೆ ಮಾಡಲು ಸಹಾಯಕವಾಗುವುದು.

ಬುಡಕಟ್ಟು ಅಧ್ಯಯನದಲ್ಲಿ ಸಾಮಾಜಿಕ-ಆರ್ಥಿಕ ಬದಲಾವಣೆಯನ್ನು ಸಾಮಾಜಿಕ ಬದಲಾವಣೆ ಎಂದು ಗುರುತಿಸಿರುವರು. ಸಾಮಾಜಿಕ ಬದಲಾವಣೆಯ ಹಲವಾರು ಅಂಶಗಳಿಗೆ ಸಂಬಂಧಿಸಿದೆ. ಆದ್ದರಿಂದ ಈ ಎಲ್ಲಾ ಅಧ್ಯಯನಗಳನ್ನು ಸಮೀಕ್ಷಿಸಲು ಸಾಧ್ಯವಿಲ್ಲ. ಆದ್ದರಿಂದ ಪ್ರಸ್ತುತ ಅಧ್ಯಯನ ವಿಷಯಕ್ಕೆ ವಿಶಿಷ್ಟವೆನಿಸಿರುವ ಅಧ್ಯಯನಗಳನ್ನು ಮಾತ್ರ ಸಮೀಕ್ಷಿಸಲಾಗಿದೆ. ಒಟ್ಟು ೩೫ ಅಧ್ಯಯನಗಳನ್ನು ಸಮೀಕ್ಷಿಸಲಾಗಿದೆ. ಪ್ರಸ್ತುತ ಅಧ್ಯಯನದ ಸಮನ್ವಯ ಲಭ್ಯತೆ ಹಾಗೂ ಕಾಲಮಿತಿ ಆಧಾರದ ಮೇಲೆ ಸಮೀಕ್ಷೆಯನ್ನು ಸೀಮಿತಗೊಳಿಸಲಾಗಿದೆ.

ಬುಡಕಟ್ಟಿನವರಲ್ಲಿ ಉಂಟಾಗುತ್ತಿರುವ ಸಾಮಾಜಿಕ ಬದಲಾವಣೆಯನ್ನು ಹಲವಾರು ಅಧ್ಯಯನಗಳು ಗುರುತಿಸಿವೆ. ವಸಾಹತುಶಾಹಿ ವ್ಯವಸ್ಥೆಯ ಸಮಾಜದ ವಿವಿಧ ವರ್ಗದವರ ಮೇಲೆ ವಿವಿಧ ರೀತಿಯಲ್ಲಿ ಬದಲಾವಣೆ ಉಂಟುಮಾಡಿವೆ. ಸ್ವತಂತ್ರ ಭಾರತದ ನೀತಿಯು ಬುಡಕಟ್ಟಿನವರಲ್ಲಿ ಸಾಮಾಜಿಕ ಬದಲಾವಣೆ ಉಂಟುಮಾಡಿರುವುದನ್ನು ಅಧ್ಯಯನಗಳು ಗುರುತಿಸಿವೆ. ಆದರೆ ಈ ಬದಲಾವಣೆಯ ಗತಿಶೀಲತೆಯು ಮಾತ್ರ ಪ್ರದೇಶದಿಂದ ಪ್ರದೇಶಕ್ಕೆ

ಬುಡಕಟ್ಟಿನವರಿಂದ ಬುಡಕಟ್ಟಿನವರಿಗೂ ಭಿನ್ನವಾಗಿದೆ. ಅದರಿಂದ ಪ್ರತಿಯೊಂದು ಅಂಶವೂ ಕೂಡಾ ಪ್ರದೇಶದಿಂದ ಪ್ರದೇಶಕ್ಕೂ ಬುಡಕಟ್ಟಿನಿಂದ ಬುಡಕಟ್ಟಿನವರೆಗೆ ಭಿನ್ನವಾಗಿರುತ್ತದೆ.

ಒಂದು ಪ್ರದೇಶದೊಳಗಿನ ಈ ಸನ್ನಿವೇಶ ಕೂಡಾ ಏಕರೂಪವಾಗಿರುವುದಿಲ್ಲ. ಕೆಲವು ಪ್ರದೇಶದಲ್ಲಿ ಬದಲಾವಣೆ ತೀವ್ರವಾಗಿದ್ದರೆ ಮತ್ತೆ ಕೆಲವು ಪ್ರದೇಶದಲ್ಲಿ ಬದಲಾವಣೆಯು ಮಂದಗತಿಯಲ್ಲಿರುತ್ತದೆ. ಅಷ್ಟೇ ಅಲ್ಲದೇ ಒಂದೇ ಪ್ರದೇಶದ ವಿವಿಧ ಜನ ಸಮುದಾಯದ ನಡುವೆ ಸಹ ಬದಲಾವಣೆಯು ಏಕರೂಪವಾಗಿರುವುದಿಲ್ಲ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ, ಒಂದೇ ಸಮುದಾಯದ ಪುರುಷರು ಹಾಗೂ ಮಹಿಳೆಯರ ನಡುವೆಯೂ ಬದಲಾವಣೆ ಭಿನ್ನವಾಗಿರುತ್ತದೆ. ಏಕೆಂದರೆ, ಸಮಾಜದಲ್ಲಿ ಪುರುಷರು ಹಾಗೂ ಮಹಿಳೆಯರ ಪಾತ್ರವೂ ಭಿನ್ನವಾಗಿರುವುದರಿಂದ ಬದಲಾವಣೆಯು ಭಿನ್ನವಾಗಿರುವುದು. ಪ್ರತಿಯೊಂದು ಸಮುದಾಯವೇ ಆಯಾ ವ್ಯಕ್ತಿಗಳ ಶಿಕ್ಷಣದ ಮಟ್ಟ, ಸಾಮಾಜಿಕ ಆರ್ಥಿಕ, ರಾಜಕೀಯ ಮತ್ತು ಸಾಂಸ್ಕೃತಿಕ ಸ್ಥಾನವನ್ನು ಕೂಡಾ ನಿಯಂತ್ರಿಸುತ್ತಿದೆ. ಅದುದರಿಂದ ಆಂತರಿಕ ಮತ್ತು ಬಾಹ್ಯ ಸಂಗತಿಗಳ ಪ್ರಭಾವಗಳು ನಮ್ಮ ಅಧ್ಯಯನದ ಕ್ಷೇತ್ರದಲ್ಲಿ ಹೇಗೆ ಕಾರ್ಯ ನಿರ್ವಹಿಸುತ್ತಿದೆ ಎನ್ನುವುದನ್ನು ಈ ಅಧ್ಯಯನಗಳ ಸಮೀಕ್ಷೆ ಮೂಲಕ ಕಂಡುಕೊಳ್ಳಲಾಗುವುದು.

ಅಧ್ಯಯನದ ಸಮೀಕ್ಷೆಯ ಆಧಾರದ ಮೇಲೆ ಪ್ರಸ್ತುತ ಅಧ್ಯಯನ ಕ್ಷೇತ್ರದಲ್ಲಿ ಕಂಡುಬರುವ ವಾಸ್ತವಿಕ ಸ್ಥಿತಿಗತಿಗಳನ್ನು ತೌಲನಿಕವಾಗಿ ನೋಡುವುದು ಅವಶ್ಯಕವಾಗಿದೆ. ಸಾಮಾಜಿಕ ಬದಲಾವಣೆಗೆ ಹಲವಾರು ಅಂಶಗಳು ವಿವಿಧ ಪ್ರದೇಶದಲ್ಲಿ ಹೇಗೆ ಸಾಮಾಜಿಕ ಬದಲಾವಣೆಗೆ ಕಾರಣವಾದವು ಮತ್ತು ಪ್ರಸ್ತುತ ಅಧ್ಯಯನ ಕ್ಷೇತ್ರದಲ್ಲಿ ಹೇಗೆ ಕಾರ್ಯ ನಿರ್ವಹಿಸುತ್ತಿವೆ ಎಂಬುದನ್ನು ತಿಳಿದುಕೊಳ್ಳಲು ಪ್ರಯತ್ನವನ್ನು ಈ ಅಧ್ಯಯನದಲ್ಲಿ ಮಾಡಲಾಗಿದೆ.

ಈ ಅಧ್ಯಯನದ ಮೊದಲ ಭಾಗದಲ್ಲಿ ಬುಡಕಟ್ಟುಗಳ ಗುರುತಿಸುವಿಕೆ ಸಮಸ್ಯೆಯ ಅಧ್ಯಯನದ ಸಮೀಕ್ಷೆ ಮಾಡಲಾಗಿದೆ. ಬುಡಕಟ್ಟುಗಳ ಮೇಲೆ ಅಭಿವೃದ್ಧಿಯ ಪರಿಣಾಮವನ್ನು ಎರಡನೇ ಭಾಗದಲ್ಲಿ ವಿವರಿಸಲಾಗಿದೆ. ಮೂರನೆಯ ಭಾಗದಲ್ಲಿ ಬುಡಕಟ್ಟುಗಳಲ್ಲಿ ಉಂಟಾಗುತ್ತಿರುವ ಸಾಮಾಜಿಕ ಬದಲಾವಣೆ ಕುರಿತು, ನಾಲ್ಕನೆಯ ಭಾಗದಲ್ಲಿ ಬುಡಕಟ್ಟು ಮಹಿಳೆಯರ ಸ್ಥಿತಿಗತಿಯ ಅಧ್ಯಯನದ ಸಮೀಕ್ಷೆಯನ್ನು ಮಾಡಲಾಗಿದೆ.

೨.೧. ಬುಡಕಟ್ಟುಗಳನ್ನು ಗುರುತಿಸುವ ಸಮಸ್ಯೆಗಳು

೧. ಜಗನ್ನಾಥ ಪಾಥಿ (೨೦೦೫) ತಮ್ಮ ಲೇಖನದಲ್ಲಿ ಬುಡಕಟ್ಟು ಪರಿಕಲ್ಪನೆಯ ವಿವರಣೆಯನ್ನು ನೀಡಿರುವರು. ಬುಡಕಟ್ಟುಗಳನ್ನು ಗುರುತಿಸುವ ಯಾವುದೇ

ವೈಜ್ಞಾನಿಕ ವಿಧಾನವೂ ಇಲ್ಲ. ಬುಡಕಟ್ಟುಗಳು ಅಭಿವೃದ್ಧಿಯ ವಿವಿಧ ಹಂತದಲ್ಲಿರುವ ಸಾಮಾಜಿಕ ಗುಂಪುಗಳಾಗಿದ್ದು, ಅವುಗಳ ಮೂಲವಿರುವುದು ವಸಾಹತುಷಾಹಿಯಲ್ಲಿ ಎಂದು ಲೇಖಕರು ಗುರುತಿಸಿರುವರು. ವಸಾಹತುಷಾಹಿಗಳು ಬರುವ ಪೂರ್ವದಲ್ಲಿ ಬುಡಕಟ್ಟು ಪರಿಕಲ್ಪನೆ ಇರಲಿಲ್ಲವೆಂದು ಅಭಿಪ್ರಾಯಪಟ್ಟಿರುವರು. ಭಾರತದಲ್ಲಿ ರಾಷ್ಟ್ರಪತಿಯವರು ಕೆಲವು ಜನಸಮುದಾಯದವರಿಗೆ ಪರಿಶಿಷ್ಟ ಪಂಗಡ ಎಂಬ ಪದನಾಮವನ್ನು ನೀಡಿರುವರು. ಆದ್ದರಿಂದ ನಮ್ಮ ಸಂವಿಧಾನದಲ್ಲಿ ಈ ಬಗ್ಗೆ ಹೆಚ್ಚಿನ ಮಾಹಿತಿ ನಮಗೆ ದೊರೆಯುವುದಿಲ್ಲ. ಆದರೂ ಬುಡಕಟ್ಟುಗಳು ಕೆಲವು ಸಾಮಾನ್ಯ ಸಾಂಸ್ಕೃತಿಕ ಲಕ್ಷಣಗಳ ಜೊತೆಗೆ ಪ್ರಭುತ್ವದ ಸಮಾಜದಲ್ಲಿ ವಿವಿಧ ರೀತಿಯಲ್ಲಿ ಕೆಳಗಿನವರಾಗಿರುವುದನ್ನು ಲೇಖಕರು ಗುರುತಿಸಿರುವರು.

ಮುಂದಿನ ಭಾಗದಲ್ಲಿ ಅಭಿವೃದ್ಧಿ ಕಾರ್ಯಕ್ರಮದಿಂದ ಬುಡಕಟ್ಟಿನವರ ಮೇಲೆ ಉಂಟಾದ ಪರಿಣಾಮವನ್ನು ವಿವರಿಸುವ ಲೇಖಕರು ಯಾವ ರೀತಿಯಲ್ಲಿ ಸಮಾಜದಲ್ಲಿ ತಳದಲ್ಲಿದ್ದವರು ಪಾತಾಳ ಸೇರಿಕೊಂಡರೆನ್ನುವುದನ್ನು ವಿಶ್ಲೇಷಿಸಿರುವರು. ಭಾಷಾವಾರು ಪ್ರಾಂತ್ಯದಿಂದ ಬುಡಕಟ್ಟಿನವರು ಎದುರಿಸಿದ ಸಮಸ್ಯೆಯನ್ನು ಚರ್ಚಿಸಿರುವರು. ಭಾಷಾವಾರು ಪ್ರಾಂತ್ಯವನ್ನು ಸ್ಥಾಪಿಸಿ, ನಮ್ಮ ಸಂಸ್ಕೃತಿಯಲ್ಲಿರುವ ವಿವಿಧತೆಯನ್ನು ನಿರಾಕರಿಸಿದೆವು. ಅದರಿಂದ ಗಡಿಭಾಗದಲ್ಲಿರುವವರು ಪ್ರಭುತ್ವದ ಸಂಸ್ಕೃತಿಯನ್ನು ಒಪ್ಪಿಕೊಳ್ಳಬೇಕಾಯಿತು. ಬುಡಕಟ್ಟುಗಳು ಯಾವ ರೀತಿಯಲ್ಲಿ ರಾಜ್ಯ ಹಾಗೂ ರಾಷ್ಟ್ರದೊಳಗೆ ತಮ್ಮ ನಂಬಿಕೆಗಳನ್ನು ಇಟ್ಟುಕೊಳ್ಳಬೇಕು ಎಂಬುದನ್ನು ಬುಡಕಟ್ಟುಗಳಿಗೆ ಬಿಡುವುದೇ ಸೂಕ್ತವೆಂದು ಲೇಖಕರು ಅಭಿಪ್ರಾಯಪಟ್ಟಿದ್ದಾರೆ.

೨. ಎ.ಆರ್.ದೇಸಾಯಿಯವರು (೧೯೮೮) ಬುಡಕಟ್ಟು ಪರಿಕಲ್ಪನೆಯನ್ನು ವಿಶ್ಲೇಷಿಸಿರುವರು. ಡಾ. ಗಾರೆಯವರು ನೀಡಿರುವ ಬುಡಕಟ್ಟುಗಳ ಎಂಟು ಸಾಮಾನ್ಯ ಲಕ್ಷಣಗಳನ್ನು ಹಾಗೂ ಡಾ. ಎಲ್ವಿನ್‌ರು ನೀಡಿರುವ ವರ್ಗೀಕರಣವನ್ನು ದಾಖಲಿಸಿರುವರು ಎಲ್ವಿನ್‌ರು ಬುಡಕಟ್ಟುಗಳ ವಿವಿಧ ಅಭಿವೃದ್ಧಿಯ ಹಂತದ ಆಧಾರದ ಮೇಲೆ ವರ್ಗೀಕರಿಸಿರುವರು. ಬುಡಕಟ್ಟುಗಳಾದ ಬಿಲ್, ನಾಗ್, ಗೋಮಡಾ, ಬುನಿಯಾ, ಮೊಂಡಾ ಇವರು ಯುರೋಪಿಯನ್ನರ ಶೈಲಿಯಲ್ಲಿ ಬದುಕಿ ಬುಡಕಟ್ಟು ಧರ್ಮವನ್ನು ಉಳಿಸಿಕೊಂಡಿರುವುದನ್ನು ಲೇಖಕರು ಗುರುತಿಸಿರುವರು. ಬುಡಕಟ್ಟುಗಳ ಮುಖ್ಯ ಸಮಸ್ಯೆ ಎಂದರೆ ಆರ್ಥಿಕ-ರಾಜಕೀಯದಲ್ಲಿ ಬುಡಕಟ್ಟಿನವರ ಯಾವ ಮೌಲ್ಯವನ್ನು ಬಿಡಬೇಕು ಹಾಗೂ ಯಾವ ಮೌಲ್ಯವನ್ನು ಕಾಪಾಡಿಕೊಂಡು ಬರಬೇಕು ಎನ್ನುವಷ್ಟು

ಶಿಕ್ಷಣ ದೊರೆಯಬೇಕಾಗಿದೆ. ಬುಡಕಟ್ಟು ಸಮಾಜದ ರಚನೆಯ ಬದಲಾವಣೆಯಿಂದ ಮಾತ್ರ ಬುಡಕಟ್ಟಿನವರ ಸಮಸ್ಯೆಗೆ ಪರಿಹಾರ ಸಾಧ್ಯವೆಂದು ಲೇಖಕರು ಗುರುತಿಸಿರುವರು.

೩. ಸುರಬೇತ್ ಸ್ಥಿನ್-ಶರ್ಮಾ (೧೯೮೮) ಭಾತರದಲ್ಲಿ ಬುಡಕಟ್ಟುಗಳನ್ನು ಗುರುತಿಸುವ ಸಮಸ್ಯೆಗೆ ಯಾವ ಮಾನದಂಡ ಬಳಸಲಾಗುತ್ತಿತ್ತು ಎಂಬುವುದನ್ನು ಕುರಿತು ವಿಶ್ಲೇಷಿಸಿದ್ದಾರೆ. ಬುಡಕಟ್ಟುಗಳನ್ನು ಗುರುತಿಸಲು ವೈಜ್ಞಾನಿಕವಾದ ಮಾನದಂಡದ ಕೊರತೆಯಿರುವುದನ್ನು ಲೇಖಕರು ಗುರುತಿಸಿರುವರು. ಬುಡಕಟ್ಟುಗಳನ್ನು ಗುರುತಿಸಲು ಸೂಕ್ತವಾದ ಮಾನದಂಡದ ಕೊರತೆಯಿಂದಾಗಿ, ಸಾಂಪ್ರದಾಯ ಬುಡಕಟ್ಟುಗಳನ್ನು ಗುರುತಿಸಲು ಕೃಷಿ ಪೂರ್ವದ ತಾಂತ್ರಿಕಜ್ಞಾನ ಹಾಗೂ ಕಡಿಮೆ ಸಾಕ್ಷರತೆಯ (ಶೇ. ೫) ಮಟ್ಟವನ್ನು ಬಳಸಲಾಯಿತೆಂದು ಲೇಖಕರು ಅಭಿಪ್ರಾಯಪಟ್ಟಿರುವರು. ಬುಡಕಟ್ಟುಗಳನ್ನು ಗುರುತಿಸಲು ಲೇಖಕರು ಯಾವುದೇ ಪರ್ಯಾಯ ವಿಧಾನ ಸೂಚಿಸಿಲ್ಲ.

೪. ಉತ್ತರ ಕನ್ನಡ ಜಿಲ್ಲೆಯ ಶ್ರೇಷ್ಠ ಕವಿಗಳೂ, ಸಮಾಜ ಸೇವಕರಾದ, ಡಾ. ದಿನಕರ ದೇಸಾಯಿ ಅವರು (೧೯೪೫) ತಮ್ಮ ಅಧ್ಯಯನದಲ್ಲಿ ಹಾಲಕ್ಕಿಯವರು ಬುಡಕಟ್ಟಿನವರಾಗಿಯೂ ಕೂಡಾ ಸರಕಾರದ ನಿರ್ಲಕ್ಷ್ಯಕ್ಕೆ ಒಳಗಾದ ಬಗೆಯನ್ನು ವಿಶ್ಲೇಷಿಸಿರುವರು. ಅಂದು ಅವರಲ್ಲಿ ಸಾಕ್ಷರತೆಯ ಮಟ್ಟವು ಶೇ. ೫ಕ್ಕಿಂತ ಕಡಿಮೆ ಇರುವುದನ್ನು ಅಂಕಿ-ಸಂಖ್ಯೆಗಳ ಮೂಲಕ ವಿವರಿಸಿರುವರು. ವಸಾಹತುಶಾಹಿ ಕಾಲದಲ್ಲಿ ನಡೆದ ಅಹಿತಕರವಾದ ಘಟನೆಯಿಂದ ಹಾಲಕ್ಕಿಗಳು ಭೂ ಒಡೆತನವನ್ನು ಕಳೆದುಕೊಂಡು ಕೃಷಿ ಕಾರ್ಮಿಕರಾದ ಸ್ಥಿತಿಯನ್ನು ದಾಖಲಿಸಿರುವರು. ಮುಗ್ಧರು, ಪ್ರಾಮಾಣಿಕರು, ಸರಳರು ಆದ ಹಾಲಕ್ಕಿಗಳನ್ನು ಗೇಣಿಯ ಹೆಸರಿನಲ್ಲಿ ಮುಂದುವರೆದ ಜಾತಿಯವರು ಮಾಡುತ್ತಿರುವ ಶೋಷಣೆಯನ್ನು ಉಲ್ಲೇಖಿಸಿರುವರು.

ಇದುವರೆಗೆ ಹಾಲಕ್ಕಿಗಳನ್ನು ಅಧಿಕೃತವಾಗಿ ಬುಡಕಟ್ಟಿನವರೆಂದು ಗುರುತಿಸದೇ ಇರಲು ರಾಜಕೀಯ ಕಾರಣವನ್ನು ಉದಯವಾಣಿ (೨೧.೦೪.೨೦೦೧) ದಿನ ಪತ್ರಿಕೆಯಲ್ಲಿ ವಿಶ್ಲೇಷಿಸಲಾಗಿದೆ. ನಮ್ಮ ದೇಶದಲ್ಲಿ ಪರಿಶಿಷ್ಟ ಪಟ್ಟಿ ತಯಾರಿಕೆ ರಾಜಕೀಯ ಧೋರಣೆಯದಾಗಿದೆ(ಚ.ಸ.ಶಂಕರರಾವ್- ೧೯೯೯). ಈ ಕಾರಣದಿಂದ ಇಂದು ಹಲವಾರು ಜನಸಮುದಾಯಗಳು ಹಿಂಸಾಚಾರದಲ್ಲಿ ತೊಡಗಿಸಿಕೊಂಡಿರುವರು. ಇದರಿಂದಾಗಿ ಗೋಲಿಬಾರು, ಸಾವು ನೋವಿಗೆ ಕಾರಣವಾಗಿದೆ. ಉದಾ: ರಾಜಸ್ಥಾನದ ಗುಜ್ಜರ್ ಸಮುದಾಯ(ಡೆಕ್ಕನ್ ಹೆರಾಲ್ಡ್, ೩೦.೦೫.೨೦೦೭) ಸಮಾಜದಲ್ಲಿ ಅಶಾಂತಿ ತಲೆ ಎತ್ತುತ್ತಿದೆ.

೫. ತೀ.ನಂ.ಶಂಕರನಾರಾಯಣ (೨೦೦೬) ಭಾರತದಲ್ಲಿ ಬುಡಕಟ್ಟುಗಳ ವಿಶ್ಲೇಷಣೆಯಲ್ಲಿ ನಿರ್ಮಲಕುಮಾರ ಬೋಸರು ಅಭಿಪ್ರಾಯವನ್ನು ನೀಡಿರುವರು. ಬುಡಕಟ್ಟುಗಳು ಹುಟ್ಟು, ಮದುವೆ ಹಾಗೂ ಸಾವಿನ ಸಂದರ್ಭದಲ್ಲಿ ಬ್ರಾಹ್ಮಣರ ಪೌರೋಹಿತ್ಯವನ್ನು ಸ್ವೀಕರಿಸುವುದಿಲ್ಲ. ಈ ಸಂದರ್ಭದಲ್ಲಿ ಪೌರೋಹಿತ್ಯವನ್ನು ಸೇವೆ ಸ್ವೀಕರಿಸುವವರ ಜಾತಿಗಳಾಗಿವೆ. ಇಂದು ಎರಡು ರೀತಿ ಬುಡಕಟ್ಟುಗಳಿವೆ. ಒಂದು ಗುಂಪಿನ ಬುಡಕಟ್ಟಿನವರು ಮೂಲ ಸ್ವರೂಪ ಉಳಿಸಿಕೊಂಡಿರುವರು. ಎರಡನೆಯ ಗುಂಪಿನ ಬುಡಕಟ್ಟಿನವರು ಹಿಂದೂ ಧರ್ಮದಲ್ಲಿ ವಿಲೀನಗೊಂಡಿರುವುವು. ಮುಜುಂದಾರ್ (೧೯೫೦) ತಮ್ಮ ಅಧ್ಯಯನದಲ್ಲಿ ಮೂರು ರೀತಿಯ ಬುಡಕಟ್ಟುಗಳನ್ನು ಗುರುತಿಸಿರುವರು ೧. ಜಾತಿಯಾಗಿ ಪೂರ್ಣ ಪರಿವರ್ತನೆ ಹೊಂದಿರುವವು. ೨. ಹಿಂದೂ ಧರ್ಮದೊಡನೆ ಇದ್ದು ತಮ್ಮ ಸಾಂಪ್ರದಾಯ ಉಳಿಸಿಕೊಂಡವು ಹಾಗೂ ೩. ಹಿಂದೂ ಧರ್ಮದ ಪ್ರಭಾವಕ್ಕೆ ಒಳಗಾಗದೇ ತಮ್ಮ ಸ್ವಾತಂತ್ರ್ಯಕ್ಕಾಗಿ ಪ್ರತ್ಯೇಕವಾಗಿ ಹೋರಾಡುತ್ತಿರುವರು. ಆದ್ದರಿಂದ ಬುಡಕಟ್ಟುಗಳನ್ನು ಗುರುತಿಸಲು ಸೂಕ್ತವಾದ ವಿಧಾನದ ಕೊರತೆಯಿರುವುದು ಕಂಡುಬರುವುದು.

೨.೨. ಬುಡಕಟ್ಟುಗಳ ಅಭಿವೃದ್ಧಿಯ ಕುರಿತು

೧. ರಥ(೨೦೦೫)ರವರು ಬುಡಕಟ್ಟು ಅಭಿವೃದ್ಧಿಯ ಮೇಲೆ ನೆಹರೂ ಹಾಗೂ ಎಲ್ವಿನ್‌ರ ಚಿಂತನೆಯನ್ನು ಸಮಕಾಲಿನ ಚೌಕಟ್ಟಿನೊಳಗೆ ಚರ್ಚಿಸಿದ್ದಾರೆ. ಬುಡಕಟ್ಟುಗಳು ಮುಖ್ಯವಾಹಿನಿಗೆ ಸೇರಬೇಕು ಅಥವಾ ಬೇಡ ಎನ್ನುವ ಚರ್ಚೆಯ ಮೂಲ ಇರುವುದೇ ನೆಹರೂ–ಎಲ್ವಿನ್‌ರ ಚಿಂತನೆಯ ನೆಲೆಯಲ್ಲಿದೆ. ಪ್ರಧಾನಿ ನೆಹರೂರವರ ವಿದೇಶಿ ಮಾದರಿಯ ಅಭಿವೃದ್ಧಿಯ ಕಾರ್ಯಕ್ರಮವನ್ನು ಭಾರತದಲ್ಲಿ ಜಾರಿಗೊಳಿಸಿದರು. ಬುಡಕಟ್ಟುಗಳ ಅಭಿವೃದ್ಧಿಯಲ್ಲಿ ಶಿಕ್ಷಣ ಮತ್ತು ಆರೋಗ್ಯ ಮುಖ್ಯವಾದ ಅಂಶವೆಂದು ನೆಹರೂ ಅವರು ಬಗೆದರು. ಎಲ್ವಿನ್‌ರು ಬುಡಕಟ್ಟುಗಳ ಅಭಿವೃದ್ಧಿಗೆ ಪ್ರತ್ಯೇಕತೆಯನ್ನು ಪ್ರತಿಪಾದಿಸಿದರು. ಆದರೆ, ಜಗತ್ತಿನಿಂದ ಯಾವುದೇ ಜನಸಮುದಾಯವು ಪ್ರತ್ಯೇಕವಾಗಿ ಬಾಳಲು ಅಸಾಧ್ಯವೆಂದು ನೆಹರೂ ಅರಿತಿದ್ದರು. ಹೀಗಾಗಿ ಅಭಿವೃದ್ಧಿಯ ಜೊತೆಯಲ್ಲಿ ಬುಡಕಟ್ಟುಗಳು ತಮ್ಮ ಸಂಸ್ಕೃತಿಯ ಐಡೆಂಟಿಯನ್ನು ಉಳಿಸಿಕೊಳ್ಳುತ್ತವೆ ಎಂದು ನಂಬಲಾಯಿತು. ನೆಹರೂ ಹಾಗೂ ಎಲ್ವಿನ್‌ರು ಬುಡಕಟ್ಟುಗಳ ಅಭಿವೃದ್ಧಿಯ ಬಗ್ಗೆ ಕಾಳಜಿ ಹೊಂದಿದವರು. ಆದರೆ ಇಬ್ಬರ ಮಾರ್ಗ ಮಾತ್ರ ಬೇರೆಯಾಗಿತ್ತು. ಅಭಿವೃದ್ಧಿಯಿಂದ ಎಲ್ಲರಿಗೂ ಸಮಾನ ಅವಕಾಶ ದೊರೆಯವುದೆಂದು ನಂಬಲಾಯಿತು.

ಅಭಿವೃದ್ಧಿಯ ಮೂಲಕ ಉಳ್ಳವರು ಮತ್ತು ಉಳ್ಳದವರ ನಡುವಿನ ಅಂತರ ಕಡಿಮೆ ಮಾಡಲು ನೆಹರೂ ಪ್ರಯತ್ನಿಸಿದರು. ಆದರೆ, ಎಲ್ವಿನ್‌ರು ನಾಗರಿಕ ಮತ್ತು ಅನಾಗರೀಕರ ನಡುವಿನ ಅಂತರವನ್ನು ಕಡಮೆ ಮಾಡಲು ಪ್ರಯತ್ನಿಸಿದರು.

ಈ ಲೇಖನದ ಮುಂದಿನ ಭಾಗದಲ್ಲಿ ಲೇಖಕ ಎಲ್ವಿನ್‌ರವರು ತಮ್ಮ ಪ್ರತ್ಯೇಕತೆಯ ವಿಚಾರ ಧಾರೆಯಿಂದ ಮುಖ್ಯವಾಹಿನಿ ವಿಚಾರಧಾರೆಯ ಕಡೆಗೆ ತಿರುಗಲು ರಾಜಕೀಯ ಶಕ್ತಿಯ ಪ್ರಭಾವವೇ ಕಾರಣ ಎಂಬುದನ್ನು ಗುರುತಿಸಿರುವರು. ರಾಷ್ಟ್ರದ ಅಭಿವೃದ್ಧಿಯ ದೃಷ್ಟಿಯಿಂದ ಕೈಗಾರಿಕೆ ಮುಖ್ಯವಾಗಿತ್ತು. ಹೀಗಾಗಿ ಬುಡಕಟ್ಟುಗಳು ಸ್ಥಳಾಂತರಗೊಂಡವು. ಆದ್ದರಿಂದ ಅಭಿವೃದ್ಧಿಯ ಸಿದ್ಧಾಂತಕ್ಕೂ ಹಾಗೂ ವಾಸ್ತವಿಕತೆಯ ನಡುವೆ ಅಂತರವಾಯಿತು. ಅಭಿವೃದ್ಧಿಯ ಕಾರ್ಯಕ್ರಮದ ತಾಂತ್ರಿಕ ದೋಷದಿಂದಾಗಿ ಬುಡಕಟ್ಟುಗಳು ಅಭಿವೃದ್ಧಿಯಲ್ಲಿ ಪಾಲ್ಗೊಳ್ಳಲು ಅನುವು ಮಾಡಿಕೊಡಲಿಲ್ಲ. ಆದ್ದರಿಂದ ಅಭಿವೃದ್ಧಿಯ ಕಾರ್ಯಕ್ರಮದಲ್ಲಿ ಬುಡಕಟ್ಟುಗಳು ಪಾಲ್ಗೊಳ್ಳುವಿಕೆಯು ತುಂಬಾ ಮುಖ್ಯವಾಗಿರುತ್ತದೆ.

ಈ ಎರಡೂ ವಿಚಾರಧಾರೆಯ ರಾಜಕೀಯ ಆಸಕ್ತಿಯನ್ನು ಲೇಖಕರು ವಿಶ್ಲೇಷಿಸಿರುವರು. ನೆಹರೂರವರು ಪೂರ್ವೋತ್ತರದ ಬುಡಕಟ್ಟುಗಳ ಬಗ್ಗೆ ಹೊಂದಿದಷ್ಟು ಒಲವನ್ನು ಮಧ್ಯಭಾಗದ ಬುಡಕಟ್ಟಿನವರ ಬಗ್ಗೆ ಹೊಂದಿರಲಿಲ್ಲ. ಎಲ್ವಿನ್‌ರು ಮಧ್ಯಭಾರತದಲ್ಲಿ ಬುಡಕಟ್ಟುಗಳ ಅಧ್ಯಯನವನ್ನು ನಡೆಸಿದವರು. ಆದರೆ, ತಮ್ಮ ಪ್ರತ್ಯೇಕತೆಯ ವಿಚಾರಧಾರೆಯನ್ನು ಅನುಷ್ಠಾನಗೊಳಿಸಿದ್ದು, ಮಾತ್ರ ಉತ್ತರ ಪೂರ್ವ ಭಾರತದಲ್ಲಿ ಈ ಬಗ್ಗೆ ಲೇಖಕರು ಎಲ್ವಿನ್‌ರನ್ನು ದೂರಲು ಸಿದ್ಧರಿರಲಿಲ್ಲ. ಏಕೆಂದರೆ ಎಲ್ವಿನ್‌ರ ವಿಚಾರಧಾರೆಗೆ ರಾಜಕೀಯ ನೆಲೆಯನ್ನು ಒದಗಿಸಿದವರು ನೆಹರೂ.

ತಮ್ಮ ಲೇಖನದ ಕೊನೆಯ ಭಾಗದಲ್ಲಿ ಸಮಕಾಲೀನ ಬುಡಕಟ್ಟುಗಳ ಪರಿವರ್ತನೆಯ ಸ್ವರೂಪವನ್ನು ವಿವರಿಸಿದರು. ನೆಹರೂ ಹಾಗೂ ಎಲ್ವಿನ್‌ರ ವಿಚಾರಧಾರೆಗಳು ಕೆಲವೇ ಬುಡಕಟ್ಟಿನವರಿಗೆ ಹಾಗೂ ಕೆಲವೇ ಪ್ರದೇಶಗಳಿಗೆ ಸೀಮಿತಗೊಂಡಿವೆ. ಅದ್ದರಿಂದ ಎಲ್ಲಾ ಬುಡಕಟ್ಟುಗಳ ಅಭಿವೃದ್ಧಿಗೆ ಸೂಕ್ತವಾದ ಚೌಕಟ್ಟನ್ನು ಈ ಧಾರೆ ಒದಗಿಸಲಾರದು. ಹೀಗಾಗಿ ಬುಡಕಟ್ಟು ನೀತಿಯ ಮರುಮೌಲೀಕರಣ ಗೊಳಿಸುವ ಅವಶ್ಯಕತೆಯನ್ನು ಲೇಖಕರು ಗುರುತಿಸಿರುವರು. ಆದ್ದರಿಂದ ಅಭಿವೃದ್ಧಿಯನ್ನು ವಿಕೇಂದ್ರೀಕರಣಗೊಳಿಸಿ, ಬುಡಕಟ್ಟುಗಳು ಅಭಿವೃದ್ಧಿಯ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳುವಂತೆ ನೀತಿಯನ್ನು ರೂಪಿಸಲು ಸಲಹೆ ನೀಡಿರುವರು.

೨. ಬರಿಕ್ (೨೦೦೫) ತಮ್ಮ ಲೇಖನದಲ್ಲಿ ಹೇಗೆ ಸರಕಾರದ ನೀತಿಯು ವಿವಾದಕ್ಕೆ ಎಡೆಮಾಡಿ ಕೊಡುವುದುಎಂಬುದನ್ನು ವಿಶ್ಲೇಷಿಸಿರುವರು. ಒರಿಸ್ಸಾದ ಕೋರಾಪುಟ್ ಜಿಲ್ಲೆಯ ಪುನರ್‌ವಸತಿ ನೀತಿಯಿಂದ ಉಂಟಾದ ಸಮಸ್ಯೆ ಹಾಗೂ ಪರಿಣಾಮದ ಬಗ್ಗೆ ಗಮನ ಸೆಳೆಯುತ್ತಾರೆ. ಬುಡಕಟ್ಟು ಪ್ರದೇಶವಾದ ಕೋರಾಪುಟದಲ್ಲಿ ನಿರಾಶ್ರಿತರಿಗೆ ಪುನರ್‌ವಸತಿ ಕಲ್ಪಿಸಿತು. ಸರಕಾರದ ಈ ಕ್ರಮವು ಸಮಸ್ಯೆಯನ್ನು ಉಂಟು ಮಾಡಿತು. ಏಕೆಂದರೆ, ಬಡಕಟ್ಟುಗಳು ಹಾಗೂ ನಿರಾಶ್ರಿತರು ಬೇರೆ ಬೇರೆ ಸಾಮಾಜಿಕ ಸಾಂಸ್ಕೃತಿಕ ಗುಂಪುಗಳು. ಸರಕಾರವು ಹಾಗೆ ಮಾಡದೆ ಹೋದರೆ ಸಾಮಾಜಿಕ ಒತ್ತಡ ಉಂಟಾಗಿ ಆಡಳಿತಾತ್ಮಕ ಸಮಸ್ಯೆಯನ್ನು ಹುಟ್ಟು ಹಾಕಿದಂತಾಗುತ್ತದೆ.

ಇಂತಹ ಸಮಸ್ಯೆಯನ್ನು ಕೇರಳ ರಾಜ್ಯ ಕೂಡಾ ಎದುರಿಸಿದೆ. ಆಗ ಕೇರಳ ಸರಕಾರ ಪ್ರತಿ ಬುಡಕಟ್ಟು ಕುಟುಂಬಕ್ಕೆ ೫ ಎಕರೆ ಭೂಮಿಯನ್ನು ನೀಡಿ ಸಮಸ್ಯೆಯನ್ನು ಪರಿಹರಿಸಿತು. ಇಲ್ಲವಾದಲ್ಲಿ ಹೊರಗಿನಿಂದ ಬಂದವರೇ ಬುಡಕಟ್ಟುಗಳ ಮೇಲೆ ಪ್ರಭುತ್ವವನ್ನು ಸಾಧಿಸುತ್ತವೆ. ಆದಕಾರಣ, ಸರ್ಕಾರವು ನೀತಿಯನ್ನು ರೂಪಿಸುವಾಗ ತನ್ನ ಪಾತ್ರದ ಸೂಕ್ಷ್ಮತೆಯನ್ನು ಅರಿಯಬೇಕು. ಸರ್ಕಾರವು ನೀತಿ ರೂಪಿಸುವಾಗ ವಿವಿಧ ಗುಂಪು ಹಾಗೂ ಅಧಿಕಾರದ ಸಂಬಂಧದ ನೆಲೆಯನ್ನು ಗಮನದಲ್ಲಿಟ್ಟು ಕೊಳ್ಳಬೇಕಾಗಿರುವುದನ್ನು ಲೇಖಕರು ಗುರುತಿಸಿರುವರು.

೩. ಸರ್ಕಾರ (೨೦೦೫) ಬುಡಕಟ್ಟುಗಳು ಏಕೆ ಪ್ರತ್ಯೇಕತೆಯನ್ನು ಬಯಸುತ್ತವೆ ಎಂಬುದನ್ನು ವಿಶ್ಲೇಷಿಸಿರುವರು. ಉತ್ತರ ಬಂಗಾಲದ ಕಮಟಾಪುರ ಚಳುವಳಿಯ ಮುಖ್ಯ ಕಾರಣವನ್ನು ಗುರುತಿಸಿರುವರು. ಅಭಿವೃದ್ಧಿ ಪ್ರಕ್ರಿಯೆಯಿಂದ ಬುಡಕಟ್ಟುಗಳನ್ನು ದೂರವಿಟ್ಟ ಕಾರಣ, ಬುಡಕಟ್ಟುಗಳು ಇಂದು ಮುಖ್ಯವಾಹಿನಿ ಸಮಾಜದಿಂದ ಪ್ರತ್ಯೇಕವಾಗಿ ರಾಜಕೀಯ ಸ್ವಾತಂತ್ರ್ಯಕ್ಕಾಗಿ ಹೋರಾಟ ನಡೆಸಿವೆ. ಆದ್ದರಿಂದ ಪಶ್ಚಿಮ ಬಂಗಾಳದ ರಾಜಬನಸ್ಸೀ ಸಮುದಾಯವು ಪ್ರತ್ಯೇಕತೆ ಹಾಗೂ ಒಡೆತನಕ್ಕಾಗಿ ಪ್ರತ್ಯೇಕ ರಾಜ್ಯಕ್ಕಾಗಿ ಚಳುವಳಿ ನಡೆಸಿದವು. ಸರ್ಕಾರದ ಅಭಿವೃದ್ಧಿ ಕಾರ್ಯಕ್ರಮದಿಂದ ಅಸಮಾನತೆ ಮತ್ತು ತಾರತಮ್ಯ ಉಂಟುಮಾಡಿದೆ. ಇದರಿಂದ ಎಲ್ಲರಿಗೂ ಶಿಕ್ಷಣ ಹಾಗೂ ರಾಜಕೀಯದಲ್ಲಿ ಸಮಾನ ಅವಕಾಶ ದೊರೆಯುತ್ತಿಲ್ಲ. ರಾಜಬನಸ್ಸೀ ಬುಡಕಟ್ಟಿನವರು ತಮ್ಮ ಜನಾಂಗೀಯ ಆಸಕ್ತಿಯನ್ನು ಕಾಪಾಡಲು ಪ್ರತ್ಯೇಕ ರಾಜ್ಯ ಹಾಗೂ ಸ್ವಂತ ಭಾಷೆಯನ್ನು ಗುರುತಿಸಿಕೊಳ್ಳಲು ಚಳುವಳಿ ಪ್ರಾರಂಭಿಸಿರುವುದನ್ನು ಲೇಖಕರು ಗುರುತಿಸಿರುವರು.

೪. ಫರ್ನಾಂಡಿಸ್ ಅವರು (೨೦೦೫) ಬುಡಕಟ್ಟು ಮಹಿಳೆಯರ ಮೇಲೆ ಅಭಿವೃದ್ಧಿಯ ಪರಿಣಾಮವನ್ನು ವಿಶ್ಲೇಷಿಸಿರುವರು. ಅಭಿವೃದ್ಧಿಯ ಕಾರ್ಯಕ್ರಮದ ಸ್ಥಳಾಂತರದಿಂದಾಗಿ ಉಂಟಾಗಿರುವ ಪರಿಣಾಮವನ್ನು ಅರಿಯಲು ಆಂಧ್ರಪ್ರದೇಶ, ಗೋವಾ, ಒರಿಸ್ಸಾ ಹಾಗೂ ಪಶ್ಚಿಮ ಬಂಗಾಲದ ಬುಡಕಟ್ಟು ಮಹಿಳೆಯರ ಕುರಿತು ಅಧ್ಯಯನವನ್ನು ಕೈಗೊಂಡಿರುವರು. ಬುಡಕಟ್ಟು ಮಹಿಳೆಯರು ಸ್ಥಳಾಂತರದಿಂದ ಆರ್ಥಿಕ, ಸಾಮಾಜಿಕ, ರಾಜಕೀಯ ಹಾಗೂ ಸಾಂಸ್ಕೃತಿಕ ಪರಾಧೀನತೆಗೆ ಒಳಗಾಗುವಿಕೆಯನ್ನು ಲೇಖಕರು ಗುರುತಿಸಿರುವರು. ಅದರಿಂದ ಲೇಖಕರು ಇದನ್ನು ಪ್ರೇರಿತ ತುಳಿತ ಎಂದು ಕರೆದಿರುವರು. ಬುಡಕಟ್ಟು ಮಹಿಳೆಯರೇ ಇದಕ್ಕೆ ಹೆಚ್ಚಿನ ಬೆಲೆಯನ್ನು ತೆತ್ತಿರುವರು. ಬುಡಕಟ್ಟು ಮಹಿಳೆಯರು ಸಾಂಪ್ರದಾಯದಿಂದ ಆಧುನಿಕತೆ ಕಡೆಗೆ ಚಲನೆ ಹೊಂದುತ್ತಿರುವ ಸಂಧರ್ಭದಲ್ಲಿ ಅವಳ ಸಾಮಾಜಿಕ ಆರ್ಥಿಕ ಸ್ಥಾನವು ಕೆಳಗೆ ಇಳಿಯುತ್ತಿರುವುದನ್ನು ಹಾಗೂ ಮಹಿಳೆಯರು ಶೋಷಣೆಗೆ ಒಳಗಾಗುತ್ತಿರುವ ಬಗೆಯನ್ನು ಚರ್ಚಿಸಿರುವರು. ಅದರಿಂದ ಪುನರ್‌ವಸತಿ ನೀಡುವಾಗ ಮಹಿಳೆಯರ ಬಗ್ಗೆ ಹೆಚ್ಚಿನ ಗಮನ ನೀಡುವ ಅವಶ್ಯಕತೆಯಿದೆ. ಇದುವರೆಗೆ ಸರ್ಕಾರವು ಪುನರ್‌ವಸತಿಯನ್ನು ಕಲ್ಪಿಸುವಾಗ ಮಹಿಳೆಯರನ್ನು ಕೆಳಗಿನವಳಾಗಿ ನೋಡಿದೆ ಎಂಬುದನ್ನು ಲೇಖಕರು ಗುರುತಿಸಿರುವರು. ಬುಡಕಟ್ಟುಗಳಿಗೆ ಪುನರ್‌ವಸತಿಯನ್ನು ಕಲ್ಪಿಸುವಾಗ ಮಾರುಕಟ್ಟೆಯ ದೃಷ್ಟಿಯಿಂದ ನೋಡದೇ ಜೀವನಾಧಾರದ ದೃಷ್ಟಿಯಿಂದ ನೋಡಬೇಕಾದ ಅವಶ್ಯಕತೆ ಇದೆ. ಇಂತಹ ಸಮಸ್ಯೆಗಳು ಉಂಟಾದಾಗ ಸಾಮಾಜಿಕ ವೆಚ್ಚವನ್ನು ಹೆಚ್ಚು ಮಾಡಿ, ಮಹಿಳೆಯರು ಸಾಂಪ್ರದಾಯ ಅರ್ಥವ್ಯವಸ್ಥೆಯಿಂದ ಆಧುನಿಕ ಅರ್ಥವ್ಯವಸ್ಥೆಗೆ ಹೊಂದಿಕೊಳ್ಳದಂತೆ ಮಾಡಬಾರದೆಂದು ಲೇಖಕರು ಸೂಚಿಸಿರುವರು.

೫. ಎ.ಎಸ್.ಪ್ರಭಾಕರ್ (ಸಂ: ೨೦೦೪) ಸಂಪಾದಿಸಿರುವ ಗ್ರಂಥದಲ್ಲಿ ವಿಶಿಷ್ಟ ರೀತಿಯಲ್ಲಿ ಬುಡಕಟ್ಟು ಜೀವನದ ವಿವಿಧ ಮುಖಗಳನ್ನು ಕನ್ನಡ ನಾಡಿನ ಅನೇಕ ಚಿಂತಕರು ದಾಖಲಿಸಿರುವರು. ಈ ಗ್ರಂಥದಲ್ಲಿ ಬಹುತೇಕ ಲೇಖನಗಳು ಬುಡಕಟ್ಟುಗಳು ಮುಖ್ಯವಾಹಿನಿಗೆ ಸೇರಬೇಕೇ ಅಥವಾ ಬೇಡವೇ ಎನ್ನುವ ಚರ್ಚೆಯನ್ನು ವಿಶ್ಲೇಷಿಸಿ, ಪ್ರಸ್ತುತ ಸಂದರ್ಭದಲ್ಲಿ ಬುಡಕಟ್ಟುಗಳ ಸಬಲೀಕರಣಕ್ಕಾಗಿ ಒತ್ತು ನೀಡಿರುವುದು ಇಲ್ಲಿಯ ಲೇಖನದಲ್ಲಿ ಕಂಡುಬರುತ್ತದೆ.

೬. ಚಿತ್ತಕುಲ್ಲಲ್–ಜೋನ್ (೨೦೦೫) ಅವರು ಕೇರಳ ರಾಜ್ಯದ ಬುಡಕಟ್ಟು ಅಭಿವೃದ್ಧಿಯನ್ನು ವಿಶ್ಲೇಷಿಸುವರು. ಅಭಿವೃದ್ಧಿ ಕಾರ್ಯಕ್ರಮಗಳು ಅಧಿಕಾರಿಗಳಿಗೆ, ಗುತ್ತಿಗೆದಾರರಿಗೆ,

ಬುಡಕಟ್ಟುಗಳನ್ನು ಶೋಷಿಸಲು ಅನುವು ಮಾಡಿದೆ. ಅದರಿಂದ ಬುಡಕಟ್ಟುಗಳ ಭೂಮಿ ಪರಾಧೀನತೆಗಳು ಪ್ರಾರಂಭವಾಯಿತು. ಈ ಹಿನ್ನೆಲೆಯಲ್ಲಿ ಕೇರಳದಲ್ಲಿ ಅಭಿವೃದ್ಧಿಯ ಚರ್ಚೆಯಲ್ಲಿ ವಿಕೇಂದ್ರೀಕರಣ ಹೆಚ್ಚಿನ ಮಹತ್ವವನ್ನು ಪಡೆದುಕೊಂಡಿರುವುದನ್ನು ಲೇಖಕರು ಗುರುತಿಸಿರುವರು. ಬುಡಕಟ್ಟುಗಳು ತಮ್ಮ ಆಸಕ್ತಿಯನ್ನು ಕಾಪಾಡಿ ಕೊಳ್ಳಬೇಕಾದರೆ, ಮೊದಲು ರಾಜಕೀಯ ಪರಾಧೀನತೆ ಹಾಗೂ ಭೂಮಿ ಪರಾಧೀನತೆಯಿಂದ ಮುಕ್ತರಾಗಬೇಕೆಂದು ಲೇಖಕರು ಸೂಚಿಸಿರುವರು.

೭. ಅರುಣಕುಮಾರ (೨೦೦೫) ಅವರು ಆಂಧ್ರಪ್ರದೇಶದ ಪಶ್ಚಿಮ ಗೋದಾವರಿ ಜಿಲ್ಲೆಯ ಬುಡಕಟ್ಟಿನವರ ಭೂಮಿ ಪರಾಧೀನತೆಯ ಸಮಸ್ಯೆಯ ಪರಿಹಾರದಲ್ಲಿ ಎನ್.ಜಿ.ಓ.ದ ಪಾತ್ರವನ್ನು ವಿಶ್ಲೇಷಿಸಿರುವರು. ಬುಡಕಟ್ಟೇತರರು ಈ ಪ್ರದೇಶಕ್ಕೆ ವಲಸೆ ಬಂದಾಗ ಸಮಸ್ಯೆ ಪ್ರಾರಂಭವಾಯಿತು. ಸರ್ಕಾರದ ಭೂಸುಧಾರಣಾ ಕಾಯಿದೆಯಲ್ಲಿ ಹಲವಾರು ನ್ಯೂನತೆಗಳಿವೆ. ಅವು ಬುಡಕಟ್ಟೇತರಿಗೆ ಲಾಭ ಮಾಡಿಕೊಡುತ್ತವೆ. ಭೂ ವ್ಯಾಜ್ಯಗಳು ಬುಡಕಟ್ಟಿನವರಿಗೆ ಸಂಕಷ್ಟ ತಂದೊಡ್ಡಿವೆ. ಆದರೆ ರಾಜ್ಯಗಳು ಇವರ ಸಮಸ್ಯೆಗೆ ಸರಿಯಾಗಿ ಪ್ರತಿಕ್ರಿಯಿಸುತ್ತಿಲ್ಲ. ಇಂತಹ ಸಂದರ್ಭದಲ್ಲಿ ಎನ್.ಜಿ.ಓ.ಗಳು ಬುಡಕಟ್ಟಿನ ನೆರವಿಗೆ ಬಂದವು. ಎನ್.ಜಿ.ಓ.ಗಳು ಜನಪದ ಮತ್ತು ಆಟದ ಮೂಲಕ ಬುಡಕಟ್ಟಿನವರಲ್ಲಿ ಜಾಗ್ರತೆಯನ್ನು ಮೂಡಿಸಿದವು. ಇಂತಹ ಸಮಸ್ಯೆಗಳು ಉಂಟಾದಾಗ ರಾಜ್ಯ ಹಾಗೂ ಎನ್.ಜಿ.ಓ.ಗಳು ಜೊತೆಯಾಗಿ ಕೆಲಸ ಮಾಡುವ ಅವಶ್ಯಕತೆಯನ್ನು ಲೇಖಕರು ಗುರುತಿಸಿರುವರು.

೮. ಶರವಣ (೨೦೦೫) ಅವರು ತಮಿಳುನಾಡಿನಲ್ಲಿ ೧೯೪೭-೨೦೦೦ದವರೆಗೆ ಬುಡಕಟ್ಟು ಅಭಿವೃದ್ಧಿ ನೀತಿಯಿಂದ ಉಂಟಾಗಿರುವ ನಕಾರಾತ್ಮಕ ಪರಿಣಾಮವನ್ನು ಚರ್ಚಿಸಿರುವರು. ಕೃಷಿಕರಾದ ಬುಡಕಟ್ಟುಗಳು ಅಭಿವೃದ್ಧಿ ಕಾರ್ಯಕ್ರಮದಿಂದ ಕೃಷಿ ಕಾರ್ಮಿಕರಾದದ್ದನ್ನು ಗುರುತಿಸಿರುವರು. ಬುಡಕಟ್ಟುಗಳು ತಮ್ಮ ಆರ್ಥಿಕ ಸ್ಥಿರತೆಯನ್ನು ಕಳೆದುಕೊಂಡಿದ್ದು, ಅರಣ್ಯದ ಮೇಲಿನ ನಿರ್ಬಂಧ ಹಾಗೂ ವಾಣಿಜ್ಯ ಬೆಳೆ ಪದ್ಧತಿ ಇದರಿಂದಾಗಿ ಬುಡಕಟ್ಟಿನವರು ದುಡಿಮೆಯಲ್ಲಿ ಪಾಲ್ಗೊಳ್ಳುವಿಕೆಯ ಪ್ರಮಾಣದಲ್ಲಿ ಇಳಿಕೆಯಾಯಿತು. ಬುಡಕಟ್ಟುಗಳನ್ನು ಮುಖ್ಯವಾಹಿನಿಯಲ್ಲಿ ತರುವ ಉದ್ದೇಶದಿಂದ ಸರ್ಕಾರವು ಮೂಲ ಸೌಲಭ್ಯವನ್ನು ಒದಗಿಸಿತು. ಆದರೆ ಇತರರು ಈ ಸೌಲಭ್ಯವನ್ನು ಬಳಸಿಕೊಂಡರು. ಆದ್ದರಿಂದ ಇನ್ನು ಮುಂದೆ ಬುಡಕಟ್ಟಿನವರಿಗೆ ಪ್ರತ್ಯೇಕ ಸೌಲಭ್ಯವನ್ನು ಒದಗಿಸಲು ಹಲವಾರು ಸೂಚನೆಗಳನ್ನು ಲೇಖಕರು ನೀಡಿದ್ದಾರೆ.

೯. ಸಹಲ್–ಕವನರ ಮತ್ತು ಶ್ರೀವಾಸ್ತವ (೨೦೦೫) ಉತ್ತರಾಂಚಲದ ಬೋಧಿ ಬುಡಕಟ್ಟಿನವರಲ್ಲಿ ಅಭಿವೃದ್ಧಿ ಕಾರ್ಯಕ್ರಮದಿಂದ ಸಕಾರಾತ್ಮಕ ಪರಿಣಾಮವನ್ನು ವಿಶ್ಲೇಷಿಸುವುದು. ಸರ್ಕಾರದಿಂದ ಒದಗಿಸಲ್ಪಟ್ಟ ಶಿಕ್ಷಣದ ಸ್ಕಾಲರ್‌ಶಿಪ್ ಹಾಗೂ ಹಾಸ್ಟಲ್ ಸೌಲಭ್ಯಗಳನ್ನು ಸರಿಯಾಗಿ ಬಳಸಿಕೊಳ್ಳುತ್ತಿರುವುದನ್ನು ಗುರುತಿಸಿರುವರು. ಇದರಿಂದಾಗಿ ಅವರ ಸಾಂಪ್ರದಾಯಿಕ ಉದ್ಯೋಗದಲ್ಲಿ ಇಳಿಕೆಯಾಗಿದೆ. ಹಾಗೂ ಸರಕಾರಿ/ಖಾಸಗಿ ವಲಯದ ಕೆಲಸದಲ್ಲಿ ತೊಡಗಿಕೊಳ್ಳುವಿಕೆಯಲ್ಲಿ ಏರಿಕೆಯಾಗಿದೆ. ಈ ಬುಡಕಟ್ಟಿನವರು ಪರಸ್ಥಳದಲ್ಲಿ ನೆಲೆಸಿಂತಿರುವರು. ಈ ಪ್ರದೇಶದ ಎನ್.ಜಿ.ಒ.ಗಳು ಬುಡಕಟ್ಟು ಮಹಿಳೆಯರು ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮದಲ್ಲಿ ಹಾಗೂ ಉಳಿತಾಯ ಕಾರ್ಯಕ್ರಮದಲ್ಲಿ ತೊಡಗಿಕೊಳ್ಳುವಂತೆ ನೋಡಿಕೊಂಡಿವೆ. ಇಂದು ಇವರು ಉಣ್ಣೆಯ ವಸ್ತುವನ್ನು ಮಾರುವ ಸಮಸ್ಯೆಯನ್ನು ಎದುರಿಸುತ್ತಿರುವುದನ್ನು ಲೇಖಕರು ಗುರುತಿಸಿರುವರು. ಮಾರುಕಟ್ಟೆಯಲ್ಲಿ ಪರ್ಯಾಯ ವಸ್ತುಗಳು ಬಂದಿವೆ. ಅದರಿಂದ ಹಲವಾರು ಕುಟುಂಬಗಳು ಸಂಕಷ್ಟವನ್ನು ಎದುರಿಸುತ್ತಿವೆ. ಕುಟುಂಬದ ಆದಾಯಕ್ಕಾಗಿ ಸ್ಥಳೀಯ ಸಾರಾಯಿ ಮಾರಾಟದಲ್ಲಿ ಈ ಕುಟುಂಬಗಳು ತೊಡಗಿಸಿಕೊಂಡಿವೆ.

ಆದ್ದರಿಂದ ಯಾವುದೇ ಕಾರ್ಯಕ್ರಮವನ್ನು ರೂಪಿಸುವಾಗ ಸ್ಥಳೀಯ ಅವಶ್ಯಕತೆಯನ್ನು ಗಮನಿಸಬೇಕಾಗುತ್ತದೆ ಎಂದು ಲೇಖಕರು ಸೂಚಿಸಿರುವರು. ಶಿಕ್ಷಿತ ಯುವ ಜನಾಂಗವು 'ಬ್ರಹ್ಮ ಕಮಲ' ಎಂಬ ಕ್ಲಬ್‌ನ್ನು ರಚಿಸಿಕೊಂಡಿದೆ. ಯುವಕರು, ಈ ಕ್ಲಬ್ ಮೂಲಕ ರಾಜ್ಯದ ಸಾಮಾಜಿಕ ಹಾಗೂ ರಾಜಕೀಯದಲ್ಲಿ ಮಹತ್ವದ ಪಾತ್ರವಹಿಸಬೇಕಾಗಿರುವುದನ್ನು ಲೇಖಕರು ಗುರುತಿಸಿರುವರು.

೧೦. ಮಿಶ್ರ ಮತ್ತು ದಷ್ (೨೦೦೫) ಅವರು ಸಾಂಪ್ರದಾಯ ನೆಲೆಯಿಂದ ಭಿನ್ನವಾಗಿ ಬುಡಕಟ್ಟು ಆರೋಗ್ಯವನ್ನು ಆರ್ಥಿಕ ಮತ್ತು ರಾಜಕೀಯ ನೆಲೆಯಿಂದ ಚರ್ಚಿಸಿರುವರು. ಬುಡಕಟ್ಟಿನ ಬಡತನಕ್ಕೆ ಮತ್ತು ಆರೋಗ್ಯಕ್ಕೆ ನೇರ ಸಂಬಂಧವಿದೆ. ಇಂಗ್ಲೀಷ್ ಔಷಧಿ ದುಬಾರಿ ಒಂದೆಡೆಗೆ ಆದರೆ ಇನ್ನೊಂದೆಡೆಗೆ ಅವರ ಸಂಸ್ಕೃತಿ ಈ ಸೇವೆಯನ್ನು ಪಡೆಯಲು ತಡೆಯನ್ನು ಒಡ್ಡುತ್ತಿರುವುದನ್ನು ಲೇಖಕರು ಗುರುತಿಸಿರುವರು.

ಬುಡಕಟ್ಟುಗಳ ಆರೋಗ್ಯಕ್ಕೆ ಮೂಲ ಸೌಕರ್ಯ ಒದಗಿಸಬೇಕು. ವಿವಿಧ ಕಾರ್ಯಕ್ರಮವನ್ನು ಸಂಯೋಜಿಸುವ ಮೂಲಕ ಮಾತ್ರ ಆರೋಗ್ಯವನ್ನು ಉತ್ತಮಪಡಿಸಬಹುದು. ಸರಕಾರವು ನಗರ ಹಾಗೂ ಗ್ರಾಮಗಳ ನಡುವಿನ ಆರೋಗ್ಯದ ಅಂತರವನ್ನು ಕಡಿಮೆ

ಮಾಡಬೇಕಾಗಿದೆ. ಆಹಾರದ ಭದ್ರತೆ, ಜೊತೆಗೆ ಮಹಿಳೆಯರಲ್ಲಿ ವೈಜ್ಞಾನಿಕ ಮನೋಭಾವನೆ ಬೆಳೆಯುವಂತೆ ಮಾಡುವುದು ಅವಶ್ಯಕವಾಗಿದೆ. ಆದ್ದರಿಂದ ಬುಡಕಟ್ಟು ಪ್ರದೇಶದಲ್ಲಿ ವಿಶೇಷವಾದ ಆರೋಗ್ಯದ ಮೂಲ ಸೌಲಭ್ಯಗಳನ್ನು ಒದಗಿಸುವ ಅವಶ್ಯಕತೆಯನ್ನು ಲೇಖಕರು ಗುರುತಿಸಿರುವರು.

೧೧. ಪಾಂಡೆ-ಭಾಟಿಯಾ (೨೦೦೫) ಅವರು ಕಾರ್ ನಿಕೋಬಾರ್- ಪ್ರದೇಶದಲ್ಲಿ ಅಭಿವೃದ್ಧಿಯ ಸಕಾರಾತ್ಮಕ ಹಾಗೂ ನಕಾರಾತ್ಮಕ ಪರಿಣಾಮವನ್ನು ವಿಶ್ಲೇಷಿಸಿರುವರು. ಕ್ರಿಶ್ಚಿಯನ್‌ತೆಯಿಂದಾಗಿ ಬುಡಕಟ್ಟುಗಳ ಕುಟುಂಬ ವ್ಯವಸ್ಥೆ, ಸಂಸ್ಕೃತಿ, ವಿವಾಹ ಪದ್ಧತಿ ಹಾಗೂ ಆರೋಗ್ಯ ವ್ಯವಸ್ಥೆಯಲ್ಲಿ ಹಲವಾರು ಬದಲಾವಣೆಗಳಾಗಿವೆ. ಶಿಕ್ಷಣದ ಮೂಲಕ ಉದ್ಯೋಗದ ರಚನೆ, ಉಡುಗೆ-ತೊಡುಗೆ, ಆಹಾರ, ಕೇಶಾಲಂಕಾರ ಹಾಗೂ ವಸತಿ ವ್ಯವಸ್ಥೆಯಲ್ಲಿ ಬದಲಾವಣೆಗಳಾಗಿವೆ. ಬುಡಕಟ್ಟಿನವರ ಸ್ವಾವಲಂಬಿ ಅರ್ಥವ್ಯವಸ್ಥೆಯಲ್ಲಿ ಅಸಮಾನತೆ ಹಾಗೂ ಲಿಂಗ ಅಸಮಾನತೆ ಬೆಳೆಯುತ್ತಿರುವುದನ್ನು ಗುರುತಿಸಿರುವರು. ಆದ್ದರಿಂದ ಅಭಿವೃದ್ಧಿ ಅವಕಾಶವನ್ನು ವಿಕೇಂದ್ರೀಕರಣಗೊಳಿಸಲು ಸೂಚಿಸಿರುವರು.

೧೨. ಸಿ.ಬಿ.ಡಂಬಳ (೧೯೯೭) ಅವರು ಕರ್ನಾಟಕದ ಕೊಡಗಿನ ಬುಡಕಟ್ಟಿನವರ ಮೇಲೆ ಅಭಿವೃದ್ಧಿಯ ನಕಾರಾತ್ಮಕ ಪರಿಣಾಮವನ್ನು ವಿಶ್ಲೇಷಿಸಿರುವರು. ಸರಕಾರದ ಅರಣ್ಯ ನೀತಿ ಬುಡಕಟ್ಟಿನವರನ್ನು ಅರಣ್ಯಾಧಿಕಾರಿಗಳು, ಕಂಟ್ರಾಕ್ಟರ್ ಹಾಗೂ ಭೂಮಾಲಿಕರಿಂದ ಶೋಷಣೆಗೆ ಒಳಪಟ್ಟ ಬಗೆಯನ್ನು ಚರ್ಚಿಸಿರುವರು. ಈ ಬುಡಕಟ್ಟಿನವರ ಬಡತನಕ್ಕೆ ಭೂಮಿ ಇಲ್ಲದಿರುವಿಕೆ ಹಾಗೂ ಸಾಲ ಕಾರಣವಾಗಿದೆ. ಅಭಿವೃದ್ಧಿ ಕಾರ್ಯಕ್ರಮಗಳು ಆರ್ಥಿಕ ಸಬಲತೆಯನ್ನು ಉಂಟುಮಾಡದೇ ಇತರೆ ಬದಲಾವಣೆಯನ್ನು ತಂದಿರುವುದನ್ನು ಗುರುತಿಸಿರುವರು.

೧೩. ಮೀರಾಸೇಠ (೨೦೦೧) ಅವರು ತಮ್ಮ ಗ್ರಂಥದಲ್ಲಿ ಸ್ವಾತಂತ್ರ್ಯ ನಂತರದ ಮಹಿಳಾ ಅಭಿವೃದ್ಧಿ ಕಾರ್ಯಕ್ರಮಗಳನ್ನು ವಿಶ್ಲೇಷಿಸುವರು. ಭಾರತದಲ್ಲಿ ಮಹಿಳೆಯ ಸ್ಥಾನವನ್ನು ಇತಿಹಾಸ, ಸಾಮಾಜಿಕ, ಆರ್ಥಿಕ, ರಾಜಕೀಯ ನೀತಿಯಿಂದ ಚರ್ಚಿಸಿರುವರು. ಭಾರತದಲ್ಲಿ ಮಹಿಳೆಯರು ಧರ್ಮ, ಪ್ರದೇಶ, ಜಾತಿ ಹಾಗೂ ವರ್ಗವನ್ನು ಅವಲಂಬಿಸಿರುವುದನ್ನು ಇತಿಹಾಸ ಹಾಗೂ ಸಂಸ್ಕೃತಿಯ ಸಮೀಕ್ಷೆ ಹೇಳುತ್ತವೆ. ಭಾರತದಲ್ಲಿ ಅಭಿವೃದ್ಧಿ ಕಾರ್ಯಕ್ರಮಗಳು ಸಫಲಗೊಳ್ಳಬೇಕಾದರೆ ಲಿಂಗ ಸಮಾನತೆಯನ್ನು ಸಾಧಿಸಿದರೆ ಮಾತ್ರ ಸಾಧ್ಯ ಎಂದು ಗುರುತಿಸಿರುವರು. ನಂತರದ ಭಾಗದಲ್ಲಿ ಹೆಣ್ಣು

ಮಗುವಿನ ಬಗ್ಗೆ ಲಿಂಗಾನುಪಾತ ಶಿಶು ಮರಣದ ಪ್ರಮಾಣ ಪೌಷ್ಠಿಕತೆ ಹಾಗೂ ಸ್ವ ಅಭಿವೃದ್ಧಿಗೆ ಲಭ್ಯವಿರುವ ಅವಕಾಶದ ಚೌಕಟ್ಟುನೊಳಗೆ ಚರ್ಚಿಸಿರುವರು. ಶಿಕ್ಷಣವನ್ನು ಒದಗಿಸಲು ಸರ್ಕಾರ ಮತ್ತು ಎನ್.ಜಿ.ಓ.ಗಳ ಪಾತ್ರವನ್ನು ವಿವರಿಸಿ, ಮಹಿಳೆಯರು ಶಿಕ್ಷಣದಲ್ಲಿ ಹಿಂದುಳಿವಿಕೆಯೇ ಅವಳ ಸ್ಥಾನದ ಮೇಲೆ ಪ್ರತಿಕೂಲ ಪರಿಣಾಮ ಬೀರಿರುವುದನ್ನು ಗುರುತಿಸಿರುವರು. ಆದ್ದರಿಂದ ಮಹಿಳೆಯರು ಜೀವನದ ಎಲ್ಲಾ ಪಥದಲ್ಲಿ ಹಿಂದುಳಿದಿರುವರು. ರಾಷ್ಟ್ರೀಯಸಬಲೀಕರಣ ನೀತಿಯ ಮೂಲಕ ಮಹಿಳೆಯನ್ನು ಸ್ವಾವಲಂಬಿಗಳನ್ನಾಗಿ ಮಾಡಿ ಅವರ ವಿರುದ್ಧ ನಡೆಯುವ ಅಪರಾಧಗಳನ್ನು ತಡೆಯಬೇಕಾಗಿದೆ. ಭಾರತದಲ್ಲಿ ಮಹಿಳೆಯರು ಸಾಮಾಜಿಕ ಆರ್ಥಿಕ ರಾಜಕೀಯ ಬದಲಾವಣೆಯ ಏಜಂಟರಾಗಬೇಕು. ಈ ನಿಟ್ಟಿನಲ್ಲಿ ಸ್ವಸಹಾಯ ಗುಂಪುಗಳು ಮಹತ್ವದ ಪಾತ್ರವನ್ನು ವಹಿಸುತ್ತವೆ. ಈ ಮೂಲಕ ಪುರುಷ ಪ್ರಧಾನ ಸಮಾಜದ ಬುನಾದಿಯನ್ನು ಅಲುಗಾಡಿಸಬಹುದೆಂದು ಗುರುತಿಸಿರುವರು. ಬುಡಕಟ್ಟುಗಳ ಅಭಿವೃದ್ಧಿ ಸಮೀಕ್ಷೆಯಿಂದ ಕಂಡುಬಂದಿರುವ ಅಂಶಗಳು ಇಂತಿವೆ.

೧. ಅಭಿವೃದ್ಧಿ ಕಾರ್ಯಕ್ರಮಗಳಿಂದ ಸಕಾರಾತ್ಮಕ ಪರಿಣಾಮಗಳಿಗಿಂತ ನಕಾರಾತ್ಮಕ ಪರಿಣಾಮಗಳೇ ಹೆಚ್ಚು.

೨. ಬುಡಕಟ್ಟು ಅಭಿವೃದ್ಧಿಯ ಪುನರ್‌ವಿವೇಚನೆ ಮಾಡಬೇಕಾಗಿದೆ.

೩. ಅಭಿವೃದ್ಧಿ ಕಾರ್ಯಕ್ರಮಗಳನ್ನು ವಿಕೇಂದ್ರೀಕರಣಗೊಳಿಸಬೇಕಾಗಿದೆ.

೪. ಅಭಿವೃದ್ಧಿ ಕಾರ್ಯಕ್ರಮಗಳು ಬುಡಕಟ್ಟುಗಳನ್ನು ಅಂಚಿಗೆ ಸೇರಿಸಿವೆ.

೫. ಅಭಿವೃದ್ಧಿ ಕಾರ್ಯಕ್ರಮಗಳಿಗೆ ಬುಡಕಟ್ಟು ಮಹಿಳೆಯರು ಹೆಚ್ಚಿನ ಬೆಲೆ ತೆರಬೇಕಾಗಿದೆ.

೬. ಅಭಿವೃದ್ಧಿಯ ಕಾರ್ಯಕ್ರಮಗಳು ಬುಡಕಟ್ಟು ಮಹಿಳೆಯರು ಕೆಳಗಿನ ಸ್ಥಾನ ಪಡೆದುಕೊಳ್ಳುತ್ತಿದ್ದಾರೆ.

೭. ಅಭಿವೃದ್ಧಿ ಕಾರ್ಯಕ್ರಮದಲ್ಲಿ ಬುಡಕಟ್ಟು ಮಹಿಳೆಯರನ್ನು ಕೆಳಗಿನವಳಾಗಿ ನೋಡಲಾಗಿದೆ.

೮. ಅಭಿವೃದ್ಧಿ ಕಾರ್ಯಕ್ರಮವು ಬುಡಕಟ್ಟು ಪುರುಷ ಹಾಗೂ ಮಹಿಳೆಯರ ನಡುವೆ ಅಸಮಾನತೆ ಉಂಟುಮಾಡಿದೆ.

೯. ಏತ್ನೋ ಅಭಿವೃದ್ಧಿ ಮಾದರಿ ಬಳಸಬೇಕು.

೧೦. ಮುಖ್ಯವಾಹಿನಿ ನೀತಿ ವಿಫಲಗೊಂಡಿದೆ.

೧೧. ಬುಡಕಟ್ಟುಗಳು ಸ್ವಾಯತ್ತತೆ ಹಾಗೂ ಪ್ರತ್ಯೇಕತೆ ಬಯಸುತ್ತವೆ.

೧೨. ಬುಡಕಟ್ಟು ಅಭಿವೃದ್ಧಿಯಲ್ಲಿ ಶಿಕ್ಷಣ ಮುಖ್ಯವಾಗಿದೆ.

೧೩. ಬುಡಕಟ್ಟಿನವರಿಗೆ ವಿಶೇಷ ಆರೋಗ್ಯ ಕಾರ್ಯಕ್ರಮದ ಅವಶ್ಯಕತೆ ಇದೆ.

೨.೩. ಬುಡಕಟ್ಟುಗಳ ಸಾಮಾಜಿಕ ಬದಲಾವಣೆ

೧. ಕೆ.ಎಸ್.ಸಿಂಗ್ (೨೦೦೫) ಅವರು ಬುಡಕಟ್ಟು ಸಾಮಾಜಿಕ ಬದಲಾವಣೆಯ ಒಳನೋಟಗಳನ್ನು ವಿಶ್ಲೇಷಿಸಿರುವರು. ಅಂದು ಅರಣ್ಯವಾಸಿಗಳಾದ ಬುಡಕಟ್ಟಿನವರು ಇಂದು ಸ್ವಂತ ರಾಜ್ಯ ಸ್ಥಾಪಿಸುವಷ್ಟು ರಾಜಕೀಯ ಶಕ್ತಿಯಾಗಿ ಬೆಳೆದಿರುವುದನ್ನು ಗುರುತಿಸಿರುವರು. ಬುಡಕಟ್ಟುಗಳಲ್ಲಿ ವಸಾಹತುಶಾಹಿ ಅವಧಿಯಿಂದ ಮುಖ್ಯವಾಹಿನಿ ಅವಧಿಯವರೆಗೆ ಆಮೂಲಾಗ್ರ ಬದಲಾವಣೆಯಾಗಿದೆ. ಬುಡಕಟ್ಟುಗಳು ಮಹಿಳೆಯರನ್ನು ಚೆನ್ನಾಗಿ ನಡೆಸಿಕೊಂಡರು ಸಹ ಕೆಲವು ಅವಕಾಶವನ್ನು ನೀಡಿರಲಿಲ್ಲ. ಆದರೆ, ಇಂದು ಬುಡಕಟ್ಟು ಮಹಿಳೆಯರು ಬಹುಪತ್ನಿತ್ವ ಹಾಗೂ ಆಸ್ತಿ ಹಕ್ಕಿಗಾಗಿ ಧ್ವನಿ ಎತ್ತಿರುವುದನ್ನು ಗುರುತಿಸಿರುವರು. ಸಮಕಾಲೀನ ಬುಡಕಟ್ಟುಗಳು ಐಡೆಂಟಿಟಿ, ಸ್ವಾಯತ್ತತೆ, ಸಮಾನತೆ ಹಾಗೂ ಸಬಲೀಕರಣಕ್ಕಾಗಿ ಹೋರಾಟ ನಡೆಸುತ್ತಿವೆ. ಕೆಲ ಬುಡಕಟ್ಟುಗಳು ರಾಜಕೀಯವಾಗಿ ಆರ್ಥಿಕವಾಗಿ ಹಾಗೂ ಸಾಂಸ್ಕೃತಿಕವಾಗಿ ಸಾಮಾನ್ಯ ವರ್ಗದವರಿಗೆ ಸಮಾನವಾಗಿರುವುದನ್ನು ಗುರುತಿಸಬಹುದು.

೨. ಬಿ.ಕೆ.ರೊಯ (೨೦೦೫) ಅವರು ಪ್ರಜಾಪ್ರಭುತ್ವದಲ್ಲಿ ಬುಡಕಟ್ಟುಗಳ ವಿಲೀನಗೊಳಿಸುವ ಸಮಸ್ಯೆಯನ್ನು ವಿಶ್ಲೇಷಿಸುವರು. ಐ.ಎಲ್.ಓ.ದ ಕರೆಯ ಮೇರೆಗೆ ಮೂಲನಿವಾಸಿಗಳನ್ನು ಪ್ರಭುತ್ವದಲ್ಲಿ ಸೇರಿಸಲಾಯಿತು. ಆದರೆ ಬುಡಕಟ್ಟುಗಳನ್ನು ರಾಷ್ಟ್ರದಲ್ಲಿ ಐಕ್ಯಗೊಳಿಸುವಿಕೆಯು ಅಭಿವೃದ್ಧಿಯ ಗ್ಯಾರಂಟಿಯನ್ನು ನೀಡಲಾರದು. ರಾಷ್ಟ್ರದೊಳಗೆ ವಿವಿಧ ಸಮುದಾಯಗಳನ್ನು ಸೌಹಾರ್ದತೆಯಿಂದ ವಿಲೀನಗೊಳಿಸಲಾಯಿತು. ಯಾವಾಗ ನಾವು ಪ್ರಾಂತ್ಯಾವಾರು ರಾಜ್ಯವನ್ನು ಭಾಷೆಯ ಆಧಾರದ ಮೇಲೆ ರಚಿಸಿದೆವು. ಆಗ ಸಂಸ್ಕೃತಿಯನ್ನು ಕಡೆಗಣಿಸಿದೆವು. ಹೀಗಾಗಿ ಗಡಿಭಾಗದವರ ಮೇಲೆ ಪ್ರಭುತ್ವದ ಸಂಸ್ಕೃತಿಯನ್ನು ಹೇರಲಾಯಿತು. ಅದರಿಂದ ರಾಷ್ಟ್ರದಲ್ಲಿ ವಿವಿಧ ಸಮುದಾಯಗಳ ಐಕ್ಯತೆಯ ಸಮಯದಲ್ಲಿ ಸಭೆಯನ್ನು ತಳ ಸಮುದಾಯದವರ ಆಸಕ್ತಿಯನ್ನು ಕಾಪಾಡಿಕೊಳ್ಳುವ ಅವಶ್ಯಕತೆಯನ್ನು ಗುರುತಿಸಲಾಯಿತು.

೩. ಟಿ.ಸಿ.ದಾಸ್ (೨೦೦೫) ಅವರು ಬುಡಕಟ್ಟನವರ ಸಾಮಾಜಿಕ ಬದಲಾವಣೆಯ ಸ್ವರೂಪವನ್ನು ವಿಶ್ಲೇಷಿಸಿರುವರು. ಬುಡಕಟ್ಟಿನ ಸಾಮಾಜಿಕ ಬದಲಾವಣೆಗೆ ಹಲವಾರು ಕಾರಣಗಳನ್ನು ಗುರುತಿಸಲಾಗಿದೆ. ಕೃಷಿಪದ್ಧತಿ, ಶಿಕ್ಷಣ, ಗಣಿಗಾರಿಕೆ, ಕೈಗಾರಿಕೆ, ಕ್ರಿಶ್ಚಿಯನ್ ಧರ್ಮ, ಪತ್ರಿಕೆ, ಸರ್ಕಾರ ಹಾಗೂ ಎನ್.ಜಿ.ಓ.ಗಳು ಬದಲಾವಣೆಯ ಏಜೆಂಟ್ ಅಂತ ಗುರುತಿಸಿರುವರು. ಬುಡಕಟ್ಟಿನವರು ಸ್ಥಳಾಂತರದ ಬೇಸಾಯ

ಪದ್ಧತಿಯಿಂದ ನೆಲೆನಿಂತ ಬೇಸಾಯ ಪದ್ಧತಿಗೆ ಬಂದಾಗ ಅವಿಭಕ್ತ ಕುಟುಂಬ ವ್ಯವಸ್ಥೆ ಬಂತು. ಶಿಕ್ಷಣವು ವಿವಾಹ ಪದ್ಧತಿಯ ಬದಲಾವಣೆಗೆ ಕಾರಣವಾಯಿತು. ಭೂಮಿ ವಾಣಿಜ್ಯೀಕರಣಗೊಂಡಾಗ ಎಲ್ಲರಿಗೂ ಸಮಾನ ಪಾಲು ನೀಡುವ ಪದ್ಧತಿ ಬಂತು. ಜನಸಂಖ್ಯೆ ಹೆಚ್ಚಿದಾಗ ಕಾರ್ಮಿಕರಾಗಿ ವಿವಿಧ ವಲಯದಲ್ಲಿ ದುಡಿಮೆ ಮಾಡುವ ಪದ್ಧತಿ ಬಂತು. ಆದ್ದರಿಂದ ಪ್ರತಿಯೊಂದು ಅಂಶವೂ ಕೂಡಾ ಬದಲಾವಣೆಗೆ ಕಾರಣವಾಗಿರುವುದನ್ನು ಗುರುತಿಸಿರುವರು. ಆಂತರಿಕ ಸಂಸ್ಕೃತಿಯಲ್ಲಿ ಹಲವಾರು ಬದಲಾವಣೆಯಾಗಿದೆ. ಶಿಕ್ಷಿತರು ಇಂದು ತಮ್ಮ ಸ್ವಂತ ಸಂಸ್ಕೃತಿಯನ್ನು ರಕ್ಷಿಸಲು ಮುಂದಾಗುತ್ತಿದ್ದಾರೆ.

೪. ಬಿ.ವಿ.ಷಾ (೨೦೦೫) ಅವರು ಗುಜರಾತದ ಬುಡಕಟ್ಟಿನ ಸಾಮಾಜಿಕ ಬದಲಾವಣೆ ಮೇಲೆ ಶಿಕ್ಷಣದ ಪರಿಣಾಮವನ್ನು ಚರ್ಚಿಸಿರುವರು. ಶಿಕ್ಷಣ ಸಾಮಾಜಿಕ ಬದಲಾವಣೆಯನ್ನು ಮೂರು ರೀತಿಯಲ್ಲಿ ಉಂಟು ಮಾಡುತ್ತದೆ ಎಂದು ಗುರುತಿಸಿರುವರು. ಸ್ವಾತಂತ್ರ್ಯದ ನಂತರ ಬುಡಕಟ್ಟುಗಳ ಶಿಕ್ಷಣಕ್ಕಾಗಿ ವಿಶೇಷ ಪ್ರಯತ್ನ ಮಾಡಲಾಯಿತು. ಆದರೂ ಸಹ ಪ್ರಾಥಮಿಕ ಶಾಲೆಯ ನಂತರ ಶಾಲೆ ಬಿಡುವವರ ಪ್ರಮಾಣವು ಬುಡಕಟ್ಟಿನಲ್ಲಿ ಜಾಸ್ತಿ. ಇದಕ್ಕೆ ಅವರ ಸಾಮಾಜಿಕ, ಆರ್ಥಿಕ ಸ್ಥಿತಿಯೇ ಕಾರಣವಾಗಿದೆ. ಕೆಲ ಬುಡಕಟ್ಟುಗಳು ತಮ್ಮ ಜೀವನದ ಮೂಲ ಅವಶ್ಯಕತೆಯನ್ನು ಪೂರೈಸಿಕೊಳ್ಳಲು ಆಗದ ಸ್ಥಿತಿಯಲ್ಲಿವೆ. ಹೀಗಾಗಿ ಕೃಷಿಯಲ್ಲಿ ತೊಡಗಿಸಿಕೊಳ್ಳುವುದೇ ಹೆಚ್ಚು ಲಾಭದಾಯಕವಾಗುತ್ತದೆ. ಉತ್ತಮ ಸ್ಥಿತಿಯಲ್ಲಿರುವ ಬುಡಕಟ್ಟುಗಳು ಶಿಕ್ಷಣದ ಲಾಭ ಪಡೆದುಕೊಳ್ಳುತ್ತಿರುವುದನ್ನು ಗುರುತಿಸಲಾಗಿದೆ.

ಈಗಾಗಲೇ ನಡೆದಿರುವ ಅಧ್ಯಯನಗಳು ಹಾಗೂ ಸಮೀಕ್ಷೆಗಳು ಶಿಕ್ಷಣ ಬುಡಕಟ್ಟಿನವರ ಆರ್ಥಿಕ, ರಾಜಕೀಯ ಸಾಮಾಜಿಕ ಹಾಗೂ ಸಂಸ್ಕೃತಿ ಮೇಲೆ ಪರಿಣಾಮ ಬೀರುವುದನ್ನು ಗುರುತಿಸಿವೆ. ಬುಡಕಟ್ಟುಗಳ ಉದ್ಯೋಗದ ರಚನೆಯಲ್ಲಿ ಶಿಕ್ಷಣವು ಬದಲಾವಣೆ ಉಂಟುಮಾಡಿದೆ. ಗ್ರಾಮೀಣ ಪಂಚಾಯತಿ ವ್ಯವಸ್ಥೆಯು ಸಾಂಪ್ರದಾಯ ವ್ಯವಸ್ಥೆಯ ಮೇಲೆ ಪರಿಣಾಮ ಬೀರಿವೆ. ಬುಡಕಟ್ಟು ಯುವಕರು ರಾಜಕೀಯದಲ್ಲಿ ತೊಡಗಿಸಿಕೊಂಡು ತಮ್ಮ ಆಸಕ್ತಿಯನ್ನು ಕಾಪಾಡಲು ಮುಂದಾಗುತ್ತಿರುವುದನ್ನು ಗುರುತಿಸಲಾಗಿದೆ.

೫. ಹೆಚ್.ಕೆ.ಭಟ್‌ರವರ (೧೯೯೭) ಕರ್ನಾಟಕದ ಸೋಲಿಗರಲ್ಲಿ ಉಂಟಾಗುತ್ತಿರುವ ಬದಲಾವಣೆಯನ್ನು ಚರ್ಚಿಸಿರುವರು. ಮೊದಲು ಸೋಲಿಗರು ನೆಲೆನಿಂತ ಬೇಸಾಯದಲ್ಲಿ

ತೊಡಗಿಕೊಂಡರು. ಇಂದು ವಾಣಿಜ್ಯ ಬೆಳೆ, ಹೈನುಗಾರಿಕೆ, ತೋಟಗಾರಿಕೆಯಲ್ಲಿ ತೊಡಗಿಕೊಂಡಿರುವುದನ್ನು ಗುರುತಿಸಲಾಗಿದೆ. ಸೋಲಿಗರ ಸಮಾಜದ ಸಂಘಟನೆಯ ಮೂಲಕ ಶೋಷಣೆಯ ವಿರುದ್ಧ ಹೋರಾಡುತ್ತಿದ್ದಾರೆ. ಸೋಲಿಗರ ಸಂಸ್ಕೃತಿಯಲ್ಲಿ ಹಲವಾರು ಬದಲಾವಣೆಯಾಗಿವೆ. ಈ ತರದ ಬದಲಾವಣೆಯನ್ನು ಅವರ ಹೆಸರು, ಉಡುಗೆ, ಆಭರಣ ಹಾಗೂ ಆಹಾರ ಕ್ರಮದಲ್ಲಿ ಸಹ ಗುರುತಿಸಬಹುದಾಗಿದೆ.

ಬುಡಕಟ್ಟುಗಳ ಸಾಮಾಜಿಕ ಬದಲಾವಣೆಯ ಕುರಿತು ಗಮನಿಸಬೇಕಾಗಿರುವ ಅಧ್ಯಯನವೆಂದರೆ, ಸುರಜಿತ ಸಿನ್ಹಾ (೧೯೪೯) ಮಾರ್ಟಿನ್ (೧೯೪೯) ಸರಕಾರದಾಸ ಗುಪ್ತ (೧೯೭೫) ಎ.ಎಸ್.ವ್ಯಾಸ್ (೧೯೯೭) ಪ್ರಶಾಂತ ಹೆಚ್.ಡಿ.(೨೦೦೨). ಈ ಎಲ್ಲಾ ಅಧ್ಯಯನದಲ್ಲಿ ಬುಡಕಟ್ಟುಗಳಲ್ಲಿ ಉಂಟಾಗುತ್ತಿರುವ ಸಾಮಾಜಿಕ ಬದಲಾವಣೆಗೆ ಆರ್ಥಿಕ ಅಂಶವೇ ಕಾರಣವೆಂದು ಗುರುತಿಸಲಾಗಿದೆ.

೨.೪. ಬುಡಕಟ್ಟು ಮಹಿಳೆಯರ ಅಧ್ಯಯನದ ಸಮೀಕ್ಷೆ

ಭಾರತದಲ್ಲಿ ಬುಡಕಟ್ಟಿನವರ ಕುರಿತು ಸಾಕಷ್ಟು ಅಧ್ಯಯನಗಳು ನಡೆದಿವೆ. ಅವೆಲ್ಲವೂ ಹೆಚ್ಚಾಗಿ ಬುಡಕಟ್ಟು ಸಂಸ್ಕೃತಿಯ ಸಾಮಾಜಿಕ ಜೀವನ, ಬುಡಕಟ್ಟು ಅಭಿವೃದ್ಧಿಯ ಮೇಲೆ ಕೇಂದ್ರೀಕೃತಗೊಂಡಿವೆ. ಆದರೆ ಅವು ಯಾವವು ಬುಡಕಟ್ಟು ಮಹಿಳೆ ಮತ್ತು ಇತರೆ ಅಂಶಗಳ ನಡುವೆ ಇರುವ ಸಂಬಂಧ ಗುರುತಿಸಿಲ್ಲ. ಬುಡಕಟ್ಟು ಮಹಿಳೆಯ ಸ್ಥಿತಿಗತಿಗಳ ಮೇಲೆ ನಡೆದಿರುವ ಅಧ್ಯಯನಗಳಲ್ಲಿ ಇಬ್ಬಗೆಯ ಅಭಿಪ್ರಾಯಗಳು ವ್ಯಕ್ತವಾಗಿರುವುದು ಕಂಡುಬಂದಿದೆ. ಬುಡಕಟ್ಟು ಸಮಾಜದಲ್ಲಿ ಮಹಿಳೆಯರು ಮಹತ್ವದ ಪಾತ್ರವನ್ನು ವಹಿಸುತ್ತಿರುವರು. ಬುಡಕಟ್ಟುಗಳಲ್ಲಿರುವ ಬಾಲ್ಯ ವಿವಾಹ ಪದ್ಧತಿ, ವಿಧವಾ ವಿವಾಹ ಪದ್ಧತಿ, ವಧುದಕ್ಷಿಣೆ, ವಿವಾಹದ ವಿಷಯದಲ್ಲಿ ಸ್ವಾತಂತ್ರ್ಯ ವಿಚ್ಛೇಧನ ಹಾಗೂ ಮರುವಿವಾಹ ಈ ಮೊದಲಾದ ಪದ್ಧತಿಯಿಂದ ಬುಡಕಟ್ಟು ಮಹಿಳೆಯರು ಉತ್ತಮ ಸ್ಥಾನದಲ್ಲಿದ್ದರೆಂದು ದಾಖಲಿಸಿರುವ ಅಧ್ಯಯನಗಳೆಂದರೆ, ಹೈವರಿನ್ ಡ್ರೋವ್ (೧೯೪೩) ಹಂಟ್ಟನ್ (೧೯೨೧) ಫರ್ತ್ (೧೯೪೬) ಹಂಟರ್(೧೯೭೩).

ಆದರೆ, ಹಲವಾರು ಅಧ್ಯಯನಗಳು ಬುಡಕಟ್ಟು ಮಹಿಳೆಯರು ಕೆಳಗಿನ ಸ್ಥಾನದಲ್ಲಿರುವುದನ್ನು ಗುರುತಿಸಿವೆ. ಈ ಅಧ್ಯಯನಗಳಲ್ಲಿ ಬಳಸಿದ ಸೂಚಿಯೆಂದರೆ ಕಡಿಮೆ ಆಸ್ತಿ ಹಕ್ಕು, ಕೂಲಿ ತಾರತಮ್ಯ ಸಮುದಾಯದಲ್ಲಿರುವ ಶುದ್ಧ ಹಾಗೂ ಅಶುದ್ಧತೆಯ ಹೆಸರಿನಲ್ಲಿರುವ ನಿಷೇಧಗಳು ಹಾಗೂ ಧಾರ್ಮಿಕ ನಿಷೇಧಗಳು ಮುಂತಾದವು. ಬುಡಕಟ್ಟು ಮಹಿಳೆಯರ ಕೆಳಗಿನ ಸ್ಥಾನವನ್ನು ವಿಶ್ಲೇಷಿಸಿರುವ ಅಧ್ಯಯನಕಾರರೆಂದರೆ, ಡಾಲ್ಟನ್ (೧೮೭೨) ರಿವರ್ಸ್

(೧೯೭೩) ಬೆಹೆರಾ (೧೯೮೬) ರಥ–ಬೆಹೆರಾ (೧೯೮೮) ಡಿ.ಸಾರಥಿ (೧೯೮೬) ಬೋರಥಿಕ (೧೯೯೭) ಭಾರತದಲ್ಲಿ ಈಗಾಗಲೇ ನಡೆದಿರುವ ಅಧ್ಯಯನಗಳ ಸಮೀಕ್ಷೆಯ ಆಧಾರದ ಮೇಲೆ ಬುಡಕಟ್ಟು ಮಹಿಳೆಯರಲ್ಲಿ ಉಂಟಾಗುತ್ತಿರುವ ಪರಿವರ್ತನೆಯನ್ನು ಅರಿಯಲು ಈ ಐದು ಸೂಚಿಗಳನ್ನು ತೆಗೆದುಕೊಳ್ಳಲಾಗಿದೆ. ಈ ಐದು ಸೂಚಿಗಳನ್ನು ಬಳಸಿಕೊಂಡು ಅಧ್ಯಯನಕಾರರು ಕಂಡುಕೊಂಡಿರುವ ಮಾಹಿತಿಯ ವಿವರಣೆಯನ್ನು ನೀಡಲಾಗಿದೆ. ಈ ಐದು ಸೂಚಿಗಳೆಂದರೆ:

೧. ಡೆಮೋಗ್ರಾಫಿ ೨. ಸಾಮಾಜಿಕ ಸಂಸ್ಥೆ ೩. ಆರ್ಥಿಕ ೪. ರಾಜಕೀಯ ೫. ಧಾರ್ಮಿಕ

೧. ಡೆಮೋಗ್ರಾಫೀ ಸೂಚಿಯನ್ನು ಅಧ್ಯಯನಕಾರರು ಲಿಂಗಾನುಪಾತ, ಕುಟುಂಬದ ಗಾತ್ರ, ವಿವಾಹದ ವಯಸ್ಸು, ಗಂಡು ಮಗುವಿನ ಅಭಿಲಾಷೆ ಮುಂತಾದವುಗಳನ್ನು ಪರಿಗಣಿಸುವರು.

೨. ಸಾಮಾಜಿಕ ಸಂಸ್ಥೆಯ ಸೂಚಿಯಲ್ಲಿ ಬುಡಕಟ್ಟು ಮಹಿಳೆಯರ ಪಾತ್ರ ಲಿಂಗತಾರತಮ್ಯ ಶಿಕ್ಷಣ, ಆರೋಗ್ಯ, ವಿವಾಹ ಪದ್ಧತಿ ಮುಂತಾದ ಅಂಶಗಳು ಒಳಗೊಂಡಿವೆ.

೩. ಆರ್ಥಿಕ ಸೂಚಿಯಲ್ಲಿ ಮಹಿಳೆಯರ ದುಡಿಮೆಯ ಸ್ವರೂಪ, ಕೂಲಿ, ಉದ್ಯೋಗದ ರಚನೆ, ಕೃಷಿ ಅರಣ್ಯ, ಆಸ್ತಿ ಹಕ್ಕು ಆರ್ಥಿಕ ಸ್ವಾತಂತ್ರ್ಯ ಮುಂತಾದ ಅಂಶಗಳನ್ನು ಒಳಗೊಂಡಿವೆ.

೪. ರಾಜಕೀಯ ಸೂಚಿಯಲ್ಲಿ ಸಾಂಪ್ರದಾಯ ಸಂಸ್ಥೆಯಲ್ಲಿ ಮಹಿಳೆಯರ ಪಾತ್ರವನ್ನು ವಿಶ್ಲೇಷಿಸಲಾಗಿದೆ.

೫. ಧಾರ್ಮಿಕ ಸೂಚಿಯಲ್ಲಿ ಮೌಲ್ಯಗಳು ಹಾಗೂ ಧಾರ್ಮಿಕ ನಿಷೇಧಗಳು ಒಳಗೊಂಡಿರುತ್ತವೆ.

೧. ಆರ್.ಸ್ವರೂಪ ರಣವೀರ್ ಸಿಂಗ್(೧೯೮) ಹಿಮಾಚಲ ಪ್ರದೇಶದ ಕಿನ್ನೂರು ಜಿಲ್ಲೆಯ ಚಿತ್ತಕುಲ ಗ್ರಾಮೀಣ ಪ್ರದೇಶದ ಬುಡಕಟ್ಟಿನವರ ಸಾಮಾಜಿಕ–ಆರ್ಥಿಕ ಜೀವನವನ್ನು ವಿಶ್ಲೇಷಿಸುವರು, ಟಿಬೇಟ್, ಭಾರತ ಗಡಿಭಾಗದಲ್ಲಿರುವ ಈ ಗ್ರಾಮದಲ್ಲಿ ಪ್ರತಿ ೧೦೦೦ ಪುರುಷರಿಗೆ ೧೦೩೭ (೧೯೮೫–೮೬) ಮಹಿಳೆಯರ ಇರುವಿಕೆಯನ್ನು ಗುರುತಿಸಲಾಗಿದೆ. ಕೃಷಿಯು ಈ ಬುಡಕಟ್ಟಿನವರು ಮುಖ್ಯ ಉದ್ಯೋಗವಾಗಿದೆ. ದುಡಿಮೆ ಎಲ್ಲಾ ಹೊರೆಯನ್ನು ಮಹಿಳೆಯರೇ ನಿರ್ವಹಿಸುತ್ತಾರೆ. ಹೀಗಾಗಿ ಮಹಿಳೆಯರ ಸಂಖ್ಯೆ ಅಧಿಕವಾಗಿರುವುದನ್ನು ಲೇಖಕರು ಗುರುತಿಸಿರುವರು.

೨. ರೇ.ಪಿ. (೧೯೯೭) ಅವರು ಒರಿಸ್ಸಾದ ಬೋರಾ ಬುಡಕಟ್ಟಿನ ಮಹಿಳೆಯ ಕುರಿತು

ಅಧ್ಯಯನ ನಡೆಸಿರುವರು. ಅಲ್ಲಿಯೂ ಕೂಡಾ ೧೯೮೧ರಲ್ಲಿ ಬುಡಕಟ್ಟು ಮಹಿಳೆಯರ ಸಂಖ್ಯೆಯು ೩೧೦೫ (೧೯೮೧) ಇರುವುದನ್ನು ಹಾಗೂ ಪುರುಷರ ಸಂಖ್ಯೆ ೨೭೦೫ ಇರುವುದನ್ನು ದಾಖಲಿಸಿರುವರು. ಈ ಬುಡಕಟ್ಟಿನವರು ವಿಶಿಷ್ಟವಾದ ವಿವಾಹ ಪದ್ಧತಿ ಅನುಸರಿಸುತ್ತಿರುವರು. ವಿವಾಹ ಸಮಯದಲ್ಲಿ ಮಹಿಳೆಯರು ಪುರುಷರಿಗಿಂತ ೧೦-೧೨ ವರ್ಷ ಹಿರಿಯರಾಗಿರುತ್ತಾರೆ. ಹುಡುಗರಿಗೆ ೭ರಿಂದ ೧೨ ವರ್ಷವಾದಾಗ ವಿವಾಹ ಮಾಡುತ್ತಾರೆ. ವಿವಾಹವನ್ನು ಮಹಿಳೆಯ ಒಪ್ಪಿಗೆ ದೊರೆತ ಮೇಲೆ ನಿರ್ಧಾರಗೊಳ್ಳುವುದನ್ನು ಗುರುತಿಸಿರುವರು.

೩. ವೀಣಾ ಬಸಿನ-ಎಂ.ಕೆ.ಬಸಿನ್ (೧೯೯೭) ತಮ್ಮ ಲೇಖನದಲ್ಲಿ ಸಮುದಾಯ ಒಂದರ ಡೆಮೋಗ್ರಾಫಿಯ ಲಕ್ಷಣವು ಮಹಿಳೆಯರ ಸ್ಥಾನದ ಮೇಲೆ ಹೇಗೆ ಪರಿಣಾಮ ಬೀರುತ್ತದೆ ಎಂಬುದನ್ನು ವಿಶ್ಲೇಷಿಸಿರುವರು. ಇವರು ಹಿಮಾಚಲ ಪ್ರದೇಶದಲ್ಲಿ ಅಧ್ಯಯನವನ್ನು ನಡೆಸಿರುವರು. ಈ ಸಮುದಾಯದವರಲ್ಲಿ ಫಲವತ್ತತೆಯು ಮಹಿಳೆ ಸ್ಥಾನ ನಿರ್ಧರಿಸುವ ಅಂಶವೆಂದು ಗುರುತಿಸಿರುವರು. ಬುಡಕಟ್ಟಿನವರ ಸಾಮಾಜಿಕ, ಆರ್ಥಿಕ ಸ್ಥಿತಿಯೇ ಹೆಚ್ಚು ಫಲವತ್ತತೆಗೆ ಕಾರಣವಾಗಿದೆ. ಶಿಕ್ಷಣ ಹಾಗೂ ಫಲವತ್ತತೆಯ ನಡುವೆ ವಿರುದ್ಧ ಸಂಬಂಧವನ್ನು ಗುರುತಿಸಿರುವರು. ಫಲವತ್ತತೆಯನ್ನು ನಿರ್ಧರಿಸುವಲ್ಲಿ ಶಿಕ್ಷಣಕ್ಕಿಂತಲೂ ಸಂಸ್ಕೃತಿಯು ಹೆಚ್ಚು ಪ್ರಭಾವಶಾಲಿಯಾಗಿದೆ. ಹೀಗಾಗಿ ಶಿಕ್ಷಣ ಪಡೆದಿರುವರಲ್ಲಿ ಕೂಡಾ ಗಂಡು ಮಗುವಿನ ಹಂಬಲ ಕಡಿಮೆಯಾಗಿಲ್ಲ. ಈ ಬುಡಕಟ್ಟು ಸಮಾಜದಲ್ಲಿ ಪುರುಷರೇ ಮಹಿಳೆಯರ ಮೇಲೆ ಪ್ರಭುತ್ವವನ್ನು ಹೊಂದಿರುವುದನ್ನು ಗುರುತಿಸಿರುವರು.

೪. ಬಸು (೨೦೦೫) ಬುಡಕಟ್ಟು ಮಹಿಳೆಯರ ಆರೋಗ್ಯವನ್ನು ವಿವಿಧ ಸೂಚಿಗಳಾದ ಲಿಂಗಾನುಪಾತ, ಮದುವೆಯ ವಯಸ್ಸು, ಫಲವತ್ತತೆ, ಜೀವಿತಾವಧಿ ಹಾಗೂ ಶಿಶುಮರಣದ ಪ್ರಮಾಣದ ಮೂಲಕ ವಿಶ್ಲೇಷಿಸುವರು. ಭಾರತದ ಸಾಮಾನ್ಯ ಜನಸಂಖ್ಯೆಯ ಲಿಂಗಾನುಪಾತವು ಅಧಿಕವಾಗಿರುವುದನ್ನು ಗುರುತಿಸಲಾಗಿದೆ. ಬುಡಕಟ್ಟಿನವರಲ್ಲಿ ಲಿಂಗಾನುಪಾತವು ೧೯೬೧ರಲ್ಲಿ ೯೮೭, ೧೯೭೧ರಲ್ಲಿ ೯೮೩, ೧೯೮೧ರಲ್ಲಿ ೯೭೭ ಇರುವುದನ್ನು ಗುರುತಿಸಲಾಗಿದೆ. ಇದರಿಂದ ಬುಡಕಟ್ಟಿನಲ್ಲಿ ಮಹಿಳೆಯರು ಕಡೆಗಣಿಸಲ್ಪಟ್ಟವರೆಂದು ಕಂಡುಬರುತ್ತದೆ. ಆದರೆ, ೧೯೮೧ ನಂತರ ಬುಡಕಟ್ಟಿನ ಲಿಂಗಾನುಪಾತದಲ್ಲಿ ಇಳಿಕೆ ಕಂಡುಬಂದಿದೆ. ಅರುಣಾಚಲ ಪ್ರದೇಶದಲ್ಲಿ ಲಿಂಗಾನುಪಾತವು ೯೯೬ ಒರಿಸ್ಸಾದ ಕೆಲವು ಬುಡಕಟ್ಟಿನ ಲಿಂಗಾನುಪಾತವು (೧೦೧೯

ಎಫ್/೧೦೦೦) ಇದೆ. ಸಂತಾಲ್ ಬುಡಕಟ್ಟಿನ ಲಿಂಗಾನುಪಾತವು (೧೦೧೯ ಎಫ್/೧೦೦೦ ಎಂ) ಇದೆ.

ಆದರೆ, ದತ್ತ (೧೯೯೦) ಅವರು ತಮ್ಮ ಅಧ್ಯಯನದಲ್ಲಿ ಕೋರಾ ಬುಡಕಟ್ಟಿನವರ ಲಿಂಗಾನುಪಾತವು ೮೮೨/೧೦೦೦ ಇರುವಿಕೆಯನ್ನು ಗುರುತಿಸಿರುವರು. ಭಾರತದ ಸಾಮಾನ್ಯ ಜನರ ಲಿಂಗಾನುಪಾತದ ಮಟ್ಟಕ್ಕಿಂತ ಕೋರಾ ಬುಡಕಟ್ಟಿನಲ್ಲಿ ಲಿಂಗಾನುಪಾತದ ಪ್ರಮಾಣವು ಕಡಿಮೆಯಿದೆ.

೫. ಸಚ್ಚಿದಾನಂದ (೧೯೯೪) ಅವರು ಬುಡಕಟ್ಟು ಮಹಿಳೆಯರ ಸಾಮಾಜಿಕ ಸ್ಥಾನವನ್ನು ಮಹಿಳೆಯರು ನಿರ್ವಹಿಸುತ್ತಿರುವ ಪಾತ್ರದಿಂದ ವಿಶ್ಲೇಷಿಸಿರುವರು. ಭಾರತದ ಬುಡಕಟ್ಟಿನಲ್ಲಿ ಪಿತೃ ಪ್ರಧಾನ ಕುಟುಂಬ ವ್ಯವಸ್ಥೆಯಿದೆ. ನಾಗಾ, ಬಿಲ್ವ, ಗೊಂಡಾ, ಸಂತಾಲ, ವೊಂಡ ಇವರು ಪಿತೃ ಪ್ರಧಾನ ಕುಟುಂಬಕ್ಕೆ ಸೇರಿದವರಾಗಿದ್ದಾರೆ. ಮೇಘಾಲಯದ ಖಾಸಿ ಹಾಗೂ ಗೋರೋ ಬುಡಕಟ್ಟಿನಲ್ಲಿ ಮಾತೃ ಪ್ರಧಾನತೆ ಕಂಡುಬರುತ್ತದೆ. ಈ ಎಲ್ಲಾ ಸಮುದಾಯದಲ್ಲಿ ಪುರುಷರು ಹಾಗೂ ಮಹಿಳೆಯರ ಪಾತ್ರವನ್ನು ಪ್ರತ್ಯೇಕಿಸಲಾಗಿದೆ. ಬುಡಕಟ್ಟಿನವರು ಅನುಸರಿಸುವ ನಿಷೇಧಗಳು ಕಂಡು ಬರುತ್ತವೆ. ತೋಡರಲ್ಲಿ ಮಹಿಳೆಯರಿಗೆ ಹೈನುಗಾರಿಕೆಯನ್ನು ನಿಷೇಧಿಸಲಾಗಿದೆ. ಕಿನ್ನುರ ಬುಡಕಟ್ಟಿನಲ್ಲಿ ಮಹಿಳೆಯರಿಗೆ ಭೂ ಉಳಿಮೆಯನ್ನು ನಿಷೇಧೀಸಲಾಗಿದೆ. ಗಡ್ಡಿ ಬುಡಕಟ್ಟಿನ ಮಹಿಳೆಯರಿಗೆ ವ್ಯಾಪಾರ ನಿಷೇಧವಿದೆ. ನಾಗಬುಡಕಟ್ಟಿನಲ್ಲಿ ಮಹಿಳೆಯರಿಗೆ ರಾಜಕೀಯ ಬೇಟೆ ಹಾಗೂ ಧಾರ್ಮಿಕ ಕಾರ್ಯದಿಂದ ನಿಷೇಧಿಸಲಾಗಿದೆ. ಸಂತಾಲ ಬುಡಕಟ್ಟಿನಲ್ಲಿ ಸಾರ್ವಜನಿಕ ಪೂಜೆಯಲ್ಲಿ ಮಹಿಳೆಯರು ಪಾಲುಗೊಳ್ಳುವಿಕೆಯನ್ನು ನಿಷೇಧಿಸಲಾಗಿದೆ.

ಕಾಶಿ ಮತ್ತು ಗೇರೊ ಬುಡಕಟ್ಟಿನಲ್ಲಿ ಮಾತೃ ಪ್ರಧಾನ ಕುಟುಂಬ ಪದ್ಧತಿಯಿದೆ. ಈ ಪದ್ಧತಿಯಲ್ಲಿ ಮಹಿಳೆಯರು ಶೇ. ೫೭೫ ಆರ್ಥಿಕ ಚಟುವಟಿಕೆಯಲ್ಲಿ ಭಾಗವಹಿಸುತ್ತಾರೆ. ಇಂತಹ ಸಮಾಜದಲ್ಲಿ ಮಹಿಳೆಯರೇ ಮಕ್ಕಳನ್ನು, ಸಹೋದರರನ್ನು, ಸಹೋದರಿಯರನ್ನು ಹಾಗೂ ಗಂಡಂದಿರನ್ನು ನೋಡಬೇಕಾಗಿರುವುದರಿಂದ ಅಧಿಕ ದುಡಿಮೆ ಮಾಡುವುದನ್ನು ಗುರುತಿಸಲಾಗಿದೆ.

ಕೈಗಾರಿಕೀಕರಣದಿಂದ ಬುಡಕಟ್ಟು ಮಹಿಳೆಯರೇ ಕೃಷಿಯನ್ನು ನೋಡಿಕೊಳ್ಳುವ ಸ್ಥಿತಿಯು ಉಂಟಾಗಿರುವುದನ್ನು ಗುರುತಿಸಿರುವರು. ಇದು ಕುಟುಂಬ ವ್ಯವಸ್ಥೆಯಲ್ಲಿನ ಬದಲಾವಣೆಗೆ ಕಾರಣವಾಗಿದೆ. ಬಿಹಾರ, ಮಧ್ಯಪ್ರದೇಶ, ಒರಿಸ್ಸಾದ ಬುಡಕಟ್ಟಿನ

ಮಹಿಳೆಯರು ಕೈಗಾರಿಕಾ ಕಾರ್ಮಿಕರಾಗಿ ದುಡಿಯಲು ಪ್ರಾರಂಭಿಸಿದ ಮೇಲೆ ನಗರ ಜೀವನಕ್ಕೆ ಆಕರ್ಷಿತರಾಗಿರುವರು. ಇದರಿಂದ ಬುಡಕಟ್ಟು ಮಹಿಳೆಯರು ಶೋಷಣೆಗೆ ಒಳಗಾಗುತ್ತಿರುವ ಬಗೆಯನ್ನು ವಿವರಿಸಿರುವರು.

ಬುಡಕಟ್ಟುಗಳು ಶಿಕ್ಷಣದ ಪ್ರಕ್ರಿಯೆಗೆ ಒಳಗಾಗುತ್ತಿರುವುದನ್ನು ಚರ್ಚಿಸಿರುವರು. ಬಿಹಾರದ ರಾಂಚಿಯಲ್ಲಿ ಮಹಿಳಾ ಸಾಕ್ಷರತೆಯ ಪ್ರಮಾಣದಲ್ಲಿ ಏರಿಕೆ ಉಂಟಾಗಿದೆ. ಶಿಕ್ಷಣ ಮಹಿಳೆಯರ ಮೇಲೆ ಉತ್ತಮ ಪರಿಣಾಮ ಉಂಟುಮಾಡಿರುವುದನ್ನು ಗುರುತಿಸಿರುವರು. ಮಾತೃ ಪ್ರಧಾನ ಕುಟುಂಬಗಳು ಶಿಕ್ಷಣದಿಂದ ಪಿತೃ ಪ್ರಧಾನ ಕುಟುಂಬಕ್ಕೆ ಕಾಲಿಡುತ್ತಿರುವುದನ್ನು ಕೂಡಾ ಗುರುತಿಸಿರುವರು. ಈ ಎಲ್ಲಾ ಬದಲಾವಣೆಗೆ ಸಾಮಾಜಿಕ ಆರ್ಥಿಕ ಒತ್ತಡವೇ ಕಾರಣವಾಗಿದೆ.

೬. ಬುಡಕಟ್ಟು ಸಮಾಜದಲ್ಲಿ ಬಹುತೇಕ ಕುಟುಂಬದಲ್ಲಿ ಹೆಚ್ಚು ಪಿತೃ ಪ್ರಧಾನತೆ ಕಂಡುಬರುವುದನ್ನು ಗುರುತಿಸಲಾಗಿದೆ. ಬುಡಕಟ್ಟು ಕುಟುಂಬಗಳು ವಿಭಕ್ತ ಕುಟುಂಬ ಪದ್ಧತಿಯನ್ನು ಅನುಸರಿಸುತ್ತಿರುವುದನ್ನು ಗುರುತಿಸಿರುವ ಅಧ್ಯಯನಗಳು ರೇಪಿ (೧೯೯೭) ಇಂದಿರಾ ಅರ್ ೧೯೯೭ ದಾಸ್ (೨೦೦೩) ಬುಡಕಟ್ಟಿನ ವಿವಾಹ ಪದ್ಧತಿಗಳು ಭಿನ್ನವಾಗಿವೆ. ಕೆಲವು ಬುಡಕಟ್ಟಿನಲ್ಲಿ ಕುಲದಲ್ಲಿ ವಿವಾಹ ನಡೆಯುವುದು ಕಂಡುಬಂದರೆ ಕೆಲವು ಬುಡಕಟ್ಟಿನಲ್ಲಿ ಕುಲದ ಹೊರಗೆ ವಿವಾಹಗಳು ನಡೆಯುವುದು ಕಂಡುಬರುತ್ತವೆ. ಬುಡಕಟ್ಟಿನಲ್ಲಿ ವಿವಾಹವು ಕಡ್ಡಾಯವಾಗಿದೆ. (ಬಸು ೧೯೮೫) ಹಿಮಾಲಯ ಪ್ರದೇಶದ ನಾಗ ಬುಡಕಟ್ಟಿನಲ್ಲಿ ಬಹುಪತ್ನಿತ್ವ ಪದ್ಧತಿಯನ್ನು ಆರ್ಥಿಕ ಕಾರಣದಿಂದ ಅನುಸರಿಸುತ್ತಿರುವರು ಎಂದು ಗುರುತಿಸಲಾಗಿದೆ. ಬಹುಪತ್ನಿತ್ವ ಪದ್ಧತಿಯನ್ನು ನೀಲಗಿರಿಯ ತೋಡರಲ್ಲಿ ಹಾಗೂ ಕಾಶಾ ಬುಡಕಟ್ಟಿನವರಲ್ಲಿ ಕಂಡುಬರುತ್ತದೆ. ಇದಕ್ಕೆ ಮಹಿಳೆಯ ಸಂಖ್ಯೆ ಕಡಿಮೆಯಿರುವುದು ಕಾರಣವೆಂದು ಗುರುತಿಸಲಾಗಿದೆ.

೭. ಬುಡಕಟ್ಟಿನಲ್ಲಿ ವಿವಾಹ ವಯಸ್ಸು ಕೂಡಾ ರಾಷ್ಟ್ರೀಯ ಮಟ್ಟಕ್ಕಿಂತ ಹೆಚ್ಚಿದೆ. ಅಸ್ಸಾಂ, ಗುಜರಾತ, ಹಿಮಾಚಲ ಪ್ರದೇಶ, ಕೇರಳ, ಮಣಿಪುರ, ಮೇಘಾಲಯ ನಾಗಲ್ಯಾಂಡ್ ಅಂಡಮಾನ್ ಮತ್ತು ನಿಕೋಬಾರ್ ಹಾಗೂ ಅರುಣಾಚಲ ಪ್ರದೇಶದಲ್ಲಿ ೧೮ ವರ್ಷಕ್ಕಿಂತ ಅಧಿಕವಾಗಿದೆ. ಆದರೆ, ರಾಜಸ್ತಾನ ಮತ್ತು ಉತ್ತರ ಪ್ರದೇಶದಲ್ಲಿ ೧೫ ವರ್ಷಕ್ಕಿಂತ ಕಡಿಮೆಯಿದೆ. ಸೂಕ್ಷ್ಮಮಟ್ಟದ ಅಧ್ಯಯನಗಳಲ್ಲಿ ಬುಡಕಟ್ಟಿನ ವಿವಾಹದ ವಯಸ್ಸನ್ನು ನೀಡಲಾಗಿದೆ. ನಾಗಾ ಬುಡಕಟ್ಟು(೧೬-೨೦ ವಯಸ್ಸು), ಬಿಲ್

ಬುಡಕಟ್ಟು(೧೬ ವರ್ಷ), ಖಾಸಿ ಬುಡಕಟ್ಟು(೧೩-೧೮ ವರ್ಷ), ಕೂಲಿ ಬುಡಕಟ್ಟು(೧೨-೧೬ ವರ್ಷ), ಬೋಂಧ ಬುಡಕಟ್ಟು(೧೯ವರ್ಷ), ಗೊಂಡಾ ಬುಡಕಟ್ಟು(೧೮ ವರ್ಷ), ಮುಂಡಾ ಬುಡಕಟ್ಟು(೧೮ವರ್ಷ) ಹಾಗೂ ಒರೆಗಾನ ಬುಡಕಟ್ಟು(೧೬ವರ್ಷ)ಗಳಲ್ಲಿ ಸಿನ್ಹಾ (೧೯೮೬) ಅವರು ಗುರುತಿಸಿರುವರು. ಉತ್ತರ ಪೂರ್ವ ಪ್ರದೇಶದ ಬುಡಕಟ್ಟಿನವರಲ್ಲಿ ವಿವಾಹದ ವಯಸ್ಸು ಹೆಚ್ಚಿರಲು ಕ್ರಿಶ್ಚಿಯನ್ನರ ಪ್ರಭಾವವೇ ಕಾರಣವೆಂದು ಗುರುತಿಸಲಗಿದೆ. ಭಾರತದ ಮಧ್ಯಪ್ರದೇಶದಲ್ಲಿ ಹಿಂದೂ ಧರ್ಮದ ಪ್ರಭಾವದಿಂದ ವಿವಾಹದ ವಯಸ್ಸು ಕಡಿಮೆಯಿರುವುದನ್ನು ಸಿನ್ಹಾ ಅವರು ಗುರುತಿಸಿರುವರು(೧೯೮೬).

೮. ಬುಡಕಟ್ಟು ಸಮಾಜದಲ್ಲಿರುವ ವಧುದಕ್ಷಿಣೆ ಪದ್ಧತಿಯಿಂದ ಮಹಿಳೆಯ ಸ್ಥಾನ ಉತ್ತಮವಾಗಿದೆ ಎಂದು ತಿಳಿಯಲಾಗಿದೆ. ವಧುದಕ್ಷಿಣೆಯನ್ನು ಪದ್ಧತಿಯನ್ನು ಬಹುತೇಕ ಎಲ್ಲಾ ಬುಡಕಟ್ಟು ಅಧ್ಯಯನಗಳಲ್ಲಿ ಗುರುತಿಸಲಾಗಿದೆ. ಆದರೆ, ಈ ಪದ್ಧತಿಗೆ ನೀಡಿರುವ ಕಾರಣದಲ್ಲಿ ಅಧ್ಯಯನಕಾರರಲ್ಲಿ ಒಮ್ಮತ ಕಂಡುಬರುವುದಿಲ್ಲ. ಕಾಮತರ (೧೯೮೦) ಬಸ್ತರ ಬುಡಕಟ್ಟಿನಲ್ಲಿ ವಧುದಕ್ಷಿಣೆ, ವಿವಾಹ ವಯಸ್ಸು ಎರಡು ಕಡೆಯವರ ಸಾಮಾಜಿಕ, ಆರ್ಥಿಕ ಸ್ಥಿತಿಯಿಂದ ನಿರ್ಧಾರಗೊಳ್ಳುತ್ತದೆ. ಬುಡಕಟ್ಟಿನವರಲ್ಲಿ ವಧುದಕ್ಷಿಣೆಯನ್ನು ವಸ್ತು ಅಥವಾ ಹಣದ ರೂಪದಲ್ಲಿ ನೀಡಬಹುದಾಗಿದೆ. ಒಂದು ವೇಳೆ ಅಳಿಯನಾಗಿರುವವನು ವಧುದಕ್ಷಿಣೆ ಕೊಡಲು ಅಶಕ್ತನಾಗಿದ್ದರೆ ಮದುವೆ ನಿಶ್ಚಯವಾಗುವ ಹಲವಾರು ವರ್ಷಕ್ಕಿಂತ ಮುಂಚಿತವಾಗಿ ಮಾವನ ಮನೆಯಲ್ಲಿ ದುಡಿಮೆ ಮಾಡಬೇಕಾಗುತ್ತದೆ(ಕಾಮತ ೧೯೮೦). ವಧುದಕ್ಷಿಣೆಯು ಬುಡಕಟ್ಟಿನಲ್ಲಿ ಸೌಂದರ್ಯಕ್ಕೆ ನೀಡುವ ಬೆಲೆ ಅಲ್ಲ. ಹೆಚ್ಚು ಬಲಿಷ್ಠ ಮಹಿಳೆಗೆ ಹೆಚ್ಚು ವಧುದಕ್ಷಿಣೆ (ಎಸ್.ಮಂಡಲ್ ಮತ್ತು ಬೇಗಂ: ೧೯೯೭) ವಧುದಕ್ಷಿಣೆ ಅವಳ ತಂದೆಗೆ ನೀಡಿದ ಪರಿಹಾರವೆಂದು ಕೂಡಾ ಗುರುತಿಸಲಾಗಿದೆ(ಗೆಜಟಿಯರ್ ೧೮೮೩). ಆದರೆ ಇತ್ತೀಚಿನ ದಿನಗಳಲ್ಲಿ ಬುಡಕಟ್ಟಿನವರಲ್ಲಿ ವಧುದಕ್ಷಿಣೆಯ ಬದಲಿಗೆ ವರದಕ್ಷಿಣೆಯ ಪದ್ಧತಿ ಕಾಣಿಸಿಕೊಂಡಿರುವುದನ್ನು ಅಧ್ಯಯನಗಳು ಗುರುತಿಸಿವೆ(ಮಿಶ್ರ: ೧೯೮೨).

೯. ಬುಡಕಟ್ಟಿನಲ್ಲಿ ಮಹಿಳೆಯರ ಸಾಮಾಜಿಕ ಸ್ಥಾನವನ್ನು ಅಳೆಯಲು ಶಿಕ್ಷಣವನ್ನು ಸೂಚಿಯಾಗಿ ಅಧ್ಯಯನಕಾರರು ಬಳಸಿಕೊಂಡಿರುವರು. ಏಕೆಂದರೆ, ಶಿಕ್ಷಣವನ್ನು ಸಾಮಾಜಿಕ ಬದಲಾವಣೆಯ ಮಹತ್ವದ ಸಾಧನವೆಂದು ಪರಿಗಣಿಸಲಾಗಿದೆ. ಬುಡಕಟ್ಟಿನವರಲ್ಲಿ ಸಾಕ್ಷರತೆಯ ಮಟ್ಟವು ಸಾಮಾನ್ಯ ಮಟ್ಟಕ್ಕಿಂತ ಕಡಿಮೆಯಿರುವುದು ಕಂಡುಬರುವುದು.

ಬುಡಕಟ್ಟು ಪುರುಷರಲ್ಲಿ ೧೯೯೧ರಲ್ಲಿ ಶೇ. ೨೭೯೩ರಷ್ಟು ಇದ್ದರೆ, ಮಹಿಳೆಯರಲ್ಲಿ ಶೇ. ೧೮.೧೯ರಷ್ಟಿದೆ. ಇಡಿ ಬುಡಕಟ್ಟಿನಲ್ಲಿ ಶಿಕ್ಷಣದ ಬಗ್ಗೆ ಒಲವು ಹೊಂದಲು ಪೂರಕವಾದ ಅಂಶಗಳೆಂದರೆ, ಆಧುನೀಕರಣ ನಗರೀಕರಣ ಹಾಗೂ ಕೈಗಾರಿಕೀಕರಣವೆಂದು ಗುರುತಿಸಲಾಗಿದೆ(ಬೋಸ್: ೧೯೭೦). ಶಿಕ್ಷಣವು ಬುಡಕಟ್ಟಿನವರ ಮೇಲೆ ಸಕಾರಾತ್ಮಕ ಪರಿಣಾಮ ಬೀರಿರುವುದನ್ನು ಗುರುತಿಸಲಾಗಿದೆ. ಆದರೆ, ಶಿಕ್ಷಣ ನೀಡುವಲ್ಲಿ ಲಿಂಗ ತಾರತಮ್ಯ ಅನುಸರಿಸುತ್ತಿರುವುದನ್ನು ಗುರುತಿಸಲಾಗಿದೆ(ಬೆಹೆರಾ-ನಂದಿತಾ: ೧೯೯೭ ಇಂದಿರಾ-ಶಾಂತಿ: ೧೯೯೭, ಮಿಶ್ರ ಎಸ್.: ೨೦೦೨ ಬೋರಥಿಕರ್: ೧೯೯೭).

ಬುಡಕಟ್ಟಿನ ಸಾಕ್ಷರತೆಯಲ್ಲಿ ಅಸಮಾನತೆಯನ್ನು ಗುರುತಿಸಲಾಗಿದೆ. (ವಿದ್ಯಾ ರಥಿ: ೧೯೮೩) ಭಾರತದ ಉತ್ತರ ಪೂರ್ವದಲ್ಲಿ ಶೇ. ೪೦ರಷ್ಟು ಸಾಕ್ಷರತೆಯಿದೆ. ಅತ್ಯಂತ ಕಡಿಮೆ ಬುಡಕಟ್ಟು ಸಾಕ್ಷರತೆಯು ಆಂಧ್ರಪ್ರದೇಶದಲ್ಲಿ ಶೇ. ೧೪.೫ರಷ್ಟಿದೆ. ಅತಿಹೆಚ್ಚು ಸಾಕ್ಷರತೆಯು ಮಿಜೋರಾಮ್‌ನಲ್ಲಿ (ಶೇ.೮೦ರಷ್ಟು) ಬುಡಕಟ್ಟು ಮಹಿಳೆಯರ ಸಾಕ್ಷರತೆಯು ಅತ್ಯಂತ ಕಡಿಮೆ ರಾಜಸ್ತಾನದಲ್ಲಿ ಶೇ.೪.೧ರಷ್ಟು ಕೇಂದ್ರಾಡಳಿತ ಪ್ರದೇಶಗಳಾದ ಲಕ್ಷದ್ವೀಪದಲ್ಲಿ ಸಾಕ್ಷರತೆ ಶೇ. ೭೯.೧ರಷ್ಟಿದೆ.

ಬುಡಕಟ್ಟಿನವರಲ್ಲಿ ಉಂಟಾಗುತ್ತಿರುವ ಸಾಮಾಜಿಕ ಬದಲಾವಣೆ ಶಿಕ್ಷಣವೇ ಕಾರಣವೆಂದು ಗುರುತಿಸಲಾಗಿದೆ(ಡಾನ್: ೨೦೦೫, ಕನವರ: ೨೦೦೬).

೧೦. ಎಂ.ಕನವರ್ (೨೦೦೩) ಅರುಣಾಚಲ ಪ್ರದೇಶದ ಬುಡಕಟ್ಟು ಮಹಿಳೆಯರ ಸಾಮಾಜಿಕ ಆರ್ಥಿಕ ಸ್ಥಿತಿಗತಿಯನ್ನು ಉಲ್ಲೇಖಿಸಿರುವರು. ಈ ಸಮಾಜದಲ್ಲಿ ಮಹಿಳೆಯರ ಸಾಮಾಜಿಕ ಸ್ಥಾನ ಉತ್ತಮವಾಗಿದೆಂದು ಗುರುತಿಸಿರುವರು. ದುಡಿಮೆಗೆ ಮಹಿಳೆಯರ ಕೊಡುಗೆ ಅಪಾರವಾಗಿದೆ. ತಾಯಿಯನ್ನು ಬುಡಕಟ್ಟಿನವರು ಸೂರ್ಯನೆಂದು ಹಾಗೂ ತಂದೆಯನ್ನು ಚಂದ್ರನೆಂದು ತಿಳಿಯುತ್ತಾರೆ. ಆದ್ದರಿಂದ ಮಹಿಳೆಯರ ಸಾಮಾಜಿಕ ಆರ್ಥಿಕ ಸ್ಥಾನಮಾನ ಉತ್ತಮವಾಗಿದೆಯೆಂದು ಗುರುತಿಸಿರುವರು.

೧೧. ಬೋರಥಿಕರ (೧೯೯೭) ಅಸ್ಸಾಂ ಮಿಷಿಂಗ್ ಬುಡಕಟ್ಟಿನ ಸಾಮಾಜಿಕ ನ್ಯಾಯ ಮತ್ತು ಬುಡಕಟ್ಟು ಮಹಿಳೆ ಕುರಿತು ವಿಶ್ಲೇಷಿಸುವರು. ಈ ಬುಡಕಟ್ಟಿನಲ್ಲಿ ಮಹಿಳೆಯರ ಸ್ಥಾನ ಕಡಿಮೆಯೆಂದು ಗುರುತಿಸಿರುವರು. ಬುಡಕಟ್ಟು ಮಹಿಳೆಯರಿಗೆ ಪಿತ್ರಾರ್ಜಿತ ಹಾಗೂ ಗಂಡನ ಆಸ್ತಿಯಲ್ಲಿ ಹಕ್ಕು ನೀಡಿಲ್ಲ. ಬುಡಕಟ್ಟಿನ ಮಹಿಳೆ ಕುಟುಂಬದ ನಿರ್ಧಾರ ತೆಗೆದುಕೊಳ್ಳುವಲ್ಲಿ ಅಂಚಿನಲ್ಲಿದ್ದಾಳೆ. ಭೂಮಿ ಮಾರುವಾಗ ಅಥವಾ ಕೊಳ್ಳುವಾಗ ಮಕ್ಕಳ ವಿವಾಹ ಸಾಮಾಜಿಕ ಮತ್ತು ಧಾರ್ಮಿಕ ಕಾರ್ಯದಲ್ಲಿ ಪುರುಷರೇ ನಿರ್ಧಾರ

ತೆಗೆದುಕೊಳ್ಳುತ್ತಾರೆ. ಈ ಸಮುದಾಯದ ಮಹಿಳೆಯರ ಶಿಕ್ಷಣ, ಉದ್ಯೋಗ, ಸಾಮಾಜಿಕ, ಧಾರ್ಮಿಕ ಹಾಗೂ ರಾಜಕೀಯ ಹಕ್ಕುಗಳನ್ನು ಕಿತ್ತುಕೊಳ್ಳಲಾಗಿದೆ. ಬುಡಕಟ್ಟಿನ ಮಹಿಳೆಯರು ಹಿಂದುಳಿಯಲು ಅವರ ಸಮಾಜದ ನಿಯಮವು ಕಠಿಣವಾಗಿದೆ. ಶಿಕ್ಷಣವು ಸಾಮಾಜಿಕ ಬದಲಾವಣೆಯ ಏಜೆಂಟ್, ಅದರಿಂದ ಶಿಕ್ಷಣದ ಮೂಲಕ ಸಾಮಾಜಿಕ ನ್ಯಾಯಕ್ಕಾಗಿ ಮಹಿಳೆಯರು ಹೋರಾಡಬೇಕಾದ ಅವಶ್ಯಕತೆಯನ್ನು ಗುರುತಿಸಿರುವರು.

ಬುಡಕಟ್ಟು ಸಮಾಜದಲ್ಲಿ ಮಹಿಳೆಯರ ಸ್ಥಿತಿಯನ್ನು ನಿರ್ಧಾರ ತೆಗೆದುಕೊಳ್ಳುವಲ್ಲಿ

ಭಾಗವಹಿಸುವಿಕೆಯಿಂದ ಅರಿಯಲಾಗಿದೆ. ಈಗಾಗಲೇ ನಡೆದಿರುವ ಹಲವಾರು ಅಧ್ಯಯನದಲ್ಲಿ ನಿರ್ಧಾರ ತೆಗೆದುಕೊಳ್ಳಲು ಮಹಿಳೆಯರು ಉತ್ತಮ ಸ್ಥಿತಿಯಲ್ಲಿರುವುದನ್ನು ಗುರುತಿಸಿವೆ. ದುಡಿಯುವ ಬುಡಕಟ್ಟು ಮಹಿಳೆಯರು ನಿರ್ಧಾರ ತೆಗೆದುಕೊಳ್ಳಲು ಉತ್ತಮ ಸ್ಥಿತಿಯಲ್ಲಿರುವುದನ್ನು ದೆಹೇರಾನಂದಾ (೧೯೯೭) ಗುರುತಿಸಿರುವರು. ಅವರು ಅಸ್ಸಾಂದ ಬುಡಕಟ್ಟು ಮಹಿಳೆಯನ್ನು ವಿಶ್ಲೇಷಿರುವರು. ಯು.ಎಂ.ರಾವ್ (೨೦೦೩) ನಿರ್ಧಾರ ತೆಗೆದುಕೊಳ್ಳುವಲ್ಲಿ ಉತ್ತಮ ಸ್ಥಿತಿಗತಿಯನ್ನು ಗುರುತಿಸುವರು. ಆದರೆ ಅಧ್ಯಯನಕಾರರಾದ ಡೋರಥಿಕರ್ (೧೯೯೭) ಹಾಗೂ ಮೆನನ್ (೧೯೮೭) ನಿರ್ಧಾರ ತೆಗೆದುಕೊಳ್ಳುವಲ್ಲಿ ಮಹಿಳೆಯರು ಪ್ರತಿಕೂಲ ಸ್ಥಿತಿಯಲ್ಲಿರುವುದನ್ನು ಗುರುತಿಸಿರುವರು. ಬುಡಕಟ್ಟು ಸಮುದಾಯದಲ್ಲಿ ಮಹಿಳೆಯರ ಸ್ಥಿತಿಯನ್ನು ಅರಿಯಲು ಲಿಂಗ ಸಂವೇದಿ ಸೂಚಿಯನ್ನು ಬಳಸಲಾಗಿದೆ. ಲಿಂಗ ತಾರತಮ್ಯವನ್ನು ಬುಡಕಟ್ಟು ಸಮುದಾಯದಲ್ಲಿ ಗುರುತಿಸಲಾಗಿದೆ. ಲಿಂಗತಾರತಮ್ಯವು ಶ್ರಮ ವಿಭಜನೆ, ಶಿಕ್ಷಣ, ದುಡಿಮೆ, ಸಂಸ್ಕೃತಿ ಹಾಗೂ ರಾಜಕೀಯ ನೆಲೆಯಲ್ಲಿ ಕಂಡುಬಂದಿವೆ. ಸಚ್ಚಿದಾನಂದ (೧೯೯೪) ಅವರು ಕಾಶಾ ಬುಡಕಟ್ಟನ್ನು ಲಿಂಗತಾರತಮ್ಯವು ಹುಟ್ಟಿನಿಂದಲೇ ಪ್ರಾರಂಭವಾಗುವುದನ್ನು ಗುರುತಿಸಲಾಗಿದೆ. ಕಾಶಾ ಬುಡಕಟ್ಟಿನವರು ಗಂಡು ಮಗುವನ್ನು ವರ ಹಾಗೂ ಹೆಣ್ಣು ಮಗುವನ್ನು ಶಾಪವೆಂದು ಬಗೆಯುವರು. ಈ ಬುಡಕಟ್ಟಿನಲ್ಲಿ ಗಂಡು ಮಗುವಿನ ಜನನವನ್ನು ಸಂಭ್ರಮದಿಂದ ಆಚರಿಸಲಾಗುತ್ತದೆ. ಕುಟುಂಬದ ಸಮೃದ್ಧಿಯು ಸಹೋದರರ ಸಂಖ್ಯೆಯನ್ನು ಅವಲಂಬಿಸಿದೆ ಎಂದು ನಂಬಲಾಗಿದೆ. ಆದರೆ, ಬಸ್ತರ ಬುಡಕಟ್ಟಿನಲ್ಲಿ ಗಂಡು ಮಗುವಿನ ಜನನವು ಸಂತೋಷಕ್ಕೆ ಕಾರಣವಾಗಿರುವುದನ್ನು ಕಾಮತ (೧೯೮೦) ಗುರುತಿಸುವರು. ಗಂಡು ಮಗು ಹಾಗೂ ಹೆಣ್ಣು ಮಗುವನ್ನು ಇವರು ಸಮಾನವಾಗಿ ಕಾಣುತ್ತಾರೆ. ಆದರೆ ಹಾಲಕ್ಕಿ ಬುಡಕಟ್ಟಿನಲ್ಲಿ

ಗಂಡು ಮಗು ಜನಿಸಿದಾಗ ಸೂಲಗಿತ್ತಿಗೆ ಎಂಟು ಆಣೆ ಹಾಗೂ ಹೆಣ್ಣು ಮಗು ಜನಿಸಿದರೆ ನಾಲ್ಕು ಆಣೆ ನೀಡುತ್ತಿದ್ದರು(ಗೆಜಟಿಯರ್: ೧೮೮೩). ಅಸ್ಸಾಂ ಮೇರೆಗೆ ಮಹಿಳೆಯರಿಗೆ ಧಾರ್ಮಿಕ ರಾಜಕೀಯ ಹಕ್ಕು ನೀಡದೇ ಇರುವುದನ್ನು ಗುರುತಿಸಲಾಗಿದೆ(ಬೋರಥಿಕರ: ೧೯೯೭). ಬುಡಕಟ್ಟು ಸಾಮಾಜಿಕ ರಚನೆಯಲ್ಲಿ ಕಾನೂನಿಗಿಂತ ಸಂಪ್ರದಾಯವೇ ಹೆಚ್ಚು ಪ್ರಭಾವಶಾಲಿಯಾಗಿದೆ. ಬುಡಕಟ್ಟುಗಳಲ್ಲಿ ಶಿಕ್ಷಣ, ಆರೋಗ್ಯ, ಸಂಪ್ರದಾಯ, ಆಸ್ತಿಹಕ್ಕು ಹಾಗೂ ಸಾಂಪ್ರದಾಯಿಕ ಸಂಸ್ಥೆಯಲ್ಲಿ, ಎಲ್ಲದರಲ್ಲಿಯೂ ಲಿಂಗ ತಾರತಮ್ಯವು ಕಂಡುಬಂದುದರಿಂದ ಮಹಿಳೆಯ ಸ್ಥಾನ ಕೆಳಗಿನದು ಎಂದು ಗುರುತಿಸಬಹುದಾಗಿದೆ.

೧೨. ಶಿಮೇರಿ (೨೦೦೪) ಅವರು ನಾಗ ಬುಡಕಟ್ಟಿನಲ್ಲಿರುವ ಲಿಂಗತಾರತಮ್ಯವನ್ನು ವಿಶ್ಲೇಷಿಸಿರುವರು. ನಾಗಾ ಬುಡಕಟ್ಟಿನಲ್ಲಿ ಪಿತೃ ಪ್ರಧಾನ ಕುಟುಂಬ ವ್ಯವಸ್ಥೆಯಲ್ಲಿ ಲಿಂಗಾಧಾರಿತ ಶ್ರಮ ವಿಭಜನೆಯನ್ನು ಒಳಗೊಂಡಿದೆ. ಇದರಿಂದಾಗಿ ನಾಗಾಬುಡಕಟ್ಟಿನ ಮಹಿಳೆಯರ ಮನೆಯ ಒಳಗೆ ಹಾಗೂ ಹೊರಗೆ ಅಧಿಕ ದುಡಿಮೆ ನಿರ್ವಹಿಸುತ್ತಿರುವುದನ್ನು ಲೇಖಕರು ಕೋಷ್ಟಕದ ಮೂಲಕ ವಿವರಿಸಿರುವರು. ಈ ಕೋಷ್ಟಕದ ಪ್ರಕಾರ ಮಹಿಳೆಯರು ಅಧಿಕ ದುಡಿದು ಮಾಡುವುದನ್ನು ದಾಖಲಿಸಿರುವರು.

ಆರ್.ಇಂದಿರಾ, ಶಾಂತಿ (೧೯೯೭) ಅವರು ಕರ್ನಾಟಕದ ಜೇನು ಕುರುಬ ಬುಡಕಟ್ಟಿನಲ್ಲಿ ಲಿಂಗ ಸಂಬಂಧಿ ಆಯಾಮಗಳನ್ನು ವಿಶ್ಲೇಷಿಸಿದ್ದಾರೆ. ಇತ್ತೀಚಿನ ದಿನಗಳಲ್ಲಿ ಈ ಬುಡಕಟ್ಟಿನವರಲ್ಲಿ ಪುರುಷ ಪ್ರಧಾನ್ಯತೆ ಹೆಚ್ಚುತ್ತಿರುವುದನ್ನು ಗಮನಿಸಲಾಗಿದೆ. ಆದುದರಿಂದ ಬುಡಕಟ್ಟಿನ ಪುರುಷ ಹಾಗೂ ಮಹಿಳೆಯರ ನಡುವೆ ಅಸಮಾನತೆ ಬೆಳೆಯುತ್ತಿರುವುದನ್ನು ಗುರುತಿಸಲಾಗಿದೆ.

೧೩. ಸೇನ್ ಮುರ್ಖಜಿ (೧೯೮೨) ಅವರು ತಮ್ಮ ಅಧ್ಯಯನದಲ್ಲಿ, ಕೃಷಿಯು ಬುಡಕಟ್ಟಿನವರ ಮುಖ್ಯ ಉದ್ಯೋಗವಾಗಿದ್ದು, ಶೇ.೯೦ರಷ್ಟು ಬುಡಕಟ್ಟಿನವರು ಕೃಷಿಯಲ್ಲಿಯೇ ತೊಡಗಿಕೊಂಡಿರುವುದನ್ನು ಗುರುತಿಸಿರುವರು. ಬುಡಕಟ್ಟು ಮಹಿಳೆಯರು ಕೃಷಿಯಲ್ಲಿ ಪುರುಷರಿಗೆ ಸಮವಾಗಿ ದುಡಿಮೆ ಮಾಡಿ ಕಡಿಮೆ ಕೂಲಿಯನ್ನು ಪಡೆಯುತ್ತಿರುವುದನ್ನು ಗುರುತಿಸಲಾಗಿದೆ(ಗೆಜಟಿಯರ್: ೧೮೮೩). ಕೈಗಾರಿಕೀಕರಣವು ಬುಡಕಟ್ಟು ಮಹಿಳೆಯರ ಮೇಲೆ ಪ್ರತಿಕೂಲ ಪರಿಣಾಮ ಬೀರಿದೆ. ಇದರಿಂದಾಗಿ ಬುಡಕಟ್ಟಿನವರ ಉದ್ಯೋಗದ ರಚನೆಯಲ್ಲಿ ಬದಲಾವಣೆ ಉಂಟಾಗಿದೆ(ಸಚ್ಚಿದಾನಂದ ೧೯೯೪). ಕೈಗಾರಿಕೀಕರಣದಿಂದ ಬುಡಕಟ್ಟಿನಲ್ಲಿ ಕೃಷಿಯು ಮಹಿಳಾಕರಣಗೊಳ್ಳುತ್ತಿರುವುದನ್ನು ಗುರುತಿಸಲಾಗಿದೆ(ದಾಸಗುಪ್ತ, ಕೆ.ಎಸ್.ಸಿಂಗ್: ೧೯೯೪).

೧೪. ಚೌಧರಿ (೧೯೮೭) ಅವರು ತಮ್ಮ ಲೇಖನದಲ್ಲಿ ಬುಡಕಟ್ಟು ಮಹಿಳೆ ಹಾಗೂ ಅರಣ್ಯದ ಸಂಬಂಧವನ್ನು ವಿಶ್ಲೇಷಿಸಿರುವರು. ಸರ್ಕಾರದ ಅರಣ್ಯ ಕಾರ್ಯಕ್ರಮಗಳು ಬಹುತೇಕ ಅಂತಾರಾಷ್ಟ್ರೀಯ ಏಜೆನ್ಸಿಯ ನಿಧಿಯಿಂದಲೇ ನಡೆಯುತ್ತಿವೆ. ಹೀಗಾಗಿ ಸರ್ಕಾರದ ಅರಣ್ಯ ನೀತಿಯೂ ಸಹ ಅವರ ಪರವಾಗಿರುತ್ತದೆ. ಅಥವಾ ಕೈಗಾರಿಕಾ ವಲಯದ ಆಸಕ್ತಿಯನ್ನು ಕಾಪಾಡಿಕೊಂಡು ಬರಲಾಗಿದೆ. ಇದು ಅರಣ್ಯದ ಶೋಷಣೆಗೆ ಎಡೆಮಾಡಿದೆ. ಬುಡಕಟ್ಟಿನವರಿಗೆ ಅರಣ್ಯವೇ ಜೀವನಾಧಾರವಾಗಿದೆ. ಅರಣ್ಯ ಕಾಯಿದೆಯಿಂದ ಬುಡಕಟ್ಟಿನವರು ಅರಣ್ಯದ ಉತ್ಪನ್ನವನ್ನು ಪಡೆಯುವಲ್ಲಿ ಸಂಕಷ್ಟ ಎದುರಿಸುತ್ತಿರುವರು. ಆದ್ದರಿಂದ ಬುಡಕಟ್ಟುಗಳು ಕಳೆದುಕೊಂಡ ನಿಯಂತ್ರಣವನ್ನು ಅರಣ್ಯ ಸಂಪನ್ಮೂಲದ ಮೇಲೆ ಮನಃ ಸ್ಥಾಪಿಸಲು ಸ್ವಾಯತ್ತತೆ ಹಾಗೂ ಪ್ರತ್ಯೇಕ ರಾಜ್ಯಕ್ಕಾಗಿ ಒತ್ತಾಯಿಸುತ್ತಿರುವುದನ್ನು ಲೇಖಕರು ಗುರುತಿಸಿರುವರು. ಸರ್ಕಾರ ಸೂಕ್ತವಾದ ನೀತಿಯೊಂದನ್ನು ರೂಪಿಸಿ ಇಬ್ಬರ ಆಸಕ್ತಿಯನ್ನು ಕಾಯ್ದುಕೊಳ್ಳಬೇಕು ಎಂದು ಲೇಖಕರು ಅಭಿಪ್ರಾಯಪಟ್ಟಿದ್ದಾರೆ.

೧೫. ಅತುಲ್ ಬೋಮಿಕ (೧೯೯೭) ಅವರು ಅರಣ್ಯವನ್ನು ಬುಡಕಟ್ಟು ದೃಷ್ಟಿಕೋನದಿಂದ ವಿಶ್ಲೇಷಿಸಿರುವರು. ಬುಡಕಟ್ಟುಗಳು ಅರಣ್ಯದೊಂದಿಗೆ ಹೊಂದಿರುವ ನಿಕಟವಾದ ಸಂಬಂಧವಿದೆ. ಅವರ ಸಾಮಾಜಿಕ ಆರ್ಥಿಕ ಹಾಗೂ ಸಾಂಸ್ಕೃತಿಕ ಜೀವನವೂ ಅರಣ್ಯದಿಂದಲೇ ನಿಯಂತ್ರಿಸಲ್ಪಟ್ಟಿದೆ. ಸರ್ಕಾರದ ಅರಣ್ಯ ನೀತಿ ಬುಡಕಟ್ಟಿನವರ ಮೇಲೆ ನಕಾರಾತ್ಮಕ ಪರಿಣಾಮ ಉಂಟು ಮಾಡಿರುವುದನ್ನು ಲೇಖಕರು ಗುರುತಿಸಿರುವರು.

೧೬. ಭಾರತ ಸರ್ಕಾರದ ಅಭಿವೃದ್ಧಿ ಕಾರ್ಯಕ್ರಮದಿಂದ ಅರಣ್ಯನಾಶ ಹಾಗೂ ಬುಡಕಟ್ಟುಗಳ ಮನರ್‌ವಸತಿ ಸಮಸ್ಯೆ ಉಂಟಾಯಿತು. ಇಂತಹ ಸಮಸ್ಯೆ ವಿಶೇಷವಾಗಿ ಬುಡಕಟ್ಟಿನ ಮಹಿಳೆಯ ಮೇಲೆ ಪ್ರತಿಕೂಲ ಪರಿಣಾಮ ಬೀರಿದೆ. ಇದರಿಂದ ಬುಡಕಟ್ಟು ಮಹಿಳೆಯರ ಜೀವನಾಧಾರಕ್ಕೆ ಧಕ್ಕೆಯಾಯಿತು(ಬೋಮಿಕ: ೧೯೯೭, ಬರಿಕ: ೨೦೦೬, ಫರ್ನಾಡಿಂಸ್: ೨೦೦೬, ಸರ್ಕಾರ: ೨೦೦೬, ಶರಣ: ೨೦೦೬, ರಥ: ೨೦೦೫). ಬುಡಕಟ್ಟಿನ ಮನರ್‌ವಸತಿ ಸಮಸ್ಯೆಯ ಬುಡಕಟ್ಟು ಮಹಿಳೆಯ ಸಾಮಾಜಿಕ ಆರ್ಥಿಕ ಜೀವನವನ್ನೇ ಅಸ್ತವ್ಯಸ್ತಗೊಳಿಸಿದುದನ್ನು ಗುರುತಿಸಿರುವರು. ಬುಡಕಟ್ಟುಗಳಿಗೆ ಮನರ್‌ವಸತಿ ಒದಗಿಸುವಾಗ ಮರುಷರಿಗೆ ಉದ್ಯೋಗ ನೀಡಲಾಯಿತು. ಇದರಿಂದ ಮಹಿಳೆಯರ ನಿರ್ಧಾರ ತೆಗೆದುಕೊಳ್ಳವಲ್ಲಿ ಪಾಲ್ಗೊಳ್ಳುವಿಕೆಯು ಕಡಿಮೆಯಾಯಿತು. ಬುಡಕಟ್ಟು ಮಹಿಳೆಯರ ಆರ್ಥಿಕ ಶಕ್ತಿಯೇ ಕಡಿಮೆಯಾಯಿತು. ಬುಡಕಟ್ಟು ಮಹಿಳೆಯರು ದುಡಿಮೆಯಲ್ಲಿ ಪಾಲ್ಗೊಳ್ಳುವಿಕೆಯ ಪ್ರಮಾಣದಲ್ಲಿ ಇಳಿಕೆಯಾಗಿದೆ.

೧೭. ಕೈಗಾರಿಕೀಕರಣದಿಂದ ಬುಡಕಟ್ಟಿನ ಸಾಮಾಜಿಕ, ಆರ್ಥಿಕ ವ್ಯವಸ್ಥೆಯಲ್ಲಿ ಬದಲಾವಣೆಯನ್ನು ಗುರುತಿಸಿರುವ ಅಧ್ಯಯನಗಳು ಹಲವಾರು(ಗುಪ್ತ-೧೯೮೨, ಮಾರ್ಟಿನ್-೧೯೮೮). ಕೈಗಾರಿಕಾ ಪ್ರಕ್ರಿಯೆಯಿಂದ ಬುಡಕಟ್ಟಿನ ಸಾಮಾಜಿಕ ರಚನೆಯಲ್ಲಿ ಬದಲಾವಣೆ ಉಂಟಾಗಿದೆ. ಮೊದಲು ಬುಡಕಟ್ಟಿನ ಕುಟುಂಬ ವ್ಯವಸ್ಥೆಯಲ್ಲಿ ಬದಲಾವಣೆ ಉಂಟಾಗಿದೆ. ನಂತರ ಕೃಷಿಯನ್ನು ಮಹಿಳಾಕರಣಗೊಳಿಸಲಾಯಿತು. ಇದರಿಂದಾಗಿ ಪುರುಷರು ಮತ್ತು ಮಹಿಳೆಯರ ನಡುವೆ ಅಸಮಾನತೆ ಉಂಟಾಯಿತು. ಇದೇ ತರಹದ ಬದಲಾವಣೆಯನ್ನು ಅವರು ಗುರುತಿಸಿರುವರು(ಸಾವರ: ೧೯೮೨).

೧೮. ಕೆಲ್ಕರ-ಗೋವಿಂದಾ, ಸಾಧಿನದೇವ (at/in) ಅವರು ಜಾರ್‌ಖಂಡದಲ್ಲಿ ಬುಡಕಟ್ಟುಗಳ ಅಧ್ಯಯನದಲ್ಲಿ ಅರಣ್ಯನಾಶ ಹಾಗೂ ಸ್ಥಳಾಂತರದಿಂದ ಮಹಿಳೆಯರ ಸ್ಥಾನ ಅಧಃಪತನ ಗೊಳ್ಳುವಿಕೆಯನ್ನು ವಿಶ್ಲೇಷಿಸುವರು. ಬುಡಕಟ್ಟಿನವರು ಕೃಷಿ ಪದ್ಧತಿ, ಆಹಾರ ಉತ್ಪಾದನೆ ಹಾಗೂ ಸಮಾಜದ ಭೂಮಿ ಪದ್ಧತಿಯ ಕುರಿತು ವಿವರಿಸಿರುವರು. ವಸಾಹತುಶಾಹಿ ಆಡಳಿತ ಹಾಗೂ ಅಭಿವೃದ್ಧಿ ಕಾರ್ಯಕ್ರಮವು ಮಹಿಳೆಯರ ಭೂಹಕ್ಕು ಮತ್ತು ಶ್ರಮದ ಮಾರುಕಟ್ಟೆ ಪ್ರವೇಶವನ್ನು ತಡೆಯುವ ಪದ್ಧತಿಗಳಾಗಿವೆ. ಬುಡಕಟ್ಟು ಅರಣ್ಯ ಅರ್ಥವ್ಯವಸ್ಥೆಯಲ್ಲಿ ಮಹಿಳೆಯರ ಐತಿಹಾಸಿಕ ಪಾತ್ರವನ್ನು ಕಡೆಗಣಿಸಲಾಗಿದೆ. ಬಂಡವಾಳಶಾಹಿ ಅರ್ಥವ್ಯವಸ್ಥೆಯು ಅರಣ್ಯ ನಾಶಕ್ಕೆ ಕಾರಣವಾಯಿತು. ಆದರೆ, ಅರಣ್ಯ ಸಂರಕ್ಷಣೆ ಪರಿಕಲ್ಪನೆಯು ಅರಣ್ಯ ನಾಶವನ್ನು ತಡೆಯುವಲ್ಲಿ ಏನನ್ನು ಮಾಡಲು ಸಾಧ್ಯವಾಗಿಲ್ಲ ಎಂದು ಲೇಖಕರು ಗುರುತಿಸಿರುವರು. ಆದ್ದರಿಂದ ಅರಣ್ಯದ ನಿರ್ವಹಣೆಯಲ್ಲಿ ಸಾಮೂಹಿಕ ಒಡೆತನ ಅವಶ್ಯಕವಾಗಿದೆ ಎಂಬುದು ಲೇಖಕರ ಅಭಿಪ್ರಾಯವಾಗಿದೆ.

049234

೧೯. ಫರ್ನಾಂಡಿಸ್ ವಾಲ್ಟರ್, ಮೆನನ್ ಮತ್ತು ಗೀತಾ (at/in) ಅವರು ಬುಡಕಟ್ಟು ಅರಣ್ಯ ವ್ಯವಸ್ಥೆಯಲ್ಲಿ ಮಹಿಳೆಯರ ಪಾತ್ರವನ್ನು ವಿಶ್ಲೇಷಿಸಲಾಗಿದೆ. ಕೈಗಾರಿಕೀಕರಣದಿಂದ ಅರಣ್ಯ ನಾಶವು, ವಿಶೇಷವಾಗಿ ಬುಡಕಟ್ಟು ಮಹಿಳೆಯ ಜೀವನದಲ್ಲಿ ಹೇಗೆ ದುಃಸ್ಥಿತಿ ಉಂಟಾಯಿತು ಎಂಬುದನ್ನು ಚರ್ಚಿಸಲಾಗಿದೆ. ಅರಣ್ಯ ನಾಶದಿಂದ ಬುಡಕಟ್ಟು ಮಹಿಳೆಯರ ಅಧಿಕ ದುಡಿಮೆ ಹೊರೆ ಹೊರಬೇಕಾಗಿದೆ. ಗಿಡಮೂಲಿಕೆಗಳ ಕೊರತೆಯು ಆರೋಗ್ಯದ ಮೇಲೆ ಪರಿಣಾಮ ಬೀರಿದೆ. ಮಾರುಕಟ್ಟೆ ಅರ್ಥವ್ಯವಸ್ಥೆಯು ಭೂಮಿಯ ಮೇಲಿನ ಮಹಿಳೆಯರ ನಿಯಂತ್ರಣ ತಪ್ಪಿ, ಸರಕಾರ ಹಾಗೂ ಕಂಪನಿಗಳ ಕೈಗೆ ವರ್ಗಾಯಿಸಲ್ಪಟ್ಟಿದೆ. ಆದ್ದರಿಂದ ಅರಣ್ಯದ ಸಂರಕ್ಷಣೆಗೆ ಸಾಮಾಜಿಕ ಅರಣ್ಯವನ್ನು

ಬೆಳೆಸುವುದರಿಂದ ತಳಮಟ್ಟದಲ್ಲಿ ಅರಣ್ಯ ಹಾಗೂ ಬುಡಕಟ್ಟುಗಳನ್ನು ಸಂರಕ್ಷಣೆ ಮಾಡುವುದನ್ನು ಲೇಖಕರು ಗುರುತಿಸಿರುವರು.

೨೦. ದಾಸಗುಪ್ತ–ಸುಪ್ರಿಯಾ (al/at in) ಅವರು ಬುಡಕಟ್ಟು ಮಹಿಳೆಯರ ಅರಣ್ಯ ಸಂಬಂಧವನ್ನು ವಿಶ್ಲೇಷಿಸುವರು. ಬುಡಕಟ್ಟಿನವರು ಪ್ರಾಥಮಿಕವಾಗಿ ಅರಣ್ಯ ಅರ್ಥವ್ಯವಸ್ಥೆ. ಆದ್ದರಿಂದ ಮಹಿಳೆಯು ನೇರವಾಗಿ ಶೋಷಣೆಗೆ ಒಳಗಾಗಿರುವರು. ಅರಣ್ಯದ ಧಾರ್ಮಿಕ ಮಹತ್ವ ಹಾಗೂ ಅರಣ್ಯ ಸಂರಕ್ಷಣೆಯ ನಡುವಿನ ಸಂಬಂಧವನ್ನು ವಿಶ್ಲೇಷಿಸುವರು. ಈ ವ್ಯವಸ್ಥೆಯ ಅಧಃಪತನದಿಂದ ಮಹಿಳೆಯರ ದುಡಿಮೆಯಲ್ಲಿ ಹೆಚ್ಚಳ, ಆರೋಗ್ಯದ ಸಮಸ್ಯೆ, ಪರಿಸರದ ನಾಶ ಹಾಗೂ ಸ್ಥಳೀಯರ ಸ್ಥಳಾಂತರದ ಸಮಸ್ಯೆ ಉಂಟಾಯಿತು. ಬುಡಕಟ್ಟು ಮಹಿಳೆಯರು ಪುನಃ ಅರಣ್ಯ ಭೂಮಿಯ ಮೇಲೆ ನಿಯಂತ್ರಣ ಹೊಂದಲು ಸ್ಥಳೀಯ ಸಮುದಾಯದ ಸಂಘಟನೆಯು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಬೇಕೆಂದು ಲೇಖಕರು ಸೂಚಿಸಿರುವರು.

೨೧. ಬುಡಕಟ್ಟಿನವರ ಸಾಂಪ್ರದಾಯ ರಚನೆಯಲ್ಲಿ ಮಹಿಳೆಯರು ಯಾವುದೇ ಪದಾಧಿಕಾರವನ್ನು ಹೊಂದದೇ ಇರುವುದನ್ನು ಅಧ್ಯಯನಗಳಲ್ಲಿ ಗುರುತಿಸಲಾಗಿದೆ. ಪುರುಷ ಪ್ರಧಾನ ಸಮಾಜದಲ್ಲಿ ಸಾಂಪ್ರದಾಯಿಕ ಸಂಘಟನೆಯಲ್ಲಿ ಮಹಿಳೆಯರ ಪ್ರವೇಶವನ್ನು ನಿಷೇಧಿಸಿರುವುದನ್ನು ಸಾಮಾನ್ಯವಾಗಿ ಎಲ್ಲಾ ಅಧ್ಯಯನಗಳಲ್ಲಿ ಗುರುತಿಸಲಾಗಿದೆ(ದೀಪ ಕುಮಾರ–ರಾಮಚಂದ್ರ: ೧೯೮೬, ಗಂಗಾಧರ–ಪದ್ಮಾವತಿ: ೧೯೮೬). ಅಸ್ಸಾಂನಲ್ಲಿ ಮಹಿಳೆಯರ ರಾಜಕೀಯ ಹಕ್ಕನ್ನು ಕಿತ್ತುಕೊಳ್ಳಲಾಗಿದೆ. (ಬೋರಥಿಕರ: ೧೯೯೭) ಆದರೆ ಇತ್ತೀಚಿನ ಅಧ್ಯಯನಗಳಲ್ಲಿ ಬುಡಕಟ್ಟು ಮಹಿಳೆಯರಲ್ಲಿ ರಾಜಕೀಯ ಅರಿವು ಉಂಟಾಗುತ್ತಿರುವುದನ್ನು ಗುರುತಿಸಲಾಗಿದೆ(ರಥ್: ೨೦೦೬, ಬೆಹರಾ: ೧೯೯೭, ನಂದಾ: ೧೯೯೭, ಸರಕಾರು: ೨೦೦೬, ಜೋನ್: ೨೦೦೬).

೨೨. ಈ ನಮ್ಮ ಅಧ್ಯಯನದ ಸಮೀಕ್ಷೆಯಲ್ಲಿ ಧಾರ್ಮಿಕ ಅಂಶಗಳನ್ನು ಕೊನೆಯ ಸೂಚಿಯಾಗಿ ಬಳಸಲಾಗಿದೆ. ಒಂದು ಸಮಯದಲ್ಲಿ ಮಹಿಳೆಯರ ಪಾತ್ರ ಮತ್ತು ಕಾರ್ಯವನ್ನು ಧರ್ಮವೇ ನಿರ್ದೇಶಿಸುತ್ತದೆ. ಸಮುದಾಯದ ಮೌಲ್ಯಗಳು, ಸಮುದಾಯದ ವ್ಯಕ್ತಿಯ ನಡತೆಯ ಮೇಲೆ ಪ್ರಭಾವವನ್ನು ಬೀರುವ ಅಂಶವಾಗಿರುತ್ತದೆ. ಬುಡಕಟ್ಟಿನ ಸಾಂಸ್ಕೃತಿಕ ಮೌಲ್ಯವು ಮಹಿಳೆಯರನ್ನು ಶುದ್ಧ ಮತ್ತು ಅಶುದ್ಧದ ಕಲ್ಪನೆಯಿಂದ ನೋಡಲಾಗಿದೆ(ಕೆ.ಮೆನನ್: ೧೯೮೭). ಕೆಲವು ಬುಡಕಟ್ಟಿನಲ್ಲಿ ತಮ್ಮ ಪೂರ್ವಜರನ್ನು ಪೂಜಿಸುವಾಗ ಮಹಿಳೆಯು ಭಾಗವಹಿಸಲು ಅವಕಾಶವಿಲ್ಲ(ಸತ್ಯನಾರಾಯಣ ಮತ್ತು

ಬೆಹೂ: ೧೯೮೬). ಸಂತಾಲರಲ್ಲಿ ಮಹಿಳೆಯರಿಗೆ ಸಾರ್ವಜನಿಕ ಪೂಜೆಯಲ್ಲಿ ಪಾಲ್ಗೊಳ್ಳಲು ಅವಕಾಶವಿಲ್ಲ. ಬುಡಕಟ್ಟಿನ ಹಲವಾರು ಅಧ್ಯಯನದಲ್ಲಿ ಮಹಿಳೆಯ ಮೇಲಿನ ಧಾರ್ಮಿಕ ನಿಷೇಧವನ್ನು ಗುರುತಿಸಲಾಗಿದೆ. (ಬೋರಥಿಕರ: ೧೯೯೭) ಬುಡಕಟ್ಟಿನಲ್ಲಿ ಪುರುಷರೇ ಧಾರ್ಮಿಕ ಪ್ರಭುತ್ವವನ್ನು ಹೊಂದಿರುವುದನ್ನು ಗುರುತಿಸಲಾಗಿದೆ(ದೀಪಕ್ ಕುಮಾರ ಮತ್ತು ರಾಮಚಂದ್ರ: ೧೯೮೬, ಗಂಗಾಧರ-ಪದ್ಮಾವತಿ: ೧೯೮೬).

ಹೆಚ್.ಕೆ.ಭಟ್ಟ (೧೯೮೭) ಅವರು ತಮ್ಮ ಅಧ್ಯಯನದಲ್ಲಿ ಕರ್ನಾಟಕದ ಸೋಲಿಗರ ಸಾಂಸ್ಕೃತಿಕ ಆಚರಣೆ ಬದಲಾವಣೆ ಉಂಟಾಗುತ್ತಿರುವುದನ್ನು ಗುರುತಿಸಿರುವರು. ಇಂತಹ ಸಾಂಸ್ಕೃತಿಕ ಬದಲಾವಣೆಯನ್ನು ಸೋಲಿಗರ ಉಡಿಗೆ, ತೊಡುಗೆ, ಆಹಾರ, ಹೆಸರು ಹಾಗೂ ಆಭರಣಗಳಲ್ಲಿ ಗುರುತಿಸಿರುವರು.

ಅಧ್ಯಾಯ ೩

ಅಧ್ಯಯನ ಕ್ಷೇತ್ರ

೩.೧. ಚಾರಿತ್ರಿಕ ಹಿನ್ನೆಲೆ

೩.೨. ಪ್ರಾಕೃತಿಕ ಸಂಪನ್ಮೂಲಗಳು ಮತ್ತು ಹವಾಮಾನ

೩.೩. ಭೌಗೋಳಿಕ ಅಂಶಗಳು

೩.೪. ಕೃಷಿ ಮತ್ತು ಸಾಗುವಳಿ ಪದ್ಧತಿ

೩.೫. ನೀರಾವರಿ ವ್ಯವಸ್ಥೆ

೩.೬. ಜನಸಂಖ್ಯೆಯ ವಿಶಿಷ್ಟತೆಗಳು

೩.೭. ದುಡಿಮೆಗಾರರ ವಿಂಗಡನೆ

೩.೮. ಅಧ್ಯಯನ ಸೀಮೆಗಳ ಪರಿಚಯ

ಅಧ್ಯಾಯ ೩

ಅಧ್ಯಯನ ಕ್ಷೇತ್ರ

ಪ್ರಸ್ತಾವನೆ

ಪ್ರಸ್ತುತ ಅಧ್ಯಯನವು ಹಾಲಕ್ಕಿ ಸಮುದಾಯದ ಮಹಿಳೆಯರ ಕುರಿತು ಇರುವುದರಿಂದ ಸೈದ್ಧಾಂತಿಕ ಸಂಶೋಧನೆಯಾಗಿದೆ. ಈ ವಿಶಿಷ್ಟವಾದ ಸಮುದಾಯವು ಉತ್ತರ ಕನ್ನಡ ಜಿಲ್ಲೆಯ ಕರಾವಳಿ ಪ್ರದೇಶದಲ್ಲಿ ಮಾತ್ರ ನೆಲೆಗೊಂಡಿದೆ. ಉತ್ತರ ಕನ್ನಡ ಜಿಲ್ಲೆಯ ಕರಾವಳಿ ಪ್ರದೇಶಗಳಾದ ಕಾರವಾರ, ಅಂಕೋಲಾ, ಕುಮಟಾ ಹಾಗೂ ಹೊನ್ನಾವರದಲ್ಲಿ ಮಾತ್ರ ಕಂಡುಬರುತ್ತಾರೆ. ಹಾಲಕ್ಕಿಗಳು ಹೆಚ್ಚಿನ ಪ್ರಮಾಣದಲ್ಲಿರುವ ಅಂಕೋಲಾ ಹಾಗೂ ಕುಮಟಾ ತಾಲೂಕಿನ ವ್ಯಾಪ್ತಿಗೆ ಅಧ್ಯಯನವನ್ನು ಸೀಮಿತಗೊಳಿಸಲಾಗಿದೆ. ಈ ಎರಡೂ ಸೀಮೆಗಳಲ್ಲಿನ ಮಹಿಳೆಯರನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ.

ಯಾವುದೇ ಪ್ರದೇಶದ ಜನಸಮುದಾಯದ ಒಂದರ ಕುರಿತು ಅಧ್ಯಯನ ಮಾಡುವಾಗ, ಆ ಪ್ರದೇಶದ ಸಾಮಾಜಿಕ, ಆರ್ಥಿಕ ಹಾಗೂ ಸಾಂಸ್ಕೃತಿಕ ಅಂಶಗಳನ್ನು ಅರಿಯಬೇಕು. ಏಕೆಂದರೆ, ಈ ಅಂಶಗಳು ಸಾಮಾಜಿಕ ಬದಲಾವಣೆಯ ಮೇಲೆ ಪ್ರಭಾವ ಬೀರುತ್ತದೆ. ಆದ್ದರಿಂದ ಈ ಅಂಶಗಳ ಪ್ರಭಾವ ಪರಿಣಾಮ ತಿಳಿದುಕೊಂಡಾಗ ಮಾತ್ರ ಪರಿವರ್ತನೆಯ ನೆಲೆಯನ್ನು ಸರಿಯಾಗಿ ಅರ್ಥಮಾಡಿಕೊಳ್ಳಬಹುದು.

೩.೧. ಚಾರಿತ್ರಿಕ ಹಿನ್ನೆಲೆ

ಉತ್ತರ ಕನ್ನಡ ಜಿಲ್ಲೆಯು ಸ್ವಾತಂತ್ರ್ಯ ಪೂರ್ವದಲ್ಲಿ ಶಿಕ್ಷಣದಲ್ಲಿ ಪ್ರಗತಿಯನ್ನು ಸಾಧಿಸಿರುವುದನ್ನು ಗುರುತಿಸಲಾಗಿದೆ. ಈಪ್ರದೇಶವು ಶೈಕ್ಷಣಿಕವಾಗಿ ಮುಂದುವರೆದಿರುವುದಕ್ಕೆ ಈ ಭಾಗದಲ್ಲಿ ನಡೆದಿರುವ ಸ್ವಾತಂತ್ರ್ಯದ ಚಳುವಳಿಗಳೇ ಸಾಕ್ಷಿಯಾಗಿವೆ. ಉತ್ತರ ಕನ್ನಡ ಜಿಲ್ಲೆಯ ಜನರು ದೇಶದ ಸ್ವಾತಂತ್ರ್ಯ ಹೋರಾಟದಲ್ಲಿ ಸಂಪೂರ್ಣವಾಗಿ ತೊಡಗಿಸಿಕೊಂಡವರು. ೧೯೩೦-೩೨ರಲ್ಲಿ ಕರನಿರಾಕರಣೆ ಚಳುವಳಿ ಹಾಗೂ ಉಪ್ಪಿನ ಸತ್ಯಾಗ್ರಹ. ೧೯೪೨ರಲ್ಲಿ

ಚಲೇಜಾವ್ ಚಳುವಳಿಗಳು ನಡೆದವು. ಉತ್ತರ ಕನ್ನಡ ಜಿಲ್ಲೆಯಲ್ಲಿ ಸ್ವಾತಂತ್ರ್ಯ ಚಳುವಳಿಯು ದೇಶದ ಇತರೆ ಭಾಗಗಳಿಗಿಂತ ಉಗ್ರ ರೂಪದಲ್ಲಿ ನಡೆದಿರುವುದರಿಂದ ಉತ್ತರ ಕನ್ನಡ ಜಿಲ್ಲೆಯ ಅಂಕೋಲಾವನ್ನು "ಕರ್ನಾಟಕ ಬಾರ್ಡೋಲಿ" ಎಂದು ಗುರುತಿಸಲಾಗಿದೆ(ಪ್ರೋ.ಹೆಚ್. ರಾಮಲಿಂಗಪ್ಪ: ೧೯೯೭). ಇತಿಹಾಸದಲ್ಲಿ ದಾಖಲೆ ಪಡೆಯದ ಹಲವಾರು ಚಳುವಳಿಗಳು ನಡೆದಿರುವುದು ಸಹ ಉತ್ತರ ಕನ್ನಡ ಜಿಲ್ಲೆಯಲ್ಲಿ. ಅಂತಹ ಚಳುವಳಿಗಳಲ್ಲಿ ರೈತರ ಚಳುವಳಿಗಳು (೧೯೩೬-೩೭) ಒಂದಾಗಿದೆ.

ಬ್ರಿಟಿಷರ ಆಡಳಿತದಲ್ಲಿ

ಕನ್ನಡದ ಕರಾವಳಿಯನ್ನು ಬ್ರಿಟಿಷರು ಕೆನರಾ ಎಂದು ಕರೆದರು. ಆಡಳಿತದ ದೃಷ್ಟಿಯಿಂದ ೧೮೬೨ರಲ್ಲಿ ಬ್ರಿಟಿಷರು ಕೆನರಾವನ್ನು ಉತ್ತರ ಕೆನರಾ ಮತ್ತು ದಕ್ಷಿಣ ಕೆನರಾ ಎಂದು ವಿಭಾಗಿಸಿದರು. ಉತ್ತರ ಕೆನರಾವನ್ನು ಮುಂಬಾಯಿ ಪ್ರಾಂತ್ಯಕ್ಕೂ ಹಾಗೂ ದಕ್ಷಿಣ ಕೆನರಾವನ್ನು ಮದ್ರಾಸ್ ಪ್ರಾಂತ್ಯಕ್ಕೂ ಸೇರಿಸಲಾಯಿತು. ಬ್ರಿಟಿಷರ ಕಾಲದಲ್ಲಿ ಈ ಪ್ರದೇಶದಲ್ಲಿ ಶಾಲೆಗಳು ಪ್ರಾರಂಭಗೊಂಡಿದ್ದವು. ಉತ್ತರ ಕೆನರಾ ಜಿಲ್ಲೆಯಲ್ಲಿ ಮುಂದುವರೆದ ಜನಸಮೂಹಗಳಾದ ಸಾರಸ್ವತರು, ಗೌಡ ಸಾರಸ್ವತರು (ಕೊಂಕಣಿಗರು) ಹಾಗೂ ಹವ್ಯಕರು ನೆಲೆಗೊಂಡಿದ್ದರು. ಕೊಂಕಣಿಗಳು ಗೋವೆಯಲ್ಲಿ ಪೋರ್ಚುಗೀಸರು ಮತಾಂತರವನ್ನು ವಿರೋಧಿಸಿ ಓಡಿ ಬಂದು, ಉತ್ತರ ಕೆನರಾ ಜಿಲ್ಲೆಯಲ್ಲಿ ನೆಲೆಗೊಂಡಿದ್ದರು. ನಮ್ಮ ಅಧ್ಯಯನ ಪ್ರದೇಶವಾದ ಅಂಕೋಲಾ ಸೀಮೆಯಲ್ಲಿ ೧೯೯೬ರಲ್ಲಿ ಮತ್ತು ಕುಮಟಾ ಸೀಮೆಯಲ್ಲಿ ೧೮೬೬ರಲ್ಲಿ ಹೈಸ್ಕೂಲ ಸೌಲಭ್ಯವಿತ್ತು. ಭೌಗೋಳಿಕವಾಗಿ ಶೇ. ೮೦ರಷ್ಟು ಅರಣ್ಯ ಪ್ರದೇಶವನ್ನು ಹಾಗೂ ಶೇ. ೧೧ರಷ್ಟು ಸಾಗುವಳಿ ಭೂಮಿಯನ್ನು ಹೊಂದಿದ ಪ್ರದೇಶವಾಗಿತ್ತು. ಈ ಭೌಗೋಳಿಕ ಹಿನ್ನೆಲೆಯಲ್ಲಿ ಮುಂದುವರೆದ ಜನ ಸಮುದಾಯದವರು ಕೃಷಿಗಿಂತ ವ್ಯಾಪಾರದಲ್ಲಿ ಹೆಚ್ಚು ಆಸಕ್ತಿಯನ್ನು ಹೊಂದಿದವರು. ಮುಂದುವರೆದ ಜನ ಸಮುದಾಯದವರು ಇಂಗ್ಲಿಷ್ ಶಿಕ್ಷಣದಲ್ಲಿ ಆಸಕ್ತಿಯನ್ನು ತಳೆದವರು. ಹೀಗಾಗಿ ಸ್ವಾತಂತ್ರ್ಯದ ಪೂರ್ವದಲ್ಲಿಯೇ ಮುಂದುವರೆದ ಜನಸಮುದಾಯದವರು ಉನ್ನತ ಶಿಕ್ಷಣವನ್ನು ಪಡೆದಕೊಂಡಿದ್ದರು. ಉತ್ತರ ಕನ್ನಡ ಜಿಲ್ಲೆಯ ಮೇಲ್ ವರ್ಗದ ಜನಸಮುದಾಯದವರು ಉನ್ನತ ಶಿಕ್ಷಣ ಪಡೆದು ಮುಂಬೈಯಲ್ಲಿ ನೆಲೆಸುವುದು ಆಗ ಸಾಮಾನ್ಯ ಅಂಶವಾಗಿತ್ತು.

ಪ್ರಭುತ್ವದಲ್ಲಿರುವ ಈ ವರ್ಗಗಳ ಶಿಕ್ಷಣದ ಪರಂಪರೆಯು ಇತರೇ ಜನ ಸಮುದಾಯದವರ ಮೇಲೆ ಪ್ರಭಾವ ಬೀರಿತು. ಹೀಗಾಗಿ ಸ್ವಾತಂತ್ರ್ಯ ಪೂರ್ವದಲ್ಲಿಯೇ ಈ ಪ್ರದೇಶದಲ್ಲಿ ಶಿಕ್ಷಣವು ಸಾಮಾಜೀಕರಣಗೊಂಡಿತು. ಆ ಕಾಲದಲ್ಲಿ ಇಂಗ್ಲಿಷ್ ಶಿಕ್ಷಣ

ಪಡೆದುಕೊಂಡವರ ಮುಖಾಂತರವೇ ಸ್ವಾತಂತ್ರ್ಯ ಹೋರಾಟದ ಚಳುವಳಿಗೆ ಪ್ರೇರಣೆ ದೊರೆಯಿತು. ಅದರಿಂದಲೇ ಈ ಪ್ರದೇಶದ ಜನ ಸಮುದಾಯಗಳು ಹೆಚ್ಚು ಸೂಕ್ಷ್ಮಮತಿಗಳಾಗಿದ್ದನ್ನು ಗುರುತಿಸಬಹುದಾಗಿದೆ.

ರೈತ ಚಳುವಳಿಗಳು

ಸ್ವಾತಂತ್ರ್ಯದ ಪೂರ್ವದಲ್ಲಿಯೇ ರೈತರ ಚಳುವಳಿ ಮೊಟ್ಟ ಮೊದಲು ನಡೆದದ್ದು ಅಂಕೋಲದಲ್ಲಿ (೧೯೩೬) ಉತ್ತರ ಕನ್ನಡ ಜಿಲ್ಲೆಯ ಜನ ಸೇವಕ ಕವಿಯಾದ ಡಾ. ದಿನಕರ ದೇಸಾಯಿಯವರು ಈ ಚಳುವಳಿಯನ್ನು ಹುಟ್ಟು ಹಾಕಿದವರು ಡಾ. ದೇಸಾಯಿಯವರು. ಅವರು ಸರ್ವೆಂಟ್ಸ್ ಆಫ್ ಇಂಡಿಯಾ ಸೊಸೈಟಿಯ ಅಜೀವ ಸದಸ್ಯರಾಗಿದ್ದರು. ಈ ಸರ್ವೆಂಟ್ಸ್ ಆಫ್ ಇಂಡಿಯಾ ಸೊಸೈಟಿಯ ಮೂಲಕ ಡಾ. ದೇಸಾಯಿ ಅವರು ತಮ್ಮ ಸಾಮಾಜಿಕ ಜೀವನವನ್ನು ಪ್ರಾರಂಭಿಸಿದರು.

೧೯೩೬-೩೭ರ ವೇಳೆಗೆ ಡಾ. ದೇಸಾಯಿಯವರು ಅಂಕೋಲೆಯ ಹಾಲಕ್ಕಿ ಕೊಪ್ಪಗಳಲ್ಲಿ ರಾತ್ರಿ ಕೂಟವನ್ನು ನಡೆಸಿ ಜನ ಜಾಗ್ರತೆಯನ್ನು ಪ್ರಾರಂಭಿಸಿದರು. ಉತ್ತರ ಕನ್ನಡ ಜಿಲ್ಲೆಯ ರೈತ ಆಂದೋಲನವು ಕಾಗೋಡು ಸತ್ಯಾಗ್ರಹಕ್ಕೂ ಮುಂಚಿನವು (ವಿಷ್ಣು ನಾಯ್ಕ: ೨೦೦೪) ಅಂಕೋಲೆಯಲ್ಲಿ ೧೯೪೭ರಿಂದ ೧೯೬೨ರವರೆಗೆ ರೈತ ಚಳುವಳಿಗಳು ಅತ್ಯಂತ ಶಕ್ತಿಯುತವಾಗಿ ನಡೆದವು. ಈ ರೈತ ಚಳುವಳಿಗಳು ಡಾ. ದೇಸಾಯಿ, ಶ್ರೀ ಗಿರಿ ಪಿಕಳೆ ಹಾಗೂ ಶ್ರೀ ದಯಾನಂದ ನಾಡಕರ್ಣಿಯವರ ಮುಂದಾಳತ್ವದಲ್ಲಿ ನಡೆದವು. ಡಾ. ದೇಸಾಯಿಯವರು ಸರ್ವೆಂಟ್ಸ್ ಆಫ್ ಇಂಡಿಯಾ ಸೊಸೈಟಿಯ ಮೂಲಕ ಗೋಖಲೆ, ಥಕ್ಕರ ಬಾಪಾ, ಎನ್.ಎಂ.ಜೋಷಿ ಮುಂತಾದವರ ಪ್ರಭಾವಕ್ಕೆ ಒಳಗಾದವರು. ದೇಸಾಯಿಯವರ ಸಮಾಜವಾದದ ತತ್ವದಲ್ಲಿ ನಂಬಿಕೆ ಇಟ್ಟುಕೊಂಡವರು. ಹೀಗಾಗಿ ಈ ಪ್ರದೇಶದ ರೈತರ ಸಮಾನತೆಗಾಗಿ ಹೋರಾಡಲು ರೈತರನ್ನು ತಳಮಟ್ಟದಿಂದ ಸಂಘಟಿಸಿದರು.

ಶ್ರೀ ಗಿರಿ ಪಿಕಳೆಯವರು ೧೯೪೦ರಲ್ಲಿ ಹಾಲಕ್ಕಿ ಒಕ್ಕಲಿಗರ ಸಂಘವನ್ನು ಕಟ್ಟಿದರು. ೧೯೪೦ರಲ್ಲಿ ದೇಸಾಯಿಯವರಿಗೆ ಬ್ರಿಟಿಷರ ಸರ್ಕಾರ ಗಡಿಪಾರು ಶಿಕ್ಷೆಯನ್ನು ವಿಧಿಸಿತು. ೧೯೫೦ರ ನಂತರ ಚಳುವಳಿ ಚುರುಕುಗೊಂಡಿತು. ೧೯೫೨ರಲ್ಲಿ ಅಂಕೋಲೆಯಿಂದ ಕಾರವಾರದವರೆಗೆ (೩೫ ಕಿ.ಮೀ) ಕಾಲನ್ನಡಿಗೆಯಲ್ಲಿ ಆಕ್ರಮಿಸಿ ಜಿಲ್ಲಾಧಿಕಾರಿ ಎದುರು ಪ್ರತಿಭಟಿಸಿದರು. ದಿನಕರ ದೇಸಾಯಿಯವರು ಸುಮಾರು ೩೫ ವರ್ಷಗಳ ಕಾಲ ರೈತರಿಗಾಗಿ ಹೋರಾಟವನ್ನು ನಡೆಸಿದರು. ಈ ಹಿನ್ನೆಲೆಯಲ್ಲಿ ಸಾಕಷ್ಟು ಪ್ರತಿಭಟನಾ ಮೆರವಣಿಗೆ, ಪಂಜಿನ ಮೆರವಣಿಗೆ, ಕತ್ತಿಯ ಮೆರವಣಿಗೆ, ಪೊರಕೆ ಮೆರವಣಿಗೆಗೆ ಹಾಗೂ ಲೇವಿ ಬಕಾಸುರನ ಮೆರವಣಿಗೆ ಜಿಲ್ಲೆಯಲ್ಲಿ ನಡೆದವು.

ಸ್ವಾತಂತ್ರ್ಯ ಹೋರಾಟದಲ್ಲಿ ಹಾಲಕ್ಕಿಗಳು

ಜಿಲ್ಲೆಯ ಸ್ವಾತಂತ್ರ್ಯ ಹೋರಾಟದಲ್ಲಿ ಇಡೀ ಜಾತಿ ಸಮೂಹವಾಗಿ ಹಾಲಕ್ಕಿಗಳು ಪಾಲ್ಗೊಂಡಿರುವುದು ಕಂಡು ಬಂದಿಲ್ಲ. ಆದರೆ, ಕೆಲ ಹಾಲಕ್ಕಿಗಳು ಜಿಲ್ಲೆಯ ಸ್ವಾತಂತ್ರ್ಯ ಹೋರಾಟದಲ್ಲಿ ಸಕ್ರಿಯವಾಗಿ ಭಾಗವಹಿಸಿ ಶಿಕ್ಷೆಗೆ ಗುರಿಯಾಗಿದ್ದು ದಾಖಲಾಗಿದೆ. ಈ ಹಾಲಕ್ಕಿ ಜನಸಮುದಾಯದಲ್ಲಿ ಸಕ್ರಿಯವಾಗಿ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಿದರು. ಉಳುವರೆಯ ರಾಮದಾಸ ಮತ್ತು ಹೊನ್ನಾದಾಸ. ಇವರದು ಎಂಟು ಕುಟುಂಬಗಳನ್ನು ಒಳಗೊಂಡಿದ್ದ ಅವಿಭಕ್ತ ಕುಟುಂಬವಾಗಿತ್ತು. ಇವರ ಭೂಮಿಯ ಫೋರ್ ಫೀಟ್ ಆದರಿಂದ ಇಡೀ ಕುಟುಂಬ ಭೂ ರಹಿತವಾಯಿತು.

ಉೂಳುವರೆಯ ಹುಲಿಯಪ್ಪ ಗೌಡ ಹಾಗೂ ಜಟ್ಟು ದೇವಪ್ಪ ಗೌಡ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಿದ್ದಕ್ಕೆ ಆರು ತಿಂಗಳು ಜೈಲು ಶಿಕ್ಷೆಯನ್ನು ಅನುಭವಿಸಿದರು(ಸಂಪಾದಕರು: ಸೂರ್ಯನಾಥ ಕಾಮತ: ೧೯೮೦).

ರೈತ ಆಂದೋಲನದಲ್ಲಿ ಹಾಲಕ್ಕಿಗಳು

ಡಾ.ದಿನಕರ ದೇಸಾಯಿಯವರ ಹಾಲಕ್ಕಿಗಳು ಒಡನಾಟದಲ್ಲಿಯೇ ಬೆಳೆದವರು. ಅಂದಿನ ಹಾಲಕ್ಕಿಗಳ ಪರಿಸ್ಥಿತಿಯ ಕಾರಣವನ್ನು ಚೆನ್ನಾಗಿ ಅರಿತವರು. ಅಂದಿನ ಗೇಣಿ ಪದ್ಧತಿಯನ್ನು ವಿರೋಧಿಸಿ ಹೋರಾಡಲು ತಳಮಟ್ಟದಿಂದಲೇ ಹಾಲಕ್ಕಿಗಳನ್ನು ಸಂಘಟಿಸಿದವರು. ಜಿಲ್ಲೆಯ ಗೇಣಿದಾರ ಗುಂಪಿಗೆ ಸೇರಿದ ಹಾಲಕ್ಕಿಗಳು ದೇಸಾಯಿಯವರು ನಡೆಸಿದ ರೈತ ಆಂದೋಲನದಲ್ಲಿ ಸಂಪೂರ್ಣವಾಗಿ ತೊಡಗಿಸಿಕೊಂಡಿರುವುದು ದಾಖಲಿಸಲ್ಪಟ್ಟಿದೆ(ವಿಷ್ಣು ನಾಯ್ಕ: ೨೦೦೪).

ಸ್ವಾತಂತ್ರ್ಯ ನಂತರದ ಶಿಕ್ಷಣದ ಪ್ರಗತಿ

೧೯೪೭ ಆಗಸ್ಟ್ ೧೫ರಂದು ದೇಶಕ್ಕೆ ಸ್ವಾತಂತ್ರ್ಯ ಬಂದ ಮೇಲೆ ಸಹ ಉತ್ತರ ಕನ್ನಡ ಜಿಲ್ಲೆಯು ಮುಂಬೈ ಪ್ರಾಂತದಲ್ಲಿಯೇ ಮುಂದುವರೆಯಿತು. ೧೯೫೬ರಲ್ಲಿ ಉತ್ತರ ಕನ್ನಡ ಜಿಲ್ಲೆಯನ್ನು ಇಂದಿನ ಕರ್ನಾಟಕದಲ್ಲಿ ಸೇರಿಸಲಾಯಿತು. ಉತ್ತರ ಕನ್ನಡ ಜಿಲ್ಲೆಯ ಅಂಕೋಲಾ-ಕುಮಟಾ ಪ್ರದೇಶಗಳಲ್ಲಿ ಸಾಮಾಜಿಕ ನ್ಯಾಯಕ್ಕಾಗಿ ನಿರಂತರ ಹೋರಾಟ ಮಾಡಿದವರು ದೇಸಾಯಿಯವರು. ರಾಜಕೀಯ ಸ್ವಾತಂತ್ರ್ಯ ಒಂದರಿಂದಲೇ ಅಭಿವೃದ್ಧಿ ಸಾಧ್ಯವಾಗದು, ಆರ್ಥಿಕ ಸ್ವಾತಂತ್ರ್ಯ ಕೂಡಾ ಅಷ್ಟೇ ಅವಶ್ಯಕವೆಂಬುದನ್ನು ದೇಸಾಯಿಯವರು ಗುರುತಿಸಿದ್ದರು.

ಅಕ್ಷರದಿಂದಲೇ ಗ್ರಾಮೀಣ ಪ್ರದೇಶದ ಉದ್ಧಾರ ಸಾಧ್ಯವೆಂದು ಬಗೆದರು. ಡಾ. ದೇಸಾಯಿಯವರು ಕೃಷಿಕಾರ್ಮಿಕರನ್ನು ಮುಂದಿಟ್ಟುಕೊಂಡೇ ೧೯೫೩ರಲ್ಲಿ ಕೆನಾರ ವೆಲ್ ಫೇರ್ ಟ್ರಸ್ಟನ್ನು ಪ್ರಾರಂಭಿಸಿದರು. ಈ ಟ್ರಸ್ಟ್ ಮುಖಾಂತರ ಜಿಲ್ಲೆಯ ಒಂಭತ್ತು ತಾಲೂಕುಗಳ ಗ್ರಾಮೀಣ ಪ್ರದೇಶದಲ್ಲಿ ಎಲ್ಲೆಲ್ಲಿ ರೈತರ ಚಳುವಳಿಗಳು ಬಿರುಸಿನಿಂದ ನಡೆದಿದ್ದವೋ ಆ ಗ್ರಾಮಗಳಲ್ಲಿ ಎಲ್ಲ ಕಡೆಗೆ ಹೈಸ್ಕೂಲ್‌ಗಳನ್ನು ಆರಂಭಿಸಿದರು. ಗ್ರಾಮೀಣ ಭಾಗಗಳಲ್ಲಿ ಮೂವತ್ತೊಂದು ಶಿಕ್ಷಣ ಸಂಸ್ಥೆಯನ್ನು ಮತ್ತು ಇತರೆ ಸೇವಾ ಸಂಸ್ಥೆಯನ್ನು ತೆರೆದರು. ಶ್ರೀ ಪಿಕಳೆಯವರು ೧೯೬೨ರಲ್ಲಿ ಅಂಕೋಲಾದಲ್ಲಿ ಪ್ರತ್ಯೇಕ ಶಿಕ್ಷಣ ಸಂಸ್ಥೆಯನ್ನು ಕಟ್ಟಿದರು. ಕುಮಟಾ ಸೀಮೆಯಲ್ಲಿ ಶಿಕ್ಷಣ ಕ್ಷೇತ್ರದಲ್ಲಿ ಹೆಸರಿಸಬಹುದೆಂದರೆ, ಶ್ರೀ ಬಿ.ಎಂ.ಪೈ, ದಿ. ಡಿ.ಎಂ.ಚಿತ್ತಾಲ, ಡಾ. ಟಿ.ಟಿ.ಹೆಗಡೆ ಈ ರೀತಿಯಲ್ಲಿ ಅರಣ್ಯ ಜಿಲ್ಲೆಯಲ್ಲಿ ಶಿಕ್ಷಣ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಯಿತು.

ಡಾ. ದೇಸಾಯಿಯವರು ಹಾಲಕ್ಕಿ ಒಕ್ಕಲಿಗರ ಅಧ್ಯಯನವನ್ನು ಕೈಗೊಂಡವರು. ಅವರು ತಮ್ಮ ಅಧ್ಯಯನದಲ್ಲಿ ೧೯೪೫ರಲ್ಲಿ ೧೦೦೦ ಹಾಲಕ್ಕಿಗಳಿಗೆ ಕೇವಲ ನಾಲ್ಕು ಮಂದಿ ಮಾತ್ರ ಸಾಕ್ಷರರನ್ನು ಗುರುತಿಸಿದ್ದರು. ಆದರಿಂದಲೇ ದೇಸಾಯಿಯವರು ಶಿಕ್ಷಣ ಸಂಸ್ಥೆಗಳನ್ನು ಗ್ರಾಮೀಣ ಪ್ರದೇಶದಲ್ಲಿ ಪ್ರಾರಂಭಿಸಿದರು. ಗ್ರಾಮಗಳ ಅಭಿವೃದ್ಧಿಗೆ ಶಿಕ್ಷಣ ಅವಶ್ಯಕವೆಂಬುದನ್ನು ದೇಸಾಯಿಯವರು ಗುರುತಿಸಿದ್ದರು. ಹಿಂದುಳಿದ ವರ್ಗದವರಿಗಾಗಿ ಹಾಸ್ಟೆಲುಗಳನ್ನು ತೆರೆಯಲಾಯಿತು. ಈ ಎಲ್ಲಾ ಪ್ರಯತ್ನದ ಮೂಲಕ ಈ ಸೀಮೆಯ ಹಾಲಕ್ಕಿಗಳನ್ನು ಶಿಕ್ಷಣದ ಪ್ರಕ್ರಿಯೆಗೆ ಒಳಪಡಿಸುವ ಉದ್ದೇಶವನ್ನು ಹೊಂದಲಾಗಿತ್ತು.

೩.೨. ಪ್ರಾಕೃತಿಕ ಸಂಪನ್ಮೂಲಗಳು ಮತ್ತು ಹವಾಮಾನ

ಉತ್ತರ ಕನ್ನಡ ಜಿಲ್ಲೆಯನ್ನು ಆಡಳಿತದ ದೃಷ್ಟಿಯಿಂದ ನಾಲ್ಕು ಉಪವಿಭಾಗಗಳನ್ನಾಗಿ ವಿಂಗಡಿಸಲಾಗಿದೆ. ಭಟ್ಕಳ ಉಪವಿಭಾಗಕ್ಕೆ ಭಟ್ಕಳ-ಹೊನ್ನಾವರ ತಾಲೂಕುಗಳು ಸೇರಿವೆ. ಕಾರವಾರ ಉಪವಿಭಾಗಕ್ಕೆ ಹಳಿಯಾಳ, ಕಾರವಾರ, ಜೋಯಡಾ ತಾಲೂಕುಗಳು ಸೇರಿವೆ. ಕುಮಟಾ ಉಪವಿಭಾಗಕ್ಕೆ ಕುಮಟಾ ಮತ್ತು ಅಂಕೋಲಾ ತಾಲೂಕುಗಳು ಸೇರಿವೆ. ಶಿರಸಿ ಉಪವಿಭಾಗಕ್ಕೆ ಶಿರಸಿ ಯಲ್ಲಾಪುರ, ಸಿದ್ಧಾಪುರ ಮತ್ತು ಮುಂಡಗೋಡ ತಾಲೂಕುಗಳು ಸೇರಿವೆ. ಉತ್ತರ ಕನ್ನಡ ಜಿಲ್ಲೆಯು ಹನ್ನೊಂದು ತಾಲೂಕುಗಳನ್ನು, ಮೂವತ್ತೈದು ಹೋಬಳಿಗಳನ್ನು ೨೦೭ ಗ್ರಾಮ ಪಂಚಾಯತಿಯನ್ನು ಮೂರು ನಗರ ಸಭೆಯನ್ನು, ಎರಡು ಪುರಸಭೆಯನ್ನು ಹಾಗೂ ಆರು ಪಟ್ಟಣ ಪಂಚಾಯತಿಯನ್ನು ಹೊಂದಿದೆ.

ಉತ್ತರ ಕನ್ನಡ ಜಿಲ್ಲೆಯು ಉತ್ತಮವಾದ ನೈಸರ್ಗಿಕ ಸಂಪತ್ತನ್ನು ಹೊಂದಿದೆ. ಉತ್ತರ ಕನ್ನಡ ಜಿಲ್ಲೆಯು ಶೇ. ೮೦ರಷ್ಟು ಭಾಗವೂ ಅರಣ್ಯ ಪ್ರದೇಶವಾಗಿದೆ. ಪಶ್ಚಿಮ ಘಟ್ಟದಲ್ಲಿ

ಬೆಲೆಯುಳ್ಳ, ನಿತ್ಯ ಹರಿದ್ವರ್ಣ ಅರಣ್ಯವನ್ನು ಹೊಂದಿದೆ. ಕರ್ನಾಟಕದಲ್ಲಿ ಉತ್ತರ ಕನ್ನಡ ಜಿಲ್ಲೆಯು ಅತಿ ಹೆಚ್ಚು ಅರಣ್ಯ ಪ್ರದೇಶವನ್ನು ಹೊಂದಿದೆ. ರಾಜ್ಯದ ಒಟ್ಟು ಅರಣ್ಯ ಪ್ರದೇಶದಲ್ಲಿ ಶೇ.೨೮ರಷ್ಟು ಪಾಲು ಈ ಜಿಲ್ಲೆಯದು. ಆದ್ದರಿಂದ ಜಿಲ್ಲೆಯಲ್ಲಿ ಸಾಗುವಳಿ ಭೂಮಿ ಕೊರತೆಯಿದೆ. ಜಿಲ್ಲೆಯು ಅಭಯಾರಣ್ಯ ಹಾಗೂ ಪ್ರಾಣಿ ಸಂಕುಲದ ಶ್ರೀಮಂತ ಜಿಲ್ಲೆಯಾಗಿದೆ. ಜಿಲ್ಲೆಯು ಉತ್ತಮ ಜಲಸಂಪನ್ಮೂಲವನ್ನು ಹೊಂದಿದೆ. ಉತ್ತರ ಕನ್ನಡ ಜಿಲ್ಲೆಯ ಮುಖ್ಯ ನದಿಗಳೆಂದರೆ ಕಾಳಿ, ಶರಾವತಿ, ಅಘನಾಶಿನಿ, ಗಂಗಾವಳಿ, ಬೇಡ್ತಿ, ವೆಂಕಟಾಪುರ ಮತ್ತು ವರದಾ ಇತರೆ ನದಿಗಳಾಗಿವೆ. ಜಿಲ್ಲೆಯ ಕದ್ರಾ, ಸುಪಾ ಕೊಡಸಳ್ಳಿ, ನಾಗಝರಿ ಹಾಗೂ ಕೈಗಾ ವಿದ್ಯುಚ್ಛಕ್ತಿ ಉತ್ಪದನಾ ಕೇಂದ್ರಗಳಾಗಿವೆ.

ಉತ್ತರ ಕನ್ನಡ ಜಿಲ್ಲೆಯು ಸಮಶಿತೋಷ್ಣ ಹವಾಗುಣವನ್ನು ಹೊಂದಿದೆ. ಉತ್ತರ ಕನ್ನಡ ಜಿಲ್ಲೆಯು ೧೨೨ ಕಿ.ಮೀ. ಉದ್ದದ ಕರಾವಳಿ ಪ್ರದೇಶವನ್ನು ಹೊಂದಿದೆ. ರಾಜ್ಯದಲ್ಲಿ ಕಾರವಾರವು ಉತ್ತಮ ಬಂದರಾಗಿ ನಿರ್ಮಾಣಗೊಂಡಿದೆ. ರಾಷ್ಟ್ರದ ಹೆಮ್ಮೆಯ ಸೀಬರ್ಡ ನೌಕಾ ನೆಲೆ ಕಾರವಾರದಲ್ಲಿದೆ. ಸಮುದ್ರ ತೀರದಲ್ಲಿ ಆರ್ದ್ರತೆ ಮತ್ತು ಉಷ್ಣತೆಯನ್ನು ಹೊಂದಿದ್ದು, ಬೇಸಿಗೆಯಲ್ಲಿ ಅತಿ ಹೆಚ್ಚು ೩೩ ಸೆಂ. ಮತ್ತು ಚಳಿಗಾಲದಲ್ಲಿ ಅತಿ ಕಡಿಮೆ ೨೦ ಸೆಂ. ಉಷ್ಣತೆಯನ್ನು ಹೊಂದಿದೆ. ಉತ್ತರ ಕನ್ನಡ ಜಿಲ್ಲೆಯ ಮಲೆನಾಡು ಹಾಗೂ ಕರಾವಳಿ ಪ್ರದೇಶದಲ್ಲಿ ಅಧಿಕ ಮಳೆಯಾದರೆ, ಬಯಲು ಸೀಮೆಯಲ್ಲಿ ಕಡಿಮೆ ಮಳೆಯಾಗುತ್ತದೆ. ಜಿಲ್ಲೆಯಲ್ಲಿ ವಾರ್ಷಿಕ ಮಳೆಯ ಪ್ರಮಾಣವು ೨೦೦೫ರಲ್ಲಿ ೨೯೭೨.೫ ಮೀ.ಮೀ. ಆಗಿದೆ. ಈ ಜಿಲ್ಲೆಯ ವಾಡಿಕೆಯ ಮಳೆಯ ಪ್ರಮಾಣವು ೨೮೩೫.೫ ಮೀ.ಮೀ.

೩.೩. ಭೌಗೋಳಿಕ ಅಂಶಗಳು

ಉತ್ತರ ಕನ್ನಡ ಜಿಲ್ಲೆಯು ಪ್ರಾಕೃತಿಕ ವಿಶಿಷ್ಟತೆಯಿಂದ ರಾಜ್ಯದಲ್ಲಿ ಗುರುತಿಸಿಕೊಂಡಿದೆ. ಉತ್ತರ ಕನ್ನಡ ಜಿಲ್ಲೆಯು ಕರ್ನಾಟಕದ ಪಶ್ಚಿಮ ವಾಯವ್ಯ ಭಾಗದಲ್ಲಿದೆ. ಉತ್ತರ ಕನ್ನಡ ಜಿಲ್ಲೆಯನ್ನು ಕಾರವಾರ ಜಿಲ್ಲೆ ಎಂದು ಕರೆಯುತ್ತಾರೆ. ಉತ್ತರ ಕನ್ನಡ ಜಿಲ್ಲೆಯು ಬ್ರಿಟಿಷರ ಆಡಳಿತದಲ್ಲಿ ಮುಂಬಯಿ, ಕರ್ನಾಟಕ ಪ್ರಾಂತ್ಯಕ್ಕೆ ಸೇರಿತ್ತು. ಇಂದು ಉತ್ತರ ಕನ್ನಡ ಜಿಲ್ಲೆಯು ಬೆಳಗಾವಿ ವಿಭಾಗಕ್ಕೆ ಸೇರಿದೆ. ಜಿಲ್ಲೆಯು ಭೌಗೋಳಿಕ ವಿಸ್ತೀರ್ಣವು ೧೦.೨೯೧ ಚ.ಕಿ.ಮೀ. ಈ ಜಿಲ್ಲೆಯು ಕರ್ನಾಟಕದ ವಿಸ್ತೀರ್ಣದಲ್ಲಿ ಶೇ. ೫.೩ರಷ್ಟಿದೆ. ಉತ್ತರ ಕನ್ನಡ ಜಿಲ್ಲೆಯು ವಿಸ್ತೀರ್ಣದ ದೃಷ್ಟಿಯಿಂದ ರಾಜ್ಯದಲ್ಲಿ ಐದನೆಯ ಸ್ಥಾನದಲ್ಲಿದೆ. ಉತ್ತರ ಅಕ್ಷಾಂಶ ೧೩.೫೫ ಮತ್ತು ೧೫.೩೧ ಮಧ್ಯ ಮತ್ತು ಪೂರ್ವ ರೇಖಾಂಶ ೭೪.೦೦ ಮತ್ತು ೭೫.೧೦ ಜಿಲ್ಲೆಯ ಕ್ಷೇತ್ರ ವ್ಯಾಪ್ತಿಯಾಗಿದೆ. ಜಿಲ್ಲೆಯ ಉತ್ತರಕ್ಕೆ ಗೋವಾ ರಾಜ್ಯ ಮತ್ತು ಬೆಳಗಾವಿ ಜಿಲ್ಲೆಯಿದೆ. ಪೂರ್ವಕ್ಕೆ ಧಾರವಾಡ ಜಿಲ್ಲೆ ದಕ್ಷಿಣಕ್ಕೆ ಶಿವಮೊಗ್ಗ ಹಾಗೂ ಉಡುಪಿ ಜಿಲ್ಲೆಯಿದೆ. ಈ ಜಿಲ್ಲೆಯು

೧೨೨ ಕಿ.ಮೀ. ಉದ್ದದ ಕರಾವಳಿ ಹೊಂದಿರುವುದು ಜಿಲ್ಲೆಯ ವಿಶಿಷ್ಟತೆಯಾಗಿದೆ. ಉತ್ತರ ಕನ್ನಡ ಜಿಲ್ಲೆಯು ೨೨ ಕಡಲತೀರವನ್ನು ಹೊಂದಿದೆ. ಉತ್ತರ ಕನ್ನಡ ಜಿಲ್ಲೆಯ ಕಾರವಾರ, ಗೋಕರ್ಣ, ಹೊನ್ನಾವರ ಹಾಗೂ ಮುರುಡೇಶ್ವರದ ಕರಾವಳಿ ಪ್ರದೇಶಗಳು ಪ್ರವಾಸಿ ತಾಣವಾಗಿದೆ. ಉತ್ತರ ಕನ್ನಡ ಜಿಲ್ಲೆಯ ಗೋಕರ್ಣ, ರಾಮತೀರ್ಥ, ಮುರುಡೇಶ್ವರ, ಉಳವಿ, ಶಿರಸಿ, ಬನವಾಸಿ ಹಾಗೂ ಯಾಣದಂತಹ ಪುಣ್ಯ ಕ್ಷೇತ್ರಗಳನ್ನು ಜಿಲ್ಲೆ ಹೊಂದಿದೆ.

ಆಡಳಿತ ದೃಷ್ಟಿಯಿಂದ ಜಿಲ್ಲೆಯನ್ನು ನಾಲ್ಕು ಉಪವಿಭಾಗಗಳನ್ನಾಗಿ ಮಾಡಲಾಗಿದೆ. ಉತ್ತರ ಕನ್ನಡ ಜಿಲ್ಲೆಯು ವಿಶಿಷ್ಟವಾದ ಭೌಗೋಳಿಕ ಲಕ್ಷಣಗಳನ್ನು ಹೊಂದಿದೆ. ಒಂದೇ ಜಿಲ್ಲೆಯಲ್ಲಿ ಮಲೆನಾಡು ಪ್ರದೇಶ ಕರಾವಳಿ ಪ್ರದೇಶ ಹಾಗೂ ಬಯಲುಸೀಮೆಯನ್ನು ಒಳಗೊಂಡಿದೆ. ಮಲೆನಾಡು ಪ್ರದೇಶವು ಸಿದ್ದಾಪುರ, ಶಿರಸಿ, ಜೋಯಿಡಾ ಹಾಗೂ ಯಲ್ಲಾಪುರಗಳನ್ನು ಒಳಗೊಂಡಿದೆ. ಕರಾವಳಿ ಪ್ರದೇಶವು ಕಾರವಾರ, ಅಂಕೋಲಾ, ಕುಮಟಾ, ಹೊನ್ನಾವರ ಹಾಗೂ ಭಟ್ಕಳ ತಾಲೂಕುಗಳನ್ನು ಒಳಗೊಂಡಿದೆ. ಹಳಿಯಾಳ ಹಾಗೂ ಮುಂಡಗೋಡ ಬಯಲು ಪ್ರದೇಶವಾಗಿದೆ. ಉತ್ತರ ಕನ್ನಡ ಜಿಲ್ಲೆಯು ೧೦.೨೨ ಹೆಕ್ಟರ್ ಭೌಗೋಳಿಕ ಪ್ರದೇಶವನ್ನು ಹೊಂದಿದೆ. ರಾಜ್ಯದ ಒಟ್ಟು ಭೌಗೋಳಿಕ ಪ್ರದೇಶದಲ್ಲಿ ಉತ್ತರ ಕರ್ನಾಟಕ ಜಿಲ್ಲೆಯ ಪಾಲು ಶೇ.೫.೩ರಲ್ಲಿ ಕರ್ನಾಟಕ ರಾಜ್ಯದಲ್ಲಿ ಅತ್ಯಧಿಕ ಅರಣ್ಯ ಪ್ರದೇಶ ಹೊಂದಿರುವ ಜಿಲ್ಲೆಗಳಲ್ಲಿ ಉತ್ತರ ಕನ್ನಡ ಜಿಲ್ಲೆಯು ಪ್ರಥಮ ಸ್ಥಾನದಲ್ಲಿದೆ. ಉತ್ತರ ಕನ್ನಡ ಜಿಲ್ಲೆಯ ೮,೧೩,೭೯೫ ಹೆಕ್ಟೆರ್‌ರಷ್ಟು ಅರಣ್ಯ ಪ್ರದೇಶವಾಗಿದೆ. ರಾಜ್ಯದ ಒಟ್ಟು ಭೌಗೋಳಿಕ ವಿಸ್ತೀರ್ಣದಲ್ಲಿ ಶೇ. ೧೬.೧ರಷ್ಟು ಅರಣ್ಯ ಪ್ರದೇಶವಿದ್ದರೆ ಜಿಲ್ಲೆಯಲ್ಲಿ ಶೇ. ೭೫ರಷ್ಟು ಅರಣ್ಯ ಪ್ರದೇಶವಿದೆ.

ಕೋಷ್ಟಕ ೩.೧

ಭೌಗೋಳಿಕ ಲಕ್ಷಣ ಮತ್ತು ಭೂಮಿಯ ಬಳಕೆ (೨೦೦೫-೨೦೦೬)

ಕ್ರಸಂ.	ವಿವರ	ಉತ್ತರ ಕನ್ನಡ ಜಿಲ್ಲೆ	ಕರ್ನಾಟಕ
೧.	ಭೌಗೋಳಿಕ ಪ್ರದೇಶ	೧೦,೨೪,೬೭೯	೧,೯೦,೪೯,೮೩೬
೨.	ಮಳೆಯ ಪ್ರಮಾಣ (ಮೀ.ಮೀ.)	೨,೮೩೫.೫	೮೧೯
೩.	ಅರಣ್ಯ ಪ್ರದೇಶ (ಹೆಕ್ಟರ್)	೮,೧೩,೬೯೫	೩೦,೭೦,೩೩೦
೪.	ವ್ಯವಸಾಯೇತರ ಭೂಮಿ (ಹೆಕ್ಟರ್)	೫೦,೬೦೦	೨೧,೧೯,೬೬೦
೫.	ಸಾಗುವಳಿ ಮಾಡದಿರುವ ಇತರೆ ಭೂಮಿ	೩೦,೧೫೫	೧೬,೭೮,೧೮೫
೬.	ಬೀಳು ಭೂಮಿ (ಹೆಕ್ಟರ್)	೧೬,೯೫೧	೨೩,೪೪,೦೪೧
೭.	ಬಿತ್ತನೆಯಾದ ನಿವ್ವಳಪ್ರದೇಶ (ಹೆಕ್ಟರ್)	೧,೨೪,೭೫೦	೯೮,೩೭,೬೨೦
೮.	ಕರಾವಳಿಯ ಉದ್ದ (ಕಿ.ಮೀ.)	೧೨೨	
೯.	ಮೀನುಗಾರಿಕೆ (ಮೆ.ಟನ್ನು)	೨೬,೨೫೪	

(ಮೂಲ: ಉತ್ತರ ಕನ್ನಡ ಜಿಲ್ಲೆಯ ಅಂಕಿ-ಅಂಶಗಳ ನೋಟ, ೨೦೦೫-೨೦೦೬)

ಉತ್ತರ ಕನ್ನಡ ಜಿಲ್ಲೆಯ ಒಟ್ಟು ವಿಸ್ತೀರ್ಣವನ್ನು ಗಮನಿಸಿದರೆ ಶೇ. ೭೯ರಷ್ಟು ಭೂಮಿ ಅರಣ್ಯ ಪ್ರದೇಶವಾಗಿದೆ. ಶೇ. ೫ರಷ್ಟು ವ್ಯವಸಾಯೇತರ ಭೂಮಿ, ಶೇ. ೧೧ರಷ್ಟು ವ್ಯವಸಾಯ ಭೂಮಿ ಇದೆ. ಜಿಲ್ಲೆಯಲ್ಲಿ ವ್ಯವಸಾಯೇತರ ಭೂಮಿಗಿಂತ ವ್ಯವಸಾಯ ಮಾಡುವ ಭೂಮಿಯ ಪ್ರಮಾಣ ಅಧಿಕವಾಗಿದೆ. ಸಾಗುವಳಿ ಮಾಡದಿರುವ ಶೇ. ೩ರಷ್ಟು ಭೂಮಿಯನ್ನು ಕೃಷಿಗೆ ಅಳವಡಿಸಿಕೊಳ್ಳಬಹುದಾಗಿದೆ.

ಉತ್ತರ ಕನ್ನಡ ಜಿಲ್ಲೆಯ ಮತ್ತೊಂದು ವಿಶಿಷ್ಟತೆಯೆಂದರೆ, ಭೌಗೋಳಿಕವಾಗಿ ೧೨೨ ಕಿ.ಮೀ. ಉದ್ದದ ಕರಾವಳಿ ಪ್ರದೇಶವನ್ನು ಹೊಂದಿದೆ. ಮೀನುಗಾರಿಕೆಯು ಜಿಲ್ಲೆಯ ಪ್ರಮುಖ ಉದ್ಯೋಗವಾಗಿದೆ. ೨೦೦೬ರಲ್ಲಿ ಉತ್ತರ ಕನ್ನಡ ಜಿಲ್ಲೆಯಲ್ಲಿ ೨೬,೨೫೪ ಮೆಟ್ರಿಕ್ ಟನ್ ಮೀನು ಉತ್ಪನ್ನವಾಗಿದೆ. ಮೀನು ಜಿಲ್ಲೆಯ ಪ್ರಮುಖ ಆಹಾರ ಕೂಡಾ ಆಗಿದೆ.

೩.೪. ಕೃಷಿ ಮತ್ತು ಸಾಗುವಳಿ ಪದ್ಧತಿ

ರಾಜ್ಯದಲ್ಲಿ ಮಳೆಯು ಸರಾಸರಿ ಪ್ರಮಾಣ ೮೧೯ ಮೀ.ಮೀ. ಆಗಿದ್ದರೆ, ಉತ್ತರ ಕನ್ನಡ ಜಿಲ್ಲೆಯಲ್ಲಿ ೨೮೩೫.೫ ಮೀ.ಮೀ. ಆಗಿದೆ. ಇತ್ತೀಚಿನ ದಿನಗಳಲ್ಲಿ ಮಳೆಯ ಪ್ರಮಾಣವು ಅಧಿಕಗೊಂಡಿದೆ. ಇದು ಉತ್ತರ ಕನ್ನಡ ಜಿಲ್ಲೆಯ ಕೃಷಿಗೆ ಪೂರಕವಾದ ಅಂಶವಾಗಿದೆ. ಕೃಷಿ ಚಟುವಟಿಕೆಗೆ ಪೂರಕವಾದ ಕೆಲವು ಸೌಲಭ್ಯಗಳು ಉತ್ತರ ಕನ್ನಡ ಜಿಲ್ಲೆಯಲ್ಲಿ ಪೂರಕವಾಗಿ

ಕೆಲಸ ಮಾಡುತ್ತಿರುವುದು ಕಂಡುಬರುವುದು. ಇತ್ತೀಚಿನ ದಿನಗಳಲ್ಲಿ ಜಿಲ್ಲೆಯಲ್ಲಿ ರಾಸಾಯನಿಕ ಗೊಬ್ಬರದ ಬಳಕೆ ಪ್ರಮಾಣವು ಅಧಿಕಗೊಂಡಿದೆ.

ಕೋಷ್ಟಕ ೩.೨

ಭೂ ಹಿಡುವಳಿಯ ಸ್ವರೂಪ

ಕ್ರಸಂ. ವಿವರ	ಹಿಡುವಳಿಗಳ ಸಂಖ್ಯೆ		ವಿಸ್ತೀರ್ಣ (ಹೆಕ್ಟರ್)	
೧	ಉ.ಕ.ಜಿಲ್ಲೆ	ಕರ್ನಾಟಕ	ಉ.ಕ.ಜಿಲ್ಲೆ	
ಕರ್ನಾಟಕ				
೧. ಅತಿಸಣ್ಣ ಹಿಡುವಳಿಗಳು	೧,೫೪,೭೧೪	೪೨,೦೬,೯೨೮	೩೮,೬೩೭	೧೪,೯೨,೩೫೨
೨. ಸಣ್ಣ ಹಿಡುವಳಿಗಳು	೨೯,೩೨೯	೧೯,೦೯,೨೦೩	೪೧,೧೩೭	೨೭,೪೧,೮೬೬
೩. ಮಧ್ಯಮ ಹಿಡುವಳಿಗಳು	೧೪,೭೩೬	೧೮,೨೮,೭೫೭	೨೫,೫೮೬	೭೬,೪೫,೯೨೨
೪. ದೊಡ್ಡ ಹಿಡುಗಳಿಗಳು	೩೨೮	೮೯,೪೭೦	೪,೪೦೪	೧೩,೨೭,೨೭೬
೫. ಒಟ್ಟು ಸಂಖ್ಯೆ	೧,೬೪,೭೪೬	೮೦,೩೪,೩೮೮	೧,೪೯,೫೩೯	೧,೨೩,೦೭,೪೧೬

(ಮೂಲ: ಉತ್ತರ ಕನ್ನಡ ಜಿಲ್ಲೆಯ ಅಂಕಿ-ಅಂಶಗಳ ನೋಟ, ೨೦೦೫-೨೦೦೬)

ಉತ್ತರ ಕನ್ನಡ ಜಿಲ್ಲೆಯಲ್ಲಿ ಒಟ್ಟು ಹಿಡುವಳಿಗಳ ಸಂಖ್ಯೆ ೧.೬೪ ಲಕ್ಷ ಜಿಲ್ಲೆಯ ಒಟ್ಟು ಹಿಡುವಳಿದಾರರಲ್ಲಿ ಶೇ. ೭೦ರಷ್ಟು ಅತಿಸಣ್ಣ ಹಿಡುವಳಿಗಳಾಗಿವೆ. ಆದರೆ ಹಿಡುವಳಿದಾರರ ಹಿಡಿತದಲ್ಲಿರುವ ಪ್ರದೇಶ ಶೇ. ೨೫ರಷ್ಟು ಮಾತ್ರ, ಜಿಲ್ಲೆಯಲ್ಲಿ ಭೂಮಿಯ ಒಡೆತನವು ಅತಿಸಣ್ಣ ಹಾಗೂ ಸಣ್ಣ ಹಿಡುವಳಿದಾರರ ನಿಯಂತ್ರಣದಲ್ಲಿದೆ. ಈ ಹಿಡುವಳಿದಾರರು ಶೇ. ೮೭ರಷ್ಟಿದ್ದು, ಭೂ ಪ್ರದೇಶದ ವಿಸ್ತೀರ್ಣ ಶೇ. ೫೨ರಷ್ಟು ಭೂಮಿಯ ಒಡೆತನ ಹೊಂದಿರುವರು. ಜಿಲ್ಲೆಯಲ್ಲಿ ಶೇ. ೮.೯ರಷ್ಟು ಮಧ್ಯಮ ಹಿಡುವಳಿದಾರರು ಶೇ. ೧೭ರಷ್ಟು ಭೂಮಿಯ ಒಡೆತನವನ್ನು ಹೊಂದಿರುವರು. ಕರ್ನಾಟಕದ ಇತರೆ ಜಿಲ್ಲೆಯಲ್ಲಿ ಕಂಡುಬರುವ ಭೂಮಿ ಹಂಚಿಕೆಯಲ್ಲಿ ಅಸಮಾನತೆಯು ಈ ಜಿಲ್ಲೆಯಲ್ಲಿ ಅಷ್ಟಾಗಿ ಕಂಡುಬರುವುದಿಲ್ಲ. ರಾಜ್ಯದ ಒಟ್ಟು ಹಿಡುವಳಿಗಳ ಸಂಖ್ಯೆಯಲ್ಲಿ ಶೇ. ೨.೦೫ರಷ್ಟು ಹಿಡುವಳಿ ಜಿಲ್ಲೆಯದು. ಅಲ್ಲದೇ ರಾಜ್ಯಗಳ ಹಿಡುವಳಿಗಳ ವಿಸ್ತೀರ್ಣದಲ್ಲಿ ಉತ್ತರ ಕನ್ನಡ ಜಿಲ್ಲೆಯದು ಶೇ. ೧.೨೧ರಷ್ಟು ಮಾತ್ರ

ಕೋಷ್ಟಕ ೩.೩

ಬೆಳೆ ಪದ್ಧತಿ ಹಾಗೂ ಉತ್ಪಾದಕತೆ

ಕ್ರಸಂ.	ವಿವರ	ವಿಸ್ತೀರ್ಣ(ಹೆಕ್ಟರ್)	ಸರಾಸರಿ	ಉತ್ಪನ್ನ
೧.	ಒಟ್ಟು ಏಕದಳ ಧಾನ್ಯಗಳ ಉತ್ಪನ್ನ (ಟನ್ನುಗಳಲ್ಲಿ)	೮೧೯೮೧	೧೭.೮೭	೧೪೬೫೩೭೪
೨.	ಒಟ್ಟು ದ್ವಿದಳ ಧಾನ್ಯಗಳ ಉತ್ಪನ್ನ (ಟನ್ನು)	೨೪೨೬	೪.೨೭	೧೦.೩೭೩
೩.	ಒಟ್ಟು ಆಹಾರ ಧಾನ್ಯಗಳು	೮೪.೪೦೭	೧೭.೪೮	೧೪೭೫೭೪೭
೪.	ಒಟ್ಟು ಮಸಾಲೆ ಮತ್ತು ಸಾಂಬಾರು	೧೫.೭೮೭		೧೨೪೪
೫.	ತೆಂಗು	೭೧೯೭		
೬.	ಶೇಂಗಾ	೩೨೦೯	೧೮	೫೭೭೬೨
೭.	ಕಬ್ಬು	೧೦೦೮	೮೮೦	೮೮೭೦೪೦

(ಮೂಲ: ಉತ್ತರ ಕನ್ನಡ ಜಿಲ್ಲೆಯ ಅಂಕಿ-ಅಂಶಗಳ ನೋಟ, ೨೦೦೫-೨೦೦೬)

ಆಹಾರ ಧಾನ್ಯಗಳು ಜಿಲ್ಲೆಯ ಪ್ರಮುಖ ಬೆಳೆಗಳಾಗಿವೆ. ಇದರ ಜೊತೆಯಲ್ಲಿ ಮಸಾಲೆ ಹಾಗೂ ಸಂಬಾರು, ತೆಂಗು, ಅಡಿಕೆ, ಶೇಂಗಾ ಹಾಗೂ ಕಬ್ಬು ಸಹ ಜಿಲ್ಲೆಯ ಬೆಳೆಯ ಪದ್ಧತಿಯಲ್ಲಿ ಪಾಲನ್ನು ಪಡೆದಿದೆ. ಉತ್ತರ ಕನ್ನಡ ಜಿಲ್ಲೆಯಲ್ಲಿ ಶೇ. ೯೦ರಷ್ಟು ವಿಸ್ತೀರ್ಣದಲ್ಲಿ ಧಾನ್ಯ ಬೆಳೆಯನ್ನು ಬೆಳೆಸಲಾಗುವುದು. ಭತ್ತವು ಜಿಲ್ಲೆಯ ಪ್ರಮುಖ ಬೆಳೆಯಾಗಿದೆ. ಒಟ್ಟು ಏಕದಳ ಧಾನ್ಯಗಳು ಪ್ರತಿ ಹೆಕ್ಟೆರಿಗೆ ೧೭.೮೭ ಟನ್ ಆಗಿದೆ. ರಾಜ್ಯದ ಸರಾಸರಿ ಮಟ್ಟ(೧.೨೦ ಟನ್)ಕ್ಕಿಂತ ಬಹಳ ಅಧಿಕವಾಗಿದೆ.

ಜಿಲ್ಲೆಯಲ್ಲಿ ಶೇಂಗಾ ಬೆಳೆಯು ಪ್ರತಿ ಹೆಕ್ಟೆರಿಗೆ ೧೮ ಟನ್ನುಗಳಾಗಿದೆ. ಪ್ರತಿ ಹೆಕ್ಟೆರಿಗೆ ೮೮೦ ಟನ್ನು ಕಬ್ಬನ್ನು ಬೆಳೆಯಲಾಗುವುದು. ಹೀಗಾಗಿ ಜಿಲ್ಲೆಯ ಕೃಷಿ ಉತ್ಪನ್ನಗಳ ದೃಷ್ಟಿಯಿಂದ ಉತ್ತಮ ಸ್ಥಿತಿಯಲ್ಲಿದೆ ಎನ್ನಬಹುದು.

೩.೫. ನೀರಾವರಿ ವ್ಯವಸ್ಥೆ

ಉತ್ತರ ಕನ್ನಡ ಜಿಲ್ಲೆಯು ಉತ್ತಮವಾದ ಜಲಸಂಪನ್ಮೂಲಗಳನ್ನು ಹೊಂದಿದೆ. ಕಾಳಿ,ಗಂಗಾವಳಿ, ಅಘನಾಶಿನಿ ಹಾಗೂ ಶರಾವತಿ ಜಿಲ್ಲೆಯ ಮುಖ್ಯ ನದಿಗಳಾಗಿದ್ದು, ಬೇಡ್ತಿ, ವೆಂಕಟಾಪುರ ಮತ್ತು ವರದಾ ಇತರೆ ನದಿಗಳಾಗಿವೆ. ಆದರೂ ಉತ್ತರ ಕನ್ನಡ ಜಿಲ್ಲೆಯಲ್ಲಿ ನೀರಾವರಿ ಸೌಲಭ್ಯದ ಕೊರತೆ ಎದ್ದು ಕಾಣುತ್ತದೆ.

ಕೋಷ್ಟಕ ೩.೪

ನೀರಾವರಿಯ ಮೂಲಗಳು

ಕ್ರಸಂ. ವಿವರ	ಉ.ಕ.ಜಿಲ್ಲೆ	ಕರ್ನಾಟಕ
೧. ನಿವ್ವಳ ಬಿತ್ತನೆ ಪ್ರದೇಶ (ಹೆಕ್ಟರ್)	೧೨೪೭೫೦	೯೮೩೭೬೨೦
೨. ಒಟ್ಟು ನೀರಾವರಿ ಪ್ರದೇಶ (ಹೆಕ್ಟರ್)	೨೫,೪೩೭	೨೪,೫೦೪೨೭
೩. ನಿ.ಬಿ.ಪ್ರ. ನೀರಾವರಿಯ ಸರಾಸರಿ ಶೇ.ಪ್ರಮಾಣ	೨೦.೩೯	೨೪.೯೦
ನೀರಾವರಿ ಮೂಲಗಳು		
೪. ಕಾಲುವೆ	೯೪	೭೭೨೬೭೪
೫. ಕೆರೆ	೪೭೫೪	೧೮೨೯೬೩
೬. ಬಾವಿ	೭೩೦೨	೪೪೭೭೧೨
೭. ಕೊಳವೆ ಬಾವಿ	೨೯೦	೭೩೬೯೯
೮. ಏತ ನೀರಾವರಿ	೫೯೬	೧೦೦೯೯೦
೯. ಇತರೆ	೧೦೬೦೧	೨೦೩೦೯೭
೧೦. ಒಟ್ಟು	೨೫೪೩೭	೨೪೫೦೪೨೭

(ಮೂಲ: ಉತ್ತರ ಕನ್ನಡ ಜಿಲ್ಲೆಯ ಅಂಕಿ-ಅಂಶಗಳ ನೋಟ, ೨೦೦೫-೨೦೦೬)

ಈ ಜಿಲ್ಲೆಯ ೨೫,೪೩೭ ಹೆಕ್ಟೆರ್ ಭೂಮಿ ನೀರಾವರಿ ಪ್ರದೇಶವಾಗಿದೆ. ಜಿಲ್ಲೆಯ ನಿವ್ವಳ ಬಿತ್ತನೆ ಪ್ರದೇಶವು ಶೇ. ೨೦.೩೯ರಷ್ಟಿದೆ. ರಾಜ್ಯದ ಸರಾಸರಿ ಮಟ್ಟಕ್ಕೆ (ಶೇ. ೨೪.೯೦) ಹೋಲಿಸಿದರೆ ಕಡಿಮೆಯಿರುವುದು ಕಂಡುಬರುತ್ತದೆ. ಜಿಲ್ಲೆಯ ನಿವ್ವಳ ಬಿತ್ತನೆ ಪ್ರದೇಶವು ರಾಜ್ಯದ ನಿವ್ವಳ ಬಿತ್ತನೆ ಪ್ರದೇಶದ ಶೇ. ೧.೨೬ರಷ್ಟಿದೆ. ರಾಜ್ಯದ ಒಟ್ಟು ನೀರಾವರಿ ಪ್ರದೇಶದಲ್ಲಿ ಜಿಲ್ಲೆಯ ಶೇ. ೧.೦೩ರಷ್ಟು ಪಾಲಿದೆ. ನೀರಾವರಿಯಲ್ಲಿ ಜಿಲ್ಲೆಯು ತನ್ನ ಪಾಲನ್ನು ಪಡೆದುಕೊಳ್ಳಬೇಕಾಗಿದೆ.

ಜಿಲ್ಲೆಯ ನೀರಾವರಿಯ ಅವಶ್ಯಕತೆಯನ್ನು ಪೂರೈಸುವಲ್ಲಿ ಬಾವಿ ಮತ್ತು ಕೆರೆಗಳು ಪ್ರಮುಖವಾಗಿವೆ. ಉತ್ತರ ಕನ್ನಡ ಜಿಲ್ಲೆಯ ಶೇ. ೫೬.೬೧ರಷ್ಟು ನೀರಾವರಿ ಸೌಲಭ್ಯವು ಬಾವಿ, ಕೆರೆ ಹಾಗೂ ಕೊಳವೆ ಬಾವಿಗಳಿಂದಾಗಿದೆ. ಹೀಗಾಗಿ ಉತ್ತರ ಕನ್ನಡ ಜಿಲ್ಲೆಯ ಕೃಷಿಯು ಪೂರ್ತಿ ಮಳೆಯನ್ನೇ ಅವಲಂಬಿಸಿರುವುದು ಕಂಡುಬರುತ್ತದೆ.

೩.೫. ಜನಸಂಖ್ಯೆಯ ವಿಶಿಷ್ಟತೆಗಳು

ಕರ್ನಾಟಕ ರಾಜ್ಯದಲ್ಲಿ ಒಟ್ಟು ಜನಸಂಖ್ಯೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಪ್ರಮಾಣವು ಕ್ರಮವಾಗಿ ಶೇ. ೧೬.೨೦ರಷ್ಟು ಹಾಗೂ ಶೇ. ೭.೫೫ರಷ್ಟಿದೆ. ಉತ್ತರ

ಕನ್ನಡ ಜಿಲ್ಲೆಯಲ್ಲಿ ಪರಿಶಿಷ್ಟ ಜಾತಿಯವರು ಶೇ. ೭.೫ರಷ್ಟು ಮತ್ತು ಪರಿಶಿಷ್ಟ ಪಂಗಡದವರು ಶೇ. ೧.೭ರಷ್ಟಿದ್ದಾರೆ. ರಾಜ್ಯದಲ್ಲಿ ಉತ್ತರ ಕನ್ನಡ ಜಿಲ್ಲೆಯಲ್ಲಿ ಪರಿಶಿಷ್ಟ ಪಂಗಡದವರು ಅತ್ಯಂತ ಕಡಿಮೆ ಸಂಖ್ಯೆಯಲ್ಲಿದ್ದಾರೆ. ಉತ್ತರ ಕನ್ನಡ ಜಿಲ್ಲೆಯಲ್ಲಿ ಪರಿಶಿಷ್ಟ ಜಾತಿಯವರು ನಗರ ಪ್ರದೇಶದಲ್ಲಿ ನೆಲೆಗೊಂಡಿದ್ದಾರೆ ಮತ್ತು ಪರಿಶಿಷ್ಟ ಪಂಗಡದವರು ಗ್ರಾಮೀಣ ಪ್ರದೇಶದಲ್ಲಿ ನೆಲೆಸಿರುವರು.

ಕೋಷ್ಟಕ ೩.೫

ಉತ್ತರ ಕನ್ನಡ ಜಿಲ್ಲೆಯ ಜನಸಂಖ್ಯಾ ವಿಶಿಷ್ಟತೆಗಳು

ಕ್ರಸಂ.	ವಿವರ	ಉ.ಕ. ಜಿಲ್ಲೆ	ಕರ್ನಾಟಕ
೧.	ಭೌಗೋಳಿಕ ಪ್ರದೇಶ	೧೦,೨೨೨	೧೯,೧,೭೯೧
೨.	ಒಟ್ಟು ಜನಸಂಖ್ಯೆ (೨೦೦೧)	೧೩,೫೩,೬೪೪	೫,೨೭,೩೩,೯೫೮
೩.	ಜನಸಂಖ್ಯೆ ದಶಕವಾರು ಬೆಳವಣಿಗೆ	೧೦.೯೦	೧೭.೨೫
೪.	ಪರಿಶಿಷ್ಟ ಜಾತಿಯವರ ಸಂಖ್ಯೆ	೧೦೧೮೯೬	೮೫೬೩೯೩೦
೫.	ಪರಿಶಿಷ್ಟ ಪಂಗಡದವರು	೨೩,೭೮೧	೩೪೬೩೯೮೬
೬.	ಜನಸಾಂದ್ರತೆ	೧೩೨	೨೭೬
೭.	ಲಿಂಗ ಪ್ರಮಾಣ	೯೭೧	೯೬೫
೮.	ಸಾಕ್ಷರತೆ	೭೬.೬	೬೬.೬
೯.	ಮಹಿಳಾ ಸಾಕ್ಷರತೆ	೬೮.೫	೫೬.೯

(ಮೂಲ: ಉತ್ತರ ಕನ್ನಡ ಜಿಲ್ಲೆಯ ಅಂಕಿ-ಅಂಶಗಳ ನೋಟ, ೨೦೦೫-೨೦೦೬)

ರಾಜ್ಯದ ಒಟ್ಟು ಜನಸಂಖ್ಯೆಯ ಶೇ. ೨.೫ರಷ್ಟು ಉತ್ತರ ಕನ್ನಡ ಜಿಲ್ಲೆಯದು. ಈ ಜಿಲ್ಲೆಯ ಒಟ್ಟು ಜನಸಂಖ್ಯೆಯು ೧೩.೫೩ ಲಕ್ಷ. ಗ್ರಾಮೀಣ ಪ್ರದೇಶದಲ್ಲಿ ಶೇ. ೭೧ರಷ್ಟು ಜನರು ಹಾಗೂ ನಗರ ಪ್ರದೇಶದಲ್ಲಿ ಶೇ. ೨೯ರಷ್ಟು ಜನರು ನೆಲೆಗೊಂಡಿರುವರು. ಈ ಜಿಲ್ಲೆಯಲ್ಲಿ ಹಿಂದೂಗಳು, ಮುಸ್ಲಿಂ, ಕ್ರಿಶ್ಚಿಯನ್ನರು, ಟಿಬೆಟಿಯನ್ನರು ಮೊದಲಾದ ಧರ್ಮದವರು ನೆಲೆಸಿರುವರು, ಇದರಲ್ಲಿ ಶೇ. ೯೦ರಷ್ಟು ಜನರು ಹಿಂದುಗಳಾಗಿರುವರು.

ಕರ್ನಾಟಕದ ಒಟ್ಟು ಜನಸಂಖ್ಯೆಯಲ್ಲಿ ಮಹಿಳೆಯರ ಪ್ರಮಾಣವು ಅರ್ಧದಷ್ಟಿರುವುದು. ರಾಜ್ಯದ ಒಟ್ಟು ಮಹಿಳೆಯರ ಜನಸಂಖ್ಯೆಯ ಶೇ.೨.೭ರಷ್ಟು ಮಹಿಳೆಯರು ಉತ್ತರ ಕನ್ನಡ ಜಿಲ್ಲೆಯಲ್ಲಿ ನೆಲೆಗೊಂಡಿದ್ದಾರೆ. ರಾಜ್ಯದ ಒಟ್ಟೂ ಪುರುಷರ ಜನ ಸಂಖ್ಯೆಯ ಶೇ. ೨.೫ರಷ್ಟು ಪುರುಷರು ಜಿಲ್ಲೆಯಲ್ಲಿ ಇದ್ದಾರೆ. ಜಿಲ್ಲೆಯ ಶೇ.೨.೫ರಷ್ಟು ಕರ್ನಾಟಕ ಪುರುಷರನ್ನು ಹೊಂದಿದೆ. ಜಿಲ್ಲೆಯ ಜನಸಂಖ್ಯೆಯ ದಶಕವಾರು (೧೯೯೧ರಿಂದ ೨೦೦೧) ಬೆಳವಣಿಗೆಯ

ಶೇ. ೧೦.೯೦ರಷ್ಟಿದೆ. ಇದು ರಾಜ್ಯದ ಸರಾಸರಿ ಮಟ್ಟಕ್ಕಿಂತ ಕಡಿಮೆಯಿದೆ. ಉತ್ತರ ಕನ್ನಡ ಜಿಲ್ಲೆಯ ಮತ್ತೊಂದು ವಿಶಿಷ್ಟತೆಯೆಂದರೆ, ರಾಜ್ಯದಲ್ಲಿಯೇ ಜನಸಾಂದ್ರತೆಯ ಮಟ್ಟವು ಅತ್ಯಂತ ಕಡಿಮೆಯಿರುವುದು.

ಲಿಂಗ ಪ್ರಮಾಣವು ಮಹಿಳೆಯರ ಸ್ಥಿತಿಗತಿಯನ್ನು ಸೂಚಿಸುವ ಹಲವು ಸೂಚಿಗಳಲ್ಲಿ ಒಂದಾಗಿದೆ. ಉತ್ತರ ಕನ್ನಡ ಜಿಲ್ಲೆಯ ಪ್ರತಿ ಸರಾಸರಿ ೧೦೦೦ ಪುರುಷರಿಗೆ ೯೭೧ ಮಹಿಳೆಯರ ಸಂಖ್ಯೆಯಿದೆ. ಅಂದರೆ ೨೦೦೧ರ ಜನಗಣತಿಯಲ್ಲಿ ೨೯ ಮಹಿಳೆಯರು ಕಾಣೆಯಾಗಿರುವರು. ಉತ್ತರ ಕನ್ನಡ ಜಿಲ್ಲೆಯ ಲಿಂಗ ಪ್ರಮಾಣವು ರಾಜ್ಯ ಮಟ್ಟಕ್ಕಿಂತ ಉತ್ತಮವಾಗಿದೆ.

ಸಾಕ್ಷರತೆ

ಸಮುದಾಯ ಒಂದರ ಪರಿವರ್ತನೆಯಲ್ಲಿ ಸಾಕ್ಷರತೆಯು ಮುಖ್ಯವಾದ ಪಾತ್ರವನ್ನು ವಹಿಸುತ್ತದೆ. ಸಾಕ್ಷರತೆಯು ಜನಸಮುದಾಯದ ಧಾರಣಾಶಕ್ತಿ ಮತ್ತು ಹಕ್ಕುದಾರಿಕೆಯನ್ನು ವರ್ಧಿಸುತ್ತದೆ. ಸಾಕ್ಷರತೆಯಲ್ಲಿ ಜಿಲ್ಲೆಯು ರಾಜ್ಯದ ಸರಾಸರಿ ಮಟ್ಟಕ್ಕಿಂತ ಉತ್ತಮವಾಗಿದೆ. ಉತ್ತರ ಕನ್ನಡ ಜಿಲ್ಲೆಯ ಸಾಕ್ಷರತೆಯ ಮಟ್ಟವು (ಶೇ. ೭೬.೬) ರಾಜ್ಯದ ಸಾಕ್ಷರತೆಯ ಮಟ್ಟ(ಶೇ. ೬೬.೬)ಕ್ಕಿಂತ ಅಧಿಕವಾಗಿದೆ. ಉತ್ತರ ಕನ್ನಡ ಜಿಲ್ಲೆಯ ಮಹಿಳೆಯರ ಸಾಕ್ಷರತೆ ಮಟ್ಟವು (ಶೇ. ೬೮.೫) ರಾಜ್ಯದ ಮಹಿಳೆಯರ ಸಾಕ್ಷರತೆಯ ಮಟ್ಟ(ಶೇ. ೫೬.೯)ಕ್ಕಿಂತ ಉತ್ತಮವಾಗಿರುವುದು ಕಂಡುಬರುತ್ತದೆ. ಉತ್ತರ ಕನ್ನಡ ಜಿಲ್ಲೆಯು ವಸಾಹತುಶಾಹಿ ಕಾಲದಲ್ಲಿ ಮುಂಬಯಿ ಕರ್ನಾಟಕಕ್ಕೆ ಸೇರಿದ ಪ್ರಾಂತವಾಗಿತ್ತು. ಬ್ರಿಟಿಷರ ಕಾಲದಲ್ಲಿ (೧೮೫೦) ಶಿಕ್ಷಣ ಸೌಲಭ್ಯಗಳು ಉತ್ತರ ಕನ್ನಡ ಜಿಲ್ಲೆಯಲ್ಲಿ ಪ್ರಾರಂಭಗೊಂಡಿದ್ದವು. ಉತ್ತರ ಕನ್ನಡ ಜಿಲ್ಲೆಯ ಮುಂದುವರೆದ ಸಾಮಾಜಿಕ ಗುಂಪುಗಳಾದ ಸಾರಸ್ವತರು, ಕೊಂಕಣಿಗಳು ಹಾಗೂ ಹವ್ಯಕ ಬ್ರಾಹ್ಮಣರು ಜಿಲ್ಲೆಯ ಶಿಕ್ಷಣಕ್ಕೆ ಮಹತ್ವದ ಕೊಡುಗೆಯನ್ನು ನೀಡಿರುವರು. ಉತ್ತರ ಕನ್ನಡ ಜಿಲ್ಲೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಸಂಖ್ಯೆಯು ಕಡಿಮೆಯಾಗಿದೆ. ಆದ್ದರಿಂದ ಉತ್ತರ ಕನ್ನಡ ಜಿಲ್ಲೆಯ ಸಾಕ್ಷರತೆಯ ಮಟ್ಟವು ರಾಜ್ಯ ಮಟ್ಟಕ್ಕಿಂತ ಉತ್ತಮವಾಗಿರುವ ಅಂಶ ಕಂಡುಬರುತ್ತದೆ.

ಅಭಿವೃದ್ಧಿಯು ಕೇವಲ ವರಮಾನದ ಏರಿಕೆಯಾಗಿರದೆ, ಜನರ ಬದುಕನ್ನು ಉತ್ತಮಪಡಿಸುವುದಾಗಿರಬೇಕು. ಈ ನಿಟ್ಟಿನಲ್ಲಿ ಉತ್ತರ ಕನ್ನಡ ಜಿಲ್ಲೆಯು ಆರ್ಥಿಕಾಭಿವೃದ್ಧಿಯಲ್ಲಿ ಕರ್ನಾಟಕದಲ್ಲಿ ೧೧ನೇ ಸ್ಥಾನದಲ್ಲಿದೆ. ಮಾನವ ಅಭಿವೃದ್ಧಿಯಲ್ಲಿ ೫ನೇ ಸ್ಥಾನದಲ್ಲಿದೆ. ಹೀಗಾಗಿ ವರಮಾನ ವರ್ಧನೆಯನ್ನು ಮಾನವ ಅಭಿವೃದ್ಧಿಯಾಗಿ ಪರಿವರ್ತಿಸುವಲ್ಲಿ ಜಿಲ್ಲೆಯು ಉತ್ತಮ ಸ್ಥಾನದಲ್ಲಿದೆ.

ಜಿಲ್ಲೆಯ ಸಾಮಾಜಿಕ ಗುಂಪುಗಳು

ರಾಜ್ಯದ ಉತ್ತರ ಕನ್ನಡ ಜಿಲ್ಲೆಯಲ್ಲಿ ಅತ್ಯಂತ ಕಡಿಮೆ ಪ್ರಮಾಣದಲ್ಲಿ ಪರಿಶಿಷ್ಟ ಜಾತಿ ಶೇ. ೭.೫ರಷ್ಟು ಹಾಗೂ ಪರಿಶಿಷ್ಟ ಪಂಗಡದವರು ಶೇ. ೧.೭ರಷ್ಟು ಇದ್ದಾರೆ. ರಾಜ್ಯದಲ್ಲಿ ಪರಿಶಿಷ್ಟರ ಯಾದಿಯಲ್ಲಿ ಹಾಲಕ್ಕಿಗಳು ಸೇರ್ಪಡೆಗೊಂಡಿಲ್ಲ. ಅದರಿಂದ ಉತ್ತರ ಕನ್ನಡ ಜಿಲ್ಲೆಯಲ್ಲಿ ಪರಿಶಿಷ್ಟ ಪಂಗಡ ಕಡಿಮೆ ಪ್ರಮಾಣದಲ್ಲಿರಬಹುದು. ಉತ್ತರ ಕನ್ನಡ ಜಿಲ್ಲೆಯಲ್ಲಿ ಹಿಂದೂ ಧರ್ಮದ ವಿವಿಧ ಸಾಮಾಜಿಕ ಗುಂಪುಗಳು ಕಂಡುಬರುತ್ತದೆ. ಉತ್ತರ ಕನ್ನಡ ಜಿಲ್ಲೆಯ ವಿವಿಧ ಸಾಮಾಜಿಕ ಗುಂಪುಗಳೆಂದರೆ ಸಾರಸ್ವತರು, ಕೊಂಕಣಿಗಳು, ಹವ್ಯಕರು, ವಾಣಿ(ವೈಶ್ಯರು), ಅಕ್ಕಸಾಲಿಗರು, ನಾಡವರು, ನಾಮಧಾರಿಗಳು, ಕೋಮಾರಪಂತರು, ಕೊಂಕಣಿ ಮರಾಠಿಗಳು, ಹಾಲಕ್ಕಿಗಳು, ಗಾಣಿಗರು, ಸಿದ್ದಿಗಳು, ಕುಣಬಿಗಳು, ಗುಡಿಗಾರರು. ಶೇರುಗಾರರು. ಅಗೇರ್ ಹಾಗೂ ಮೀನುಗಾರರು ಮುಂತಾದವರು. ಇತರೆ ಧರ್ಮದವರಾದ ಕ್ರಿಶ್ಚಿಯನ್ನರು, ಮುಸಲ್ಮಾನರು ಹಾಗೂ ಟಿಬೆಟಿಯನ್ನರು ಉತ್ತರ ಕನ್ನಡ ಜಿಲ್ಲೆಯಲ್ಲಿ ವಿವಿಧ ಜನವರ್ಗಗಳು ಪರಸ್ಪರ ಸಹಕಾರದಿಂದ ಸಹಬಾಳ್ವೆಯನ್ನು ನಡೆಸುತ್ತಿರುವರು.

ಮುಂದುವರೆದ ಸಾಮಾಜಿಕ ಗುಂಪುಗಳು ಶೈಕ್ಷಣಿಕವಾಗಿ, ಆರ್ಥಿಕವಾಗಿ, ಸಾಮಾಜಿಕವಾಗಿ ಹಾಗೂ ರಾಜಕೀಯವಾಗಿ ಸಬಲರಾಗಿರುವರು. ಉತ್ತರ ಕನ್ನಡ ಜಿಲ್ಲೆಯ ಹಿಂದುಳಿದ ಸಾಮಾಜಿಕ ಗುಂಪಿನಲ್ಲಿ ಕೆಲ ಗುಂಪುಗಳು ಶೈಕ್ಷಣಿಕವಾಗಿ, ಆರ್ಥಿಕವಾಗಿ ಪ್ರಗತಿಯನ್ನು ಹೊಂದುತ್ತಿರುವುದು ಕಂಡುಬರುತ್ತದೆ. ಉತ್ತರ ಕನ್ನಡ ಜಿಲ್ಲೆಯ ಬುಡಕಟ್ಟಿನವರಾದ ಹಾಲಕ್ಕಿಗಳು ಅಧಿಕೃತವಾಗಿ ಬುಡಕಟ್ಟಿನವರೆಂದು ಗುರುತಿಸಿಕೊಳ್ಳಲಾಗದ ಸ್ಥಿತಿಯಲ್ಲಿರುವರು. ಆದ್ದರಿಂದ ಇಂದು ಇಂತಹ ಸಾಮಾಜಿಕ ಗುಂಪುಗಳು ತಮ್ಮ ನೆಲೆಯನ್ನು ಗುರುತಿಸಿಕೊಳ್ಳುವುದರ ಸಲುವಾಗಿ ಹೋರಾಟ ನಡೆಸುತ್ತಿರುವುದು ಕಂಡುಬರುತ್ತದೆ. ಉತ್ತರ ಕನ್ನಡ ಜಿಲ್ಲೆಯಲ್ಲಿ ಗಮನಿಸಬೇಕಾದ ಅಂಶವೆಂದರೆ, ಹಿಂದುಳಿದ ಸಾಮಾಜಿಕ ಗುಂಪುಗಳು ರಾಜಕೀಯವಾಗಿ ಮುಂದುವರೆಯುತ್ತಿರುವುದು ಇಂದು ಗ್ರಾಮ ಜೀವನದಲ್ಲಿ ವೈಯಕ್ತಿಕ ಹಿತಾಸಕ್ತಿ ಕಡೆಗೆ ಹೆಚ್ಚು ಕೇಂದ್ರೀಕರಿಸುತ್ತಿರುವುದು ಕಂಡುಬರುತ್ತದೆ. ಜಾತಿ ಜಾತಿಗಳ ನಡುವೆ ಅವ್ಯಕ್ತ ಬಾಂಧವ್ಯ ಇನ್ನು ಉಳಿದುಕೊಂಡು ಸಾಮಾಜಿಕ ಸಾಮರಸ್ಯ ಕಂಡುಬರುತ್ತದೆ. ಉತ್ತರ ಕನ್ನಡ ಜಿಲ್ಲೆಯಲ್ಲಿ ಹಬ್ಬ, ಹರಿದಿನ, ಜಾತ್ರೆ, ಬಂಡಿಹಬ್ಬ, ಗಣಪತಿ ಹಬ್ಬದ ಸಂಧರ್ಭದಲ್ಲಿ ಎಂದೂ ಬಿಗುವಿನ ವಾತಾರವರಣ ಕಂಡುಬರುವುದಿಲ್ಲ.

೩.೬. ದುಡಿಮೆಗಾರರ ವಿಂಗಡಣೆ

ದುಡಿಮೆಯಲ್ಲಿ ಪಾಲ್ಗೊಳ್ಳುವಿಕೆ ಪ್ರಮಾಣವು, ಪ್ರದೇಶದ ಅಭಿವೃದ್ಧಿಯ ಮಟ್ಟವನ್ನು ಗುರುತಿಸುವ ಸೂಚಿಯಾಗಿರುವುದು ಒಟ್ಟು ಜನಸಂಖ್ಯೆ ಶೇ. ೪೨.೯೪ರಷ್ಟು ಜನರು ದುಡಿಮೆಗಾರರಾಗಿರುವರು.

ಕೋಷ್ಟಕ ೩.೬

ಉತ್ತರ ಕನ್ನಡ ಜಿಲ್ಲೆಯ ಒಟ್ಟು ದುಡಿಮೆಗಾರರ ವಿಂಗಡಣೆ

ಕ್ರಸಂ.	ವಿವರ	ಉತ್ತರಕನ್ನಡ ಜಿಲ್ಲೆ
೧.	ಒಟ್ಟು ಜನಸಂಖ್ಯೆ	೧೩೫೩೬೪೪
೨.	ಒಟ್ಟು ದುಡಿಮೆದಾರರು	೫೮೧೨೭೮
೩.	ಒಟ್ಟು ಕೃಷಿ ಸಾಗುವಳಿದಾರರು	೧೪೩೩೬೭
೪.	ಒಟ್ಟು ಪುರುಷ ಕೃಷಿ ಸಾಗುವಳಿದಾರರರು	೯೪೨೫೪
೫.	ಒಟ್ಟು ಮಹಿಳಾ ಕೃಷಿ ಸಾಗುವಳಿದಾರರು	೪೯೧೧೩
೬.	ಒಟ್ಟು ಕೃಷಿ ಕಾರ್ಮಿಕರು	೮೪೫೭೩
೭.	ಒಟ್ಟು ಪುರುಷ ಕೃಷಿ ಕಾರ್ಮಿಕರು	೩೭೮೯೧
೮.	ಒಟ್ಟು ಮಹಿಳಾ ಕೃಷಿ ಕಾರ್ಮಿಕರು	೪೬೬೮೨.
೯.	ಒಟ್ಟು ಇತರೆ ಚಟುವಟಿಕೆ	೧೩೦೪೮
೧೦.	ಒಟ್ಟು ಇತರೆ ಮಹಿಳೆಯರು	೩೯೨೨
೧೧.	ಒಟ್ಟು ಇತರೆ ಸೇವೆಯಲ್ಲಿ	೩೪೦೨೯೦
೧೨.	ಒಟ್ಟು ಇತರೆ ಸೇವೆಯಲ್ಲಿ ಮಹಿಳೆಯರು	೮೫೬೯೨

(ಮೂಲ: ಉತ್ತರ ಕನ್ನಡ ಜಿಲ್ಲೆಯ ಅಂಕಿ-ಅಂಶಗಳ ನೋಟ, ೨೦೦೫-೨೦೦೬)

ಒಟ್ಟು ದುಡಿಮೆಗಾರರ ಪ್ರಮಾಣದಲ್ಲಿ ಪುರುಷ ದುಡಿಮೆಗಾರರ ಶೇ. ೬೮.೧೦ರಷ್ಟು ಇದ್ದರೆ ಮಹಿಳಾ ದುಡಿಮೆಗಾರರ ಪ್ರಮಾಣವು ಶೇ. ೨೪.೬೬ರಷ್ಟಿದೆ. ಕೃಷಿ ಸಾಗುವಳಿದಾರರಲ್ಲಿ ಪುರುಷರ ಪ್ರಮಾಣವು ಶೇ.೬೫.೭೪ರಷ್ಟು ಹಾಗೂ ಮಹಿಳಾ ಸಾಗುವಳಿದಾರರ ಪ್ರಮಾಣದಲ್ಲಿ ಶೇ. ೩೪.೨೫ರಷ್ಟಿದೆ. ಒಟ್ಟು ದುಡಿಮೆದಾರರಲ್ಲಿ ಕೃಷಿ ಕಾರ್ಮಿಕರ ಪ್ರಮಾಣವು ಶೇ. ೧೪.೫ರಷ್ಟಿದೆ. ಅದರಲ್ಲಿ ಮಹಿಳಾ ಕೃಷಿ ಕಾರ್ಮಿಕರ ಪ್ರಮಾಣ ಶೇ. ೫೫.೧೯ರಷ್ಟಿರುವುದು ಗಮನಿಸಬೇಕಾಗಿರುವ ಅಂಶ. ಇತರೆ ಚಟುವಟಿಕೆ ಹಾಗೂ ಇತರೆ ಸೇವೆಯ ದುಡಿಮೆಯಲ್ಲಿ ಒಟ್ಟು ದುಡಿಮೆಗಾರ ಪ್ರಮಾಣವು ಶೇ.೨೬.೧೦ರಷ್ಟಿದೆ. ಒಟ್ಟು ದುಡಿಮೆಗಾರರಲ್ಲಿ ಕೃಷಿಯೇತರ ಚಟುವಟಿಕೆಯಲ್ಲಿ ತೊಡಗಿಕೊಂಡವರ ಪ್ರಮಾಣವು ಜಿಲ್ಲೆಯಲ್ಲಿ ಹೆಚ್ಚಿದೆ. ಕೃಷಿಯೇತರ ಚಟುವಟಿಕೆಯ ದುಡಿಮೆಯಲ್ಲಿ ಪುರುಷರು ಪಾಲ್ಗೊಳ್ಳುವಿಕೆಯ ಪ್ರಮಾಣವು ಶೇ.೭೪.೬೩ರಷ್ಟಿದೆ. ಮಹಿಳೆಯರು ಕೃಷಿಯೇತರ ಚಟುವಟಿಕೆಯಲ್ಲಿ ತೊಡಗಿಕೊಳ್ಳುವ ಪ್ರಮಾಣ ಕೇವಲ ಶೇ. ೨೫.೩೬ರಷ್ಟಿದೆ.

ಕೋಷ್ಟಕ ೩.೭

ಶೇಕಡಾವಾರು ದುಡಿಮೆಗಾರರ ವಿಂಗಡಣೆ

ಕ್ರಸಂ.	ವಿವರ	ಒಟ್ಟು	ಪುರುಷರು	ಮಹಿಳೆಯರು	ಶೇ.
೧.	ಜಿಲ್ಲೆಯ ಜನಸಂಖ್ಯೆ	೧೩,೫೩,೬೪೪	೬,೮೬,೮೭೫	೬,೬೬,೭೬೮	೪೯.೨೫
೨.	ದುಡಿಮೆಗಾರರು	೫,೮೧,೨೭೮	೩,೯೫,೯೬೯	೧,೮೫,೪೦೯	೩೧.೮೯
೩.	ಕೃಷಿಸಾಗುವಳಿದಾರರು	೧,೪೩,೩೬೭	೯೪,೨೫೪	೪೯,೧೧೩	೩೪.೨೫
೪.	ಕೃಷಿ ಕಾರ್ಮಿಕರು	೮೪,೫೭೩	೩೭,೮೯೧	೪೬,೬೮೨	೫.೨೫
೫.	ಇತರೆ ಚಟುವಟಿಕೆ	೧೩೦೪೮	೯,೧೨೬	೩,೯೨೨	೩೦.೦೫
೬.	ಇತರೆ ಸೇವೆಗಳು	೩,೪೦,೨೯೦	೨,೫೪,೫೯೮	೨೫,೬೯೨	೨೮.೧೫

(ಮೂಲ: ಉತ್ತರ ಕನ್ನಡ ಜಿಲ್ಲೆಯ ಅಂಕಿ-ಅಂಶಗಳ ನೋಟ, ೨೦೦೫-೨೦೦೬)

ಜನಸಂಖ್ಯೆಯ ಅರ್ಧದಷ್ಟಿರುವ ಮಹಿಳೆಯರು ದುಡಿಮೆಯಲ್ಲಿ ಪಾಲ್ಗೊಳ್ಳುವಿಕೆಯ ಪ್ರಮಾಣವು ಕಡಿಮೆಯಿದೆ. ಜಿಲ್ಲೆಯಲ್ಲಿ ಮಹಿಳಾ ಸಾಕ್ಷರತೆಯ ಮಟ್ಟವು (ಶೇ. ೬೮.೫) ಉತ್ತಮವಾಗಿದ್ದರು ಸಹ ದುಡಿಮೆಯಲ್ಲಿ ಮಹಿಳೆಯರು ಪಾಲ್ಗೊಳ್ಳುವಿಕೆಯಲ್ಲಿ ಕೊರತೆ ಕಾಣಿಸುತ್ತದೆ.ಒಟ್ಟು ಕೃಷಿ ಕಾರ್ಮಿಕರ ಪ್ರಮಾಣದಲ್ಲಿ ಮಹಿಳಾ ಕೃಷಿ ಕಾರ್ಮಿಕರ ಪ್ರಮಾಣವು ಅಧಿಕಗೊಂಡಿದೆ. ಆದರೆ, ಕೃಷಿಯೇತರ ಚಟುವಟಿಕೆಯ ದುಡಿಮೆದಾರರಲ್ಲಿ ಮಹಿಳಾ ದುಡಿಮೆದಾರರ ಪ್ರಮಾಣ ಕಡಿಮೆಯಿದೆ.

೩.೮. ಅಧ್ಯಯನ ಸೀಮೆಗಳ ಪರಿಚಯ

ಉತ್ತರ ಕನ್ನಡ ಜಿಲ್ಲೆಯ ಅಂಕೋಲಾ ಹಾಗೂ ಕುಮಟಾ ತಾಲೂಕಿನ ಹಾಲಕ್ಕಿಗಳ ಐದು ಸೀಮೆಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ. ಹಾಲಕ್ಕಿ ಸಮುದಾಯದವರು ಆಡಳಿತದ ದೃಷ್ಟಿಯಿಂದ ಸೀಮೆಗಳನ್ನು ರಚಿಸಿಕೊಂಡಿರುವರು. ಈ ಸಮುದಾಯದಲ್ಲಿ ಒಟ್ಟು ಐದು ಸೀಮೆಗಳಿವೆ. ಅವುಗಳಲ್ಲಿ ಅಂಕೋಲಾ ತಾಲೂಕು ಎರಡೂ ಸೀಮೆಗಳನ್ನು ಹಾಗೂ ಕುಮಟಾ ತಾಲೂಕು ಮೂರು ಸೀಮೆಗಳನ್ನು ಹೊಂದಿದೆ. ಈ ಎರಡೂ ತಾಲೂಕುಗಳನ್ನು ಅಧ್ಯಯನಕ್ಕೆ ಒಳಪಡಿಸುವುದರಿಂದ ಶೇ. ೭೧.೪೨ರಷ್ಟು ಸೀಮೆಯನ್ನು ಒಳಗೊಂಡಿರುತ್ತದೆ. ಅಂಕೋಲಾ ತಾಲೂಕಿನ ಎರಡು ಸೀಮೆಯಲ್ಲಿ ೩೫ ಗ್ರಾಮಗಳು ಹಾಗೂ ಕುಮಟಾ ತಾಲೂಕಿನ ಮೂರು ಸೀಮೆಯಲ್ಲಿ ೩೨ ಗ್ರಾಮಗಳಿವೆ. ಅಂಕೋಲಾ ತಾಲೂಕಿನ ವ್ಯಾಪ್ತಿಯಲ್ಲಿ ಒಳಗೊಂಡಿರುವ ಎರಡು ಸೀಮೆಗಳಾದರೆ ಅಂಕೋಲಾ ಸೀಮೆ ಮತ್ತು ನುಶಿಕೋಟೆ ಸೀಮೆ. ಕುಮಟಾ ತಾಲೂಕಿನ ವ್ಯಾಪ್ತಿಯಲ್ಲಿ ಬರುವ ಮೂರು ಸೀಮೆಗಳೆಂದರೆ ಗೋಕರ್ಣ ಸೀಮೆ, ಕುಂಬಾರ ಗದ್ದೆ ಸೀಮೆ ಹಾಗೂ ಹರಟೆ ಸೀಮೆ.

ಅಂಕೋಲಾ ಮತ್ತು ಕುಮಟಾ ತಾಲೂಕಿನ ಸೀಮೆಯಲ್ಲಿ ಬರುವ ಗ್ರಾಮಗಳು ಇಂತಿವೆ.

ಕೋಷ್ಟಕ ೩.೮

ಸೀಮೆಗಳ ಗ್ರಾಮದ ಪಟ್ಟಿ

ಕ್ರಸಂ. ವಿವರಣೆ	ಅಂಕೋಲಾ ತಾಲೂಕು			ಕುಮಟಾ ತಾಲೂಕು	
೧. ಸೀಮೆಗಳು	ಅಂಕೋಲಾ ಸೀಮೆ	ಸುಶಿಕೋಟೆ ಸೀಮೆ	ಗೋಕರ್ಣ ಸೀಮೆ	ಕುಂಬಾರ ಗದ್ದೆ ಸೀಮೆ	ಹರಟೆ ಸೀಮೆ\
೨. ಗ್ರಾಮಗಳ ಸಂಖ್ಯೆ	೨೧	೧೪	೧೦	೧೧	೧೧

(ಮೂಲ: ಹಾಲಕ್ಕಿ ಉಕ್ಕಲಿಗರ ಸಂಘ)

ನಮ್ಮ ಅಧ್ಯಯನ ಪ್ರದೇಶವಾದ ಅಂಕೋಲಾ ಹಾಗೂ ಕುಮಟಾ ಪ್ರದೇಶವು ತನ್ನ ವಿಶಿಷ್ಟತೆಯಿಂದ ಜಿಲ್ಲೆಯಲ್ಲಿ ಗುರುತಿಸಿಕೊಂಡಿದೆ. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಮಹತ್ವದ ಕೊಡುಗೆ ನೀಡಿದ ಕಾರಣ ಅಂಕೋಲಾವು ಇತಿಹಾಸದಲ್ಲಿ 'ಬಾರ್ಡೋಲಿ' ಎಂದು ಗುರುತಿಸಿಕೊಂಡಿದೆ.

ಕೋಷ್ಟಕ ೩.೯

ಸೀಮೆ ಪ್ರದೇಶದ ಭೌಗೋಳಿಕ ಲಕ್ಷಣ ಮತ್ತು ಭೂಮಿಯ ಬಳಕೆ

ಕ್ರಸಂ. ವಿವರ	ಜಿಲ್ಲೆ	ಅಂಕೋಲಾ	ಕುಮಟಾ
೧. ಭೌಗೋಳಿಕ ಪ್ರದೇಶ (ಚ.ಕಿ)	೧೦,೨೨೨	೯೧೯	೫೮೨
೨. ಮಳೆಯ ಪ್ರಮಾಣ (ಮೀ.ಮೀ)೨೦೦೫	೨೯,೭೨೫	೩೧,೯೨೨	೩೨,೦೨೮
೩. ಮಳೆಯ ದಿವಸಗಳು ವಾಸ್ತವಿಕ	೯೮	೧೦೧	೧೦೧
೪. ಅರಣ್ಯ ಪ್ರದೇಶ (ಹೆಕ್ಟರ್)	೮,೧೩,೬೯೫	೭೫,೩೭೪	೩೯,೬೪೧
೫. ವ್ಯವಸಾಯೇತರ ಭೂಮಿ	೫೦,೬೦೦	೩,೭೭೨	೫,೩೧೨
೬. ಸಾಗುವಳಿ ಮಾಡದಿರುವ ಇತರೆ ಭೂಮಿ	೩೦,೧೫೬	೨,೯೪೦	೨,೮೩೮
೭. ಬೀಳು ಭೂಮಿ	೧೬,೯೫೧	೧,೮೭೫	೧,೩೮೭
೮. ಬಿತ್ತನೆಯಾದ ನಿವ್ವಳ ಭೂಮಿ	೧,೨೪,೭೫೦	೯,೦೧೯	೧೦,೬೯೭
೯. ಮೀನುಗಾರಿಕೆ (ಮೀ.ಟನ್ನು) ೩೧.೦೩.೨೦೦೬	೨೬,೨೫೪	೨,೪೫೦	೫,೫೦೧

(ಮೂಲ: ಉತ್ತರ ಕನ್ನಡ ಜಿಲ್ಲೆಯ ಅಂಕಿ-ಅಂಶಗಳ ನೋಟ, ೨೦೦೫-೨೦೦೬)

ಅಂಕೋಲಾ ಹಾಗೂ ಕುಮಟಾ ತಾಲೂಕುಗಳು ವಿಸ್ತೀರ್ಣದಲ್ಲಿ ಜಿಲ್ಲೆಯಲ್ಲಿ ಕ್ರಮವಾಗಿ ನಾಲ್ಕನೆಯ ಹಾಗೂ ಹತ್ತನೆಯ ಸ್ಥಾನದಲ್ಲಿವೆ. ಅಧ್ಯಯನ ಕ್ಷೇತ್ರದಲ್ಲಿ ಮಳೆಯ ಪ್ರಮಾಣವು

ಜಿಲ್ಲಾ ಮಟ್ಟಕ್ಕಿಂತ ಅಧಿಕವಾಗಿದೆ. ಅಂಕೋಲಾ ತಾಲೂಕಿನಲ್ಲಿ ಶೇ. ೮೨ರಷ್ಟು ಪ್ರದೇಶವು ಅರಣ್ಯವಾಗಿದೆ. ಇದು ಜಿಲ್ಲಾ ಮಟ್ಟಕ್ಕಿಂತ(ಶೇ. ೭೯ರಷ್ಟು) ಅಧಿಕವಾಗಿದೆ.

ಕುಮಟಾದಲ್ಲಿ ಅರಣ್ಯ ಪ್ರದೇಶವು ಶೇ. ೬೭.೫ರಷ್ಟಿದ್ದು, ಜಿಲ್ಲಾ ಮಟ್ಟಗಿಂತ ಕಡಿಮೆಯಿದೆ. ಅಂಕೋಲಾದಲ್ಲಿ ಒಟ್ಟು ಭೂ ಪ್ರದೇಶದ ಶೇ. ೯.೮ರಷ್ಟು ಭಾಗ ಮಾತ್ರ ನಿವ್ವಳ ಬಿತ್ತನೆ ಪ್ರದೇಶವಾಗಿದೆ. ಕುಮಟಾ ಪ್ರದೇಶದಲ್ಲಿ ಶೇ. ೧೮.೩ರಷ್ಟು ಭೂಮಿ ನಿವ್ವಳ ಬಿತ್ತನೆ ಭೂಮಿಯಾಗಿದೆ.

ಮೀನುಗಾರಿಕೆಯು ಈ ಪ್ರದೇಶದ ಪ್ರಮುಖ ಉದ್ದಿಮೆಯಾಗಿದೆ. ಜಿಲ್ಲೆಯಲ್ಲಿ ಅಂಕೋಲಾ ಮೀನುಗಾರಿಕೆಯಲ್ಲಿ ಐದನೆಯ ಸ್ಥಾನ ಹಾಗೂ ಕುಮಟಾ ಜಿಲ್ಲೆಯಲ್ಲಿ ಮೀನುಗಾರಿಕೆಯಲ್ಲಿ ಮೂರನೇಯ ಸ್ಥಾನದಲ್ಲಿದೆ. ಮೀನು ಈ ಸೀಮೆಯ ಜನರ ಪ್ರಮುಖ ಆಹಾರವಾಗಿದೆ.

ಕೋಷ್ಟಕ ೩.೧೦

ಸೀಮೆ ಪ್ರದೇಶದ ಕೃಷಿ ಸಾಗುವಳಿ ಪದ್ಧತಿ

ಕ್ರಸಂ. ವಿವರ	ಹಿಡುವಳಿಗಳ ಸಂಖ್ಯೆ			ವಿಸ್ತೀರ್ಣ ಹೆಕ್ಟರ್		
	ಉ.ಕ.	ಅಂ.	ಕುಮಟಾ	ಉ.ಕ.	ಅಂ.	ಕುಮಟಾ
೧. ಅತಿ ಸಣ್ಣ ಹಿಡುವಳಿದಾರರು	೧೧೫೬೧೪	೧೪೯೬೨	೨೯೬೨	೩೭೬೩೭	೪೪೩೦	೫೫೨೩
೨. ಸಣ್ಣ ಹಿಡುವಳಿದಾರರು	೨೯೩೯	೨೪೭೮	೨೭೩೭	೪೧೧೩೭	೩೪೧೬	೩೮೧೧
೩. ಮಧ್ಯಮ ಹಿಡುವಳಿದಾರರು	೧೪೭೩೬	೧೧೧೧	೯೯೬	೨೫೫೯೬	೧೨೧೧	೧೪೩೯
೪. ದೊಡ್ಡ ಹಿಡುವಳಿದಾರರು	೩೨೮	೧೪	೧೮	೪೪೦೪	೧೮೨	೨೯೭
ಒಟ್ಟು ಸಂಖ್ಯೆ	೧೬೪೭೪೬	೧೮,೭೯೧	೨೪೫೦೨	೧೪೯೫೩೯	೧೨೧೮೬	೧೩೭೦೮

(ಮೂಲ: ಉತ್ತರ ಕನ್ನಡ ಜಿಲ್ಲೆಯ ಅಂಕಿ-ಅಂಶಗಳ ನೋಟ, ೨೦೦೫-೨೦೦೬)

ಈ ಪ್ರದೇಶದಲ್ಲಿ ಜಿಲ್ಲಾ ಮಟ್ಟಕ್ಕಿಂತ ಅಧಿಕ ಪ್ರಮಾಣದಲ್ಲಿ ಮಳೆಯಾಗುತ್ತದೆ. ಜಿಲ್ಲೆಯಲ್ಲಿ ಮಳೆಯನ್ನು ಪಡೆಯುವಲ್ಲಿ ಕುಮಟಾವು ನಾಲ್ಕನೇ ಸ್ಥಾನ ಹಾಗೂ ಅಂಕೋಲವು ಮಳೆಯನ್ನು ಪಡೆಯುವಲ್ಲಿ ಐದನೆಯ ಸ್ಥಾನದಲ್ಲಿದೆ. ಈ ಪ್ರದೇಶದ ಕೃಷಿಯು ಪೂರ್ಣ ಮಳೆಯನ್ನೇ ಅವಲಂಬಿಸಿದೆ. ಅಧ್ಯಯನ ಸೀಮೆ ಅಂಕೋಲಾದಲ್ಲಿ ಅತಿಸಣ್ಣ ಹಿಡುವಳಿದಾರರು ಶೇ.

೭೯.೬೨ರಷ್ಟಿದ್ದಾರೆ. ಈ ಪ್ರದೇಶದಲ್ಲಿ ಚಿಕ್ಕ ಹಿಡುವಳಿದಾರ ಪ್ರಮಾಣವು ಶೇ. ೮೫.೩೪ರಷ್ಟಿದೆ. ಈ ಪ್ರದೇಶದಲ್ಲಿ ಚಿಕ್ಕ ಹಿಡುವಳಿದಾರರ ಪ್ರಮಾಣವು ಜಿಲ್ಲಾ ಸರಾಸರಿ ಮಟ್ಟಕ್ಕಿತ ಅಧಿಕವಾಗಿದೆ. ಅಂಕೋಲದಲ್ಲಿ ಅತಿ ಚಿಕ್ಕ ಹಿಡುವಳಿದಾರರು ಮತ್ತು ಚಿಕ್ಕ ಹಿಡುವಳಿದಾರರು ಶೇ. ೬೪.೩೮ರಷ್ಟು ಭೂಮಿಯ ಮೇಲೆ ಹಿಡಿತ ಹೊಂದಿರುವರು. ಕುಮಟಾದಲ್ಲಿ ಅತಿ ಚಿಕ್ಕ ಹಿಡುವಳಿದಾರರು ಶೇ. ೬೮.೦೯ ರಷ್ಟು ವಿಸ್ತೀರ್ಣದ ಮೇಲೆ ಹಿಡಿತ ಹೊಂದಿರುವರು.

ಕೋಷ್ಟಕ ೩.೧೧

ಸೀಮೆ ಪ್ರದೇಶದ ಬೆಳೆ ಪದ್ಧತಿ ಹಾಗೂ ಉತ್ಪಾದಕತೆ

ಕ್ರಸಂ. ವಿವರ	ಉ.ಕ.ಜಿಲ್ಲೆ	ಉತ್ಪನ್ನ ಟನ್ನು	ಅಂಕೋಲಾ	ಉತ್ಪನ್ನ ಟನ್ನು	ಕುಮಟಾ	ಉತ್ಪನ್ನ ಟನ್ನು
೧. ಏಕದಳ ವಿಸ್ತೀರ್ಣ	೮೧೯೮೧	೧೪೬೫೩೭೪	೬೨೧೬	೧೧೬೫೫೦	೬೦೩೨	೧೧೩೦೪೨
೨. ದ್ವಿದಳ ವಿಸ್ತೀರ್ಣ	೨೪೨೬	೧೦೩೭೩	೧೫೩	೬೪೩	೧೦೭	೪೪೯
೩. ಒಟ್ಟು ಧಾನ್ಯಗಳು	೧೨೬೫೫೦	೧೪೭೫೭೪೭	೯೨೧೯	೧೧೭೧೯೩	೧೦೬೯೭	೧೧೩೪೯೧
೪. ಕಬ್ಬು	೧೦೦೮	೮೮೭೦೪೮	೪೧	೩೬೦೮೦	೮೯	೭೮೩೨೦
೫. ತೆಂಗು	೭೧೯೭	--	೬೬೦	--	೧೪೯೧	--
೬. ಶೇಂಗಾ	೩೨೦೯	೫೭೭೬೨	೮೬೯	೧೫೬೪೨	೭೮೫	೧೪೧೩೦

(ಮೂಲ: ಉತ್ತರ ಕನ್ನಡ ಜಿಲ್ಲೆಯ ಅಂಕಿ-ಅಂಶಗಳ ನೋಟ, ೨೦೦೫-೨೦೦೬)

ಆಹಾರ ಬೆಳೆಯಲ್ಲಿ ಭತ್ತ ಪ್ರಮುಖ ಬೆಳೆಯಾಗಿದೆ. ಭತ್ತ ಈ ಪ್ರದೇಶದ ಪ್ರಮುಖ ಬೆಳೆ, ಕಬ್ಬು, ತೆಂಗು ಶೇಂಗಾ, ಅಡಿಕೆ, ಮಾವು, ಗೇರು, ಇತರ ಬೆಳೆಯಾಗಿದೆ. ಅಂಕೋಲಾದಲ್ಲಿ ಶೇ. ೬೮.೯೨ರಷ್ಟು ವಿಸ್ತೀರ್ಣದಲ್ಲಿ ಏಕದಳ ಧಾನ್ಯಗಳನ್ನು ಬೆಳೆಯಲಾಗುವುದು. ಕುಮಟಾದಲ್ಲಿ ಶೇ. ೫೬.೩೮ರಷ್ಟು ವಿಸ್ತೀರ್ಣದಲ್ಲಿ ಏಕದಳ ಧಾನ್ಯಗಳನ್ನು ಬೆಳೆಯಲಾಗುವುದು. ಕರಾವಳಿ ಪ್ರದೇಶವು ಉಸುಕು ಮಿಶ್ರಿತ ಮಣ್ಣಿನಿಂದ ಕೂಡಿರುವುದರಿಂದ ಈ ಭೂಮಿಯು ಶೇಂಗಾ, ತೆಂಗಿನ ಬೆಳೆಗೆ ಉತ್ತಮವಾಗಿದೆ. ಪ್ರತಿ ಹೆಕ್ಟೆರ್‌ಗೆ ೮೮೦ ಟನ್ ಕಬ್ಬನ್ನು ಬೆಳೆಯುತ್ತಾರೆ. ಕರಾವಳಿ ಪ್ರದೇಶದ ಹವಾಗುಣವು ಸಹ ತೆಂಗು, ಅಡಿಕೆ, ಮಾವು, ಗೇರು, ಅನಾನಸ್, ಮಸಾಲೆ ಬೆಳೆಗೆ ಪೂರಕವಾಗಿದೆ.

ನೀರಾವರಿಯ ಸೌಲಭ್ಯ: ಅಧ್ಯಯನ ಕ್ಷೇತ್ರದಲ್ಲಿ ಜಲಸಂಪನ್ಮೂಲವಿದ್ದರೂ, ನೀರಾವರಿಯ ಸೌಲಭ್ಯದ ಕೊರತೆ ಕಂಡುಬರುವುದು. ಅಧ್ಯಯನ ಕ್ಷೇತ್ರದ ಕೃಷಿಯು ಪೂರ್ತಿಯಾಗಿ ಮಳೆಯನ್ನೇ ಅವಲಂಬಿಸಿದೆ.

ಕೋಷ್ಟಕ ೩.೧೨

ಸೀಮೆಯ ನೀರಾವರಿ ಪ್ರದೇಶ ಮತ್ತು ನೀರಾವರಿ ಮೂಲಗಳು

ಕ್ರಸಂ. ವಿವರ	ಉ.ಕ. ಜಿಲ್ಲೆ	ಅಂಕೋಲಾ	ಕುಮಟಾ
೧. ನಿವ್ವಳ ಬಿತ್ತನೆಯಾದ ಪ್ರದೇಶ (ಹೆಕ್ಟರ್)	೧,೨೪,೭೫೦	೯,೦೧೯	೧೦,೬೯೭
೨. ಒಟ್ಟು ನೀರಾವರಿ	೨೫,೪೩೭	೧೨೨೭	೩೩೪೦
೩. ನೀರಾವರಿಯ ಸರಾಸರಿ ಪ್ರಮಾಣ	೨೦,೩೯%	೧೩.೬೦%	೩೧.೨೨%
೪. ನೀರಾವರಿಯ ಮೂಲಗಳು			
೧. ಕಾಲುವೆ	೯೪	-	-
೨. ಕೆರೆ	೪,೭೫೪	-	-
೩. ಬಾವಿ	೭,೩೦೨	೬೫೩	೧,೬೯೯
೪. ಕೊಳವೆಬಾವಿ	೨,೦೯೦	-	೧೫
೫. ಏತ ನೀರಾವರಿ	೫೯೬	-	೪೪
೬. ಇತರೆ	೧೦,೬೦೧	೫೬೪	೧೪೮೨

(ಮೂಲ: ಉತ್ತರ ಕನ್ನಡ ಜಿಲ್ಲೆಯ ಅಂಕಿ-ಅಂಶಗಳ ನೋಟ, ೨೦೦೫-೨೦೦೬)

ಅಂಕೋಲಾದಲ್ಲಿ ಗಂಗಾವಳಿ ನದಿ ಹಾಗೂ ಕುಮಟಾದಲ್ಲಿ ಅಘನಾಶಿನಿ ನದಿ ಹರಿದಿದೆ. ಅಂಕೋಲಾದಲ್ಲಿ ಕೃಷಿ ಭೂಮಿ ಶೇ. ೧೩.೬೦ರಷ್ಟು ಮಾತ್ರ ನೀರಾವರಿಯನ್ನು ಹೊಂದಿದೆ. ಇದರಲ್ಲಿ ಶೇ. ೫೩.೨೧ರಷ್ಟು ನೀರಾವರಿಯು ಬಾವಿಯಿಂದ ಒದಗಿಸಿಕೊಂಡಿರುವುದು. ಕುಮಟಾದಲ್ಲಿ ಬಾವಿಯು ಶೇ. ೫೦.೮೭ರಷ್ಟು ನೀರನ್ನು ಒದಗಿಸುತ್ತದೆ. ಅಂಕೋಲಾದಲ್ಲಿ ನೀರಾವರಿಯ ಸೌಲಭ್ಯವು ಜಿಲ್ಲಾ ಮಟ್ಟಗಿಂತ ಕಡಿಮೆಯಿದೆ. ಈ ಪ್ರದೇಶದಲ್ಲಿ ಕೃಷಿಯು ಪೂರ್ಣವಾಗಿ ಮಳೆಯನ್ನೆ ಅವಲಂಬಿಸಿದೆ. ಈ ಭಾಗದಲ್ಲಿ ನೀರಾವರಿ ಸೌಲಭ್ಯವನ್ನು ಒದಗಿಸಬೇಕಾಗಿದೆ.

ಕೋಷ್ಟಕ ೩.೧೩

ಸೀಮೆಯ ಜನಸಂಖ್ಯೆ ವಿಶಿಷ್ಟತೆಗಳು

ಕ್ರಸಂ.	ವಿವರ	ಉ.ಕ.ಜಿಲ್ಲೆ	ಅಂಕೋಲಾ	ಕುಮಟಾ
೧.	ಭೌಗೋಳಿಕ ಪ್ರದೇಶ (ಚ.ಕಿ.ಮೀ)	೧೦,೨೨೨	೯೧೯	೫೮೨
೨.	ಒಟ್ಟು ಜನಸಂಖ್ಯೆ	೧೩,೫೩,೬೪೪	೧,೦೧,೫೪೯	೧,೪೫,೮೨೬
೩.	ಒಟ್ಟುಗ್ರಾಮವಾಸಿಗಳು	೯,೬೫,೭೩೧	೭೫,೪೧೧	೧,೧೧,೩೨೭
೪.	ಪರಿಶಿಷ್ಟ ಪಂಗಡದ ಜನಸಂಖ್ಯೆ	೨೩,೭೮೧	೨೬೫	೭೫
೫.	ಪರಿಶಿಷ್ಟ ಜಾತಿ	೧,೦೧,೮೯೬	೮,೧೧೯	೮,೭೬೬
೬.	ಜನಸಾಂದ್ರತೆ	೧೩೨	೧೧೦	೨೫೧
೭.	ಲಿಂಗಪ್ರಮಾಣ	೯೭೧	೯೭೬	೯೭೫
೮.	ಸಾಕ್ಷರತೆ	೭೬೫	೭೬೮	೭೯೬

(ಮೂಲ: ಉತ್ತರ ಕನ್ನಡ ಜಿಲ್ಲೆಯ ಅಂಕಿ-ಅಂಶಗಳ ನೋಟ, ೨೦೦೫-೨೦೦೬)

ಉತ್ತರ ಕನ್ನಡ ಜಿಲ್ಲೆಯ ಶೇ. ೭.೫೦ರಷ್ಟು ಜನಸಂಖ್ಯೆಯು ಅಂಕೋಲಾ ಸೀಮೆಯಲ್ಲಿ ಹಾಗೂ ಶೇ. ೧೦.೭೭ರಲ್ಲಿ ಕುಮಟಾದಲ್ಲಿ ನೆಲೆಸಿರುವರು. ಅಂಕೋಲಾ ಸೀಮೆಯಲ್ಲಿ ಶೇ. ೭೪.೨೬ರಷ್ಟು ಗ್ರಾಮೀಣ ಸೀಮೆಯಲ್ಲಿ ವಾಸಿಸುತ್ತಾರೆ. ಮತ್ತು ಕುಮಟಾ ಸೀಮೆಯಲ್ಲಿ ಶೇ. ೭೬.೩೪ರಷ್ಟು ಜನಸಂಖ್ಯೆಯು ಗ್ರಾಮೀಣ ಪ್ರದೇಶದಲ್ಲಿ ವಾಸಿಸುತ್ತಾರೆ. ಅಂಕೋಲಾದ ಒಟ್ಟು ಜನಸಂಖ್ಯೆಯಲ್ಲಿ ಪರಿಶಿಷ್ಟ ಜಾತಿ ಪ್ರಮಾಣ ಕೇವಲ ಶೇ. ೭೯ರಷ್ಟು ಹಾಗೂ ಪರಿಶಿಷ್ಟ ಪಂಗಡದ ಪ್ರಮಾಣ ಶೇ. ೦.೨೬ರಷ್ಟಿದೆ. ಕುಮಟಾದಲ್ಲಿ ಪರಿಶಿಷ್ಟ ಜಾತಿ ಪ್ರಮಾಣ ಶೇ. ೬.೦ರಷ್ಟು ಹಾಗೂ ಪರಿಶಿಷ್ಟ ಪಂಗಡ ಪ್ರಮಾಣ ಶೇ. ೦.೦೫ರಷ್ಟಿದೆ. ಅಂಕೋಲಾ ಸೀಮೆಯ ಜನಸಾಂದ್ರತೆಯು ಜಿಲ್ಲಾ ಮಟ್ಟದ ಜನಸಾಂದ್ರತೆಗಿಂತ ಕಡಿಮೆಯಿದೆ. ಕುಮಟಾದ ಜನಸಾಂದ್ರತೆಯ ಮಟ್ಟವು ಜಿಲ್ಲಾ ಮಟ್ಟಕ್ಕಿಂತ ಅಧಿಕವಾಗಿದೆ. ಈ ಎರಡು ಸೀಮೆಯಲ್ಲಿ ಲಿಂಗ ಪ್ರಮಾಣವು ಜಿಲ್ಲಾ ಮಟ್ಟಕ್ಕಿಂತ ಉತ್ತಮವಾಗಿದೆ. ಜಿಲ್ಲೆಯಲ್ಲಿ ಲಿಂಗ ಪ್ರಮಾಣದ ಸ್ಥಾನದಲ್ಲಿ ಕ್ರಮವಾಗಿ ನಾಲ್ಕನೇ ಹಾಗೂ ಐದನೇ ಸ್ಥಾನದಲ್ಲಿದೆ. ಅಧ್ಯಯನ ಕ್ಷೇತ್ರದ ಸಾಕ್ಷರತೆಯ ಮಟ್ಟವು ಜಿಲ್ಲಾ ಮಟ್ಟದ ಸಾಕ್ಷರತೆಯ ಮಟ್ಟಗಿಂತ ಅಧಿಕವಾಗಿದೆ.

ಕೋಷ್ಟಕ ೩.೧೪

ಸೀಮೆ ಪ್ರದೇಶದ ಸಾಕ್ಷರತಾ ಪ್ರಮಾಣ

ಕ್ರಸಂ.	ವಿವರ	ಉ.ಕ.ಜಿಲ್ಲೆ	ಅಂಕೋಲಾ	ಕುಮಟಾ
೧.	ಒಟ್ಟು ಗ್ರಾಮೀಣ ಸಾಕ್ಷರತೆ	೭೨.೭	೭೩.೨	೭೭.೭
೨.	ಒಟ್ಟು ನಗರ ಸಾಕ್ಷರತೆ	೮೬.೩	೮೭.೦	೮೫.೭
೩.	ಗ್ರಾಮೀಣ ಪುರುಷರ ಸಾಕ್ಷರತೆ	೮೧.೬	೮೩.೧	೮೬.೩
೪.	ನಗರ ಪುರುಷರ ಸಾಕ್ಷರತೆ	೯೧.೮	೯೩.೦	೯೧.೬
೫.	ಗ್ರಾಮೀಣ ಮಹಿಳೆಯರ ಸಾಕ್ಷರತೆ	೬೩.೫	೬೨.೯	೬೯.೦
೬.	ನಗರ ಮಹಿಳಾ ಸಾಕ್ಷರತೆ	೮೦.೬	೮೦.೯	೭೯.೦೬
೭	ಒಟ್ಟು ಸಾಕ್ಷರತೆ	೭೬.೬	೭೬.೮	೭೯.೬
೮.	ಪುರುಷರ ಸಾಕ್ಷರತೆ	೮೪.೫.	೮೫.೭	೮೭.೬
೯.	ಮಹಿಳೆಯರ ಸಾಕ್ಷರತೆ	೬೮.೫	೬೭.೭	೭೧.೬

(ಮೂಲ: ಉತ್ತರ ಕನ್ನಡ ಜಿಲ್ಲೆಯ ಅಂಕಿ-ಅಂಶಗಳ ನೋಟ, ೨೦೦೫-೨೦೦೬)

ಅಧ್ಯಯನ ಸೀಮೆಯ ಸಾಕ್ಷರತೆಯ ಮಟ್ಟವು ರಾಜ್ಯಮಟ್ಟಕ್ಕಿಂತ ಉತ್ತಮವಾಗಿದೆ. ಗ್ರಾಮೀಣ ಸಾಕ್ಷರತೆ ಹಾಗೂ ನಗರ ಪ್ರದೇಶದ ಸಾಕ್ಷರತೆಯ ನಡುವೆ ಹಾಗೂ ಪುರುಷ ಮತ್ತು ಮಹಿಳೆಯರ ಸಾಕ್ಷರತೆಯ ನಡುವೆ ಅಸಮಾನತೆ ಕಂಡುಬರುತ್ತದೆ. ಅಂಕೋಲಾದ ಸೀಮೆಯಲ್ಲಿ ಮಹಿಳೆಯರ ಸಾಕ್ಷರತೆಯ ಮಟ್ಟವು ಜಿಲ್ಲಾ ಮಟ್ಟಕ್ಕಿಂತ ಕಡಿಮೆಯಿದೆ.

ದುಡಿಮೆಯಲ್ಲಿ ಮಹಿಳೆಯರು

ದುಡಿಮೆಯಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆಯು ಮಹಿಳೆಯರ ಸಬಲೀಕರಣ ಸೂಚಿಯಾಗಿದೆ. ಜನಸಂಖ್ಯೆಯ ಅರ್ಧದಷ್ಟಿರುವ ಮಹಿಳೆಯರು ದುಡಿಮೆಯಲ್ಲಿ ಶೇ. ೫೦ರಷ್ಟು ಪಾಲ್ಗೊಳ್ಳುವಿಕೆಯು ಅವಶ್ಯಕವಾಗಿದೆ.

ಕೋಷ್ಟಕ ೩.೧೫

ದುಡಿಮೆಯಲ್ಲಿ ಮಹಿಳೆಯರು

ಕ್ರಸಂ.	ವಿವರ	ಒಟ್ಟು	ಮಹಿಳೆಯರು
೧.	ಉತ್ತರ ಕನ್ನಡ ಜಿಲ್ಲೆಯ ಜನಸಂಖ್ಯೆ	೧೩,೫೩,೬೪೪	೬,೬೬,೭೬೮
	ಅಂಕೋಲಾ ಜನಸಂಖ್ಯೆ	೧,೦೧,೫೪೯	೫೦,೧೫೧
	ಕುಮಟಾ ಜನಸಂಖ್ಯೆ	೧,೪೫,೮೨೬	೭೧,೯೯೨
೨.	ಉತ್ತರ ಕನ್ನಡ ಜಿಲ್ಲೆಯ ದುಡಿಮೆಗಾರರು	೫,೮೧,೨೭೮	೧,೮೫,೪೦೯
	ಅಂಕೋಲಾ ದುಡಿಮೆಗಾರರು	೫೨,೭೯೫	೨೦,೩೪೭
	ಕುಮಟಾ ದುಡಿಮೆಗಾರರು	೫೭,೪೮೯	೧೫,೯೧೩
೩.	ಉತ್ತರ ಕನ್ನಡ ಜಿಲ್ಲೆಯ ಸಾಗುವಳಿದಾರರು	೧,೪೩,೩೬೭	೪೯,೧೧೩
	ಅಂಕೋಲಾ ಸಾಗುವಳಿದಾರರು	೧೯೪೭೦	೮,೧೧೫
	ಕುಮಟಾ ಸಾಗುವಳಿದಾರರು	೯,೮೭೪	೨,೪೦೩
೪.	ಉತ್ತರ ಕನ್ನಡ ಜಿಲ್ಲೆಯ ಕೃಷಿ ಕಾರ್ಮಿಕರು	೮೪,೫೭೪	೪೬,೬೮೨
	ಅಂಕೋಲಾ ಕೃಷಿ ಕಾರ್ಮಿಕರು	೯,೧೨೯	೫,೦೪೪
	ಕುಮಟಾ ಕೃಷಿ ಕಾರ್ಮಿಕರು	೮,೯೧೪	೪,೩೭೩
೫.	ಉತ್ತರ ಕನ್ನಡ ಜಿಲ್ಲೆಯ ಇತರ ಚಟುವಟಿಕೆ	೧೩,೦೪೮	೩,೯೨೨
	ಅಂಕೋಲಾ ಇತರೆ ಚಟುವಟಿಕೆ	೧,೧೫೧	೪೧೩
	ಕುಮಟಾ ಇತರೆ ಚಟುವಟಿಕೆ	೧,೦೬೬	೨೮೪
೬.	ಉತ್ತರ ಕನ್ನಡ ಜಿಲ್ಲೆಯ ಇತರೆ ಸೇವೆಗಳು	೩,೪೦,೨೯೦	೮೫,೬೯೨
	ಅಂಕೋಲಾ ಇತರೆ ಸೇವೆಗಳು	೨೩,೦೪೫	೬,೭೭೪
	ಕುಮಟಾ ಇತರೆ ಸೇವೆಗಳು	೩೭,೬೩೫	೮,೮೫೩

ದುಡಿಮೆಯಲ್ಲಿ ಪಾಲ್ಗೊಳ್ಳುವಿಕೆಯಲ್ಲಿ ಪುರುಷ ಹಾಗೂ ಮಹಿಳೆಯರ ನಡುವೆ ಅಸಮಾನತೆಯಿದೆ. ಅಂಕೋಲಾದಲ್ಲಿ ದುಡಿಮೆಯಲ್ಲಿ ಪಾಲ್ಗೊಳ್ಳುವ ಮಹಿಳೆಯ ಪ್ರಮಾಣವು ಶೆ.೩೮.೫೩ರಷ್ಟಿದೆ. ಇದು ಉತ್ತರ ಕನ್ನಡ ಜಿಲ್ಲಾಮಟ್ಟ ಶೇ. ೩೧.೮೯ ಹೆಚ್ಚಿದೆ. ಕುಮಟಾದಲ್ಲಿ ದುಡಿಮೆಯಲ್ಲಿ ಮಹಿಳೆಯರು ಪಾಲ್ಗೊಳ್ಳುವಿಕೆ ಪ್ರಮಾಣವು ಶೇ. ೨೭.೬೮ರಷ್ಟಿದ್ದು, ಇದು ಜಿಲ್ಲಾಮಟ್ಟಕ್ಕಿಂತ ಕಡಿಮೆಯಿದೆ. ಅಂಕೋಲಾದಲ್ಲಿ ಮಹಿಳಾ ಸಾಗುವಳಿದಾರರ ಪ್ರಮಾಣವು ಶೇ. ೪೧.೬೮ರಷ್ಟಿದ್ದು, ಇದು ಜಿಲ್ಲಾ ಮಟ್ಟಕ್ಕಿಂತ ಶೇ. ೩೪.೨೫ರಷ್ಟು ಅಧಿಕವಾಗಿದೆ.

ಕುಮಟಾದಲ್ಲಿ ಜಿಲ್ಲಾಮಟ್ಟಕ್ಕಿಂತ ಮಹಿಳಾ ಸಾಗುವಳಿದಾರ ಪ್ರಮಾಣವು ಕಡಿಮೆಯಿದೆ. ಕುಮಟಾದಲ್ಲಿ ಮಹಿಳಾ ಸಾಗುವಳಿದಾರರ ಪ್ರಮಾಣ ಶೇ. ೨೪.೩೩ರಷ್ಟಿದೆ. ಅಂಕೋಲಾದಲ್ಲಿ ಮಹಿಳಾ ಕೃಷಿ ಕಾರ್ಮಿಕ ಪ್ರಮಾಣವು ಶೇ. ೫೫.೨೫ ರಷ್ಟಿದೆ. ಇದು ಜಿಲ್ಲಾ ಮಟ್ಟಕ್ಕಿಂತ (ಶೇ. ೫೫.೧೯) ಹೆಚ್ಚಿದೆ. ಆದರೆ ಕುಮಟಾದಲ್ಲಿ ಮಹಿಳಾ ಕೃಷಿ ಕಾರ್ಮಿಕರ ಪ್ರಮಾಣವು ಜಿಲ್ಲಾ ಮಟ್ಟಕ್ಕಿಂತ ಕಡಿಮೆಯಿದೆ. ಇತರೆ ಚಟುವಟಿಕೆ ಹಾಗೂ ಸೇವೆಗಳಲ್ಲಿ ಮಹಿಳೆಯ ಪ್ರಮಾಣವು ಅಂಕೋಲಾದಲ್ಲಿ ಜಿಲ್ಲಾ ಮಟ್ಟಕ್ಕಿಂತ ಅಧಿಕವಾಗಿದೆ. ಅಂಕೋಲಾದಲ್ಲಿ ಇತರೆ ಚಟುವಟಿಕೆಯಲ್ಲಿ ಮಹಿಳೆಯರ ಪ್ರಮಾಣ ಶೇ. ೩೫.೮೮ರಷ್ಟಿದೆ. ಹಾಗೂ ಇತರೆ ಸೇವೆಯಲ್ಲಿ ಇದು ಶೇ. ೨೯.೩೯ರಷ್ಟಿದ್ದು ಜಿಲ್ಲಾ ಮಟ್ಟಕ್ಕಿಂತ ಹೆಚ್ಚಿದೆ. ಜಿಲ್ಲೆಯಲ್ಲಿ ಇತರೆ ಚಟುವಟಿಕೆಯಲ್ಲಿ ಮಹಿಳೆ ಪಾಲು ಶೇ. ೩೦.೦೫ರಷ್ಟು ಹಾಗೂ ಇತರೆ ಸೇವೆಯಲ್ಲಿ ಶೇ. ೨೫.೧೮ರಷ್ಟನ್ನು ಹೊಂದಿರುವರು. ಕುಮಟಾದಲ್ಲಿ ಇತರೆ ಚಟುವಟಿಕೆಯಲ್ಲಿ ಮಹಿಳೆಯರ ಪಾಲು ಶೇ. ೨೬.೬೪ರಷ್ಟು ಹಾಗೂ ಇತರೆ ಸೇವೆಯಲ್ಲಿ ಶೇ. ೨೩.೫೨ರಷ್ಟು ಪಾಲನ್ನು ಪಡೆದಿರುವರು. ಅಧ್ಯಯನ ಕ್ಷೇತ್ರದಲ್ಲಿ ಕೃಷಿಯನ್ನು ಮಹಿಳೀಕರಣಗೊಳಿಸುತ್ತಿರುವುದು ಕಂಡುಬರುತ್ತದೆ. ಈ ಸೀಮೆಯಲ್ಲಿ ಸಾಕ್ಷರತೆಯ ಮಟ್ಟವು ಉತ್ತಮವಾಗಿದ್ದರೂ ಸಹ ದುಡಿಮೆಯಲ್ಲಿ ಮಹಿಳೆಯರು ಪಾಲ್ಗೊಳ್ಳುವಿಕೆಯಲ್ಲಿ ಅಸಮಾನತೆ ಕಂಡುಬರುತ್ತದೆ.

ಅಧ್ಯಾಯ ೪

ಹಾಲಕ್ಕಿಗಳ ಸಾಮಾಜಿಕತೆ ಮತ್ತು ಪರಿವರ್ತನೆ

೪.೧. ಸಾಂಪ್ರದಾಯಿಕ ರಚನೆ ಮತ್ತು ಪರಿವರ್ತನೆ

೪.೨. ಸಾಂಪ್ರದಾಯಿಕ ರಾಜಕೀಯ ಸಂಘಟನೆ ಹಾಗೂ ಪರಿವರ್ತನೆ

೪.೩. ಧಾರ್ಮಿಕತೆಯ ಸಂಕೀರ್ಣತೆ ಮತ್ತು ಮಹಿಳೆ

೪.೪ ಮನೋಭಾವದಲ್ಲಿ ಪರಿವರ್ತನೆ

೪.೫. ನಿರ್ಧಾರ ತೆಗೆದುಕೊಳ್ಳುವಲ್ಲಿ ಮಹಿಳೆಯರು

ಅಧ್ಯಾಯ ೪

ಹಾಲಕ್ಕಿಗಳ ಸಾಮಾಜಿಕತೆ ಮತ್ತು ಪರಿವರ್ತನೆ

ಈ ಅಧ್ಯಯನದಲ್ಲಿ ಹಾಲಕ್ಕಿ ಮಹಿಳೆಯರ ಸಾಮಾಜಿಕ ಸ್ಥಿತಿಯನ್ನು ವಿಶ್ಲೇಷಿಸಲಾಗಿದೆ. ಅಧ್ಯಯನದ ಸೈದ್ಧಾಂತಿಕ ನೆಲೆಯನ್ನು ಲಕ್ಷ್ಯದಲ್ಲಿಟ್ಟುಕೊಂಡು ಕುಟುಂಬ, ಪಿತ್ರಾರ್ಜಿತ ವಾರಸುದಾರಿಕೆ ವಿವಾಹ ಮುಂತಾದ ಸೂಚಿಯಿಂದ ಮಹಿಳೆಯರ ಸ್ಥಿತಿಯನ್ನು ನೋಡಲಾಗಿದೆ. ಸಾಂಪ್ರದಾಯಿಕ ಸಾಮಾಜಿಕ ರಚನೆಯ ಬದಲಾವಣೆಯನ್ನು ಗುರುತಿಸಲು ವಿವಾಹ, ಲಿಂಗತಾರತಮ್ಯ, ಆರೋಗ್ಯ, ವಸತಿ, ಶಿಕ್ಷಣ, ಕುಡಿಯುವ ನೀರು, ಕುಟುಂಬ ಯೋಜನೆಯ ಸೂಚಿಗಳನ್ನು ಬಳಸಿಕೊಳ್ಳಲಾಗಿದೆ.

ಈ ಅಧ್ಯಾಯದಲ್ಲಿ ಸಾಮಾಜಿಕ, ರಾಜಕೀಯ ಹಾಗೂ ಧಾರ್ಮಿಕ ಸೂಚಿಗಳ ಮೂಲಕ ಹಾಲಕ್ಕಿ ಮಹಿಳೆಯರ ವಿಶಿಷ್ಟತೆಯಲ್ಲಿ ಉಂಟಾಗುತ್ತಿರುವ ಪರಿವರ್ತನೆಯನ್ನು ಚರ್ಚಿಸಲಾಗಿದೆ. ಈ ಹಿನ್ನೆಲೆಯಲ್ಲಿ ಪ್ರಸ್ತುತ ಅಧ್ಯಯನ ಸೀಮೆಗಳಲ್ಲಿ ಪರಿವರ್ತನೆಯ ಮಟ್ಟವನ್ನುತಿಳಿಯುವ ಪ್ರಯತ್ನವನ್ನು ಮಾಡಲಾಗಿದೆ.

೪.೧. ಸಾಂಪ್ರದಾಯಿಕ, ಸಾಮಾಜಿಕ ರಚನೆ ಮತ್ತು ಪರಿವರ್ತನೆ

ಇತರೆ ಬುಡಕಟ್ಟುಗಳ ಸಾಮಾಜಿಕ ರಚನೆಯಂತೆ ಹಾಲಕ್ಕಿ ಬುಡಕಟ್ಟಿನವರ ಸಾಮಾಜಿಕ ರಚನೆಯಿದೆ. ಹಾಲಕ್ಕಿ ಸಮುದಾಯವು ಸಾಮಾಜಿಕ ರಚನೆಯ ಬಂಧುತ್ವ ಮತ್ತು ಸೀಮೆ (ವಾಸಸ್ಥಾನ)ಗಳೆಂಬ ನಿಯಮದಡಿಯಲ್ಲಿ ರಚಿತವಾಗಿದೆ. ಉತ್ತರಕನ್ನಡ ಜಿಲ್ಲೆಯ ಕರಾವಳಿ ಪ್ರದೇಶಗಳಾದ ಕಾರವಾರ, ಅಂಕೋಲಾ, ಕುಮಟಾ ಮತ್ತು ಹೊನ್ನಾವರ ತಾಲೂಕಿನಲ್ಲಿ ತಮ್ಮದೇ ಆದ ೫ ಸೀಮೆಗಳನ್ನು ರಚಿಸಿಕೊಂಡರು. ಹಾಲಕ್ಕಿಗಳಲ್ಲಿ ಬಂಧುತ್ವ ಹಾಗೂ ಸೀಮೆ ತತ್ವದ ಆಧಾರದ ಮೇಲೆ ಹುಟ್ಟು, ವಿವಾಹ, ಸಾವು, ಕೃಷಿ, ಆರ್ಥಿಕ ಚಟುವಟಿಕೆಯಲ್ಲಿ ಸಹಕಾರವಿರುತ್ತದೆ.

ಕುಟುಂಬ : ಹಾಲಕ್ಕಿಗಳಲ್ಲಿ ವಾಸಸ್ಥಳದ ಆಧಾರದ ಮೇಲೆ ಮೂರು ಪ್ರಮುಖ ಸಾಂಸ್ಥಿಕ ಚೌಕಟ್ಟುಗಳಿವೆ. ಅವೆಂದರೆ ಕುಟುಂಬ, ನೆರೆಹೊರೆ ಹಾಗೂ ಸೀಮೆಯ ಸಮುದಾಯ ವಾಸಸ್ಥಾನದ ಆಧಾರದ ಮೇಲಿಂದ ಕುಟುಂಬವು ಸಮಾಜದ ಪ್ರಥಮ ಘಟಕವಾಗಿದೆ. ಒಂದೇ ಸೂರಿನಡಿಯಲ್ಲಿ ವಾಸಿಸುತ್ತಾ, ಒಂದೇ ಪಾತ್ರೆಯ ಊಟವನ್ನು ಹಂಚಿಕೊಳ್ಳುವವರನ್ನು ಕುಟುಂಬದವರೆಂದು ಪರಿಗಣಿಸಲಾಗಿದೆ.

ಹಾಲಕ್ಕಿಗಳು ಶೇ. ೧೦೦ರಷ್ಟು ಒಕ್ಕಲುತನದಲ್ಲಿ ತೊಡಗಿಕೊಂಡವರು. ಕೃಷಿ ಚಟುವಟಿಕೆಯನ್ನು ಆಧರಿಸಿರುವುದರಿಂದ ಕುಟುಂಬದ ಗಾತ್ರ ದೊಡ್ಡದಿರುತ್ತಿತ್ತು. ಹಾಲಕ್ಕಿಗಳು ಅವಿಭಕ್ತ ಕುಟುಂಬವನ್ನು ಹೊಂದಿರುತ್ತಿದ್ದರು. ಅವಿಭಕ್ತ ಕುಟುಂಬದಲ್ಲಿ ಆಸ್ತಿಯ ಒಡೆತನ ಕೂಡಾ ಜಂಟಿಯಾಗಿರುತ್ತಿತ್ತು. ಇಲ್ಲಿ ವ್ಯವಸ್ಥಿತವಾದ ಶ್ರಮವಿಭಜನೆ ಕಂಡುಬರುತ್ತದೆ. ಗಂಡು ಮಕ್ಕಳು ಮಾತ್ರ ತಂದೆಯ ಆಸ್ತಿಯ ವಾರಸುದಾರಿಕೆಯ ಅಧಿಕಾರ ಹೊಂದಿರುತ್ತಾರೆ. ತಂದೆಯ ಮರಣದ ನಂತರ ಗಂಡು ಮಕ್ಕಳು ತಂದೆಯ ಆಸ್ತಿಯನ್ನು ಹಂಚಿಕೊಳ್ಳುತ್ತಾರೆ.

ವಿವಾಹ ಪದ್ಧತಿ : ಹಾಲಕ್ಕಿಗಳಲ್ಲಿ ಕುಲದೊಳಗಿನ ವಿವಾಹ ಪದ್ಧತಿ ಕಂಡು ಬರುವುದು. ವಿವಾಹದ ಸಂದರ್ಭದಲ್ಲಿ ಬಳ್ಳಿಯನ್ನು ತಿಳಿದು ಸಂಬಂಧವನ್ನು ಮಾಡಿಕೊಳ್ಳಲಾಗುತ್ತದೆ. ಸಂಸ್ಕೃತ ಭಾಷೆಯಲ್ಲಿ 'ವಳ್ಳಿ' ಎಂದರೆ ಬಳಿ ಎಂದು ಅರ್ಥ. ಜನಪದದಲ್ಲಿ 'ಬಳ್ಳಿ' ಎಂಬ ಪದವು 'ಬಳಿ' ಎಂದಾಗಿದೆ. ಹಿಂದೂ ಸಮಾಜದಲ್ಲಿ ಮೇಲ್ವರ್ಗದವರು ತಮ್ಮನ್ನು ಗೋತ್ರದ ಮೂಲಕ ಗುರುತಿಸಿಕೊಂಡರೆ, ಹಿಂದುಳಿದವರು ಕುಲವನ್ನು 'ಬಳಿ'ಯ ಮೂಲಕ ಗುರುತಿಸಿಕೊಳ್ಳುತ್ತಾರೆ. ಹಾಲಕ್ಕಿಗಳಲ್ಲಿ ಎಂಟು ಪ್ರಕಾರದ ಬಳಿ ಹಾಗೂ ಏಳು ಉಪಬಳಿಗಳಿವೆ(ಗೆಜೆಟಿಯರ್ ಮುಂಬಯಿ ೧೮೮೩). ಈ ಬಳಿಗಳೆಂದರೆ ಮಾಂಚಾಲಕದನ, ಮಾನಲ, ದೇವಣ, ದಾಳೆ, ಗುರು, ಕೊಡಕಲ ಮತ್ತು ಮಸುಕಿನ ಬಳಿ. ಇವುಗಳಲ್ಲಿ ಮಾಂಚಾಲ ಬಳಿಯವರು ಪ್ರಥಮ ದರ್ಜೆಯವರೆಂದು ಬಗೆಯಲಾಗಿದೆ. ಜನಪದ ಅಧ್ಯಯನಕಾರರು ಹಾಲಕ್ಕಿಗಳಲ್ಲಿ ೪೧ ಬಳಿಗಳನ್ನು (ಹಿ.ಚಿ.ಬೋರಲಿಂಗಯ್ಯ: ೨೦೦೧) ಗುರಿತಿಸಿರುವರು. ಹಾಲಕ್ಕಿಗಳಲ್ಲಿ ವಿವಿಧ ಬಳಿಯವರು, ಪ್ರತ್ಯೇಕವಾದ ಪಶು, ಪಕ್ಷಿ, ಗಿಡ, ಬಳ್ಳಿಯ ಲಾಂಛನವನ್ನು ತಮ್ಮ ಬಳಿಗಳಿಗೆ ಹೊಂದಿದ್ದಾರೆ. ಬಳಿಯನ್ನು ತಾಯಿಯ ಮೂಲಕ ಗುರುತಿಸಿರುವುದರಿಂದ ಜನಪದ ಅಧ್ಯಯನಕಾರರ ಪ್ರಕಾರ ಹಾಲಕ್ಕಿಗಳು ಮಾತೃ ಪ್ರಧಾನ ಕುಟುಂಬಕ್ಕೆ ಸೇರಿದವರೆಂದು ಅಭಿಪ್ರಾಯಪಟ್ಟಿದ್ದಾರೆ. ಹಾಲಕ್ಕಿಗಳಲ್ಲಿ ಸ್ವಜಾತಿಯ ಬಳಿಗಳಲ್ಲಿ ವಿವಾಹವನ್ನು ನಿಷೇಧಿಸಲಾಗಿದೆ. ಇವರಲ್ಲಿ ಪಿತೃವಂಶೀಯ ಹಾಗೂ ಮಾತೃವಂಶೀಯ ಅಡ್ಡ ಬಂಧುತ್ವ ಸಂಬಂಧದಲ್ಲಿ ಸಹೋದರ-ಸಹೋದರಿಯ ಮಗನ ಅಥವಾ ಮಗಳ ಮಧ್ಯೆ ವಿವಾಹವು ನಡೆಯುತ್ತದೆ.

ವಧುದಕ್ಷಿಣೆ : ಸಾಂಪ್ರದಾಯಿಕ ಸಮಾಜದಲ್ಲಿ ವಧುದಕ್ಷಿಣೆ ಪದ್ಧತಿ ಜಾರಿಯಲ್ಲಿತ್ತು (ಮುಂಬಯಿ ಗೆಜೆಟೆರಿಯರ್ ೧೮೮೩). ಈ ಪದ್ಧತಿ ಜಾರಿಯಲ್ಲಿರಲು ಎರಡು ಕಾರಣಗಳನ್ನು ನೀಡಲಾಗಿದೆ. ಮೊದಲನೆಯದಾಗಿ ಹೆಣ್ಣು ಮಗಳು ತಂದೆಯ ಮನೆಯನ್ನು ಬಿಟ್ಟು ಗಂಡನ ಮನೆಯಲ್ಲಿ ಬಂದು ನೆಲೆಸಬೇಕಾಗುತ್ತದೆ. ಇದರಿಂದ ತಂದೆಯ ಮನೆಯಲ್ಲಿ ದುಡಿಮೆ ಮಾಡುವ ಸದಸ್ಯರ ಸಂಖ್ಯೆ ಕಡಿಮೆಯಾದ್ದರಿಂದ, ದುಡಿಮೆಗೆ ಆಗುವ ನಷ್ಟಕ್ಕೆ ಪರಿಹಾರವಾಗಿ ವಧುದಕ್ಷಿಣೆ ಪದ್ಧತಿ ಜಾರಿಯಲ್ಲಿತ್ತು. ಆದ್ದರಿಂದ ಹಾಲಕ್ಕಿಗಳಲ್ಲಿ ಮಹಿಳೆಯು ಕುಟುಂಬಕ್ಕೆ ಆಸ್ತಿಯಾಗಿದ್ದಾಳೆ. ಎರಡನೆಯದಾಗಿ ಹಾಲಕ್ಕಿಗಳಲ್ಲಿ ಹೆಣ್ಣು ಮಕ್ಕಳ ಸಂಖ್ಯೆಯು ಕೂಡಾ ಕಡಿಮೆ ಇತ್ತು. ಅದರಿಂದ ವಧುದಕ್ಷಿಣೆ ಪದ್ಧತಿ ಜಾರಿಯಲ್ಲಿತ್ತು. ಆದರಿಂದ ವಧುದಕ್ಷಿಣೆ ಪದ್ಧತಿಯನ್ನು ತಪ್ಪಿಸಲು ಅದಲು ಬದಲಿನ ವಿವಾಹವನ್ನು ನಡೆಸುತ್ತಿದ್ದರು. ಹಾಲಕ್ಕಿಗಳಲ್ಲಿ ಹುಡುಗಿಯ ವಿವಾಹದ ವಯಸ್ಸು ಹದಿನಾರರ ಮೇಲಿರುತ್ತಿತ್ತು. ಹಾಗೂ ಹುಡುಗನಿಗೆ ಹದಿನೆಂಟರ ಮೇಲಿರುತ್ತಿತ್ತು. ಹಾಲಕ್ಕಿಗಳಲ್ಲಿ ವಿವಾಹವು ಸಾರ್ವತ್ರಿಕವಾಗಿದೆ. ವಿವಾಹವನ್ನು ಮನೆಯ ಹಿರಿಯರಾದ ಪುರುಷರು ನಿಶ್ಚಯಿಸುತ್ತಾರೆ. ಈ ವಿಷಯವನ್ನು ಹಿರಿಯ ಮಹಿಳೆಗೆ ತಿಳಿಸಲಾಗುತ್ತದೆ. ವಿವಾಹದ ಮಾತುಕತೆಯನ್ನು ಪುರುಷರೇ ನಡೆಸುತ್ತಾರೆ. ಇವರಲ್ಲಿ ಜಾತಕ ನೋಡುವ ಪದ್ಧತಿಯಿಲ್ಲ. ಆದರೆ ವಿವಾಹದ ಮಾತುಕತೆ ಮುಂದಿಡುವಾಗ, ಮನೆಯ ಹಿರಿಯ ಪುರುಷರು ಬ್ರಾಹ್ಮಣರ ಹತ್ತಿರ ಹೋಗಿ, ಈ ಸಂಬಂಧ ನಡೆಸುವುದರಿಂದ ಒಳ್ಳೆಯದಾಗುತ್ತದೆಯೋ? ಎಂಬುದನ್ನು ತಿಳಿದು ಬಂದು ನಂತರ ವಿವಾಹವನ್ನು ನಡೆಸಿಕೊಡುತ್ತಾರೆ. ಬ್ರಾಹ್ಮಣರಿಗೆ ಗೌರವಾರ್ಥವಾಗಿ ಹಾಲಕ್ಕಿಗಳು ಅವರಿಂದ ಸೇವೆಯನ್ನು ಪಡೆಯುತ್ತಿರಲಿಲ್ಲ. ಆದರೆ ವಿವಾಹದ ದಿನಾಂಕ ಮತ್ತು ಮುಹೂರ್ತದ ಸಮಯವನ್ನು ಬ್ರಾಹ್ಮಣರಿಂದ ಕೇಳಿ ಬರುತ್ತಾರೆ.

ಎರಡನೆಯ ವಿವಾಹ : ಹಾಲಕ್ಕಿಗಳಲ್ಲಿ ಮೊದಲ ಹೆಂಡತಿಗೆ ಮಕ್ಕಳು ಆಗದೇ ಇದ್ದಾಗ, ಎರಡನೆಯ ವಿವಾಹ ಮಾಡುವ ಪದ್ಧತಿಯಿದೆ. ಮೊದಲ ಹೆಂಡತಿ ಬೇಗನೇ ಸಾವನ್ನಪ್ಪಿದಾಗ ಕೂಡಾ ಎರಡನೆಯ ವಿವಾಹ ನಡೆಸುತ್ತಿದ್ದರು.

ವಿಧವಾ ವಿವಾಹ : ಸಾಂಪ್ರದಾಯಿಕ ಹಾಲಕ್ಕಿಗಳಲ್ಲಿ ವಿಧವಾ ವಿವಾಹ ಪದ್ಧತಿಯಿತ್ತು. ಅಂತಹ ವಿವಾಹದಲ್ಲಿ ಯಾವುದೇ ವಿಶೇಷ ಕಾರ್ಯಕ್ರಮ ಇರುವುದಿಲ್ಲ. ಆಗ ಹೊಸ ವರನು, ಹೊಸ ಸೀರೆ ಕೊಂಡುಕೊಳ್ಳಲು ಹಣವನ್ನು (ರೂ.೨/-) ಮಾತ್ರ ನೀಡುತ್ತಿದ್ದನು. ಮಹಿಳೆಯು ಹಿಂಬಾಗಿಲಿನಿಂದ ತನ್ನ ತಂದೆಯ ಮನೆಯನ್ನು ಬಿಟ್ಟು ಹೊರಡುತ್ತಿದ್ದಳು.

ನೆರೆಹೊರೆ : ನೆರೆಹೊರೆಯ ಕುಟುಂಬಕ್ಕಿಂತ ದೊಡ್ಡದಾದ ಸಾಮಾಜಿಕ ಗುಂಪು, ದಾಯಾದಿಗಳೇ ಹೆಚ್ಚಾಗಿ ನೆರೆಹೊರೆಯಾಗುತ್ತಾರೆ. ಹೀಗಾಗಿ ನೆರೆಹೊರೆಯವರು ಬಂಧುತ್ವದ ಸಂಬಂಧಿಕರಾಗಿರುತ್ತಾರೆ. ಕಟ್ಟುನಿಟ್ಟಾಗಿ ಅನುವಂಶಿಕ ಸಂಬಂಧ ಇಲ್ಲಿ ಕಂಡುಬಾರದು. ಕೆಲವು

ಸಲ ತಂದೆಯ ಮರಣದ ನಂತರ ಅಥವಾ ವಿವಾಹದ ನಂತರ ಸಂಬಂಧಿಗಳ ಹತ್ತಿರ ನೆಲೆಗೊಳ್ಳಲು ಮನೆ ಅಥವಾ ಜಾಗ ಇಲ್ಲದೇ ಇದ್ದಾಗ ಮೂಲಮನೆಯಿಂದ ಸ್ವಲ್ಪ ದೂರದಲ್ಲಿ ಮನೆಕಟ್ಟಿಕೊಂಡು ಉಳಿಯುತ್ತಾರೆ. ನೆರೆಹೊರೆಯವರು ದಾಯಾದಿ ಸಂಬಂಧಿಕರಿರುತ್ತಾರೆ.

ಪಿತೃ ಪ್ರಧಾನ ಅನುವಂಶಿಕತೆಯಲ್ಲಿ, ಅವಿಭಕ್ತ, ಕುಟುಂಬಗಳು ವಿಭಜಿಸಿದಾಗ ನೆರೆಹೊರೆಯರು ಸಹಜವಾಗಿ ಪಿತೃ ಪ್ರಧಾನ ಬಂಧುಗಳೇ ಆಗಿರುತ್ತಾರೆ. ಕೊಪ್ಪ ಸ್ಥಾಪನೆಯಿಂದಾಗಿ ವಾಸಸ್ಥಾನ ನಿಗದಿಯಾಗುತ್ತದೆ. ನಂತರ ಸಮೀಪದ ಬಂಧುಗಳು ಅಲ್ಲಿ ಬಂದು ನೆಲೆಸುತ್ತಾರೆ. ಹೆಚ್ಚಾಗಿ ಸಂಬಂಧಿಕರು ಇದರಿಂದಾಗಿ ಅವಿಭಕ್ತರ ಕುಟುಂಬದ ನಿರ್ವಹಣೆ ಮಾಡುವುದು ಕಷ್ಟವಾಯಿತು. ಕುಟುಂಬದ ಹಿರಿಯನೇ ಎಲ್ಲಾ ಹೊರೆ ಹೊರಬೇಕಾಯಿತು. ಜವಾಬ್ದಾರಿಯನ್ನು ಪಾಲು ಮಾಡಿಕೊಳ್ಳಲಾಯಿತು. ಕುಟುಂಬದ ಪುರುಷರು ಮಾತ್ರ ಪಿತ್ರಾರ್ಜಿತ ಆಸ್ತಿಯಲ್ಲಿ ಪಾಲು ಪಡೆದುಕೊಂಡರು. ಆದ್ದರಿಂದ ಕುಟುಂಬಗಳು ವಿಭಕ್ತಗೊಂಡವು.

ಅವಿಭಕ್ತ ಕುಟುಂಬಗಳಲ್ಲಿ ಹಿರಿಯರಿಗೆ ಹೆಚ್ಚಿನ ಗೌರವ ಇರುತ್ತದೆ. ಕುಟುಂಬದ ಹಿರಿಯರ ಮೇಲೆ ಎಲ್ಲಾ ಜವಾಬ್ದಾರಿಕೆ ಇರುತ್ತದೆ. ಕುಟುಂಬದ ಹಿರಿಯ ಪುರುಷನೇ ಮಹಿಳೆಯರ ಮೇಲೆ ಹಿಡಿತವನ್ನು ಸಾಧಿಸಿರುತ್ತಾನೆ. ಕುಟುಂಬದ ಹಿರಿಯರ ಪರವಾನಿಗೆ ಪ್ರತಿ ಕೆಲಸಕ್ಕೆ ಅವಶ್ಯಕವಾಗಿರುತ್ತಿತ್ತು. ಅವಿಭಕ್ತ ಕುಟುಂಬದ ಮನೆಯ ವ್ಯವಹಾರದಲ್ಲಿ ಮನೆಯ ಮುಖ್ಯಸ್ಥರ ನಿರ್ಧಾರವೇ ಅಂತಿಮವಾಗಿರುತ್ತದೆ. ಅವಿಭಕ್ತ ಕುಟುಂಬದಲ್ಲಿ ತಂದೆ ತಾಯಿಯನ್ನು ಕಳೆದುಕೊಂಡವರಿಗೆ ರಕ್ಷಣೆ ದೊರೆಯುತ್ತಿತ್ತು. ಅವಿಭಕ್ತ ಕುಟುಂಬ ವಯಸ್ಸು ಮತ್ತು ಲಿಂಗಾಧಾರಿತ ಶ್ರಮದ ವಿಭಜನೆಯಾಗಿತ್ತು. ಪಿತೃ ಪ್ರಧಾನ ಕುಟುಂಬವಾದ್ದರಿಂದ ಪುರುಷರು ಮಾತ್ರ ಆಸ್ತಿಯ ಹಕ್ಕನ್ನು ಪಡೆದುಕೊಳ್ಳುತ್ತಿದ್ದರು.

ಹಾಲಕ್ಕಿ ಕೊಪ್ಪದ ಸಾಮಾಜಿಕ ರಚನೆ

ಒಂದು ಗ್ರಾಮ ಪ್ರದೇಶದ ಹಾಲಕ್ಕಿ ಕೊಪ್ಪವು ಒಂದು ಸಾಮಾಜಿಕ ಘಟಕ. ಬಹುಜಾತಿಯ ಗ್ರಾಮಗಳಲ್ಲಿ ನೆಲೆಸಿರುವ ಕೆಲವು ಹಾಲಕ್ಕಿ ಗುಂಪುಗಳನ್ನು ಹೊರತುಪಡಿಸಿದರೆ ಹಾಲಕ್ಕಿ ಕೊಪ್ಪವು ಹೆಚ್ಚಿನಮಟ್ಟಿಗೆ ಏಕಜನಾಂಗೀಯ ಗುಂಪಾಗಿದೆ. ಕೊಪ್ಪದಲ್ಲಿ ಸಾಮಾಜಿಕ ಏಕತಾಭಾವವಿರುವುದು. ಬಂಡಿ ಹಬ್ಬ ಹಾಗೂ ವಿವಾಹದ ಸಂದರ್ಭದಲ್ಲಿ ಆಯಾಗುಂಪುಗಳು ತಮ್ಮ ಕೊಪ್ಪದ ಬಗ್ಗೆ ಪರಿಸ್ಥಿತಿಯ ಬಗ್ಗೆ ಉತ್ತಮ ಅಭಿಪ್ರಾಯವನ್ನು ಮೂಡಿಸುತ್ತಾರೆ. ಹಾಲಕ್ಕಿಗಳು ಧಾರ್ಮಿಕ ವಿಷಯದಲ್ಲಿರುವುದಿಲ್ಲ. ಬ್ರಾಹ್ಮಣರೊಡನೆ, ಆರ್ಥಿಕ ಚಟುವಟಿಕೆಯಲ್ಲಿ ಮೇಲ್‌ವರ್ಗದವರೊಡನೆ ಸಂಪರ್ಕ ಇಟ್ಟುಕೊಂಡಿದ್ದರು.

ವಸಾಹತುಶಾಹಿ ನೀತಿಯಿಂದ ಬದಲಾವಣೆ

ಬ್ರಿಟಿಷ್ ಸರ್ಕಾರವು ಕುಂಬ್ರಿ ಬೇಸಾಯವನ್ನು ನಿಷೇಧಿಸಿತು. ಆಗ ಹಾಲಕ್ಕಿಗಳಿಗೆ ಸಮಸ್ಯೆ ಎದುರಾಯಿತು. ಸ್ಥಳಾಂತರದ ಬೇಸಾಯವನ್ನು ಅರಣ್ಯ ನಾಶತಡೆಯಲು ಸರ್ಕಾರ ನಿಷೇಧಿಸಿತು ಮತ್ತು ನೆಲೆಗೊಂಡ ಬೇಸಾಯ ಪದ್ಧತಿ ಜಾರಿಗೊಳಿಸಿತು. ಹೀಗಾಗಿ ಹಾಲಕ್ಕಿಗಳು ನಿರ್ದಿಷ್ಟ ಪ್ರದೇಶದಲ್ಲಿ ನೆಲೆಗೊಳ್ಳಬೇಕಾಯಿತು. ನೆಲೆನಿಂತ ಬೇಸಾಯಕ್ಕೆ ಹೆಚ್ಚಿನ ಶ್ರಮದ ಅವಶ್ಯಕತೆ ಉಂಟಾಯಿತು. ಆದರಿಂದ ಕುಟುಂಬಗಳು ಅವಿಭಕ್ತ ಕುಟುಂಬಗಳಾದವು. ಇದೇ ವೇಳೆಯಲ್ಲಿ ಬ್ರಿಟಿಷ್ ಸರ್ಕಾರವು ಆಡಳಿತಾತ್ಮಕ ಸುಧಾರಣೆಯ ಪ್ರಕ್ರಿಯೆಯನ್ನು ಪ್ರಾರಂಭಿಸಿತು. ಆಗ ನಡೆಸಿರುವ ಅಹಿತಕರ ಘಟನೆಗಳನ್ನು ದೇಸಾಯಿಯವರು (೧೯೮೫) ದಾಖಲಿಸಿದ್ದಾರೆ. ಭೂಮಿ ವಾಣಿಜ್ಯ ವಸ್ತುವಾದರಿಂದ ಹಾಲಕ್ಕಿಗಳು ಭೂಮಿಯ ಹಕ್ಕನ್ನು ಕಳೆದುಕೊಂಡರು.

ಪಿತ್ರಾರ್ಜಿತ ಹಕ್ಕುದಾರಿಕೆ : ಹಾಲಕ್ಕಿಗಳಲ್ಲಿ ಪಿತೃ ಪ್ರಧಾನ ಕುಟುಂಬ ಪದ್ಧತಿ ಇದರಿಂದ, ಗಂಡು ಮಕ್ಕಳು ಮಾತ್ರ ಪಿತ್ರಾರ್ಜಿತ ಆಸ್ತಿಯಲ್ಲಿ ಸಮಪಾಲು ಪಡೆದುಕೊಂಡು, ಪುರುಷ ಸಂತತಿ ಮೂಲಕ ಮುಂದುವರೆಸಿಕೊಂಡು ಹೋಗುತ್ತಾರೆ. ಮಹಿಳೆ ಕುಟುಂಬದಲ್ಲಿ ಪುರುಷರಿಗಿಂತ ಅಧಿಕ ದುಡಿಮೆ ಮಾಡುತ್ತಿದ್ದಳು. ಕುಟುಂಬದ ನಿರ್ವಹಣೆಯಲ್ಲಿ ಮಹತ್ವ ಪಾತ್ರ ವಹಿಸುತ್ತಿದ್ದಳು. ಆದರೂ ಸಹ ಆಸ್ತಿಯಲ್ಲಿ ಪಾಲು ನಿರಾಕರಿಸಲಾಗಿತ್ತು. ವಿವಾಹದ ಸಂದರ್ಭದಲ್ಲಿ ಮಹಿಳೆಗೆ ಬಳುವಳಿ ರೂಪದಲ್ಲಿ ಕಾಣಿಕೆ ನೀಡುತ್ತಿದ್ದರು. ಸಹೋದರರು ಅಕ್ಕಪಕ್ಕದಲ್ಲಿರಲು ಬಯಸುತ್ತಾರೆ. ಸ್ಥಳ ಅಭಾವದಿಂದ ಸಾಧ್ಯವಾಗದೇ ಇದ್ದಾಗ ಸ್ವಲ್ಪ ದೂರದಲ್ಲಿ ನೆಲೆಸುತ್ತಾರೆ. ಹೀಗಾಗಿ ಸಮುದಾಯದ ಸಾಮಾಜಿಕ ರಚನೆಯಲ್ಲಿ ವಾಸಸ್ಥಾನ ಬಹಳ ಮುಖ್ಯವಾಗಿದೆ.

ಒಂದೊಮ್ಮೆ ಕುಟುಂಬದಲ್ಲಿ ಗಂಡು ಸಂತಾನ ಇಲ್ಲದೆ ಹೋದಾಗಲೂ ಕೂಡಾ ಹತ್ತಿರದ ಸಂಬಂಧಿಯ ಗಂಡು ಮಕ್ಕಳಿಗೆ ಆಸ್ತಿಯನ್ನು ನೀಡುತ್ತಿದ್ದರೇ ವಿನಃ ಸ್ವಂತ ಮಗಳಿಗೆ ಆಸ್ತಿಯನ್ನು ನೀಡುತ್ತಿರಲಿಲ್ಲ. ಸ್ವಂತ ಹೆಣ್ಣು ಮಕ್ಕಳ ಗಂಡು ಮಕ್ಕಳಿಗೂ ಸಹ ಆಸ್ತಿಯನ್ನು ನೀಡುತ್ತಿರಲಿಲ್ಲ. ವಿವಾಹದ ನಂತರ ಸ್ವಂತ ಮಗಳು ಪರಕೀಯಳಾಗುತ್ತಿದ್ದಳು. ಒಂದೊಮ್ಮೆ ಮಗಳನ್ನು ಕೊಟ್ಟ ಮನೆಯಲ್ಲಿ ಕಷ್ಟವಿದ್ದರೆ, ಸ್ವಲ್ಪ ಭೂಮಿಯನ್ನು ಅಥವಾ ದುಡ್ಡನ್ನು ನೀಡುತ್ತಿದ್ದರು. ಹಾಲಕ್ಕಿಗಳಲ್ಲಿ ವಿಧವೆ ಅಥವಾ ವಿಧುರ ದತ್ತು ಮಕ್ಕಳನ್ನು ಪಡೆಯಬಹುದು. ವಿಧವೆ ದತ್ತು ತೆಗೆದುಕೊಳ್ಳುವಾಗ ಗಂಡನ ಹತ್ತಿರದ ಸಂಬಂಧಿಕರ ಮಕ್ಕಳನ್ನೇ ದತ್ತು ಪಡೆಯಬೇಕು. ಹಾಲಕ್ಕಿಗಳ ಸಾಮಾಜಿಕ ರಚನೆಯಲ್ಲಿ ಮಹಿಳೆಯರಿಗೆ ಪಿತ್ರಾರ್ಜಿತ ಆಸ್ತಿಯಲ್ಲಿ ಪಾಲು ಪಡೆಯುವ ಅವಕಾಶವನ್ನು ನಿರಾಕರಿಸಲಾಗಿದೆ.

ಹಾಲಕ್ಕಿಗಳು ತಮ್ಮ ಸಂಬಂಧಿಕರ ಬಗ್ಗೆ ಗೌರವಾದರವನ್ನು ಹೊಂದಿದ್ದಾರೆ. ಪಿತೃ ಪ್ರಧಾನ ಕುಟುಂಬ ವ್ಯವಸ್ಥೆಯಂತೆ ಪಿತ್ರಾರ್ಜಿತ ಹಕ್ಕು ಹಾಗೂ ಉತ್ತರಾಧಿಕಾರಕ್ಕೆ ಸಂಬಂಧಿಸಿದಂತೆ ಪಿತ್ರವಂಶೀಯ ವ್ಯವಸ್ಥೆಯನ್ನು ಅನುಸರಿಸುತ್ತಾರೆ. ಪೂರ್ವಿಕರ ವಾರ್ಷಿಕ ಪೂಜೆಯ ಸಂಧರ್ಭದಲ್ಲಿ ತಂದೆಯ ವಂಶಾವಳಿಯನ್ನು ನೆನಪಿಸಿಕೊಳ್ಳುತ್ತಾರೆ. ಆದರೂ ತಾಯಿ ಸಂಬಂಧಿಗಳು ತೀರ ಹತ್ತಿರದ ಸಂಬಂಧಿಕರು ಆಗುತ್ತಾರೆ. ಏಕೆಂದರೆ, ತಂದೆಯ ಸಂಬಂಧಿಕರು ಮುಂದೆ ದಾಯಾದಿಗಳಾಗುತ್ತಾರೆ.

ಕೋಷ್ಟಕ ೪.೧

ಇಂದಿನ ಸಾಮಾಜಿಕ ಸಂಸ್ಥೆಯ ಪದ್ಧತಿಯ ವಿವರಣೆ

ಕ್ರಸಂ.	ವಿವರಣೆ	ಅಂಕೋಲಾ		ಕುಮಟಾ		ಒಟ್ಟು	
		ಅವಿಭಕ್ತ	ವಿಭಕ್ತ	ಅವಿಭಕ್ತ	ವಿಭಕ್ತ	ಅವಿಭಕ್ತ	ವಿಭಕ್ತ
೧.	ಕುಟುಂಬ	೦೦	೮೫	೦೦	೧೦೦	-	೧೮೫
೨.	ವಿವಾಹದ ವಯಸ್ಸು						
	< ೧೫		--		--		--
	< ೨೦		--		--		--
	೨೦ಕ್ಕಿಂತ ಅಧಿಕ		೮೫		೧೦೦		೧೮೫
೩.	ವಿವಾಹದ ನಮೂನೆ						
	ನಿಶ್ಚಿತ		೮೧		೯೩		೧೭೪
	ಪ್ರೇಮ		೦೨		೦೫		೦೭
	ಪ್ರೇಮ+ನಿಶ್ಚಿತ		೦೨		೦೨		೦೪
	ಮರುವಿವಾಹ		-		-		-
	ಬಾಲ್ಯವಿವಾಹ						
	ವಿಧವಾ ವಿವಾಹ		-		-		-
	ಬಳಿ ಬೇಕೆ?		೧೦		೨೦		೩೦
೪.	ವಿವಾಹ ಪದ್ಧತಿ						
	ವಿವಾಹದ ನಂತರ						
	೧. ತಂದೆಯ ಮನೆ ಬಿಟ್ಟು		೮೫		೧೦೦		೧೮೫
	ಗಂಡನ ಮನೆಯಲ್ಲಿ ವಾಸ						

	೨. ವಿವಾಹದ ನಂತರ ತಾಯಿ ಮನೆಯಲ್ಲಿ ಇರುವುದು.			
೫.	ವಧುದಕ್ಷಿಣೆ	–	–	–
	ವರದಕ್ಷಿಣೆ	೮೫	೧೦೦	೧೮೫
೬.	೧. ಸಾಂಪ್ರದಾಯಿಕ ವಿವಾಹ			
	೨. ರಿಜಿಸ್ಟರ್ ವಿವಾಹ			
	೩. ಬದಲಾವಣೆಯೊಂದಿಗೆ ಸಾಂಪ್ರದಾಯಿಕ ವಿವಾಹ	೮೫	೧೦೦	೧೮೫
೭.	ಆಸ್ತಿಯ ಒಡೆತನ			
	ಪುರುಷನಿಗೆ	೮೩	೯೮	೧೮೧
	ಮಹಿಳೆ	೦೨	೦೨	೦೪

(ಮೂಲ: ಕ್ಷೇತ್ರಕಾರ್ಯದ ಮಾಹಿತಿ)

ಹಾಲಕ್ಕಿಗಳ ಸಾಮಾಜಿಕ ರಚನೆಯಲ್ಲಿ ಬದಲಾವಣೆ ಉಂಟಾಗಿರುವುದು ಮೇಲಿನ ಕೋಷ್ಟಕದಿಂದ ಕಂಡುಬರುತ್ತದೆ. ಇಂದು ಹಾಲಕ್ಕಿಗಳಲ್ಲಿ ಹಲವಾರು ಕಾರಣದಿಂದ ವಿಭಕ್ತ ಕುಟುಂಬಗಳಾಗಿವೆ. ಕುಟುಂಬಗಳು ವಿಭಕ್ತವಾದರೂ ಸಹ ಹಿರಿಯಣ್ಣನಿಗೆ ತುಂಬಾ ಗೌರವವನ್ನು ನೀಡಲಾಗುತ್ತದೆ. ಶೇ. ೧೦೦ರಷ್ಟು ಕುಟುಂಬಗಳು ವಿಭಕ್ತ ಕುಟುಂಬಗಳಾಗಿವೆ. ಹಾಲಕ್ಕಿಗಳ ವಿವಾಹದ ವಯಸ್ಸಿನಲ್ಲಿ ಹಾಗೂ ಪದ್ಧತಿಗಳಲ್ಲಿ ಗಣನೀಯ ಬದಲಾವಣೆಗಳಾಗಿವೆ. ಶೇ. ೧೦೦ರಷ್ಟು ವಿವಾಹಗಳು ಮಹಿಳೆಯರ ವಯಸ್ಸು ೨೦ಕ್ಕಿಂತ ಮೇಲ್ಪಟ್ಟಿರುವುದು ಉತ್ತಮ ಅಂಶವಾಗಿದೆ. ಇಂದು ಶೇ. ೯೪ರಷ್ಟು ವಿವಾಹಗಳು ನಿಶ್ಚಿತ ವಿವಾಹಗಳಾದರೆ ಶೇ. ೪೦ರಷ್ಟು ಪ್ರಮಾಣವು ಶೇ. ೩ರಷ್ಟು ವಿವಾಹಗಳು ಪ್ರೇಮ ನಿಶ್ಚಿತ ವಿವಾಹಗಳಾಗುತ್ತವೆ. ಹಾಲಕ್ಕಿಗಳಲ್ಲಿ ಶೇ. ೧೦೦ರಷ್ಟು ಮಹಿಳೆಯರು ವಿವಾಹ ನಂತರ ಗಂಡನ ಮನೆಯಲ್ಲಿ ಇರುತ್ತಾರೆ. ಹೀಗಾಗಿ ಇವರು ಪಿತೃವಂಶಕ್ಕೆ ಸೇರಿದವರು. ಇಂದು ಹಾಲಕ್ಕಿಗಳ ಬಳಿ ಪದ್ಧತಿಯ ಬಗ್ಗೆ ಪ್ರತಿಕ್ರಿಯಿಸಿದ ಮಹಿಳೆಯರು ಶೇ. ೧೬.೨ರಷ್ಟು ಮಾತ್ರ ಇಂದು 'ಬಳಿ' ಪದ್ಧತಿ ತನ್ನ ಮೊದಲಿನ ಸ್ಥಾನವನ್ನು ಉಳಿಸಿಕೊಂಡಿದೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಹಾಲಕ್ಕಿ ಸಮುದಾಯದಲ್ಲಿ 'ವಧುದಕ್ಷಿಣೆ' ಪದ್ಧತಿ ಇರುವುರಿಂದ ಮಹಿಳೆಯರ ಸ್ಥಾನ ಉತ್ತಮವಾಗಿದೆ ಎನ್ನಲಾಗಿದೆ. ಆದರೆ, ಇಂದು ಹಾಲಕ್ಕಿಗಳಲ್ಲಿ ಶೇ. ೧೦೦ರಷ್ಟು ವರದಕ್ಷಿಣೆ ಪದ್ಧತಿಯು ಜಾರಿಯಲ್ಲಿದೆ. ಉತ್ತಮ ನೌಕರಿಯಲ್ಲಿರುವರಿಗೆ ವರದಕ್ಷಿಣೆ ಅಧಿಕವಾಗಿದೆ. ಸಾಮಾಜೀಕರಣದಿಂದ ವರದಕ್ಷಿಣೆ

ಪದ್ಧತಿಯು ಇಂದು ಹಾಲಕ್ಕಿಗಳಲ್ಲಿ ಸಾಮಾನ್ಯವಾಗಿದೆ. ಹಾಲಕ್ಕಿಗಳಲ್ಲಿ ಆಸ್ತಿ ಒಡೆತನವು ಇಂದು ಸಹ ಪುರುಷರ ಕೈಯಲ್ಲಿಯೇ ಇದೇ. ಶೇ. ೨.೨೦ರಷ್ಟು ಒಡೆತನವು ಹಾಲಕ್ಕಿ ಮಹಿಳೆಯರ ಕೈಯಲ್ಲಿದೆ. ಶೇ. ೯೭.೮೦ರಷ್ಟು ಪುರುಷರ ಕೈಯಲ್ಲಿದೆ.

ಇಂದು ಹಾಲಕ್ಕಿಗಳ ವಿವಾಹದ ಪದ್ಧತಿಯಲ್ಲಿ ಗುರುತಿಸಬಹುದಾದ ಇನ್ನೊಂದು ಪ್ರಮುಖ ಬೆಳವಣಿಗೆಯೆಂದರೆ, ಹಾಲಕ್ಕಿಗಳ ವಿವಾಹವನ್ನು ಇಂದು ಪುರೋಹಿತರು ನೆರವೇರಿಸುತ್ತಿದ್ದಾರೆ. ಹಾಗೂ ಅನುಕೂಲಸ್ಥ ಹಾಲಕ್ಕಿಗಳು ವಿವಾಹವನ್ನು ಛತ್ರದಲ್ಲಿ ನಡೆಸುತ್ತಾರೆ.

೪.೨. ಸಾಂಪ್ರದಾಯಿಕ ರಾಜಕೀಯ ಸಂಘಟನೆ ಮತ್ತು ಪರಿವರ್ತನೆ

ಹಾಲಕ್ಕಿಗಳ ಹೊಂದಿರುವ ಸಾಮಾಜಿಕ ಸಂಘಟನೆಯ ವಿವರಣೆಯು ಮುಂಬಯಿ ಗೆಜೆಟಿಯರ್‌ನಲ್ಲಿ (೧೮೮೩) ದೊರೆಯುತ್ತವೆ. ಉತ್ತರ ಕನ್ನಡ ಜಿಲ್ಲೆಯ ಮೂಲ ನಿವಾಸಿಗಳಾದ ಹಾಲಕ್ಕಿಗಳು ಅರಣ್ಯ ಪ್ರದೇಶದ ತಳಭಾಗದಲ್ಲಿ ನೆಲೆನಿಂತರು, ಮೊದಲಿಗೆ ಸ್ಥಳಾಂತರದ ಬೇಸಾಯದಲ್ಲಿ ತೊಡಗಿಕೊಂಡರು. ಬ್ರಿಟಿಷರು ಸ್ಥಳಾಂತರದ ಬೇಸಾಯವನ್ನು ನಿಷೇಧಿಸಿದ ನಂತರ ನೆಲೆಗೊಂಡ ಬೇಸಾಯದಲ್ಲಿ ತೊಡಗಿಕೊಂಡರು. ಬ್ರಿಟಿಷರ ಆಡಳಿತಾತ್ಮಕ ಪ್ರಕ್ರಿಯೆಯಿಂದ ಭೂ ನೋಂದಣಿ ಹಾಗೂ ಭೂ ಕಂದಾಯ ಪದ್ಧತಿ ಜಾರಿಗೊಂಡಿತ್ತು. ಈ ಪ್ರಕ್ರಿಯೆಯು ಹಾಲಕ್ಕಿಗಳ ಮೇಲೆ ಪ್ರತಿಕೂಲ ಪರಿಣಾಮ ಬೀರಿತು. ಮೇಲ್ವರ್ಗದವರಿಂದ ಮೋಸ ಹೋದ ಹಾಲಕ್ಕಿಗಳು (ದೇಸಾಯಿ ೧೯೪೫) ಭೂ ಕಾರ್ಮಿಕರಾದರು. ಇತರೆ ಸಮುದಾಯದಿಂದ ಪ್ರತ್ಯೇಕವಾಗಿ ಗ್ರಾಮ ಪ್ರದೇಶದಲ್ಲಿ ನೆಲೆಗೊಂಡರು. ಇವರು ನೆಲೆನಿಂತ ಪ್ರದೇಶಕ್ಕೆ ಕೊಪ್ಪವೆಂದು ಕರೆಯುತ್ತಾರೆ. ಹಾಲಕ್ಕಿಗಳು ತಮ್ಮದೇ ಆದ ವಿಶಿಷ್ಟ ಸಾಮಾಜಿಕ ರಚನೆಯನ್ನು ಹೊಂದಿರುವರು.

ಹಾಲಕ್ಕಿಗಳ ಸಮುದಾಯದ ಸಂಘಟನೆಯನ್ನು ಯಾರು ರಚಿಸಿದರು ಎಂಬುದರ ಕುರಿತು ದಾಖಲೆಗಳು ದೊರೆತಿಲ್ಲ. ಆದರೆ ತಮ್ಮದೇ ಆದ ನಿಯಮವನ್ನು ಕರಾರುವಕ್ಕಾಗಿ ಅನುಸರಿಸಿಕೊಂಡು ಬಂದಿರುವರು. ಇದೇ ಹಾಲಕ್ಕಿ ಸಮುದಾಯದ ಸಾಂಪ್ರದಾಯಿಕ ನಿಯಂತ್ರಣದ ಅಡಿಪಾಯವಾಗಿದೆ. ಆಡಳಿತದ ದೃಷ್ಟಿಯಿಂದ ಸೀಮೆಯನ್ನು ರಚಿಸಿಕೊಂಡರು. ಹಲವಾರು ಕೊಪ್ಪಗಳು ಸೇರಿ ಸೀಮೆಯ ರಚನೆಯಾಗಿದೆ. ಈ ಸೀಮೆಗಳು ಉತ್ತರ ಕನ್ನಡ ಜಿಲ್ಲೆಯ ಉತ್ತರಕ್ಕಿರುವ ಕಾಳಿನದಿಯಿಂದ, ದಕ್ಷಿಣ ಭಾಗದಲ್ಲಿರುವ ಶರಾವತಿ ನದಿಯವರೆಗೆ ಕಂಡುಬರುತ್ತದೆ. ಹಾಲಕ್ಕಿಗಳು ಏಳು ಸೀಮೆಯನ್ನು ರಚಿಸಿಕೊಂಡಿರುವರು. ಈ ಸೀಮೆಗಳೆಂದರೆ, ಕಡವಾಡ ಸೀಮೆ, ಅಂಕೋಲಾ ಸೀಮೆ, ನುಶಿಕೋಟೆ ಸೀಮೆ, ಕುಂಬಾರ ಗದ್ದೆ ಸೀಮೆ, ಗೋಕರ್ಣ ಸೀಮೆ, ಹರಿಟೆ ಸೀಮೆ ಹಾಗೂ ಚಂದಾವರ ಸೀಮೆ. ಈ ಏಳು ಸೀಮೆಗಳು

೧೬೪ ಊರುಗಳನ್ನು ಒಳಗೊಂಡಿವೆ. ಪ್ರತಿ ಗ್ರಾಮ ಅಥವಾ ಕೊಪ್ಪಕ್ಕೆ ಊರಗೌಡ ಅಥವಾ ಮುಖ್ಯಸ್ಥನಿರುತ್ತಾರೆ. ಊರ ಗೌಡನಿಗೆ ಸಹಾಯಕನಾಗಿ ಕೋಲಕಾರನಿರುತ್ತಾನೆ. ಊರ ಗೌಡನನ್ನು ಬದಲಿಸಲು ಸಾಧ್ಯವೇ ಇಲ್ಲ. ಇದು ಶಾಶ್ವತವಾದ ಹಾಗೂ ವಂಶಪರಂಪರೆಯಿಂದ ಹರಿದು ಬರುವ ಅಧಿಕಾರವಾಗಿದೆ. ಪಿತೃವಂಶೀಯ ಸ್ವರೂಪದಲ್ಲಿ ರೀತಿನೀತಿಗೆ ಅನುಗುಣವಾಗಿ ಅನುವಂಶಿಕತೆ ನಾಯಕನಾಗಬೇಕೆಂಬದನ್ನು ಮನ್ನಿಸಲಾಗಿದೆ. ಹಾಲಕ್ಕಿಗಳಿಗೆ ಸಂಬಂಧಿಸಿದ ಎಲ್ಲಾ ವಿಷಯಗಳು ಕೊಪ್ಪದ ಕೂಟದಲ್ಲಿ ಚರ್ಚಿಸಲಾಗುವುದು. ಹಾಲಕ್ಕಿಗಳು ಏಳು ಸೀಮೆಗಳನ್ನು ಹೊಂದಿರುವರು. ಈ ಏಳು ಸೀಮೆಗೆ ಪ್ರತ್ಯೇಕವಾಗಿ ವಿವಿಧ ಪದಾಧಿಕಾರಿಗಳನ್ನು ಹೊಂದಿರುವರು. ಪ್ರತಿ ಸೀಮೆಯ ಮುಖ್ಯಸ್ಥನಿಗೆ ಸೀಮೆಗೌಡ ಅಥವಾ ಅರಸುಗೌಡ ಅಥವಾ ಪ್ರಧಾನಗೌಡನೆಂದು ಕರೆಯುತ್ತಾರೆ. ಈ ಅರಸು ಗೌಡನಿಗೆ ಅನೇಕ ಸಹೋದ್ಯೋಗಿಗಳಿರುತ್ತಾರೆ. ಹಾಲಕ್ಕಿಗಳಲ್ಲಿ ಧರ್ಮದ ಮುಖ್ಯಸ್ಥನಿಗೆ ಗುರುಗೌಡನೆಂದು ಕರೆಯುತ್ತಾರೆ. ಇತನು ಶಿಸ್ತು ಪರಿಪಾಲನೆಯಲ್ಲಿ ಅರಸುಗೌಡನಿಗೆ ಸಹಾಯಕನಾಗಿರುತ್ತಾನೆ. ಹಾಲಕ್ಕಿಗಳಿಗೆ ಧರ್ಮ ಗುರುವಿನ ಬಗ್ಗೆ ಅಪಾರ ಗೌರವವಿದೆ. ಗುರುಗೌಡನು ಅಪರಾಧಿಗಳ ಅಪರಾಧವನ್ನು ಸಿದ್ಧ ಮಾಡಿ ತೋರಿಸಬೇಕಾಗುತ್ತದೆ. ಹಾಲಕ್ಕಿಗಳ ಸಾಮಾನ್ಯ ಸಭೆಯಲ್ಲಿ ಗುರುಗೌಡ ಭಾಗವಹಿಸುವುದಿಲ್ಲ.

ಊರಗೌಡನು ದಿನನಿತ್ಯದ ಸಾಮಾಜಿಕ ನಿಯಮಗಳು ಸುಸೂತ್ರವಾಗಿ ನಡೆಯುವಂತೆ ನೋಡಿಕೊಳ್ಳುತ್ತಾನೆ. ಸಣ್ಣಪುಟ್ಟ ಅಪರಾಧಗಳಿಗೆ ದಂಡ ವಿಧಿಸುತ್ತಾರೆ. ಒಂದು ವೇಳೆ ಅಪರಾಧಿಗೆ ಆ ಬಗ್ಗೆ ತಕರಾರು ಇದ್ದಲ್ಲಿ ಊರಗೌಡನು ವಿಷಯವನ್ನು ಸೀಮೆ ಗೌಡನಿಗೆ ತಿಳಿಸುತ್ತಾನೆ. ಅಲ್ಲಿ ಶಿಕ್ಷೆಯ ಪ್ರಮಾಣವನ್ನು ಪರಿಶೀಲಿಸಿ ನಿರ್ಧಾರವನ್ನು ಕೈಕೊಳ್ಳಲಾಗುವುದು. ಪ್ರತಿ ಊರಿಗೂ ಕೋಲ್ಕರನಿರುತ್ತಾನೆ. ಕೋಲ್ಕರನು ಸಮಾಚಾರವನ್ನು ಪ್ರತಿಮನೆಗೆ ತಲುಪುವ ಕಾರ್ಯ ನಿರ್ವಹಿಸುತ್ತಾನೆ.

ಊರಗೌಡನಿಗೆ ದಂಡ ಹೇರುವ ಮತ್ತು ಬಹಿಷ್ಕಾರ ಹಾಕುವ ಅಧಿಕಾರವಿದೆ. ಇವರಲ್ಲಿ ಮೂರು ರೀತಿಯ ಶಿಕ್ಷೆ ನೀಡುತ್ತಿರುವುದು ಕಂಡುಬರುತ್ತದೆ. ಅವೆಂದರೆ ದಂಡ ವಿಧಿಸುವುದು, ಬಹಿಷ್ಕಾರ ಹಾಕುವುದು (ಕಟ್ಟು ನೀಡುವುದು) ಹಾಗೂ ದೈಹಿಕವಾಗಿ ಶಿಕ್ಷೆ ನೀಡುವುದು, ದೈಹಿಕವಾಗಿ ಒಂಟಿಕಾಲ ಮೇಲೆ ನಿಲ್ಲುವುದು ಹಾಗೂ ಮರಕ್ಕೆ ಕಟ್ಟಿ ಹಾಕಿ ಬಾರ್ ಕೋಲಿನಿಂದ (ಚಾಟಿ) ಹೊಡೆಯುವುದು. ಹಾಲಕ್ಕಿಗಳಲ್ಲಿ ಅಪರಾಧಿಯು ಬಹಿಷ್ಕಾರದ ಶಿಕ್ಷೆಗೆ ಒಳಗಾದಾಗ, ಪುನಃ ಜಾತಿ ಸೇರಬೇಕಾದರೆ ಶುಲ್ಕ ಕಟ್ಟಬೇಕಾಗುತ್ತದೆ.

ಹಾಲಕ್ಕಿಗಳಲ್ಲಿ ಸಾಮಾನ್ಯ ಜಾತಿ ಸಭೆಯು ಮೂರು ವರ್ಷದಿಂದ ೧೦ ವರ್ಷಕ್ಕೊಮ್ಮೆ ನಡೆಯುತ್ತದೆ. ಈ ಸಭೆಯ ಸ್ಥಳ ಮತ್ತು ದಿನಾಂಕ ನಿರ್ಧರಿಸಿದ ನಂತರ ಕೋಲ್ಕರನು ಪ್ರತಿ ಮನೆಗೂ ವಿಷಯ ಮುಟ್ಟಿಸುತ್ತಾನೆ. ಕೋಲ್ಕರನು ತಾಂಬೂಲ ಕೊಟ್ಟು ಎಲ್ಲರನ್ನೂ

ಕರೆಯುತ್ತಾರೆ. ಎಲ್ಲರೂ ನಿಗದಿತ ಸಮಯಕ್ಕೆ ಬಂದು ಆಸೀನರಾಗುತ್ತಾರೆ. ಆಮೇಲೆ ಊರಗೌಡ ಬರುತ್ತಾನೆ. ಎಲ್ಲರು ಎದ್ದು ನಿಂತು ಗೌರವವನ್ನು ಸೂಚಿಸುತ್ತಾರೆ. ಆಮೇಲೆ ಸೀಮೆ ಗೌಡ ಬರುತ್ತಾನೆ. ಎಲ್ಲರೂ ಎದ್ದು ನಿಂತು ಗೌರವ ಸೂಚಿಸುತ್ತಾರೆ. ಅವನು ಕುಳಿತ ನಂತರ ಎಲ್ಲರೂ ಕುಳಿತುಕೊಳ್ಳುತ್ತಾರೆ. ಹಾಲಕ್ಕಿಗಳಲ್ಲಿ ವಿವಿಧ ಪದಾಧಿಕಾರಿಗಳ ಉಡುಗೆಯಲ್ಲಿ ಯಾವುದೇ ಭಿನ್ನತೆ ಕಂಡುಬರುವುದಿಲ್ಲ. ಅರಸುಗೌಡನು ಸಭೆಯ ವ್ಯವಹಾರದ ಲೆಕ್ಕಾಚಾರವನ್ನು ಇಡುತ್ತಾನೆ. ಗುರುಗೌಡನು ಪ್ರಶ್ನೆಗಳಿಗೆ ಉತ್ತರಿಸುತ್ತಾನೆ. ಊರಗೌಡನ ನಿರ್ಧಾರಕ್ಕೆ ಮನ್ನಣೆ ಸಲ್ಲಿಸಲಾಗುತ್ತದೆ. ಎರಡು ಕಡೆಯ ವಾದವನ್ನು ಕೇಳಲಾಗುತ್ತದೆ. ಹಾಲಕ್ಕಿಗಳಲ್ಲಿ ವಾಕ್‌ಸ್ವಾತಂತ್ರ್ಯವನ್ನು ನೀಡಲಾಗಿದೆ. ಒಂದು ವೇಳೆ ಊರಗೌಡನಿಗೆ ಬಳಸಿದ ಪದ ಅವಾಚ್ಯವಾದರೆ, ಆತನ ಮೇಲೆ ದಂಡ ವಿಧಿಸಲಾಗುತ್ತದೆ. ಊರಗೌಡನಿಗೆ ಗೌರವ ಸೂಚಿಸದೇ ಇದ್ದರೂ ಕೂಡಾ ದಂಡವನ್ನು ವಿಧಿಸಲಾಗುತ್ತದೆ. ಹಾಲಕ್ಕಿಗಳ ಸಮುದಾಯದಲ್ಲಿ ಕುಡಿತವನ್ನು ಸಂಪೂರ್ಣ ನಿಷೇಧಿಸಲಾಗಿತ್ತು. ಯಾರು ಸಾರಾಯಿಯನ್ನು ಮುಟ್ಟುತ್ತಿರಲಿಲ್ಲ. ಒಂದು ವೇಳೆ ಕುಡಿದರೆ ಅಥವಾ ಕುಡಿಸಿದರೆ ಇಬ್ಬರಿಗೂ ಶಿಕ್ಷೆಯನ್ನು ನೀಡಲಾಗುತ್ತಿತ್ತು. ಕುಡಿದರೆ ಒಂಟಿಕಾಲಿನಲ್ಲಿ ದಿನವಿಡಿ ನಿಲ್ಲಬೇಕಾಗುತ್ತಿತ್ತು. ಕೆಲವೊಮ್ಮೆ ಮರಕ್ಕೆ ಕಟ್ಟಿ ಹಾಕಿ ಹೊಡೆಯುತ್ತಿದ್ದರು. ಈ ರೀತಿಯಲ್ಲಿ ಊರಿನ ಸಾಂಪ್ರದಾಯಿಕ ಸಂಸ್ಥೆಯ ವ್ಯವಸ್ಥೆಯು ಸಮಾಜಬಾಹಿರ ಕೆಲಸ ಮಾಡುವುದನ್ನು ತಡೆಯುತ್ತಿತ್ತು.

೬೦ ವರ್ಷಗಳ ಹಿಂದೆ ಹಾಲಕ್ಕಿಗಳ ಸಭೆಯು ಸಾಮಾನ್ಯವಾಗಿ ಇಪ್ಪತ್ತು ದಿನ ಅಥವಾ ಒಂದು ತಿಂಗಳವರೆಗೆ ನಡೆಯುತ್ತಿತ್ತು. ಊರಿನ ಚಾವಡಿಯ ನಿರ್ಮಾಣಕ್ಕೆ ಕೊಪ್ಪದವರೇ ಶ್ರಮ ಹಾಗೂ ಸಲಕರಣೆಯನ್ನು ಪೂರೈಸುತ್ತಿದ್ದರು. ಈ ಸಭೆಗೆ ತಗಲುವ ವೆಚ್ಚವನ್ನು ಜನರಿಂದಲೇ ಸಂಗ್ರಹಿಸುತ್ತಾರೆ. ಹಾಲಕ್ಕಿಗಳಲ್ಲಿ ಜಾತಿ ಬುಡಕ್ಕೆ ವಂತಿಗೆಯನ್ನು ಸಂಗ್ರಹಿಸುವ ಪದ್ಧತಿಯಿದೆ. ಜಾತಿಯ ಸದಸ್ಯರು ತಮ್ಮ ಮರ್ಯಾದೆಗೆ ಅನುಗುಣವಾಗಿ ವಂತಿಗೆ ನೀಡುತ್ತಾರೆ.

ಹಾಲಕ್ಕಿ ಕೊಪ್ಪದಲ್ಲಿನ ಸುವ್ಯವಸ್ಥೆಯನ್ನು ನಿರ್ವಹಣೆ ಮಾಡುವುದೇ ಗೌಡನ ಹೊಣೆಗಾರಿಕೆಯಾಗಿದೆ. ಊರಿನ ಎಲ್ಲಾ ಕುಟುಂಬದ ಜನರ ನಿಕಟ ಪರಿಚಯವಿರುತ್ತದೆ. ಎಲ್ಲಾ ಕುಟುಂಬಗಳ ಆಗು-ಹೋಗುಗಳ ಬಗ್ಗೆ ಸಂಪೂರ್ಣ ಮಾಹಿತಿ ಇರುತ್ತದೆ. ವಿವಾಹದ ಸಂಬಂಧದಲ್ಲಿ ಮಾತುಕತೆಯ ಸಂಧರ್ಭದಲ್ಲಿ ಗೌಡನು ತನ್ನ ಊರಿನ ಕುಟುಂಬದವರೊಂದಿಗೆ ಹೋಗಿ ಮಾತುಕತೆಯ ಮಧ್ಯಸ್ಥಿಕೆಯನ್ನು ವಹಿಸುತ್ತಾನೆ. ವಿವಾಹದ ಸಂಧರ್ಭದಲ್ಲಿ ಬ್ರಾಹ್ಮಣರ ಸೇವೆಯನ್ನು ಪಡೆಯದ ಕಾರಣ ಗೌಡನ ಹಿರಿತನದಲ್ಲಿ ವಿವಾಹಗಳು ನಡೆಯುತ್ತಿದ್ದವು.

ಹಾಲಕ್ಕಿಗಳ ಎಲ್ಲಾ ಧಾರ್ಮಿಕ ಕೆಲಸಗಳಲ್ಲಿ ಹಬ್ಬ, ಹರಿದಿನ, ಸುಗ್ಗಿ, ಹುಟ್ಟು, ವಿವಾಹ, ಸಾವು ಎಲ್ಲದರಲ್ಲಿಯೂ ಗೌಡನು ಕುಟುಂಬದವರಿಗೆ ನೆರವಾಗುತ್ತಾನೆ. ಗೌಡನೇ ಊರಿಗೆ ನ್ಯಾಯ ನೀಡುತ್ತಾನೆ. ಭೂ ವ್ಯಾಜ್ಯವನ್ನು ಬಗೆಹರಿಸುತ್ತಾನೆ. ಕೊಪ್ಪದ ಸಂಘಟನೆಯು ಗೌಡ, ಬುದವಂತ ಹಾಗೂ ಕೋಲ್ಕರನಲ್ಲಿ ಅಡಗಿದೆ. ಊರಿನ ಗೌಡನೇ ಜನರಿಗೆ ನ್ಯಾಯ ನೀಡುತ್ತಾನೆ. ವ್ಯಾಜ್ಯಗಳನ್ನು ಬಗೆ ಹರಿಸುವಲ್ಲಿ ಗೌಡನ ನಿರ್ಧಾರವೇ ಅಂತಿಮ. ಕುಟುಂಬದ ಹಿರಿಯರ ನಿಧನದ ನಂತರ ಆಸ್ತಿಯನ್ನು ಹಂಚುವಾಗ ಸಹ ಗೌಡನ ಮಧ್ಯಸ್ತಿಕೆಯಲ್ಲಿ ಭೂಮಿಯನ್ನು ವಿಭಜಿಸಲಾಗುತ್ತದೆ.

ಹಾಲಕ್ಕಿಗಳ ಕೊಪ್ಪದಲ್ಲಿ ನಡೆಯುವ ಸಭೆಯನ್ನು ಕೂಟವೆಂದು ಕರೆಯುತ್ತಾರೆ. ಕೂಟದ ವ್ಯಾಪ್ತಿಯಿಂದ ಹೊರಗಿದ್ದ ವಿಷಯ ಹಾಗೂ ಗೌಡನ ತೀರ್ಪಿನ ಬಗ್ಗೆ ತಕರಾರು ಇದ್ದಲ್ಲಿ ವಿಷಯವನ್ನು ಸೀಮೆ ಕೂಟದಲ್ಲಿ ಪ್ರಸ್ತಾಪ ಮಾಡಲಾಗುತ್ತದೆ. ಸೀಮೆಯ ಕೂಟವನ್ನು ಚಪ್ಪರದ ಕೂಟವೆಂದು ಕರೆಯುತ್ತಾರೆ. ಇಂತಹ ಕೂಟದಲ್ಲಿ ಧಾರ್ಮಿಕ ವಿಧಿಯ ಅಥವಾ ಸಾಮಾಜಿಕ ಅಥವಾ ವೈಯಕ್ತಿಕ ವಿಷಯವನ್ನು (ಸಮಸ್ಯೆ) ಚರ್ಚಿಸಬಹುದು. ಕೂಟವನ್ನು ಎರಡು ಕಾರಣದಿಂದ ನಡೆಸಲಾಗುತ್ತದೆ. ಒಂದು ಸಾರ್ವಜನಿಕ ವಿಷಯದ ಮೇಲೆ, ಇನ್ನೊಂದು ಖಾಸಗಿ ವಿಷಯದ ಮೇಲೆ. ಗೌಡನೇ ಕೂಟದ ಮುಖ್ಯಸ್ಥ. ಬುದವಂತ ಆತನಿಗೆ ಉತ್ತಮ ಸಲಹೆಯನ್ನು ನೀಡುತ್ತಾನೆ. ಗೌಡನ ಮಾತೇ ತೀರ್ಮಾನವಾಗುತ್ತದೆ. ಒಂದು ವೇಳೆ ಗೌಡನ ತೀರ್ಮಾನ ಒಮ್ಮತವಾಗದಿದ್ದರೆ, ಚಪ್ಪರ ಕೂಟಕ್ಕೆ ವಿಷಯವನ್ನು ಹಸ್ತಾಂತರಿಸಬಹುದು(ವರ್ಗಾಯಿಸಬಹುದು).

ಸಾಂಪ್ರದಾಯಿಕ ರಚನೆಯಲ್ಲಿ ಹಾಲಕ್ಕಿ ಮಹಿಳೆಯರು

ಸಾಂಪ್ರದಾಯಿಕ ಸಾಮಾಜಿಕ ರಚನೆಯ ಯಾವ ಕೂಟದಲ್ಲಿಯೂ ಮಹಿಳೆಯರು ಸದಸ್ಯರಾಗಿರುವುದಿಲ್ಲ. ಇತರೆ ಸಮುದಾಯದಂತೆ ಹಾಲಕ್ಕಿ ಸಮುದಾಯದಲ್ಲಿ ಅಸಮಾನತೆಯನ್ನು ಗುರುತಿಸಬಹುದಾಗಿದೆ. ಸಾಂಪ್ರದಾಯಿಕ ಸಂಘಟನೆಯು ಸಮುದಾಯದವರ ಮೇಲೆ ಸಾಮಾಜಿಕ, ರಾಜಕೀಯ ನಿಯಂತ್ರಣ ಹೊರಲಾಗಿದೆ. ಸಾಮಾಜಿಕ ನಿಯಂತ್ರಣ ಹೇರಲಾಗಿದೆ. ತಮ್ಮ ಸಾಂಪ್ರದಾಯಿಕ ವ್ಯವಸ್ಥೆಯ ಬಗ್ಗೆ ಅಪಾರ ಗೌರವ ಹೊಂದಿದ್ದಾರೆ. ಶಿಕ್ಷೆಯನ್ನು ಅನುಭವಿಸಲು ತಯಾರಿದ್ದಾರೆ. ಜೀವನದ ಸಕಾರಾತ್ಮಕ-ನಕಾರಾತ್ಮಕ ಕರಾರುಗಳು ವ್ಯಾಖ್ಯಾನಿಸಲಾಗಿದೆ. ನಿಯಮಗಳನ್ನು ಮುರಿದರೆ ಶಿಕ್ಷೆ ಹಾಗೂ ದಂಡ ವಿಧಿಸಲಾಗುತ್ತದೆ.

ಮುಖಂಡತ್ವ ವಂಶಪರಂಪರೆಯಿಂದ ಬರುವಂತಹದ್ದು, ಪಿತೃ ಪ್ರಧಾನ ಕುಟುಂಬವಾದ್ದರಿಂದ ಹಿರಿಯ ಪುರುಷನೇ ಕುಟುಂಬದ ಮುಖ್ಯಸ್ಥನಾಗಿರುತ್ತಾನೆ. ರಾಜಕೀಯಕ್ಕೆ ಪುರುಷರೇ

ಮುಖಂಡರು. ಸಾಂಪ್ರದಾಯಿಕ ರಚನೆಯಲ್ಲಿ ಮಹಿಳೆ ಮುಖಂಡರಾಗಲು ಸಾಧ್ಯವಿಲ್ಲ. ಇದು ವಂಶಪರಂಪರೆಯಿಂದ ಬರುವಂತಹದು. ಈ ಸ್ಥಾನ ಬಹಳ ಮುಖ್ಯವಾದದ್ದು ಮತ್ತು ಅಧಿಕಾರಯುಕ್ತವಾದದ್ದು. ಯಾವುದು ಸಾಮಾನ್ಯರಿಂದ ಆಗುವುದಿಲ್ಲ. ಅದನ್ನು ಗೌಡ ಮಾತ್ರ ಮಾಡಬಲ್ಲವನಾಗಿದ್ದಾನೆ. ಕೊಪ್ಪದ ಸಮಸ್ಯೆಗೆ ಪರಿಹಾರವನ್ನು ಕಂಡುಹಿಡಿಯುತ್ತಾನೆ. ಹೀಗಾಗಿ ಅವನ ಪಾತ್ರವು ಮುಖಂಡ, ಮಾರ್ಗದರ್ಶಿ ಹಾಗೂ ತತ್ವಜ್ಞಾನಿ. ಕೊಪ್ಪದ ಅಭಿವೃದ್ಧಿಯು ಅವನಿಗೆ ಸೇರಿದ ವಿಷಯ. ಹೀಗಾಗಿ ನಿರ್ಧಾರ ತೆಗೆದುಕೊಳ್ಳಲು ಮತ್ತು ಜಾರಿಗೊಳಿಸಲು ಪೂರ್ಣ ಅಧಿಕಾರವಿರುತ್ತದೆ.

ಹಾಲಕ್ಕಿಗಳಲ್ಲಿ ಪರಿವರ್ತನೆ

ಇತ್ತೀಚಿನ ದಿನಗಳಲ್ಲಿ ಸಾಂಪ್ರದಾಯಿಕ ರಚನೆಯಲ್ಲಿ ಸಾಕಷ್ಟು ಬದಲಾವಣೆಗಳು ಕಂಡುಬರುತ್ತವೆ. ಸಾಂಪ್ರದಾಯಿಕ ಸಮಾಜದಲ್ಲಿ ರಾಜಕೀಯ ಅಧಿಕಾರವು ಆರ್ಥಿಕ ಸಬಲತೆಯನ್ನು ಅವಲಂಬಿಸಿರಲಿಲ್ಲ. ಆದರೆ, ರಾಜಕೀಯ ಅಧಿಕಾರಕ್ಕೆ ಆರ್ಥಿಕ ಸಬಲತೆಯ ಅವಶ್ಯಕತೆಯು ಇರುತ್ತದೆ. ಆರ್ಥಿಕವಾಗಿ ತೀರಾ ದುರ್ಬಲರಾದಾಗ ಸಾಮಾನ್ಯವಾಗಿ ಜನರಿಂದ ಗೌರವ ಸಿಗಲಾರದು. ಅಧ್ಯಯನ ನಡೆಸಿದ ಬೆಳಸೆ ಗ್ರಾಮ ಮತ್ತು ತಳಗದ್ದೆ ಗ್ರಾಮಗಳಲ್ಲಿ ಊರಿನ ಗೌಡನು ಹೆಸರಿಗೆ ಮಾತ್ರ ಗೌಡನಾಗಿರುತ್ತಾನೆ. ಗೌಡನ ಮಾತುಗಳು ನಡೆಯುತ್ತಿಲ್ಲ ಎಂಬುದು ಗಮನಕ್ಕೆ ಬಂದಿದೆ.

ಇತ್ತೀಚಿನ ದಿನಗಳಲ್ಲಿ ಹಾಲಕ್ಕಿಗಳು ಆರ್ಥಿಕ ಅಂತಸ್ತನ್ನು ಹೆಚ್ಚಿಸಿಕೊಂಡಿರುವವರು ಅಧಿಕಾರ ನಡೆಸುತ್ತಿರುವುದು ಕಂಡುಬಂದಿದೆ. ಗೌಡನ ಬಡತನ, ವಯಸ್ಸು, ಬುದ್ಧಿವಂತಿಕೆ ಕೊರತೆ ಎಲ್ಲವೂ ಅವನ ಅಸಮರ್ಥತೆಗೆ ಕಾರಣವಾಗಿರಬಹುದು. ಗೌಡನ ಪಾತ್ರವು ಇಂದಿನ ದಿನಗಳಲ್ಲಿ ಸಾಂಪ್ರಾದಾಯಿಕ ಅಂತಸ್ತು ಹಾಗೂ ಪ್ರಭಾವವನ್ನು ಕಳೆದುಕೊಂಡಿದೆ. ಇಂದು ಗೌಡನು ಶಿಕ್ಷೆ ಅಥವಾ ಬಹಿಷ್ಕಾರ ಹಾಕಲು ಸಾಧ್ಯವಾಗುತ್ತಿಲ್ಲ. ಇಂದು ಹಾಲಕ್ಕಿಗಳಲ್ಲಿ ಶೇ. ೯೦ರಷ್ಟು ಪುರುಷರು ಕುಡಿತದ ಚಟಕ್ಕೆ ಬಲಿಯಾಗಿದ್ದಾರೆ. ಸಾಂಪ್ರಾದಾಯಿಕ ಸಂಸ್ಥೆಯ ಗೌಡನಿಗೂ ಇಂದು ಸಾರಾಯಿ ಅವಶ್ಯಕವಾಗಿದೆ. ಎಂದು ಮಹಿಳೆಯರು ಅಭಿಪ್ರಾಯಪಟ್ಟಿದ್ದಾರೆ. ಚಪ್ಪರ ಕೂಟ ನಡೆಯದೇ ಹಲವಾರು ವರ್ಷಗಳೇ ಆಗಿವೆ. ಸಾಂಪ್ರದಾಯಿಕ ಸಂಘಟನೆಯ ಉಳುವಿಗಾಗಿ ಹಾಲಕ್ಕಿಗಳ ಸಂಘದ ಅಧ್ಯಕ್ಷರು ಇಂತಹ ಸೀಮೆಯ ಕೂಟವನ್ನು ಇತ್ತೀಚೆಗೆ ಅಂಕೋಲಾ ಸೀಮೆಯಲ್ಲಿ ನಡೆಸಿರುವರು.

ಸಾಂಪ್ರದಾಯಿಕ ವ್ಯವಸ್ಥೆಯು ತನ್ನ ಹಿಡಿತವನ್ನು ಉಳಿಸಿಕೊಳ್ಳಲು ಆಸಕ್ತಿಯನ್ನು ತೋರಿಸುತ್ತಿದೆ. ಆದರೆ, ಸಾಂಪ್ರದಾಯಿಕ ವ್ಯವಸ್ಥೆಯನ್ನು ಪಂಚಾಯತಿ ವ್ಯವಸ್ಥೆಯು, ಸಡಿಲಿಸಿದೆ.

ಪಂಚಾಯತಿಯು ಪ್ರಬಲ ರಾಜಕೀಯ ಪ್ರಕ್ರಿಯೆಯನ್ನು ನಿಯಂತ್ರಿಸುತ್ತದೆ. ಇದರಿಂದಾಗಿ ಸಾಂಪ್ರದಾಯಿಕ ರಾಜಕೀಯ ಪದ್ಧತಿ ಮತ್ತು ಆಧುನಿಕ ಪಂಚಾಯತಿಯ ನಡುವೆ ಘರ್ಷಣೆಗೆ ಅವಕಾಶವಿದೆ. ಹಾಲಕ್ಕಿಗಳಿಗೆ ತಮ್ಮ ಸಾಂಪ್ರದಾಯಿಕ ಸಂಘಟನೆಯ ಬಗ್ಗೆ ಅಪಾರ ಗೌರವವಿದೆ. ಅಲ್ಲದೇ ತಮ್ಮ ಸಮುದಾಯದ ಮುಖಂಡತ್ವ ಮತ್ತು ರಾಜಕೀಯ ನಿಯಂತ್ರಣವನ್ನು ಒಪ್ಪಿಕೊಂಡಿರುವರು.

ಕೋಷ್ಟಕ ೪.೨

ಹಾಲಕ್ಕಿ ಮಹಿಳೆಯರಲ್ಲಿ ರಾಜಕೀಯ ಅರಿವು

ಕ್ರಸಂ.	ವಿವರಣೆ	ಅಂಕೋಲಾ		ಕುಮಟಾ		ಒಟ್ಟು	
		ಹೌದು	ಅಲ್ಲ	ಹೌದು	ಅಲ್ಲ	ಹೌದು	ಅಲ್ಲ
೧.	ಮತದಾನ	೭೩	೧೨	೧೦೦	--	೧೭೩	೧೨
೨.	ಗ್ರಾಮಸಭೆ	೪೦	೩೫	೭೫	—	೧೧೫	೬೦
೩.	ಗ್ರಾಮಪಂಚಾಯತಿ ಅನುಕೂಲವಾಗಿದ	೫೩	೩೨	೭೫	೨೫	೮೩	೮೨
೪.	ಮಹಿಳಾ ಮೀಸಲಾತಿ	೫೭	೨೮	೭೬	೨೪	೧೩೩	೫೨
೫.	ಜಾತಿ ಸಂಘಟನೆಅರಿವು	೧೫	೭೦	೪೦	೬೦	೫೫	೧೩೦
೬	ಜಾತಿ ಸಂಘಟನೆ ಪಾಲ್ಗೊಳ್ಳುವಿಕೆ	೧೦	೭೫	೧೦	೯೦	೨೦	೧೬೫
೭	ಎಸ್.ಟಿ. ಸೇರಿಸಬೇಕು	೮೦	೦೫	೧೦೦	—	೧೮೦	೦೫
೮.	ಗೌಡನಿಗೆ ಅಧಿಕಾರ ಇರಬೇಕು	೬೫	೨೦	೫೦	೫೭	೧೧೫	೭೦
೯.	ವ್ಯಾಜ್ಯ ಬಗೆಹರಿಸಲು ಕೋರ್ಟ್‌ಗೆ ಹೋಗಬೇಕು	೮೧	೦೪	೯೯	೦೧	೧೮೦	೦೫
	ಒಟ್ಟು		೮೫		೧೦೦		೧೮೫

(ಮೂಲ: ಕ್ಷೇತ್ರಕಾರ್ಯದ ಮಾಹಿತಿ)

ಸಾಂಪ್ರದಾಯಿಕ ರಚನೆಯಲ್ಲಿ ಉದ್ದೇಶಪೂರ್ವಕವಾಗಿ ಮಹಿಳೆಯರ ಪ್ರವೇಶವನ್ನು ನಿಷೇದಿಸಲಾಗಿತ್ತು. ಇಂದು ಹಾಲಕ್ಕಿ ಮಹಿಳೆಯರು ಗ್ರಾಮ ಪಂಚಾಯತಿಯಲ್ಲಿ ಸದಸ್ಯರಾಗಿ

ಹಾಗೂ ಜಿಲ್ಲಾ ಪಂಚಾಯತಿಯ ಅಧ್ಯಕ್ಷರಾಗಿ ಕಾರ್ಯನಿರ್ವಸುತ್ತಿದ್ದಾರೆ. ಹಾಲಕ್ಕಿಗಳಲ್ಲಿ ಶೇ. ೯೩.೫೧ರಷ್ಟು ಮಹಿಳೆಯರು ತಮ್ಮ ಮತದಾನದ ಹಕ್ಕನ್ನು ಚಲಾಯಿಸುತ್ತಿದ್ದಾರೆ. ಹಾಲಕ್ಕಿ ಪುರುಷರು ಸಹ ಗ್ರಾಮ ಪಂಚಾಯತಿಯ ಸದಸ್ಯರಾಗಲು ಮಹಿಳೆಯರಿಗೆ ಪ್ರೋತ್ಸಾಹವನ್ನು ನೀಡುತ್ತಿದ್ದಾರೆ. ಹಾಲಕ್ಕಿಗಳು ತಮ್ಮ ಆಸಕ್ತಿಯನ್ನು ಕಾಪಾಡಿಕೊಳ್ಳುವ ಉದ್ದೇಶದಿಂದ ತಮ್ಮ ಸಂಘವನ್ನು ರಚಿಸಿಕೊಂಡಿದ್ದಾರೆ. ಈ ಸಂಘದ ಮೂಲಕ ತಮ್ಮನ್ನು ಪರಿಶಿಷ್ಟರ ಪಟ್ಟಿಗೆ ಸೇರಿಸಲು ಸರ್ಕಾರದ ಮೇಲೆ ಒತ್ತಡ ತರಲು ಪ್ರಯತ್ನಿಸುತ್ತಿದ್ದಾರೆ. ವಿವಿಧ ರಾಜಕೀಯ ಪಕ್ಷಗಳೊಡನೆ ಸಂಬಂಧವನ್ನು ಹೊಂದಿದವರಾಗಿದ್ದಾರೆ. ಈ ಸಮುದಾಯದ ಇಬ್ಬರು ಪುರುಷರು ಈ ಜಿಲ್ಲೆಯ ಎಂ.ಎಲ್.ಎ. ಕೂಡಾ ಆಗಿದ್ದಾರೆ.

೬೦ ವರ್ಷಗಳ ಹಿಂದೆ ಡಾ. ದೇಸಾಯಿಯವರು ಹಾಲಕ್ಕಿಗಳನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಲು ಪ್ರಯತ್ನಿಸಿದ್ದರು. ಆದರೆ ಇಂದು ಹಾಲಕ್ಕಿಗಳೇ ಪರಿಶಿಷ್ಟ ಪಂಗಡಕ್ಕೆ ಸೇರ್ಪಡೆಗೊಳ್ಳಲು ಪ್ರಯತ್ನಿಸುತ್ತಿದ್ದಾರೆ. ಇದು ಹಾಲಕ್ಕಿಗಳಲ್ಲಿ ಉಂಟಾಗಿರುವ ಮಹತ್ವದ ಬದಲಾವಣೆಯಾಗಿದೆ.

ಶೇ. ೭೨.೧೦ರಷ್ಟು ಮಹಿಳೆಯರು ಗ್ರಾಮ ಸಭೆಯಲ್ಲಿ ಪಾಲ್ಗೊಳ್ಳುತ್ತಿದ್ದಾರೆ. ನಿರ್ಧಾರ ತೆಗೆದುಕೊಳ್ಳುವ ಪ್ರಕ್ರಿಯೆಯಲ್ಲಿ ಹಾಲಕ್ಕಿ ಮಹಿಳೆ ಪಾಲ್ಗೊಳ್ಳುತ್ತಿದ್ದಾಳೆ. ಶೇ. ೮೩ರಷ್ಟು ಪ್ರತಿಕ್ರಿಯಿಸಿದ ಮಹಿಳೆಯರು ಗ್ರಾಮ ಪಂಚಾಯತಿಯಿಂದ ಅನುಕೂಲವಾಗಿದೆ ಎಂದು ತಿಳಿಸಿರುವರು. ಪಂಚಾಯತಿಯು ನೀರಿನ ವ್ಯವಸ್ಥೆಯನ್ನು ಮಾಡಿದೆ ಎಂದಿರುವರು. ಶೇ. ೭೧.೮೯ರಷ್ಟು ಪ್ರತಿಕ್ರಿಯಿಸಿದ ಮಹಿಳೆಯರು, ಮಹಿಳಾ ಮೀಸಲಾತಿ ಪರವಾಗಿದ್ದರು. ಇದರಿಂದ ಮಹಿಳೆಯರ ಸ್ಥಿತಿ ಉತ್ತಮಗೊಳ್ಳುವುದೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿರುವರು.

ಹಾಲಕ್ಕಿಗಳ ಒಕ್ಕಲಿಗರ ಸಂಘದ ಬಗ್ಗೆ ಅರಿವು ಹೊಂದಿದ ಮಹಿಳೆಯರು ಶೇ. ೩೫.೧೩ರಷ್ಟು ಮಾತ್ರ. ಈ ಬಗ್ಗೆ ವಿಚಾರಿಸಿದಾಗ ಕಂಡುಬಂದ ಸತ್ಯ ಏನೆಂದರೆ ಹಾಲಕ್ಕಿ ಸಂಘದಲ್ಲಿ ಕೇವಲ ಪುರುಷರಷ್ಟೆ ಸದಸ್ಯರಿದ್ದಾರೆ. ಈ ಬಗ್ಗೆ ಅಧ್ಯಕ್ಷರನ್ನು ಕೇಳಿದ್ದಕ್ಕೆ ಇನ್ನು ಮುಂದೆ ಮಹಿಳೆಯರನ್ನು ಕೂಡಾ ಸದಸ್ಯರನ್ನಾಗಿ ಮಾಡಿಕೊಳ್ಳುವುದಾಗಿ ಅಭಿಪ್ರಾಯ ವ್ಯಕ್ತಪಡಿಸಿದರು. ಸದಸ್ಯತ್ವದ ಮೊತ್ತವು ರೂ.೩೦೦ ಇದೆ. ಹೀಗಾಗಿ ಹೊಸಬರು ಸೇರಿಕೊಳ್ಳಲು ಆಗುತ್ತಿಲ್ಲ. ಅದರಿಂದ ಹೊಸಬರಿಗೆ ಅವಕಾಶ ದೊರೆಯುತ್ತಿಲ್ಲವೆಂಬ ಅಭಿಪ್ರಾಯ ಹಾಲಕ್ಕಿ ಪುರುಷರು ಸಹ ವ್ಯಕ್ತಪಡಿಸಿರುವರು. ಜಾತಿ ಸಂಘಟನೆಯಲ್ಲಿ ಪಾಲ್ಗೊಂಡ ಮಹಿಳೆಯರ ಪ್ರಮಾಣ ಶೇ. ೧೦.೮ರಷ್ಟಿದೆ. ಶೇ. ೯೭.೨೯ರಷ್ಟು ಮಹಿಳೆಯರು ತಮ್ಮನ್ನು ಪರಿಶಿಷ್ಟರ ಜಾತಿಗೆ ಸೇರಿಸಬೇಕೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿರುವರು. ಇದರಿಂದಾಗಿ ಶಿಕ್ಷಣ ಹಾಗೂ

ನೌಕರಿಗೆ ಅನುಕೂಲವಾಗುತ್ತಿಲ್ಲವೆಂದು ಅಭಿಪ್ರಾಯ ವ್ಯಕ್ತಪಡಿಸಿರುವರು. ಶೇ. ೬೨.೧೬ರಷ್ಟು ಮಹಿಳೆಯರು ಗೌಡನಿಗೆ ಅಧಿಕಾರ ಇರಬೇಕು ಎಂದಿರುವರು. ಏಕೆಂದರೆ ಹಾಲಕ್ಕಿಗಳ ಖಾಸಗಿ ವಿಚಾರಗಳು ಗ್ರಾಮ ಪಂಚಾಯತಿಯ ಅಡಿಯಲ್ಲಿ ಬರುವುದಿಲ್ಲ. ಅಂತಹ ಸಂದರ್ಭದಲ್ಲಿ ಗೌಡನ ಅವಶ್ಯಕತೆಯಿರುತ್ತದೆ ಎಂದು ಮಹಿಳೆಯರು ತಿಳಿಸಿರುವರು. ಮಹಿಳೆಯರ ಪ್ರಕಾರ ಹುಡುಗನಿಂದ ಮಹಿಳೆಗೆ ಮೋಸವಾದ ಸಂದರ್ಭದಲ್ಲಿ ಗೌಡನ ಸಹಾಯ ಅವಶ್ಯಕವಾಗುತ್ತದೆ ಎನ್ನುತ್ತಾರೆ. ಇಂತಹ ಸಂದರ್ಭದಲ್ಲಿ ಪಂಚಾಯತಿ ಏನು ಮಾಡಲಾರದು ಎನ್ನುತ್ತಾರೆ. ಊರಿನ ಹಬ್ಬ-ಸುಗ್ಗಿ ಮುಂತಾದವುಗಳಿಗೆ ಗೌಡ ಬೇಕಾಗುತ್ತಾನೆ ಅನ್ನುತ್ತಾರೆ. ಶೇ. ೩೭.೮೪ರಷ್ಟು ಮಹಿಳೆಯರು ಗೌಡನಿಗೆ ಅಧಿಕಾರ ಇರಬಾರದು ಎನ್ನುತ್ತಾರೆ. ಮಹಿಳೆಗೆ ಅನ್ಯಾಯವಾದರೆ ಪೋಲೀಸರಿಗೆ ದೂರು ನೀಡಬಹುದು ಅನ್ನುತ್ತಾರೆ. ಪ್ರತಿಕ್ರಿಯಿಸಿದ ಶೇ. ೯೭.೮೩ರಷ್ಟು ಮಹಿಳೆಯರು ವ್ಯಾಜ್ಯದ ಪರಿಹಾರಕ್ಕೆ ಕೋರ್ಟಿಗೆ ಹೋಗಬೇಕು ಎನ್ನುತ್ತಾರೆ. ಶೇ. ೯.೪೧ರಷ್ಟು ಮಹಿಳೆಯರು ಕೋರ್ಟಿಗೆ ಹೋಗುವುದರ ವಿರುದ್ಧ ಇದ್ದರು. ಇಂದು ಗೌಡನು ಯಾವುದೇ ವ್ಯಾಜ್ಯವನ್ನು ಬಗೆಹರಿಸಲು ಮುಂದಾಗುತ್ತಿಲ್ಲವಂತೆ, ಅವನೇ ಕೋರ್ಟಿಗೆ ಹೋಗಲು ಸೂಚಿಸುತ್ತಾನೆ. ತಾನೇಕೆ ಜನರ ಹತ್ತಿರ ನಿಷ್ಠುರ ಕಟ್ಟಿಕೊಳ್ಳಬೇಕು ಎನ್ನುತ್ತಾನೆ.

ಈ ಮೇಲಿನ ಕೋಷ್ಟಕದ ವಿವರಣೆಯಿಂದ ಕಂಡುಬರುವುದೇನೆಂದರೆ, ಹಾಲಕ್ಕಿಗಳ ಸಾಮಾಜಿಕ ರಚನೆಯಲ್ಲಿ ಬದಲಾವಣೆ ನಿಧಾನವಾಗಿ ಉಂಟಾಗುತ್ತಿದೆ. ಸಾಂಪ್ರದಾಯಿಕ ಸಂಘಟನೆಯು ದುರ್ಬಲಗೊಂಡಿರುವುದು ತಿಳಿದುಬರುತ್ತದೆ. ಹಿಂದಿನಂತೆ ಸಾಂಪ್ರದಾಯಿಕ ಸಂಸ್ಥೆಯು ತನ್ನ ಸದಸ್ಯರನ್ನು ನಿಯಂತ್ರಿಸುವಲ್ಲಿ ವಿಫಲಗೊಂಡಿರುವುದು ಸ್ಪಷ್ಟವಾಗುತ್ತದೆ.

೪.೩. ಧಾರ್ಮಿಕತೆಯ ಸಂಕೀರ್ಣತೆ ಮತ್ತು ಮಹಿಳೆ

ಸಾಮಾಜಿಕ ಮತ್ತು ಆರ್ಥಿಕತೆಯ ಹೊರತಾಗಿ ಧರ್ಮ ಕೂಡಾ ಮಹಿಳೆಯರ ಸ್ಥಿತಿಯನ್ನು ಸೂಚಿಸುವ ಅಂಶವಾಗಿದೆ. ಧಾರ್ಮಿಕ ಜೀವನದಲ್ಲಿ ಕೆಲವು ಅಂಶಗಳು ಮಹಿಳೆಯರ ಪಾಲ್ಗೊಳ್ಳುವಿಕೆಯನ್ನು ನಿಷೇಧಿಸುತ್ತದೆ. ಹೀಗಾಗಿ ಪುರುಷರಿಗೆ ಧಾರ್ಮಿಕವಾಗಿ ಪ್ರಾಧಾನ್ಯತೆ ಲಭ್ಯವಾಗಿದೆ. ಮಹಿಳೆಯನ್ನು ಪ್ರತ್ಯೇಕಿಸುವುದು ಅವಳ ಕೆಳಗಿನ ಸ್ಥಾನ ಸೂಚಿಯಾಗಿರುತ್ತದೆ. ಹಾಲಕ್ಕಿ ಮಹಿಳೆಯರಲ್ಲಿ ಬದಲಾವಣೆ ಗುರುತಿಸುವಲ್ಲಿ ಧಾರ್ಮಿಕ ಪದ್ಧತಿಯ ಬದಲಾವಣೆಯ ಮೂಲಕ ಗುರುತಿಸಲಾಗುವುದು.

ಧಾರ್ಮಿಕವಾಗಿ ಅಗೋಚರ ಶಕ್ತಿಯ ಪ್ರಭಾವಕ್ಕೆ ಹಾಲಕ್ಕಿಗಳು ಒಳಗಾಗಿರುತ್ತಾರೆ. ಅವರಿಗೆ ಸಂಸ್ಕೃತ ಬರುವುದಿಲ್ಲ. ಹೀಗಾಗಿ ಗ್ರಾಮ್ಯ ಭಾಷೆಯಲ್ಲಿ ಸಂಭಾಷಣೆಗೆ ತೊಡಗಿಕೊಳ್ಳುತ್ತಾರೆ. ಧರ್ಮ ಬಹಳ ಸಂಕೀರ್ಣವಾಗಿದ್ದು, ಅದರ ಪರಿಣಾಮ ಆಳವೂ,

ವಿಶಾಲವೂ ಆಗಿದೆ. ಇವರ ಧಾರ್ಮಿಕ ನಂಬಿಕೆಗಳು, ಭಯ, ನಿಷೇಧ, ಭಾವನೆಗಳು ದೆವ್ವ-ದೇವರು ದೇವತೆಗಳ ಪೂಜೆಯನ್ನು ಪ್ರತಿನಿಧಿಸುತ್ತವೆ. ಧರ್ಮವು ಮೌಖಿಕವಾಗಿ ವರ್ಗಾಯಿಸಲ್ಪಡುತ್ತದೆ.

ಧರ್ಮವು ಹಾಲಕ್ಕಿಗಳ ಏಕತೆಯನ್ನು ಕಾಪಾಡುತ್ತದೆ. ದುಷ್ಟ ಶಕ್ತಿಯೇ ಎಲ್ಲಾ ಕೆಡಕಿಗೆ ಕಾರಣವೆಂಬ ನಂಬಿಕೆ ಅವರದಾಗಿದೆ. ಹೀಗಾಗಿ ಹುಲಿದೇವರು, ವನದೇವರು, ಗ್ರಾಮದೇವತೆ, ಬೇಟೆ ದೇವರು ಹಾಗೂ ಮಾಸ್ತಿಯನ್ನು ಪೂಜಿಸಲಾಗುತ್ತದೆ. ಜೀವನಕ್ಕೆ ದೇವರೇ ಕಾರಣ ಹಾಲಕ್ಕಿಗಳು ವೆಂಕಟರಮಣ ದೇವರ ಭಕ್ತರು. ವಿವಿಧ ವೃಕ್ಷಗಳನ್ನು ಸೂರ್ಯ, ಚಂದ್ರ ಮೋಡಗಳ ಆರಾಧನೆ, ಅಗ್ನಿ ಪವಿತ್ರತೆಯ ಸಂಕೇತ, ಮಳೆಯು ಮೇಘ ರಾಜನ ನಿಯಂತ್ರಣದಲ್ಲಿದೆ. ಗ್ರಾಮದೇವತೆ ಗ್ರಾಮವನ್ನು ರಕ್ಷಣೆ ಮಾಡುತ್ತದೆ ಎಂಬುದು ಹಾಲಕ್ಕಿಗಳ ನಂಬಿಕೆ.

ಹಾಲಕ್ಕಿಗಳಿಗೆ ದೆವ್ವ-ಭೂತದಲ್ಲಿ ಅತಿಯಾದ ನಂಬಿಕೆ. ಆತ್ಮಕ್ಕೆ ಅತೃಪ್ತಿಯಾದರೆ ದೆವ್ವವಾಗುತ್ತಾರೆ ಎಂದು ನಂಬಿದವರು. ಸತ್ತವರ ಆತ್ಮವನ್ನು ಹಾಲಕ್ಕಿಗಳು ತೆಂಗಿನಕಾಯಿ ಒಳಗೆ ಆಹ್ವಾನಿಸುತ್ತಾರೆ. ಮನುಷ್ಯನಿಗೆ ಬರುವ ಎಲ್ಲಾ ಅನಾರೋಗ್ಯಕ್ಕೆ ದೆವ್ವ ಕಾರಣವೆಂದು ನಂಬಿದವರು. ದನ ಕರುಗಳಿಗೂ ದೆವ್ವ ಹಿಡಿದುಕೊಂಡಿದೆ ಎಂದು ಬಗೆಯುತ್ತಾರೆ. ಮಂತ್ರ ಮಾಟಗಳಲ್ಲಿ ನಂಬಿಕೆ, ಬಾಣಂತನ ಕಷ್ಟವಾದರೆ ದೆವ್ವದ ಕಾಟವೆಂದು ಬಗೆಯುತ್ತಾರೆ. ದೇವರನ್ನು ಆರಾಧಿಸುವ ಇನ್ನೊಂದು ವಿಧಾನವೆಂದರೆ ಗ್ರಾಮ ದೇವತೆಗೆ ಕುರಿ ಕೋಳಿಯನ್ನು ಬಲಿಕೊಡುವ ಪದ್ಧತಿ.

ಶ್ರೀ ವೆಂಕಟರಮಣ ದೇವರ ಭಕ್ತರಾದ ಹಾಲಕ್ಕಿಗಳಿಗೆ ದೀಪಾವಳಿ ದೊಡ್ಡ ಹಬ್ಬವಾಗಿದೆ. ಹರಿದಿನವನ್ನು (ಸತ್ಯನಾರಾಯಣ ಪೂಜೆ) ಆಚರಿಸುತ್ತಾರೆ. ರೈತಾಪಿಗಳಾದ ಹಾಲಕ್ಕಿಗಳಿಗೆ ಸುಗ್ಗಿಯು ವಿಶೇಷ ಹಬ್ಬವಾಗಿದೆ. ಇದರೊಂದಿಗೆ ಹಾಲಕ್ಕಿಗಳು ಯಕ್ಷಗಾನ, ಗುಮಟೆ ಪಾಂಗು ಹಾಗೂ ಹಗರಣದಲ್ಲೂ ಕೂಡಾ ನುರಿತವರು.

ಸಾಂಪ್ರದಾಯಿಕ ಧಾರ್ಮಿಕ ನಮೂನೆಗಳನ್ನು ಇಂದಿಗೂ ಮುಂದುವರಿಸಿಕೊಂಡು ಬರಲಾಗಿದೆ. ಧಾರ್ಮಿಕ ಅಂಶಗಳು ವ್ಯಕ್ತಿಗತ ಮತ್ತು ಸಮಾಜದ ಮೇಲೆ ನಿಯಂತ್ರಣ ಹೊಂದಿದೆ. ಧರ್ಮದ ನಂಬಿಕೆಗಳು ಮಹಿಳೆಯರ ಸಾಮಾಜಿಕ ಆರ್ಥಿಕ ಮತ್ತು ರಾಜಕೀಯ ಅಂಶದ ಮೇಲೆ ಪ್ರಭಾವ ಬೀರುತ್ತದೆ. ಈ ಸಮುದಾಯದಲ್ಲಿ ಆರ್ಥಿಕ, ಸಾಮಾಜಿಕ ಹಾಗೂ ಧಾರ್ಮಿಕ ಅಂಶಗಳು ಒಂದಕ್ಕೊಂದು ಅವಲಂಬಿತವಾಗಿವೆ. ಧರ್ಮದ ಮೂಲಕ ಕರಾರುಗಳನ್ನು ವಿಧಿಸಲಾಗುತ್ತದೆ. ಕೆಲವು ಪದ್ಧತಿಗಳನ್ನು ಧರ್ಮದ ಹೆಸರಿನಲ್ಲಿ ಮಾಡಲಾಗಿದೆ.

ಅಗೋಚರ ಶಕ್ತಿಯ ಭಯವಿದೆ. ವಿವಿಧ ದೇವ–ದೇವತೆಗಳ ಆರಾಧನೆ, ಶುಭಕಾರಕ ಮತ್ತು ಅಶುಭಕಾರಕಗಳು–ಸಾಂಪ್ರದಾಯಗಳು ಔಷಧಿಗಳು, ದುಷ್ಟಶಕ್ತಿ, ದೆವ್ವ ಮುಂತಾದವುಗಳ ಮೂಲಕ ಭಯವನ್ನು ಸೃಷ್ಟಿಸಲಾಗುತ್ತದೆ.

ಹಾಲಕ್ಕಿ ಮಹಿಳೆಯು ಎಲ್ಲಾ ಧಾರ್ಮಿಕ ಚಟುವಟಿಕೆಯಲ್ಲಿ ತೊಡಗಿಕೊಳ್ಳುತ್ತಾಳೆ. ಧರ್ಮದ ಕಟ್ಟುಪಾಡುಗಳನ್ನು ಇಂದಿಗೂ ಹಿಂದಿನಂತೆ ಮುಂದುವರೆಸಿಕೊಂಡು ಹೋಗಲಾಗುತ್ತದೆ. ಹಾಲಕ್ಕಿಗಳ ಮುಖ್ಯ ಧಾರ್ಮಿಕ ಸ್ಥಾನವನ್ನು ಪುರುಷರಿಗೆ ನೀಡಲಾಗಿದೆ. ಪ್ರತಿಕ್ರಿಯಿಸಿದ ೧೮೫ ಮಹಿಳೆಯರು ಪುರುಷರೇ ಪೂಜೆಯನ್ನು ಮಾಡಬೇಕು ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಈ ಕೆಲಸ ಮಹಿಳೆಯರು ಯೋಗ್ಯ ಅಲ್ಲಾ ಅಂತಾ ಅವರ ಭಾವನೆ. ಹಾಲಕ್ಕಿ ಮಹಿಳೆಯರ ಪ್ರಕಾರ ಅವಳು ಅಶುದ್ಧಳು. ಆದ್ದರಿಂದ ಪುರುಷರೇ ಪೂಜೆಯನ್ನು ಮಾಡಬೇಕು. ನಾವು ಅಶುದ್ಧ ಆದ್ದರಿಂದ ಕೆಳಗಿನವರೆಂದು ಮಹಿಳೆಯರು ಒಪ್ಪಿಕೊಂಡಿದ್ದಾರೆ.

ಹಾಲಕ್ಕಿಗಳ ಮನೆಯ ಅಂಗಳದಲ್ಲಿ ಪವಿತ್ರವಾದ ತುಳಸಿ ಕಟ್ಟೆ ಇರುತ್ತದೆ. ದಿನವೂ ತುಳಸಿ ಪೂಜೆಯನ್ನು ಮಹಿಳೆ ಮಾಡುತ್ತಾಳೆ. ಪುರುಷರು ವೆಂಕಟರಮಣ ದೇವರ ಪೂಜೆಯನ್ನು ಮಾಡುತ್ತಾರೆ. ಹಾಲಕ್ಕಿ ಪುರುಷರು ತಲೆಗೆ ಮುಂಡಾಸವನ್ನು ಸುತ್ತಿಕೊಳ್ಳುತ್ತಾರೆ. ಶನಿವಾರ ಮಾತ್ರ ವೆಂಕಟರಮಣನಿಗೆ ಪೂಜಿಸುವಾಗ ಗೌರವ ಸೂಚಕವಾಗಿ ಮುಂಡಾಸವನ್ನು ತೆಗೆದಿಟ್ಟು ನಮಸ್ಕರಿಸುತ್ತಾರೆ.

ಹಾಲಕ್ಕಿಗಳಲ್ಲಿ ಹಬ್ಬದಿನವನ್ನು ಆಚರಿಸುವ ಸಂಪ್ರದಾಯವಿದೆ. ಹಬ್ಬದಿನದ ಎಲ್ಲಾ ತಯಾರಿಯಲ್ಲಿ ಮಹಿಳೆಯರು ಪಾಲ್ಗೊಳ್ಳುತ್ತಾರೆ. ಪಾತ್ರೆ ಸ್ವಚ್ಛಗೊಳಿಸುವುದು, ಹೂವಿನ ಹಾರ ಮಾಡುವುದು, ಅಂಗಳವನ್ನು ಸಗಣಿಯಿಂದ ಸಾರಿಸುವುದು, ರಂಗೋಲಿ ಹಾಕುವುದು, ಅಡಿಗೆ ತಯಾರಿಕೆ, ಪೂಜೆಯ ಸಾಮಾನುಗಳನ್ನು ಜೋಡಿಸಿ ಕೊಡುವುದು ಎಲ್ಲವನ್ನೂ ಮಹಿಳೆಯರಿಗೆ ಬಿಟ್ಟುಕೊಡಲಾಗಿದೆ. ದೇವರ ಪೂಜೆಯನ್ನು ಮಾತ್ರ ಪುರುಷರೇ ಮಾಡಬೇಕು. ಈ ಬಗ್ಗೆ ಮಹಿಳೆಯರ ತಕರಾರು ಇಲ್ಲ. ಏಕೆಂದರೆ ಪೂಜೆ ಮಾಡುವುದು. ಪುರುಷರ ಕೆಲಸವೆಂದು ಒಪ್ಪಿಕೊಂಡಿದ್ದಾರೆ.

ಶೇ. ೯೬ರಷ್ಟು ಮಹಿಳೆಯರ ಪ್ರಕಾರ ಊರಿನ ಬಂಡಿಹಬ್ಬ ವೆಂಕಟರಮಣ ರಥೋತ್ಸವಕ್ಕೆ ಹೋಗಲು ಮಹಿಳೆಯರು ಸ್ವತಂತ್ರರು. ದೇವರ ಪೂಜೆಯ ಸಂದರ್ಭದಲ್ಲಿ ಮಹಿಳೆಯರು ಹಾಡಬಹುದು. ಚಿಕ್ಕ ಹೆಣ್ಣುಮಕ್ಕಳು ಹಾಗೂ ಹಿರಿಯ ಮಹಿಳೆ ಬೇಕಾದರೆ ಪೂಜೆ ಮಾಡಬಹುದು. ಈ ಇಬ್ಬರ ಸಂದರ್ಭದಲ್ಲಿ ಶುದ್ಧ ಮತ್ತು ಅಶುದ್ಧತೆಯ ಪ್ರಶ್ನೆ ಸಂಭವಿಸುವುದಿಲ್ಲ.

ಹಾಲಕ್ಕಿ ಮಹಿಳೆಯರು ಎಲ್ಲಾ ಧಾರ್ಮಿಕ ಕಾರ್ಯಕ್ರಮದಲ್ಲಿ ಸಂತೋಷದಿಂದ ಪಾಲ್ಗೊಳ್ಳುತ್ತಾರೆ. ಹಾಲಕ್ಕಿಗಳಿಗೆ ರಜಾ ದಿನಗಳೆಂದರೆ, ಅಮವಾಸ್ಯೆ, ಹುಣ್ಣಿಮೆ, ಗ್ರಹಣ, ಸಂಕ್ರಾಂತಿ, ಹೋಳಿ, ಯುಗಾದಿ, ದೀಪಾವಳಿ ಅಳಿಯನ ಅಮವಾಸ್ಯೆ ಇತ್ಯಾದಿ. ಹೋಳಿಯನ್ನು ಆರು ದಿನಗಳ ಕಾಲ ಅಚರಿಸಲಾಗುತ್ತದೆ. ಎಲ್ಲರೂ ಗೌಡನ ಮನೆಯಲ್ಲಿ ಸೇರಿ, ಕೆಂಪು ಬಣ್ಣ ಹಚ್ಚಿಕೊಂಡು ಹೊಸಬಟ್ಟೆ ತೊಟ್ಟು ನವಿಲಿನ ಗರಿಯ ಕಟ್ಟನ್ನು ಹಿಡಿದು ತಲೆಗೆ ತುರಾಯಿ ಕಟ್ಟಿಕೊಂಡು ಕೋಲಾಟದ ಕೋಲನ್ನು ಕೈಯಲ್ಲಿ ಹಿಡಿಯುತ್ತಾರೆ. ಗೋಲಾಕಾರದ ವೃತ್ತವನ್ನು ರಚಿಸಿಕೊಂಡು, ಪುರುಷರು ಕೋಲಾಟವನ್ನು ಆಡುತ್ತಾರೆ. ಪ್ರತಿಕ್ರಿಯಿಸಿದ ಶೇ. ೧೦೦ರಷ್ಟು ಮಹಿಳೆಯರು, ಪುರುಷರು ಮಾತ್ರ ಸುಗ್ಗಿ ಕುಣಿಯಬೇಕು ಎಂಬುದನ್ನು ತಿಳಿಸಿದರು. ಹಾಲಕ್ಕಿ ಸಮುದಾಯದಲ್ಲಿ ಸುಗ್ಗಿಕುಣಿತ ಹಾಗೂ ಸುಗ್ಗಿಯ ಹಾಡನ್ನು ಮಹಿಳೆಯರಿಗೆ ನಿಷೇಧಿಸಲಾಗಿದೆ. ಸುಗ್ಗಿಯ ಸಮಯ ಬಿಟ್ಟು ಇತರೆ ಸಮಯದಲ್ಲಿ ಸುಗ್ಗಿಯ ಹಾಡನ್ನು ಹಾಡಬಾರದು. ಮಹಿಳೆಯರು ಸುಗ್ಗಿಯ ಹಾಡನ್ನು ಹಾಡಿದರೆ ದಂಡಿಸುವ ಅಧಿಕಾರವನ್ನು ಊರ ಗೌಡನು ಹೊಂದಿದ್ದಾನೆ. ಹಾಲಕ್ಕಿಗಳಲ್ಲಿ ಮಹಿಳೆಯ ವಿವಾಹದ ಸಂದರ್ಭದಲ್ಲಿ ಗುಮಟೆ ಬಾರಿಸುವಾಗ, ಮಗುವಿಗೆ ಹೆಸರಿಡುವಾಗ ಹಾಡುತ್ತಾರೆ.

ಹಾಲಕ್ಕಿಗಳಲ್ಲಿ ಮಹಿಳೆಯರಿಗೆ ತಿಂಗಳಲ್ಲಿ ನಾಲ್ಕು ದಿನದ ಮೈಲಿಗೆ ನಿಮಿತ್ತ ಎಲ್ಲಾ ರೀತಿಯ ಧಾರ್ಮಿಕ ಕಾರ್ಯಗಳನ್ನು ನಿಷೇಧಿಸಲಾಗಿದೆ. ಮಗು ಜನಿಸಿದಾಗ ಕೂಡ ಮಹಿಳೆಗೆ ಎಂಟು ದಿನ ಅಡಿಗೆ ಮನೆಯ ಪ್ರವೇಶ ನಿಷೇದಿಸಲಾಗಿದೆ. ಮನೆಯಲ್ಲಿ ಮರಣ ಸಂಭವಿಸಿದಾಗ ಮೂರನೆಯ ದಿನಕ್ಕೆ ಮೈಲಿಗೆ ಮುಕ್ತಾಯವಾಗುತ್ತದೆ. ತಂದೆ-ತಾಯಿ ಮರಣದ ನಂತರದ ಕ್ರಿಯೆಯನ್ನು ಮಾಡುವ ಹಕ್ಕನ್ನು ಗಂಡು ಮಕ್ಕಳು ಪಡೆದಿರುತ್ತಾರೆ. ಹೆಣ್ಣು ಮಕ್ಕಳಿಗೆ ಕ್ರಿಯೆಯನ್ನು ಮಾಡುವುದಾಗಲಿ, ಸ್ಮಶಾನಕ್ಕೆ ಹೋಗಿ ಅಗ್ನಿಗೆ ಕಟ್ಟಿಗೆ ಹಾಕಲು ಸಾಧ್ಯವಿಲ್ಲ. ಮಹಿಳೆ ವಿಧವೆಯಾದಾಗ ಹಿಂದೂ ಧರ್ಮದಂತೆ ಹಾಲಕ್ಕಿ ಮಹಿಳೆಯರಿಗೂ ಸಹ ಹೂವು, ಕೆಂಪು ಕುಂಕುಮ, ಬಳೆಯನ್ನು ನಿಷೇಧಿಸಲಾಗಿದೆ.

ಹಾಲಕ್ಕಿಗಳಿಗೆ ಮಾಟ ಮಂತ್ರದಲ್ಲಿ ಅಪಾರವಾದ ನಂಬಿಕೆ. ಅನಾರೋಗ್ಯಕ್ಕೆ ದೆವ್ವದ ಕಾಟವೇ ಕಾರಣವೆಂದು ಬಗೆಯುತ್ತಾರೆ. ಬಾಣಂತಿಗೆ ತೊಂದರೆಯಾದಾಗ ಸಹ ದೆವ್ವದ ಕಾಟವೆಂದು ಬಗೆಯುತ್ತಾರೆ. ಗಂಡು ಮಗು ಜನಿಸಿದರೆ ಸೂಲಗಿತ್ತಿಗೆ ಎಂಟು ಆಣೆ ಮತ್ತು ಹೆಣ್ಣು ಮುಗು ಜನಿಸಿದಾಗ ನಾಲ್ಕು ಆಣೆ ನೀಡುತ್ತಿದ್ದರು.

ಹಾಲಕ್ಕಿಗಳಲ್ಲಿ ವಿಧವೆಯರು ಮದುವೆಯ ದಿಬ್ಬಣದಲ್ಲಿ, ವಧುವನ್ನು ಮನೆ ತುಂಬಿಸಿಕೊಳ್ಳುವಾಗ ಮುಂದೆ ಬರುವುದನ್ನು ನಿಷೇಧಿಸಲಾಗಿದೆ. ಹಾಲಕ್ಕಿಗಳಲ್ಲಿ ನಾಟೀ ಔಷಧಿ

ನೀಡುವುದರಲ್ಲಿ ಪರಿಣಿತಿಯನ್ನು ಪಡೆದವರು. ಜ್ವರ, ನೆಗಡಿ, ಸಂದಿವಾತ, ದನ-ಕರುಗಳಿಗೆ ಸಹ ಔಷಧಿಯನ್ನು ನೀಡುತ್ತಾರೆ. ನಾಟೀ ಔಷಧಿಯನ್ನು ಪುರುಷರು ನೀಡುತ್ತಾರೆ. ಮಹಿಳೆಯರಿಗೆ ನಾಟೀ ಔಷಧಿ ನೀಡುವುದನ್ನು ನಿಷೇದಿಸಲಾಗಿದೆ. ನಾಟೀ ಔಷಧಿ ನೀಡುವಲ್ಲಿ ಸಹ ಪಿತೃವಂಶೀಯ ಕುಟುಂಬದ ಮನೋಭಾವ ಕಾಣುತ್ತೇವೆ.

ಇಂದು ಹಾಲಕ್ಕಿಗಳ ಧಾರ್ಮಿಕ ಮನೋಭಾವನೆಯಲ್ಲಿ ಬದಲಾವಣೆಯನ್ನು ಕಾಣುತ್ತೇವೆ. ಧಾರ್ಮಿಕ ದೃಷ್ಟಿಯಿಂದಲೇ ಕುಡಿತವನ್ನು ನಿಷೇಧಿಸಲಾಗಿತ್ತು. ಆದರೆ ಇಂದು ಶೇ. ೯೦ರಷ್ಟು ಹಾಲಕ್ಕಿಗಳು ಈ ದುಶ್ಚಟಕ್ಕೆ ಬಲಿಯಾಗಿದ್ದಾರೆ.

ನಾಟೀ ಔಷಧಿಯನ್ನು ನೀಡುವುದು ಇಂದು ಪೂರ್ಣ ವಾಣಿಜ್ಯಮಯವಾಗಿ ಕಂಡುಬರುವುದು. ನಾಟೀ ಔಷಧಿಯನ್ನು ನೀಡುವವರು ಒಳರೋಗಿಯ ಆಸ್ಪತ್ರೆಯ ಸೌಲಭ್ಯವನ್ನು ಕಲ್ಪಿಸಿದ್ದಾರೆ. ಉತ್ತಮ ಆದಾಯ ಪಡೆಯುವ ಮೂಲವಾಗಿದೆ.

ಇಂದು ಹಾಲಕ್ಕಿಗಳು ಕುಡಿತ ಚಟಕ್ಕೆ ಬಲಿಯಾಗಿರುವುದನ್ನು ತೀವ್ರವಾಗಿ ಹಾಲಕ್ಕಿ ಮಹಿಳೆಯಾದ ಜಾನಪದಶ್ರೀ ಪ್ರಶಸ್ತಿ ವಿಜೇತೆ ಸುಕ್ರಿ ಬೊಮ್ಮಗೌಡರು ಖಂಡಿಸಿದ್ದಾರೆ. ಈ ಬಗ್ಗೆ ಜನಾಂದೋಲ ಕೂಡಾ ಉತ್ತರ ಕನ್ನಡ ಜಿಲ್ಲೆಯಲ್ಲಿ ಪ್ರಾರಂಭಿಸಿದ್ದಾರೆ. ಹಾಲಕ್ಕಿ ಸಮುದಾಯದಲ್ಲಿ ಮಹಿಳೆಯರಿಗೆ ನಿಷೇಧಿಸಿದ ಸುಗ್ಗಿಯ ಹಾಡುಗಳನ್ನು ಶ್ರೀಮತಿ ಸುಕ್ರಿ ಬೊಮ್ಮಗೌಡ ಅವರು ಹೊರಗಡೆ ಹೋದಾಗ ಹಾಡುವುದಾಗಿ ತಿಳಿಸಿರುವರು.

ಇಂದು ಶುದ್ಧತೆ ಅಶುದ್ಧತೆ ಬಗ್ಗೆ ಇರುವ ಸಾಮಾಜಿಕ ಪರಿಕಲ್ಪನೆಗಳು ಸಡಿಲಗೊಳ್ಳುತ್ತಿವೆ. ನೌಕರಿ ಮಾಡುವ ಹಾಲಕ್ಕಿ ಮಹಿಳೆಯು ಅವನ್ನೆಲ್ಲಾ ತ್ಯಜಿಸಿದ್ದಾಳೆ. ಆದರೆ ಗಂಡು ಮಗು ಬೇಕು ಎಂದು ಪ್ರಶ್ನಿಸಿದಾಗ ಶೇ. ೧೦೦ರಷ್ಟು ಮಹಿಳೆಯರು ಗಂಡು ಮಗುವಿನ ಬಗ್ಗೆ ಅಭಿಲಾಷೆ ಹೊಂದಿದ್ದು, ಇದರಿಂದ ಶಿಕ್ಷಣ ಪಡೆದರೂ ಸಹ, ಧಾರ್ಮಿಕ ಮನೋಭಾವನೆಯು ಮಹಿಳೆಯ ಮೇಲೆ ನಿಯಂತ್ರಣ ಹೊಂದಿರುವಿಕೆಯನ್ನು ಸೂಚಿಸುತ್ತದೆ.

೪.೪. ಮನೋಭಾವದಲ್ಲಿ ಪರಿವರ್ತನೆ

ಹಾಲಕ್ಕಿ ಮಹಿಳೆಯರ ಮನೋಭಾವದಲ್ಲಿ ಉಂಟಾಗುತ್ತಿರುವ ಬದಲಾವಣೆಯನ್ನು ಅರಿಯಲು ಲಿಂಗ ಸಮಾನತೆಯ ಮನೋಭಾವದ ಸೂಚಿ ಮತ್ತು ಸಾಮಾಜಿಕ ಅರಿವಿನ ಸೂಚಿಗಳನ್ನು ಬಳಸಿಕೊಳ್ಳಲಾಗಿದೆ.

ಕೋಷ್ಟಕ ೪.೩

ಹಾಲಕ್ಕಿ ಮಹಿಳೆಯ ಮನೋಭಾವದ ಪಟ್ಟಿ

ಕ್ರಸಂ.	ವಿವರಣೆ	ಅಂಕೋಲಾ		ಕುಮಟಾ		ಒಟ್ಟು	
		ಬೇಕು	ಬೇಡ	ಬೇಕು	ಬೇಡ	ಬೇಕು	ಬೇಡ
೧.	ಆಸ್ತಿಯಲ್ಲಿ ಪಾಲು ನೀಡಬೇಕು	೬೯	೧೬	೯೦	೧೦	೧೫೯	೨೬
೨.	ನೌಕರಿ ಬಗೆಗಿನ ಮನೋಭಾವ	೭೯	೦೬	೧೦೦	—	೧೭೯	೦೬
೩.	ಮನೆಗೆಲಸ ಪುರುಷರು ಮಾಡಬೇಕು	೭೮	೦೭	೭೮	೧೨	೧೫೦	೩೫
೪.	ನೌಕರಿ ಮಾಡುವ ಮಹಿಳೆಯರ ಜೀವನ ಉತ್ತಮವಾಗಿದೆ.	೮೫	—	೧೦೦	—	೧೫೦	—
೫.	ನೌಕರಿ ಪುರುಷರಿಗೆ ಮಾತ್ರ	೦೨	೮೩	೨೦	೮೦	೨೨	೧೬೮
೬.	ನೌಕರಿಯಲ್ಲಿರುವ ಮಹಿಳೆಗೆ ಹೆಚ್ಚು ಗೌರವ ಸಿಗುತ್ತದೆ	೮೪	೦೧	೧೦೦	೦೦	೧೮೪	--
೭.	ಕೂಲಿಯಲ್ಲಿ ತಾರತಮ್ಯ ಇರಬಾರದು	೮೫	೦೧	೧೦೦	--	೧೮೫	--
೮.	ವೆಚ್ಚ ಮಾಡುವ ಸ್ವಾತಂತ್ರ್ಯ	೮೧	೨೪	೧೦೦	--	೧೮೧	೦೪
೯.	ನೌಕರಿಗಾಗಿ ಪರ ಊರಿಗೆ ಹೋಗಬೇಕು.	೭೫	೧೦	೯೬	೦೪	೧೭೧	೧೪

(ಮೂಲ: ಕ್ಷೇತ್ರಕಾರ್ಯದ ಮಾಹಿತಿ)

ಪ್ರತಿಕ್ರಿಯಿಸಿದ ಶೇ. ೮೫ರಷ್ಟು ಮಹಿಳೆಯರು ಆಸ್ತಿಯಲ್ಲಿ ಹೆಣ್ಣು ಮಕ್ಕಳಿಗೆ ಪಾಲು ನೀಡಬೇಕೆಂದಿರುವರು. ಅಂದಿನವರು ಹೆಣ್ಣು ಮಕ್ಕಳನ್ನು ಕೊಟ್ಟಲ್ಲಿ ಸಿರಿವಂತರಿದ್ದರೆ ಪಾಲು

ನೀಡುವ ಅವಶ್ಯಕತೆ ಇಲ್ಲ ಎಂದು ನಂಬಿದ್ದರು. ರೈತಾಪಿಗಳಾದ ಹಾಲಕ್ಕಿಗಳು ಅತಿ ಚಿಕ್ಕ ರೈತರು. ಹೆಣ್ಣು ಮಕ್ಕಳು ವಿವಾಹವಾಗಿ ಪರಗ್ರಾಮದಲ್ಲಿ ನೆಲೆಸಿದಾಗ ಭೂಮಿ ನೀಡುವ ಪ್ರಶ್ನೆ ಬರಲಾರದು. ಕಷ್ಟ ಬಂದರೆ ಮಹಿಳೆಗೆ ಪಾಲನ್ನು ನೀಡುತ್ತಾರೆ. ಶೇ. ೯೬.೦೫ರಷ್ಟು ಮಹಿಳೆಯರು, ನೌಕರಿಯ ಬಗ್ಗೆ ಸಕಾರಾತ್ಮಕವಾಗಿ ಪ್ರತಿಕ್ರಿಯಿಸಿದ್ದಾರೆ. ಆದ್ದರಿಂದಲೇ ನಾವು ಎಸ್.ಟಿ. ಮೀಸಲಾತಿ ಸೌಲಭ್ಯದ ಸಲುವಾಗಿ ಹೋರಾಟ ಮಾಡುತ್ತಿದ್ದೇವೆ ಅಂದಿರುವರು. ಶೇ. ೮೦ರಷ್ಟು ಪ್ರತಿಕ್ರಿಯಿಸಿದ ಮಹಿಳೆಯರು ಮನೆಗೆಲಸವನ್ನು ಮಾಡಬೇಕೆಂದು ಅಭಿಪ್ರಾಯಪಟ್ಟಿದ್ದಾರೆ. ಆದರೆ ಪುರುಷರು ಮನೆಗೆಲಸದಲ್ಲಿ ಸಹಕರಿಸುವುದಿಲ್ಲ. ಶೇ. ೧೮ರಷ್ಟು ಮಹಿಳೆಯರು ಪುರುಷರು ಮನೆಗೆಲಸ ಮಾಡಬಾರದು, ಏಕೆಂದರೆ ಹೊರಗಡೆ ದುಡಿಮೆ ಮಾಡಿ ಬರುತ್ತಾರೆ ಅಂದಿರುವರು. ನೌಕರಿ ಮಾಡುವ ಮನೆಗಳಲ್ಲಿ ದಂಪತಿಗಳಿಬ್ಬರು ಮನೆಗೆಲಸವನ್ನು ಹಂಚಿಕೊಂಡು ಮಾಡುತ್ತಾರೆ. ಶೇ. ೧೦೦ರಷ್ಟು ಪ್ರತಿಕ್ರಿಯಿಸಿದ ಮಹಿಳೆಯರು, ನೌಕರಿ ಮಾಡುವ ಮಹಿಳೆಯ ಜೀವನ ಉತ್ತಮವಾಗಿದೆ ಎಂಬುದರ ಕುರಿತು ಸಕಾರಾತ್ಮಕವಾಗಿ ಉತ್ತರಿಸಿದ್ದಾರೆ. ಶಿಕ್ಷಣ ನೀಡುವಲ್ಲಿ ಹಾಲಕ್ಕಿಗಳು ತಾರತಮ್ಯ ಮಾಡುತ್ತಿಲ್ಲ. ಗಂಡಾಗಲಿ ಅಥವಾ ಹೆಣ್ಣಾಗಲಿ ವಿದ್ಯಾಭ್ಯಾಸದಲ್ಲಿ ಜಾಣರಿದ್ದರೆ ಕಲಿಸಲಾಗುತ್ತದೆ ಎನ್ನುತ್ತಾರೆ. ಇಂದು ಹಾಲಕ್ಕಿಗಳು ಮಕ್ಕಳ ಶಿಕ್ಷಣದಲ್ಲಿ ಆಸಕ್ತಿ ತೋರಿಸುತ್ತಿದ್ದಾರೆ.

ಪ್ರತಿಕ್ರಿಯಿಸಿದ ಶೇ. ೧೦೦ರಷ್ಟು ಮಹಿಳೆಯರು, ಕೂಲಿಯ ತಾರತಮ್ಯತೆಯನ್ನು ವಿರೋಧಿಸಿದ್ದಾರೆ. ಇದರಿಂದಾಗಿ ತಮ್ಮ ಆದಾಯ ಕಡಿಮೆಯಾಗುತ್ತದೆ ಅನ್ನುತ್ತಾರೆ. ಇವರಲ್ಲಿ ಯಾವುದೇ ಸಂಘಟನೆ ಇಲ್ಲದೆ ಇರುವುದರಿಂದ ಪ್ರತಿರೋಧಿಸಲು ಸಾಧ್ಯವಾಗುತ್ತಿಲ್ಲ. ಪ್ರತಿಕ್ರಿಯಿಸಿದ ಶೇ. ೯೦.೮೩ರಷ್ಟು ಮಹಿಳೆಯರು ವೆಚ್ಚ ಮಾಡುವ ಸ್ವಾತಂತ್ರ್ಯ ಬಗ್ಗೆ ಸಕಾರಾತ್ಮಕವಾಗಿದ್ದಾರೆ. ಹಾಲಕ್ಕಿ ಮಹಿಳೆಗೆ ಈ ಸ್ವಾತಂತ್ರ್ಯವನ್ನು ಅನುಭವಿಸುತ್ತಿರುವಂತೆ ಕಂಡುಬರುತ್ತದೆ. ಏಕೆಂದರೆ ಕುಟುಂಬಕ್ಕಾಗಿ ವೆಚ್ಚ ಮಾಡುತ್ತಾಳೆ. ನೌಕರಿಗಾಗಿ ಪರಊರಿಗೆ ಹೋಗಲು ಶೇ. ೯೨ರಷ್ಟು ಮಹಿಳೆಯರು ಸಕಾರಾತ್ಮಕವಾಗಿ ಪ್ರತಿಕ್ರಿಯಿಸಿದ್ದಾರೆ. ನಮ್ಮ ಊರಿನಲ್ಲಿಯೇ ಕೆಲಸ ಸಿಗಲು ಸಾಧ್ಯವಿಲ್ಲ. ನೌಕರಿಬೇಕಾದರೆ ಪರಊರಿಗೆ ಹೋಗಲೇಬೇಕು ಎನ್ನುತ್ತಾರೆ.

ಕೋಷ್ಟಕ ೪.೪

ಲಿಂಗ ಸಮಾನತೆಯ ಮನೋಭಾವದ ಪಟ್ಟಿ

ಕ್ರಸಂ.	ವಿವರಣೆ	ಅಂಕೋಲಾ		ಕುಮಟಾ		ಒಟ್ಟು	
		ಹೌದು	ಅಲ್ಲ	ಹೌದು	ಅಲ್ಲ	ಹೌದು	ಅಲ್ಲ
೧.	ಹಬ್ಬ ಬಹಳ ದಿನ ಆಚರಿಸಬೇಕು	೧೪	೭೧	೯೫	೦೫	೧೮೯	೭೬
೨.	ಪುರುಷರು ಮಾತ್ರ ಸುಗ್ಗಿ ಕುಣಿಯಬೇಕು	೮೧	೦೪	೧೦೦	--	೧೮೯	೦೪
೩.	ಪುರುಷರು ಮತ್ತು ಮಹಿಳೆಯರು ಸಮಾನರು	೭೯	೦೬	೧೦೦	೦೦	೧೭೯	೦೬
೪.	ಪುರುಷರು ಶ್ರೇಷ್ಠ	೨೮	೫೭	೯೨	೦೮	೧೨೦	೬೫
೫.	ಗಂಡು ಮಗು ಬೇಕೆ?	೮೦	೦೫	೯೬	೦೪	೧೭೬	೯

(ಮೂಲ: ಕ್ಷೇತ್ರಕಾರ್ಯದ ಮಾಹಿತಿ)

ಸಾಂಪ್ರದಾಯಿಕ ಹಾಲಕ್ಕಿಗಳ ಮನೋಭಾವನೆಯಲ್ಲಿ ಬದಲಾವಣೆ ಉಂಟಾಗಿರುವುದು ಕಂಡುಬರುತ್ತದೆ. ಹಬ್ಬಗಳನ್ನು ಬಹಳ ದಿನಗಳವರೆಗೆ ಆಚರಿಸಬೇಕೆಂಬ ಸಕಾರಾತ್ಮ ಮನೋಭಾವವನ್ನು ಶೇ. ೫೯ರಷ್ಟು ಮಹಿಳೆಯರು ಹೊಂದಿದ್ದಾರೆ. ಶೇ. ೪೧ರಷ್ಟು ಮಹಿಳೆಯರು ಬಹಳ ದಿನ ಆಚರಿಸಬಾರದೆಂಬ ಮನೋಭಾವನೆಯನ್ನು ಹೊಂದಿದ್ದಾರೆ. ಪುರುಷ ಮತ್ತು ಮಹಿಳೆಯರು ಸಮಾನರು ಎಂಬ ಮನೋಭಾವನೆಯನ್ನು ಶೇ. ೯೬.೭೫ರಷ್ಟು ಮಹಿಳೆಯರು ಸಕಾರಾತ್ಮಕ ಭಾವನೆಯನ್ನು ಹೊಂದಿದ್ದಾರೆ. ಕೇವಲ ಶೇ. ೬ರಷ್ಟು ಮಹಿಳೆಯರು ನಕಾರಾತ್ಮಕವಾಗಿ ಪ್ರತಿಕ್ರಿಯಿಸಿದ್ದಾರೆ. ಅದೇ ರೀತಿಯಲ್ಲಿ ಪುರುಷರು ಶ್ರೇಷ್ಠರು ಎಂದು ಪ್ರತಿನಿಧಿಸಿದವರು ಶೇ. ೬೪ರಷ್ಟು ಮಹಿಳೆಯರು ಧನಾತ್ಮಕವಾಗಿಯೂ, ಶೇ. ೩೬ರಷ್ಟು ಮಹಿಳೆಯರು ನಕಾರಾತ್ಮಕವಾಗಿ ಪ್ರತಿಕ್ರಿಯಿಸಿದವರು ಪುರುಷರು ಮಾತ್ರ ಸುಗ್ಗಿ ಕುಣಿಯಬೇಕೆಂಬ ಮನೋಭಾವದಲ್ಲಿ ಕೂಡಾ ಬದಲಾವಣೆ ಉಂಟಾಗಿದೆ. ಶೇ. ೯೭ರಷ್ಟು ಮಹಿಳೆಯರು ಧನಾತ್ಮಕವಾಗಿಯೂ ಮತ್ತು ಶೇ. ೩ರಷ್ಟು ಮಹಿಳೆಯರು ನಕಾರಾತ್ಮಕವಾಗಿ ಪ್ರತಿಕ್ರಿಯಿಸಿರುವರು.

ಕೋಷ್ಟಕ ೪.೫

ಸಾಮಾಜಿಕ ಅರಿವಿನ ಪಟ್ಟಿ

ಕ್ರಸಂ.	ವಿವರಣೆ	ಅಂಕೋಲಾ	ಕುಮಟಾ	ಒಟ್ಟು
೧.	ವೈದ್ಯಕೀಯ ಸೇವೆ			
	ಸರ್ಕಾರಿ ಸೇವೆ	೭೦	೯೦	೧೬೦
	ಖಾಸಗಿ	೧೨	೧೦	೨೨
	ಎರಡು	೦೩	--	೦೩
೨.	ಯಾರ ಆರೋಗ್ಯ ಮುಖ್ಯ			
	ಮಹಿಳೆ			
	ಪುರುಷ			
	ಇಬ್ಬರದು	೮೫	೧೦೦	೧೮೫
೩.	ಯಾರ ಆರೋಗ್ಯಕ್ಕೆ ಆದ್ಯತೆ			
	ಮಹಿಳೆ	೪೮	೬೦	೧೦೮
	ಪುರುಷ	೨೦	೪೬	೬೦
	ಇಬ್ಬರದು	೧೯	--	--
೪.	ಹೆರಿಗೆ			
	ಆಸ್ಪತ್ರೆ	೮೫	೧೦೦	೧೮೫
	ಮನೆ	--	=	--
೫.	ಚುಚ್ಚು ಮದ್ದು			
	ಹಾಕಿಸಬೇಕು	೮೫	೧೦೦	೧೮೫
	ಬೇಡಾ			
೬	ಅಲೋಪತಿ	೮೫	೧೦೦	೧೮೫
	ಹೋಮಿಯೋಪತಿ			
೭.	ವರನಿಗೆ ಬೇಡಿಕೆ			
	ಶಿಕ್ಷಣ	೦೪	--	೦೪
	ಉದ್ಯೋಗ	೮೧	೧೪	೯೪
	ಕೃಷಿ	--	೮೬	೮೬

ನಗರ			
ಗ್ರಾಮೀಣ			
೮. ಕುಟುಂಬ ಯೋಜನೆ			
ಮಹಿಳೆ	೭೫	೭೬	೧೫೧
ಪುರುಷ	೮೮.೨೩	೭೬	೮೧.೬೨

(ಮೂಲ: ಕ್ಷೇತ್ರಕಾರ್ಯದ ಮಾಹಿತಿ)

ಪ್ರತಿಕ್ರಿಯಿಸಿದ ಶೇ. ೮೬ರಷ್ಟು ಮಹಿಳೆಯರು ಸರ್ಕಾರಿ ಆಸ್ಪತ್ರೆಯ ಸೇವೆಯನ್ನು ಪಡೆದುಕೊಳ್ಳುತ್ತಿದ್ದಾರೆ. ಶೇ. ೧೨ರಷ್ಟು ಖಾಸಗಿ ಆಸ್ಪತ್ರೆ ಹಾಗೂ ಶೇ. ೨ರಷ್ಟು ಮಹಿಳೆಯರು ಎರಡೂ ಕಡೆಯಲ್ಲಿ ಸೇವೆ ಪಡೆದುಕೊಳ್ಳುತ್ತಿದ್ದಾರೆ. ಇತ್ತೀಚಿನ ಸರ್ಕಾರದ ಯಶಸ್ವಿನಿ ಆರೋಗ್ಯ ಕಾರ್ಯಕ್ರಮದ ಪ್ರಯೋಜನಗಳನ್ನು ಹಾಲಕ್ಕಿಗಳು ಪಡೆಯುತ್ತಿದ್ದಾರೆ.

ಪ್ರತಿಕ್ರಿಯಿಸಿದ ಶೇ. ೧೦೦ರಷ್ಟು ಮಹಿಳೆಯರು ಕುಟುಂಬದಲ್ಲಿ ಇಬ್ಬರ ಆರೋಗ್ಯವು ಮುಖ್ಯ ಎಂಬ ಭಾವನೆಯನ್ನು ವ್ಯಕ್ತಪಡಿಸಿದ್ದಾರೆ. ಪ್ರತಿಕ್ರಿಯಿಸಿದ ಶೇ. ೫೮.೩೭ರಷ್ಟು ಮಹಿಳೆಯರು, ಮಹಿಳೆಯರ ಆರೋಗ್ಯಕ್ಕೆ ಆದ್ಯತೆ ನೀಡಲಾಗುವುದು ಎಂದಿದ್ದಾರೆ. ಶೇ. ೩೨ರಷ್ಟು ಪ್ರತಿಕ್ರಿಯಿಸಿದವರು ಪುರುಷರು ಹಾಗೂ ಶೇ. ೧೦ರಷ್ಟು ಪ್ರತಿಕ್ರಿಯಿಸಿದವರು ಇಬ್ಬರ ಆರೋಗ್ಯಕ್ಕೂ ಆದ್ಯತೆ ನೀಡಬೇಕೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ಪ್ರತಿಕ್ರಿಯಿಸಿದ ಮಹಿಳೆಯರ ಶೇ. ೧೦೦ರಷ್ಟು ಹೆರಿಗೆ ಆಸ್ಪತ್ರೆಯಲ್ಲಿ ಮಾಡಿಸಿಕೊಳ್ಳುತ್ತಾರೆ. ಆಸ್ಪತ್ರೆಯು ಸುರಕ್ಷಿತ ಎಂಬ ಕಾರಣದಿಂದ ಆಸ್ಪತ್ರೆಗೆ ಹೋಗುತ್ತಾರೆ. ಶೇ. ೧೦೦ರಷ್ಟು ಮಹಿಳೆಯರು ತಮ್ಮ ಮಕ್ಕಳಿಗೆ ಚುಚ್ಚು ಮದ್ದುಗಳನ್ನು ಹಾಕಿಸಿದ್ದಾರೆ. ಹಾಗೂ ಶೇ. ೧೦೦ರಷ್ಟು ಅಲೋಪತಿಯ ಔಷಧಿ ತೆಗೆದುಕೊಳ್ಳುತ್ತಾರೆ. ಮನೆಯ ಮದ್ದಿಗಿಂತ ಡಾಕ್ಟರ್ ಔಷಧಿ ಉತ್ತಮ ಎಂಬುದು ಅವರ ಅಭಿಪ್ರಾಯವಾಗಿದೆ.

ಹಿಂದೆ ಹಾಲಕ್ಕಿಗಳ ವಿಶಿಷ್ಟತೆಯನ್ನು ಅವರ ಹೆಸರಿನಲ್ಲಿ, ಅವರ ಆಹಾರಕ್ರಮದಲ್ಲಿ ಹಾಗೂ ಉಡುಗೆ ತೊಡುಗೆಯಲ್ಲಿ ಗುರುತಿಸಬಹುದಾಗಿತ್ತು. ಆದರೆ ಇಂದು ಹಾಲಕ್ಕಿಗಳನ್ನು ಹೆಸರಿನಿಂದಾಗಲಿ, ಆಹಾರಕ್ರಮದಿಂದಾಗಲಿ ಅಥವಾ ಉಡುಗೆ ತೊಡುಗೆಯಿಂದ ಗುರುತಿಸಲು ಸಾಧ್ಯವಿಲ್ಲ. ಹಳೆಯ ತಲೆಮಾರಿನವರು ಮಾತ್ರ ಸಾಂಪ್ರದಾಯಿಕ ಉಡುಗೆ ತೊಡುಗೆಯನ್ನು ಧರಿಸುತ್ತಾರೆ. ಹಾಲಕ್ಕಿ ಹಿರಿಯ ಮಹಿಳೆಯರ ಕುತ್ತಿಗೆಯಲ್ಲಿರುವ ಕರಿಮಣಿಯ ಸರದ ಪ್ರಮಾಣವು ತೀರಾ ಇಳಿಕೆಯಾಗಿದೆ. ಆಧುನಿಕ ಮಹಿಳೆಯರು ಒಂದೇ ಎಳೆಯ ಕರಿಮಣಿಯ ಸರವನ್ನು ಧರಿಸುತ್ತಾರೆ.

ಕೋಷ್ಟಕ ೪.೬

ಹಾಲಕ್ಕಿಗಳ ಮೂಲ ಸೌಕರ್ಯದ ಮಾಹಿತಿ

ಕ್ರಸಂ.	ವಿವರಣೆ	ಅಂಕೋಲಾ ಪ್ರತಿಕ್ರಿಯಿಸಿದವರು	ಕುಮಟಾ ಪ್ರತಿಕ್ರಿಯಿಸಿದವರು	ಒಟ್ಟು ಪ್ರತಿಕ್ರಿಯಿಸಿದವರು
೧.	ನೀರಿನ ಮೂಲ			
	ಸ್ವಂತ ಬಾವಿ	೧೫	೮೫	೧೦೦
	ಸರಕಾರಿ ಬಾವಿ	೭೦	೧೫	೮೫
೨.	ಸಾಕಷ್ಟು ನೀರು ಸಿಗುತ್ತದೆ.	೩೫	೮೦	೧೧೫
	ಸಿಗುವುದಿಲ್ಲ.	೪೦	೨೦	೭೦
೩.	ಶೌಚಾಲಯದ ಬಳಕೆ			
	ಹೌದು	೪೯	೫೫	೧೦೪
	ಇಲ್ಲ	೩೬	೪೫	೮೧
೪.	ವೈದ್ಯಕೀಯ ಸೇವೆ			
	ಸರಕಾರಿ	೭೦	೯೦	೧೬೦
	ಖಾಸಗಿ	೧೨	೧೦	೨೨
	ಎರಡು	೦೩	—	೦೩

(ಮೂಲ: ಕ್ಷೇತ್ರಕಾರ್ಯದ ಮಾಹಿತಿ)

ಜಲವೇ ಜೀವನದ ಮೂಲವಾಗಿದೆ. ಹೀಗಾಗಿ ಎಲ್ಲಾ ನಾಗರಿಕತೆಗಳು ಸಹ ನದಿಯ ಕೊಳ್ಳ ಪ್ರದೇಶದಲ್ಲಿ ಪ್ರಾರಂಭಗೊಂಡಿವೆ. ಕ್ಷೇತ್ರಕಾರ್ಯದಲ್ಲಿ ಪ್ರತಿಕ್ರಿಯಿಸಿದ ಮಹಿಳೆಯರು ವಿವಿಧ ನೀರಿನ ಮೂಲದ ಬಗ್ಗೆ ಮಾಹಿತಿ ನೀಡಿದ್ದಾರೆ. ಸ್ವಂತ ಭಾವಿ, ಸರಕಾರಿ ಭಾವಿ, ಕೆರೆ, ಬೋರ್ ಇತ್ಯಾದಿ. ಶೇ. ೫೪.೦೫ರಷ್ಟು ಹಾಲಕ್ಕಿ ಮಹಿಳೆಯರು ಸ್ವಂತ ಬಾವಿಯನ್ನು ಹೊಂದಿದ್ದಾರೆ. ಶೇ. ೪೫–೯೪ರಷ್ಟು ಮಹಿಳೆಯರು ಸರಕಾರಿ ಬಾವಿಯನ್ನು ಅವಲಂಬಿಸಿದ್ದಾರೆ. ಶೇ. ೬೨.೧೬ರಷ್ಟು ಮಹಿಳೆಯರ ಪ್ರಕಾರ ಸಾಕಷ್ಟು ನೀರಿನ ಲಭ್ಯತೆಯಿದೆ. ಶೇ. ೩೭.೮೩ರಷ್ಟು ಮಹಿಳೆಯರ ಪ್ರಕಾರ ನೀರಿನ ಕೊರತೆಯಿದೆ. ಎಂದಿರುವವರು ಶೇ.೫೬.೨೧ ಮಹಿಳೆಯರು ಶೌಚಾಲಯವನ್ನು ಬಳಸುತ್ತಿದ್ದಾರೆ. ಶೇ. ೪೩.೭೮ರಷ್ಟು ಮಹಿಳೆಯರು ಶೌಚಾಲಯವನ್ನು ಹೊಂದಿರುವುದಿಲ್ಲ. ಹಾಲಕ್ಕಿ ಮಹಿಳೆಯರಲ್ಲಿ ನೈರ್ಮಲ್ಯದ ಬಗ್ಗೆ ಅರಿವು ಮೂಡಿರುವುದನ್ನು ಗುರುತಿಸಬಹುದಾಗಿದೆ. ಇದರಿಂದಾಗಿ ಮಹಿಳೆಯರ ಸ್ಥಿತಿಯಲ್ಲಿ ಸುಧಾರಣೆ ಉಂಟಾಗು

ತ್ತಿರುವುದನ್ನು ಕಾಣಬಹುದು. ಶೇ. ೮೬.೪೮ರಷ್ಟು ಮಹಿಳೆಯರು ಸರ್ಕಾರಿ ವೈದ್ಯಕೀಯ ಸೇವೆಯನ್ನು ಶೇ. ೧೧.೮೯ರಷ್ಟು ಮಹಿಳೆಯರು ಖಾಸಗಿ ವೈದ್ಯಕೀಯ ಸೇವೆಯನ್ನು ಹಾಗೂ ಶೇ. ೧.೬೨ರಷ್ಟು ಮಹಿಳೆಯರು ಸರ್ಕಾರಿ ಮತ್ತು ಖಾಸಗಿ ವೈದ್ಯಕೀಯ ಸೇವೆಯನ್ನು ಪಡೆದುಕೊಳ್ಳುತ್ತಿದ್ದಾರೆ. ಈ ಎಲ್ಲಾ ಬದಲಾವಣೆಗಳು ಹಾಲಕ್ಕಿ ಮಹಿಳೆಯರು ಮುಖ್ಯವಾಹಿನಿಯನ್ನು ಸೇರುತ್ತಿರುವ ಸೂಚಿಗಳಾಗಿವೆ.

೪.೫. ನಿರ್ಧಾರ ತೆಗೆದುಕೊಳ್ಳುವಲ್ಲಿ ಮಹಿಳೆಯರು

ನಿರ್ಧಾರ ತೆಗೆದುಕೊಳ್ಳುವ ಪ್ರಕ್ರಿಯೆಯನ್ನು ಕುಟುಂಬದ ಸಂಪನ್ಮೂಲ ಹಾಗೂ ಜವಾಬ್ದಾರಿ ನಡುವಿನ ಸಂಬಂಧವನ್ನು ಸೂಚಿಸುತ್ತದೆ. ಈ ಅಧಿಕಾರವು ಪ್ರಾಮುಖ್ಯತೆ ಹೊಂದಿದ ಸದಸ್ಯರ ಕೈಯಲ್ಲಿರುತ್ತದೆ. ಈ ಅಧಿಕಾರವು ಮುಖ್ಯವಾಗಿ ಲಿಂಗ, ಶಿಕ್ಷಣ, ದುಡಿಮೆ ಮುಂತಾದ ಅಂಶಗಳಿಂದ ನಿರ್ಧರಿಸಲಾಗುವುದು. ಕೃಷಿ ಆರ್ಥಿಕತೆಯೂ ಮಹಿಳೆಗೆ ಕಡಿಮೆ ಆದಾಯ ಪಡೆವ ಅವಕಾಶ ನೀಡುತ್ತವೆ. ಅಲ್ಲದೇ ಮಹಿಳೆಯರು ಯಾವ ಸ್ಥಿರ ಹಾಗೂ ಚರ ಆಸ್ತಿಯನ್ನು ಹೊಂದಿರುವುದಿಲ್ಲ. ಈಗಾಗಲೇ ನಡೆದಿರುವ ಅಧ್ಯಯನಗಳಲ್ಲಿ ಬಳಸಿಕೊಂಡಿರುವ ಸೂಚಿಯ ಮೂಲಕ ಹಾಲಕ್ಕಿ ಮಹಿಳೆಯು ನಿರ್ಧಾರ ತೆಗೆದುಕೊಳ್ಳುವ ಪ್ರಕ್ರಿಯೆಯಲ್ಲಿ ಒಳಗೊಳ್ಳುವಿಕೆಯನ್ನು ಅರಿಯಲು ಪ್ರಯತ್ನಿಸಲಾಗಿದೆ.

ಕೋಷ್ಟಕ ೪.೭

ನಿರ್ಧಾರ ತೆಗೆದುಕೊಳ್ಳುವಲ್ಲಿ ಹಾಲಕ್ಕಿ ಮಹಿಳೆಯರು

ಕ್ರಸಂ.	ವಿವರ	ಅಂಕೋಲಾ		ಕುಮಟಾ		ಒಟ್ಟು
೧.	ಮಕ್ಕಳ ಆಯ್ಕೆ					
	ಮಹಿಳೆಯರು	೧೦	೧೧.೭೬	೮	೧೮	೯.೭೨
	ಪುರುಷರು	೫೫	೬೪.೭೦	೭೭	೧೩೨	೭೧.೩೫
	ಇಬ್ಬರು	೨೦	೨೩.೫೨	೧೫	೩೫	೧೮.೯೧
೨.	ಮಕ್ಕಳ ಆರೈಕೆ					
	ಮಹಿಳೆಯರು	೮೫	೧೦೦	೧೮೫	೧೮೫	೧೦೦
	ಪುರುಷರು	—				
	ಇಬ್ಬರು	—				
೩.	ಮಕ್ಕಳ ಶಿಕ್ಷಣ					

	ಮಹಿಳೆಯರು	೩	೩೫.೨೯	೨೫	೫೫	೨೯.೭೨
	ಪುರುಷರು	೧೫	೧೭೬೪	೧೦	೨೫	೧೩.೫೧
	ಇಬ್ಬರು	೪೦	೪೭೦೫	೬೫	೧೦೫	೫೬.೭೫
೪.	ವಿವಾಹ (ಮಕ್ಕಳು)					
	ಮಹಿಳೆಯರು	--		೬		
	ಪುರುಷರು	೫೦	೫೮.೮೨	೬೦	೧೧೦	೫೯.೪೫
	ಇಬ್ಬರು	೩೫	೪೧.೧೭	೪೦	೭೫	೪೦.೫೪
೫.	ಪಾತ್ರೆಗಳ ಖರೀದಿ					
	ಮಹಿಳೆಯರು	೭೦	೮೨.೩೫	೮೬	೧೫೦	೮೧.೦೮
	ಪುರುಷರು	೦೫	೫.೮೮	೧೦	೧೫	೮.೧೦
	ಇಬ್ಬರು	೧೦	೧೧.೭೬	೧೦	೨೦	೧೦.೧೮
೬	ಸಾಲ ಪಡೆಯುವವರು					
	ಮಹಿಳೆಯರು	೫	೫.೮೮	೧೬	೧೫	೮.೧೦
	ಪುರುಷರು	೪೫	೫೦.೯೪	೮೦	೧೨೫	೬೭.೫೬
	ಇಬ್ಬರು	೩೦	೩೫.೨೯	೧೦	೪೦	೨೧.೬೨
೭	ಪಶುಗಳ ಮಾರಾಟ					
	ಮಹಿಳೆಯರು	೧೦	೮೧೧.೭೬	೧೦	೨೬	೧೦.೮
	ಪುರುಷರು	೪೫	೫೨.೯೪	೫೦	೯೫	೫೧.೩೫
	ಇಬ್ಬರು	೩೦	೩೫.೨೯	೪೦	೭೦	೩೭.೮೩
೮.	ಕೃಷಿ ಚಟುವಟಿಕೆ					
	ಮಹಿಳೆಯರು	೩೦	೩೫.೨೯	೧೦	೩೦	೧೬.೨೧
	ಪುರುಷರು	೨೦	೨೩.೫೨	೬೦	೧೦೫	೫೬.೭೫
	ಇಬ್ಬರು	೩೦	೩೫.೨೯	೩೦	೫೦	೨೭.೦೨
೯.	ಮತದಾನ					
	ಮಹಿಳೆಯರು	೨೦	೨೩.೫೨	೧೦	೩೦	೧೬.೨೧
	ಪುರುಷರು	೪೫	೫೨.೯೫	೬೦	೧೦೫	೫೬.೭೫

	ಇಬ್ಬರು	೨೦	೨೩.೫೨	೩೦	೫೬	೨೭.೦೨
೧೦.	ಬಂಡಿಹಬ್ಬದಲ್ಲಿ ಪಾಲ್ಗೊಳ್ಳುವಿಕೆ					
	ಮಹಿಳೆಯರು	೭೫	೮೮.೨೩	೯೦	೧೬೫	೮೯.೧೮
	ಪುರುಷರು	೧೦	೧೧.೭೬	೧೦	೨೦	೧೦.೮
	ಇಬ್ಬರು					

(ಮೂಲ: ಕ್ಷೇತ್ರಕಾರ್ಯದ ಮಾಹಿತಿ)

ಮೇಲಿನ ಕೋಷ್ಟಕದಿಂದ ಕಂಡುಬರುವುದೇನೆಂದರೆ ಹಾಲಕ್ಕಿ ಮಹಿಳೆಯರು ಮಕ್ಕಳ ಆರೈಕೆ, ಶಿಕ್ಷಣ, ಅಡಿಗೆ, ಪಾತ್ರೆ, ಬಟ್ಟೆ ಖರೀದಿ, ಕೃಷಿ ಚಟುವಟಿಕೆಯಲ್ಲಿ ನಿರ್ಧಾರವನ್ನು ತೆಗೆದುಕೊಳ್ಳುತ್ತಿದ್ದಾರೆ. ಆದರೆ ಕುಟುಂಬದ ಮುಖ್ಯವಾದ ಸಂಗತಿಯ ನಿರ್ಧಾರವನ್ನು ಪುರುಷರೇ ತೆಗೆದುಕೊಳ್ಳುತ್ತಾರೆ. ಪುರುಷರು ಮಕ್ಕಳ ಸಂಖ್ಯೆಯ ಆಯ್ಕೆ, ವಿವಾಹ, ಸಾಲ ಪಡೆಯುವಿಕೆ, ಪಶು ಮಾರಾಟ, ಮತ ಚಲಾವಣೆ ಮೇಲೆ ಅಧಿಕಾರವನ್ನು ಹೊಂದಿರುವುದು ಕಂಡುಬರುತ್ತದೆ. ಮಹಿಳೆಯು ಹೆಚ್ಚಿನ ಜವಾಬ್ದಾರಿಗಳು ಹಾಗೂ ಉಪಯುಕ್ತತೆ ಮೌಲ್ಯವಿರುವ ವಿಷಯಗಳಲ್ಲಿ ನಿರ್ಧಾರ ತೆಗೆದುಕೊಳ್ಳುತ್ತಿದ್ದಾಳೆ. ಕುಟುಂಬವನ್ನು ನಿಯಂತ್ರಿಸುವ ನಿರ್ಧಾರವನ್ನು ಪುರುಷರೇ ತೆಗೆದುಕೊಳ್ಳುವುದನ್ನು ಗಮನಿಸಬೇಕಾಗಿದೆ. ಶಿಕ್ಷಣ ಪಡೆದ ಮಹಿಳೆಯರು ಮಕ್ಕಳ ಆಯ್ಕೆಯ ವಿಷಯದಲ್ಲಿ ಸ್ವಂತ ನಿರ್ಧಾರವನ್ನು ಶೇ. ೯.೭೫ರಷ್ಟು ತೆಗೆದುಕೊಳ್ಳುತ್ತಿರುವ ಧನಾತ್ಮಕವಾದ ಬದಲಾವಣೆ ಎನ್ನಬಹುದು. ಮಕ್ಕಳ ಶಿಕ್ಷಣದಲ್ಲಿ ಇಬ್ಬರು ಸೇರಿ ನಿರ್ಧಾರ ತೆಗೆದುಕೊಳ್ಳುತ್ತಿರುವುದು ಉತ್ತಮ ವಿಚಾರವಾಗಿದೆ. ಪುರುಷ ಪ್ರಭುತ್ವ ಇದ್ದರೂ ಸಹ ಪುರುಷ ಮತ್ತು ಮಹಿಳೆಯು ಸೇರಿ ಶಿಕ್ಷಣ ವಿವಾಹ ವಿಷಯದಲ್ಲಿ ನಿರ್ಧಾರವನ್ನು ತೆಗೆದುಕೊಳ್ಳುತ್ತಾರೆ. ಒಟ್ಟು ಶೇ. ೧೬.೨೧ರಷ್ಟು ಹಾಲಕ್ಕಿ ಮಹಿಳೆಯರು ಸ್ವತಂತ್ರವಾಗಿ ಮತದಾನದ ಹಕ್ಕನ್ನು ಚಲಾಯಿಸುತ್ತಾರೆ. ಈ ಎಲ್ಲಾ ಅಂಶಗಳು ಬದಲಾವಣೆಯ ಸಂಕೇತವಾಗಿದೆ. ಹಾಲಕ್ಕಿ ಮಹಿಳೆಯರಲ್ಲಿ ಉಂಟಾಗುತ್ತಿರುವ ಅರಿವನ್ನು ಈ ಎಲ್ಲಾ ಅಂಶಗಳಿಂದ ಅರಿಯಬಹುದಾಗಿದೆ.

ಅಧ್ಯಾಯ ೫

ಹಾಲಕ್ಕಿಗಳ ಆರ್ಥಿಕತೆ ಮತ್ತು ಪರಿವರ್ತನೆ

೫.೧. ಸಾಂಪ್ರದಾಯಿಕ ಅರ್ಥಿಕತೆ

೫.೨. ಡೆಮೋಗ್ರಾಫಿ ಮತ್ತು ಸಾಕ್ಷರತಾಮಟ್ಟದಲ್ಲಿ ಪರಿವರ್ತನೆ

೫.೩. ದುಡಿಮೆ ಹಾಗೂ ಮಹಿಳೆ

೫.೪. ಉದ್ಯೋಗದ ರಚನೆಯಲ್ಲಿ ಬದಲಾವಣೆ

೫.೫. ಹಾಲಕ್ಕಿಗಳ ಕೃಷಿಯಲ್ಲಿ ಪರಿವರ್ತನೆ

೫.೬. ಕುಟುಂಬದ ಆದಾಯದಲ್ಲಿ ಬದಲಾವಣೆ

೫.೭. ಜೀವನಮಟ್ಟದ ಬದಲಾವಣೆ

೫.೮. ಶಿಕ್ಷಣವು ಸಾಮಾಜಿಕ ಪರಿವರ್ತನೆಯ ಪ್ರಮುಖ ಸೂಚಿ ಮತ್ತು ಸಾಧನ

ಅಧ್ಯಾಯ ೫

ಹಾಲಕ್ಕಿಗಳ ಆರ್ಥಿಕತೆ ಮತ್ತು ಪರಿವರ್ತನೆ

ಪ್ರಸ್ತಾವನೆ

ಈ ಅಧ್ಯಯನದಲ್ಲಿ ಹಾಲಕ್ಕಿ ಸಮುದಾಯದ ಆರ್ಥಿಕತೆಯಲ್ಲಿನ ಬದಲಾವಣೆಯನ್ನು ಕುರಿತು ಚರ್ಚಿಸಲಾಗಿದೆ. ಸಮುದಾಯ ಒಂದರಲ್ಲಿ ಸ್ಥಾನವು ವ್ಯಕ್ತಿಯು ನಿರ್ವಹಿಸುವ ಪಾತ್ರದಿಂದ ಗುರುತಿಸಲ್ಪಡುತ್ತದೆ. ಹಾಲಕ್ಕಿ ಸಮಾಜದಲ್ಲಿ ಶ್ರಮ ವಿಭಜನೆಯ ಮೂಲಕ ಜೀವನವನ್ನು ಸರಳಗೊಳಿಸಲಾಗಿದೆ. ಸೈದ್ಧಾಂತಿಕವಾಗಿ ಉದ್ಯೋಗದ ರಚನೆಯಲ್ಲಿ ಉಂಟಾದ ಬದಲಾವಣೆಯನ್ನು ಸಾಮಾಜಿಕ ಬದಲಾವಣೆ ಎಂದೂ ಗುರುತಿಸಲಾಗಿದೆ.

ಈ ಅಧ್ಯಾಯದಲ್ಲಿ ಡೆಮೋಗ್ರಾಫಿ ಸೂಚಿ, ಶಿಕ್ಷಣದ ಸೂಚಿ ಹಾಗೂ ಆರ್ಥಿಕ ಸೂಚಿಯ ಮೂಲಕ ಹಾಲಕ್ಕಿ ಸಮುದಾಯದ ಆರ್ಥಿಕ ನೆಲೆಯಲ್ಲಿ ಉಂಟಾಗುತ್ತಿರುವ ಪರಿವರ್ತನೆಯನ್ನು ಸರಿಯಾಗಿ ಅರ್ಥಮಾಡಿಕೊಳ್ಳುವ ಸಲುವಾಗಿ ಡೆಮೋಗ್ರಾಫಿ ಶಿಕ್ಷಣ, ದುಡಿಮೆ, ಭೂ ಒಡೆತನ, ಉದ್ಯೋಗದ ರಚನೆ, ಕೃಷಿ, ಕುಟುಂಬದ ಆದಾಯ ಹಾಗೂ ಜೀವನಮಟ್ಟ ಮುಂತಾದ ಸೂಚಿಗಳ ಮೂಲಕ ಚರ್ಚಿಸಲಾಗಿದೆ.

ಈ ಅಧ್ಯಾಯದ ಕೊನೆಯ ಭಾಗದಲ್ಲಿ ಶಿಕ್ಷಣವು ಹೇಗೆ ಹಾಲಕ್ಕಿಗಳಲ್ಲಿ ಸಾಮಾಜಿಕ ಪರಿವರ್ತನೆಗೆ ಕಾರಣವಾಗಿದೆ ಎಂಬುದನ್ನು ವಿಶ್ಲೇಷಿಸಲಾಗಿದೆ. ಶಿಕ್ಷಣವು ಹಾಲಕ್ಕಿಗಳ ಡೆಮೋಗ್ರಾಫಿ, ಸಾಮಾಜಿಕತೆ, ಆರ್ಥಿಕತೆ, ರಾಜಕೀಯ ಹಾಗೂ ಧಾರ್ಮಿಕತೆಯ ಮೇಲೆ ಪರಿಣಾಮ ಬೀರಿರುವುದನ್ನು ಗುರುತಿಸಲಾಗಿದೆ.

ಅನಾದಿ ಕಾಲದಿಂದಲೂ ಮಾನವನು ಆಹಾರಕ್ಕಾಗಿ ಶ್ರಮವನ್ನು ನಿರ್ವಹಿಸುತ್ತಾ ಬಂದಿದ್ದಾನೆ. ಇಂದಿಗೂ ಸಹ ಉತ್ಪಾದನೆ ಮತ್ತು ಹಂಚಿಕೆ ಮುಖ್ಯವಾದ ಆರ್ಥಿಕ ಚಟುವಟಿಕೆಯಾಗಿದೆ. ಹೀಗೆ ಮಾನವನು ಅಭಿವೃದ್ಧಿಯ ವಿವಿಧ ಹಂತಗಳನ್ನು ದಾಟುತ್ತಾ ಸಾಗುತ್ತಿದ್ದಾನೆ. ಮಾನವನ ವಿವಿಧ ಚಟುವಟಿಕೆಗಳಾದ ಬೇಟೆಗಾರಿಕೆ, ಕುರುಬತನ

(ಪಶುಸಂಗೋಪನೆ) ರೈತಾಪಿತನ ಹಾಗೂ ವಾಣಿಜ್ಯ ಎಲ್ಲವೂ ಅಭಿವೃದ್ಧಿಯ ವಿವಿಧ ಹಂತಗಳಾಗಿವೆ.

ಕರ್ನಾಟಕವು ವಿವಿಧ ಜನಸಮುದಾಯವನ್ನು ಒಳಗೊಂಡಿದೆ. ವಿವಿಧ ಜನಸಮುದಾಯ ವಿವಿಧ ಆರ್ಥಿಕತೆಯನ್ನು ಹೊಂದಿದ್ದಾರೆ. ನಮ್ಮ ಜನಸಂಖ್ಯೆ ಶೇ. ೬೬ರಷ್ಟು ಜನರು ಗ್ರಾಮೀಣ ಪ್ರದೇಶದಲ್ಲಿ ನೆಲೆಗೊಂಡಿದ್ದಾರೆ. ಗ್ರಾಮೀಣ ಪ್ರದೇಶದಲ್ಲಿ ಶೇ. ೭೦ರಷ್ಟು ಜನರು ಕೃಷಿಯನ್ನೇ ಅವಲಂಬಿಸಿದ್ದಾರೆ. ಕೃಷಿ ಆರ್ಥಿಕತೆಯಲ್ಲಿ ಹೊಂದಿದ ಜನಸಮುದಾಯದಲ್ಲಿ ಹಾಲಕ್ಕಿ ಸಮುದಾಯವು ಒಂದು. ಈ ಸಮುದಾಯದ ಆರ್ಥಿಕ ನೆಲೆಯಲ್ಲಿ ಬದಲಾವಣೆಯನ್ನು ಅರಿಯಲು ಅನುಷಂಗಿಕ ಮಾಹಿತಿಯ ಜೊತೆಗೆ ಕ್ಷೇತ್ರಕಾರ್ಯದ ಮೂಲಕ ಸಂಗ್ರಹಿಸಿರುವ ಪ್ರಾಥಮಿಕ ಮಾಹಿತಿಯನ್ನು ಇಲ್ಲಿ ಚರ್ಚಿಸಲಾಗಿದೆ.

೫.೧. ಹಾಲಕ್ಕಿಗಳ ಸಾಂಪ್ರದಾಯಿಕ ಆರ್ಥಿಕತೆ

ಉತ್ತರ ಕನ್ನಡ ಜಿಲ್ಲೆಯ ಪ್ರಮುಖ ಜನಾಂಗಗಳಲ್ಲಿ ಹಾಲಕ್ಕಿ ಒಕ್ಕಲಿಗರ ಜನಾಂಗವು ಒಂದು. ಹಾಲಕ್ಕಿಗಳನ್ನು ಈ ಪ್ರದೇಶದಲ್ಲಿ ನೆಲೆನಿಂತ ಮೊದಲ ನಿವಾಸಿಗಳೆಂದು (ಮುಂಬಯಿ ಗೆಜೆಟಿಯರ್-೧೮೮೩) ಗುರುತಿಸಲಾಗಿದೆ. ಡಾ. ದೇಸಾಯಿ(೧೯೪೫)ಯವರು ಹಾಲಕ್ಕಿಗಳು ಈ ಜಿಲ್ಲೆಯ ಮೂಲ ನಿವಾಸಿಗಳೆಂದು ಗುರುತಿಸಿರುವರು. ಭೌಗೋಳಿಕವಾಗಿ ಈ ಜಿಲ್ಲೆಯ ಶೇ. ೮೦ರಷ್ಟು ಅರಣ್ಯ ಪ್ರದೇಶವನ್ನು ಹೊಂದಿದೆ. ಅರಣ್ಯ ಪ್ರದೇಶದಲ್ಲಿ ತಳಭಾಗದಲ್ಲಿ ಗುಂಪು ಗುಂಪಾಗಿ ಹಾಲಕ್ಕಿಗಳು ನೆಲೆಗೊಂಡಿದ್ದಾರೆ. ಹಾಲಕ್ಕಿಗಳು ಕೊಡಲಿ ಸಂಸ್ಕೃತಿಯನ್ನು ಗುರುತಿಸಲಾಗಿದ್ದು, ಬೇಟೆಯನ್ನು ಉಪಕಸುಬನ್ನಾಗಿ ಮಾಡಿಕೊಂಡಿದ್ದರು.

ಭೂ ಒಡೆತನ

ಬುಡಕಟ್ಟಿನವರಾಗಿದ್ದ ಹಾಲಕ್ಕಿಗಳ ಮೊದಲಿಗೆ ಕುಂಬ್ರಿ ಬೇಸಾಯವನ್ನು ಮಾಡುತ್ತಿದ್ದರು. ಕುಂಬ್ರಿ ಬೇಸಾಯವೆಂದರೆ ಅರಣ್ಯದ ತಳಭಾಗದಲ್ಲಿರುವ ಗಿಡಮರಗಳನ್ನು ಕಡಿದು, ಸುಟ್ಟು ಬೇಸಾಯ ಮಾಡುವುದು. ಎರಡು-ಮೂರು ಬೆಳೆ ತೆಗೆದ ಮೇಲೆ, ಈ ಸ್ಥಳ ಬಿಟ್ಟು ಬೇರೆ ಸ್ಥಳದಲ್ಲಿ ಇದೇ ರೀತಿಯಲ್ಲಿ ಬೇಸಾಯ ಮಾಡುತ್ತಿದ್ದರು. ಇದಕ್ಕೆ ಎತ್ತಂಗಡಿ ಬೇಸಾಯ ಅಂತಲೂ ಕರೆಯುತ್ತಾರೆ.

ಬ್ರಿಟಿಷರು ೧೮೮೫ರಲ್ಲಿ ಕುಂಬ್ರಿ ಬೇಸಾಯವನ್ನು ನಿಷೇಧಿಸಿದ್ದರು. ಆಗ ಹಾಲಕ್ಕಿಗಳು ಒಂದೆಡೆಗೆ ನೆಲೆನಿಂತು ಬೇಸಾಯ ಮಾಡಲು ಶುರು ಮಾಡಿರಬೇಕು. ಬ್ರಿಟಿಷ ಸರಕಾರವು ಆಡಳಿತಾತ್ಮಕ ಸುಧಾರಣೆಯ ಪ್ರಕ್ರಿಯೆಯನ್ನು ಪ್ರಾರಂಭಿಸಿತು. ಇದರಿಂದಾಗಿ ಭೂ ನೋಂದಣಿ ಹಾಗೂ ಭೂ ಕಂದಾಯ ಪದ್ಧತಿ ಜಾರಿಗೊಂಡಿತು. ಕಡು ಬಡವರಾದ

ಹಾಲಕ್ಕಿಗಳು ಭೂ ಕಂದಾಯವನ್ನು ಕಟ್ಟುವ ಸ್ಥಿತಿಯಲ್ಲಿ ಇರಲಿಲ್ಲ. ಶಿಕ್ಷಿತ ಮೇಲ್ ವರ್ಗದವರು ಭೂ ಕಂದಾಯವನ್ನು ಕಟ್ಟಿ ಭೂ ನೋಂದಣಿಯನ್ನು ಮಾಡಿಕೊಂಡಿರುವುದನ್ನು ಡಾ.ದೇಸಾಯಿಯವರು (೧೯೪೫) ದಾಖಲಿಸಿದ್ದಾರೆ. ಹೀಗೆ ಆಡಳಿತಾತ್ಮಕ ಸುಧಾರಣೆಯ ಪ್ರಕ್ರಿಯೆಯು ಹಾಲಕ್ಕಿಗಳ ಮೇಲೆ ಪ್ರತಿಕೂಲ ಪರಿಣಾಮ ಬೀರಿತು. ಭೂ ಒಡೆತನ ಕಳೆದುಕೊಂಡ ಹಾಲಕ್ಕಿಗಳ ಹಲವಾರು ಕುಟುಂಬಗಳು ಸಮುದ್ರ ತೀರದ ಬಯಲು ಪ್ರದೇಶದಲ್ಲಿ ಬಂದು ನೆಲೆ ನಿಂತವು. ಹೀಗೆ ನೆಲೆನಿಂತ ಹಾಲಕ್ಕಿಗಳು ಈ ಪ್ರದೇಶದ ಭೂ ಮಾಲಿಕರ ಒಕ್ಕಲಿಗರಾಗಿ ದುಡಿಮೆ ಮಾಡತೊಡಗಿದರು.

ಗೇಣಿ ಪದ್ಧತಿ

ಭೌಗೋಳಿಕವಾಗಿ ಶೇ. ೮೦ರಷ್ಟು ಅರಣ್ಯ ಪ್ರದೇಶವನ್ನು ಈ ಜಿಲ್ಲೆಯು ಹೊಂದಿತ್ತು. ಹಾಗೂ ಸುಮಾರು ಮೂರುವರೆ ಲಕ್ಷ ಎಕರೆ ಭೂಮಿ ಸಾಗುವಳಿಗೆ ಯೋಗ್ಯವಾಗಿತ್ತು. ಜನಸಂಖ್ಯೆ ಹೆಚ್ಚಿದಂತೆ ಗೇಣಿ ಪದ್ಧತಿ ಶುರುವಾಯಿತು. ಆಗ ಶೇ. ೮೧.೯ರಷ್ಟು ಸ್ವಂತ ಬೇಸಾಯಗಾರರಾಗಿದ್ದರು. ೧,೮೧,೨೩೯ ಗೇಣಿದಾರರಿದ್ದರು. ಹಾಲಕ್ಕಿಗಳು ಈ ಗುಂಪಿಗೆ ಸೇರಿದವರು. ಇಲ್ಲಿಯ ಕೃಷಿಕರನ್ನು ಮೂರು ಗುಂಪುಗಳಲ್ಲಿ ವಿಂಗಡಿಸಬಹುದು. ಅವರುಗಳೆಂದರೆ, ಸಾಗುವಳಿದಾರರು, ಗೇಣಿದಾರರು ಮತ್ತು ಕೃಷಿಕೂಲಿಕಾರರು.

ಭೂ ಒಡೆತನವನ್ನು ಹೊಂದಿರುವ ಮೇಲ್‌ವರ್ಗದವರು ವ್ಯಾಪಾರದಲ್ಲಿ ತೊಡಗಿಕೊಂಡಿದ್ದವರು. ಅವರಲ್ಲಿ ಕೆಲವರು ಭೂ ಒಡೆಯರು, ವ್ಯಾಪಾರದ ಜೊತೆಯಲ್ಲಿ ಬೇಸಾಯವನ್ನು ಕೂಡಾ ರೂಢಿಸಿಕೊಂಡಿದ್ದರು. ಮೇಲ್‌ವರ್ಗದವರು ಸ್ವತಃ ಶ್ರಮಮಾಡುವಷ್ಟು ದೈಹಿಕ ಸಾಮರ್ಥ್ಯವನ್ನು ಹೊಂದಿರದ ಕಾರಣ, ಹಾಲಕ್ಕಿಗಳನ್ನು ಒಕ್ಕಲಿಗರನ್ನಾಗಿ ಮಾಡಿಕೊಂಡರು ಅಲ್ಲದೇ ಹಾಲಕ್ಕಿಗಳು ಪ್ರಾಮಾಣಿಕರಾದ್ದರಿಂದ ಗೇಣಿಯಲ್ಲಿ ಮೋಸ ಮಾಡುತ್ತಿರಲಿಲ್ಲ. ಹೀಗಾಗಿ ಹಾಲಕ್ಕಿಗಳ ಶ್ರಮದ ಬಹುಭಾಗವು ಗೇಣಿಗೆ ಸಂದಾಯವಾಗುತ್ತಿತ್ತು. ಆಗ ಗೇಣಿಯ ಪ್ರಮಾಣವು ಎಕರೆ ೮ ಕಂಡಗ ಅಕ್ಕಿಯನ್ನು (೧೬ ಕಂಡಗ ಭತ್ತ) ನೀಡಬೇಕಾಗಿತ್ತು. ಯಾವುದೇ ಸ್ಥಿತಿಯಲ್ಲಿಯೂ ಗೇಣಿಯನ್ನು ನೀಡುವುದನ್ನು ಮಾತ್ರ ತಪ್ಪಿಸಬಾರದಾಗಿತ್ತು. ಹೀಗಾಗಿ ಆರ್ಥಿಕವಾಗಿ ಹಾಲಕ್ಕಿಗಳ ಅಂಚಿನ ಮಟ್ಟದಲ್ಲಿಯೇ ಇರಬೇಕಾಯಿತು.

ಹಾಲಕ್ಕಿಗಳ ಶೋಷಣೆಯ ವಿರುದ್ಧ ಜನಸೇವಕ ಕವಿಯಾದ ಡಾ. ದೇಸಾಯಿವರ ಜನಾಂದೋಲವನ್ನು ನಡೆಸಿದರು. ೧೯೩೬-೩೭ರಲ್ಲಿ ಜನ ಜಾಗೃತಿಯು ಶುರುವಾಯಿತು. ಈ ಹೋರಾಟದಲ್ಲಿ ಪಿಕಳೆ ಹಾಗೂ ನಾಡಕರ್ಣಿಯರು ತೊಡಗಿಕೊಂಡವರು (ವಿಷ್ಣು ನಾಯ್ಕ:

೨೦೦೫) ಈ ಎಲ್ಲಾ ಹೋರಾಟದ ಫಲವಾಗಿ ಗೇಣಿ ದರ ಕಡಿಮೆಯಾಯಿತು. ಸ್ವಾತಂತ್ರ್ಯದ ನಂತರ ಕರ್ನಾಟಕ ಸರ್ಕಾರದ ಉಳುವವನೇ ಭೂಮಿಯ ಒಡೆಯ ಎಂಬ ಕಾಯಿದೆಯು ಹಾಲಕ್ಕಿಗಳಿಗೆ ಭೂ ಒಡೆತನವನ್ನು ಒದಗಿಸಿತು.

ನೀರಾವರಿ

ಈ ಪ್ರದೇಶದಲ್ಲಿ ಅತೀ ಹೆಚ್ಚು ಮಳೆಯಾಗುತ್ತದೆ. ಆದ್ದರಿಂದ ವರ್ಷದಲ್ಲಿ ಸುಮಾರು ೧೨೦ ದಿನ ಮಳೆಯಾಗುತ್ತದೆ. ಆದ್ದರಿಂದ ಭತ್ತ ಇಲ್ಲಿಯ ಪ್ರಮುಖ ಬೆಳೆ. ಹಾಲಕ್ಕಿಗಳು ಭತ್ತದ ಜೊತೆಗೆ ರಾಗಿಯನ್ನು ಬೆಳೆಯುತ್ತಾರೆ.

ಪಶು-ಸಂಗೋಪನೆ

ಹಾಲಕ್ಕಿಗಳು ಅರಣ್ಯದೊಡನೆ ನೇರ ಸಂಪರ್ಕ ಹೊಂದಿದವರು. ಹೀಗಾಗಿ ದನಕರುಗಳಬಗ್ಗೆ ಪ್ರೀತಿ ಆದರವನ್ನು ಹೊಂದಿದವರು. ಧಾರ್ಮಿಕತೆ ದೃಷ್ಟಿಯಿಂದಲೂ ಗೋ ಪೂಜೆಗೆ ಮಹತ್ವವಿದೆ. ಹೀಗಾಗಿ ಪ್ರತಿ ಹಾಲಕ್ಕಿ ಕುಟುಂಬ ಕೊಟ್ಟಿಗೆಯನ್ನು ಹೊಂದಿರುತ್ತಿತ್ತು. ಕೃಷಿ ಆರ್ಥಿಕತೆಯ ದನಕರುಗಳು ಉತ್ಪನ್ನದಾಯಕವಾಗಿದ್ದವು. ಅವುಗಳಿಂದ ಹಾಲು, ಸಾವಯವ ಗೊಬ್ಬರ, ಬೆರಣಿಯನ್ನು ಪಡೆಯುತ್ತಿದ್ದರು. ಹೀಗಾಗಿ ಹಾಲಕ್ಕಿಗಳಿಗೆ ಕೊಟ್ಟಿಗೆಯು ಅವಶ್ಯಕವಾಗಿತ್ತು. ಹಾಲಿನ ಮಾರಾಟದಿಂದ ಸ್ವಲ್ಪ ಪ್ರಮಾಣದಲ್ಲಿ ಆದಾಯವು ದೊರೆಯುತ್ತಿತ್ತು. ಅಲ್ಲದೇ ದನಕರುಗಳನ್ನು ಸಾಕಲು ವಿಶೇಷ ವೆಚ್ಚವನ್ನು ಭರಿಸಬೇಕಾಗಿರಲಿಲ್ಲ. ನಾಲ್ಕು ತಿಂಗಳು ಮಳೆಗಾಲವಾದ್ದರಿಂದ, ಹಸಿ ಹುಲ್ಲು ಚೆನ್ನಾಗಿ ಸಿಗುತ್ತಿತ್ತು, ಬೇಸಿಗೆಯಲ್ಲಿ ಒಣ ಹುಲ್ಲು ಮನೆಯಲ್ಲಿಯೇ ಇರುತ್ತಿತ್ತು.

ಅರಣ್ಯ ಮತ್ತು ಹಾಲಕ್ಕಿಗಳು

ಅರಣ್ಯ ವಾಸಿಗಳಾದ ಹಾಲಕ್ಕಿಗಳು ಅರಣ್ಯದೊಡನೆ ನೇರ ಸಂಪರ್ಕವನ್ನು ಹೊಂದಿರುವವರು. ಅರಣ್ಯವು ಅವರ ಜೀವನದ ಒಂದು ಮುಖ್ಯ ಭಾಗವಾಗಿದೆ. ಹಾಲಕ್ಕಿಗಳು ಕೊಡಲಿ ಸಂಸ್ಕೃತಿಯಲ್ಲಿ ನುರಿತವರು. ಹೀಗಾಗಿ ಮರ ಏರುವುದು, ಮರ ಕಡಿಯುವುದು, ಉರುವಲದ ಹೊರೆ ಸಿದ್ಧಪಡಿಸುವುದು ಈ ಎಲ್ಲ ಕೆಲಸದಲ್ಲಿ ವಿಶೇಷವಾದ ಕೌಶಲ್ಯವನ್ನು ಹೊಂದಿದವರಾಗಿದ್ದಾರೆ. ಆದ್ದರಿಂದ ಹಾಲಕ್ಕಿಗಳು ತೋಟದ ಕೆಲಸದಲ್ಲಿ ನಿಪುಣತೆಯನ್ನು ಹೊಂದಿದ್ದರು. ಹಾಲಕ್ಕಿಗಳು ಮನೆ ಮತ್ತು ದೇವಸ್ಥಾನದ ಮೇಲ್ಛಾವಣೆಯನ್ನು ನಿರ್ಮಿಸುವಲ್ಲಿ ಏಕಸ್ವಾಮ್ಯವನ್ನು ಹೊಂದಿದ್ದರು. ಇದರ ಜೊತೆಯಲ್ಲಿ ಹಾಲಕ್ಕಿಗಳು ಚಾಪೆ ಹಾಗೂ ಹಗ್ಗ ತಯಾರಿಕೆಯಲ್ಲಿ ಕೂಡಾ ಪರಿಣತಿಯನ್ನು ಪಡೆದುಕೊಂಡಿದ್ದರು.

ಬೇಟೆ ಹಾಲಕ್ಕಿಗಳ ಉಪಕಸುಬಾಗಿತ್ತು, ಹಾಲಕ್ಕಿಗಳು ಮೊಲ, ಆಮೆ, ಜಿಂಕೆ, ಹಂದಿ, ಕಡವೆ ಮುಂತಾದ ಪ್ರಾಣಿಗಳನ್ನು ಬೇಟೆಯಾಡುತ್ತಿದ್ದರು. ಬೇಟೆಯ ಮಾಂಸವನ್ನು ಇಡೀ ಕೊಪ್ಪಕ್ಕೆ ಹಂಚಲಾಗುತ್ತಿತ್ತು.

ಹಾಲಕ್ಕಿಗಳು ಅರಣ್ಯದ ನಿಕಟವಾದ ಸಂಪರ್ಕದೊಂದಿಗೆ, ಅರಣ್ಯದ ಗಿಡಮೂಲಿಕೆಯ ಬಗ್ಗೆ ಅಪಾರವಾದ ಜ್ಞಾನವನ್ನು ಹೊಂದಿದ್ದರು. ಹೀಗಾಗಿ ಹಾಲಕ್ಕಿಗಳು ಜ್ವರ,ಸಂದಿವಾತ, ಹಾವು ಕಡಿತಕ್ಕೆ ಔಷಧಿಯನ್ನು ನೀಡುತ್ತಿದ್ದರು. ಅಲ್ಲದೇ ಹಾಲಕ್ಕಿಗಳು ಪಶುವೈದ್ಯರು ಕೂಡ ಆಗಿದ್ದರು. ದನಕರುಗಳಿಗೆ ಔಷಧಿ ನೀಡುತ್ತಿದ್ದರು. ಹಾಲಕ್ಕಿಗಳು ಅರಣ್ಯದ ವಿವಿಧ ಉತ್ಪನ್ನಗಳಾದ ಜೇನು, ವಿವಿಧ ಹಣ್ಣುಗಳನ್ನು, ಗೆಡ್ಡೆಗೆಣಸುಗಳನ್ನು ಸಂಗ್ರಹಿಸುತ್ತಿದ್ದರು. ಅರಣ್ಯದ ಉತ್ಪನ್ನಗಳಿಂದ ಆದಾಯವನ್ನು ಪಡೆಯುತ್ತಿದ್ದರು.ಹಾಲಕ್ಕಿಗಳ ಆರ್ಥಿಕತೆಯಲ್ಲಿ ಅರಣ್ಯದ ಅವಲಂಬನೆ ಅತಿಯಾಗಿರುವುದನ್ನು ಗುರುತಿಸಬಹುದಾಗಿದೆ. ಈ ಪ್ರದೇಶದ ಭೌಗೋಳಿಕ ಅಂಶವು ಹಾಲಕ್ಕಿಯವರ ಆರ್ಥಿಕತೆಯ ಮೇಲೆ ಪ್ರಭಾವವನ್ನು ಬೀರಿದೆ.

ಕೃಷಿ ಮತ್ತು ಹಾಲಕ್ಕಿಗಳು

ಪ್ರಾರಂಭದಲ್ಲಿ ಕುಂಬ್ರಿ ದೇಸಾಯದಲ್ಲಿ ತೊಡಗಿಸಿಕೊಂಡು ಹಾಲಕ್ಕಿಗಳು ನಂತರದಲ್ಲಿ ನೆಲೆನಿಂತ ದೇಸಾಯದಲ್ಲಿ ಪರಿಣಿತ ಪಡೆದುಕೊಂಡರು. ಕೃಷಿ ಚಟುವಟಿಕೆಗಳಾದ ಭೂಮಿಯನ್ನು ಊಳುವುದು, ಗೊಬ್ಬರ ಹಾಕುವುದು, ಬಿತ್ತನೆ ಪಾತಿಮಾಡುವುದು ಹಾಗೂ ಕಳೆ ಕೀಳುವುದು ಮುಂತಾದ ಕೆಲಸದಲ್ಲಿ ಪರಿಣಿತಿ ಪಡೆದಿದ್ದರು.

ಹಾಲಕ್ಕಿಗಳು ಭತ್ತ, ರಾಗಿ ಬೆಳೆಯನ್ನು ಬೆಳೆಯುತ್ತಿದ್ದರು. ಭೂ ಮಾಲಿಕರ ತೆಂಗು, ಅಡಿಕೆ, ವಿಲಕ್ಕಿ ತೋಟದಲ್ಲಿ ದುಡಿಮೆಯನ್ನು ಮಾಡುತ್ತಿದ್ದರು. ಈ ಭಾಗದ ಕೃಷಿ ಪೂರ್ಣವಾಗಿ ಹಾಲಕ್ಕಿಗಳನ್ನೇ ಅವಲಂಬಿಸಿತ್ತು.

ಶ್ರಮದ ವಿಭಜನೆ

ಹಾಲಕ್ಕಿಯವರಲ್ಲಿ ಶ್ರಮ ವಿಭಜನೆಯು ವಯಸ್ಸು ಮತ್ತು ಲಿಂಗಾಧಾರಿತವಾಗಿದೆ. ಹಾಲಕ್ಕಿ ಮಹಿಳೆಯರು ಪುರುಷರಿಗೆ ಸಮವಾಗಿ ಕೃಷಿ ದುಡಿಮೆ ಮಾಡುತ್ತಿದ್ದರು. ಕೃಷಿ ಚಟುವಟಿಕೆ ಭೂಮಿ ಊಳುವುದನ್ನು ಹೊರತುಪಡಿಸಿ, ಎಲ್ಲಾ ಕೃಷಿ ಚಟುವಟಿಕೆಯಲ್ಲಿ ತೊಡಗಿಸಿಕೊಳ್ಳುತ್ತಾರೆ. ಶೇ. ೧೦೦ರಷ್ಟು ಕೊಡುಗೆಯನ್ನು ಕೃಷಿಗೆ ಮಹಿಳೆಯರು ಸಲ್ಲಿಸುತ್ತಾರೆ.

ಕೃಷಿ ಆರ್ಥಿಕತೆಯಾದ್ದರಿಂದ, ಪಶುಸಂಗೋಪನೆಯಲ್ಲಿ ಮಹಿಳೆಯರು ತೊಡಗಿಕೊಳ್ಳುತ್ತಾರೆ. ದನಕರುಗಳಿಗೆ ಸಮಯಕ್ಕೆ ಸರಿಯಾಗಿ ನೀರುನೀಡುವುದು, ಹುಲ್ಲು ಹಾಕುವುದು, ದನಕರುಗಳನ್ನು ಕಟ್ಟುವುದು, ಬಿಡುವುದು, ಕೊಟ್ಟಿಗೆಯನ್ನು ಸ್ವಚ್ಛಗೊಳಿಸುವುದು ಹಾಗೂ

ಹಾಲು ಕರೆಯುವುದು ಎಲ್ಲಾ ಕೆಲಸವನ್ನು ನಿರ್ವಹಿಸುತ್ತಿದ್ದರು. ಹಾಲಕ್ಕಿ ಮಹಿಳೆಯರು ಕೋಳಿಯನ್ನು ಸಾಕುತ್ತಾರೆ, ಕೋಳಿ ಸಾಕಣಿಕೆ ಆದಾಯ ಮತ್ತು ಆಹಾರದ ಮೂಲವಾಗಿದೆ. ಕೋಳಿ ಸಾಕಾಣಿಕೆಗೆ ಮೀಸಲು ವೇಳೆ ಬಹಳ ಕಡಿಮೆ. ಅದ್ದರಿಂದ ಕೋಳಿ ಸಾಕಣಿಕೆಯಲ್ಲಿ ಆಸಕ್ತಿ ಹೊಂದಿದ್ದಾರೆ.

ಹಿಂದೆ ಹಾಲಕ್ಕಿ ಮಹಿಳೆಯರು ಕೃಷಿ ಭೂಮಿಯಲ್ಲಿ ಕಾರ್ಮಿಕರಾಗಿ ದುಡಿಮೆ ಮಾಡುತ್ತಿದ್ದರು. ಆಗ ಪುರುಷರಿಗೆ ನಾಲ್ಕು ಆಣೆ ಕೂಲಿ ನೀಡಿದರೆ, ಮಹಿಳೆಯರಿಗೆ ೨ ಆಣೆ ಕೂಲಿ ನೀಡುತ್ತಿದ್ದರು. (ಗೆಜೆಟಿಯರ್: ೧೮೮೩) ಶ್ರಮಿಕಳಾಗಿ ಹಾಲಕ್ಕಿ ಮಹಿಳೆಯರ ಕೊಡುಗೆ ಮಹತ್ವದ್ದು. ಅವಳ ದುಡಿಮೆ ಕುಟುಂಬಕ್ಕೆ ಆದಾಯವನ್ನು ಪೂರೈಸುತ್ತದೆ.

ಮಹಿಳೆಯರಿಗೆ ಕೆಲವು ಕೆಲಸಗಳನ್ನು ದೈಹಿಕ ಸಾಮರ್ಥ್ಯದ ಆಧಾರದ ಮೇಲೆ ನಿಷೇಧಿಸಿದೆ. ಅವುಗಳೆಂದರೆ, ಭೂಮಿಯನ್ನು ಊಳುವುದು, ಗಾಡಿ ಹೊಡೆಯುವುದು, ಬೇಟೆಯಾಡುವುದು, ಮರವನ್ನು ಏರುವುದು, ಮನೆಯ ಮೇಲ್ಛಾವಣೆಯನ್ನು ಹೊದಿಸುವುದು, ಮುಂತಾದವುಗಳು. ಹೀಗೆ ಶ್ರಮವಿರುವ ಕೆಲಸ ನಿಷೇಧಿಸಿದೆ. ಇದರಿಂದಾಗಿ ಮಹಿಳೆಯರ ದುಡಿಮೆಗೆ ಕಡಿಮೆ ಕೂಲಿಯನ್ನು ನೀಡಲಾಗುವುದು. ಆದರೆ ಒಂದೇ ತರದ ದುಡಿಮೆ ಮಾಡಿದಾಗ ಕೂಡಾ ಸಮಾನ ವೇತನ ನೀಡಲಾಗುವುದಿಲ್ಲ. ಇದು ಮಹಿಳೆಯರ ಆರ್ಥಿಕ ಸಂಕಷ್ಟಕ್ಕೆ ಕಾರಣವಾಗಿದೆ.

ಹಾಲಕ್ಕಿ ಮಹಿಳೆಯರ ಅರಣ್ಯದ ಉತ್ಪನ್ನಗಳಾದ ಉರುವಲು, ವಿವಿಧ ಜಾತಿಯ ಹಣ್ಣುಗಳನ್ನು ಗೆಡ್ಡೆ-ಗೆಣಸುಗಳನ್ನು ಹಾಗೂ ಜೇನು ಮುಂತಾದವುಗಳನ್ನು ಸಂಗ್ರಹಿಸುವುದು ಮತ್ತು ಮಾರಾಟವನ್ನು ಮಾಡುತ್ತಾರೆ. ಈ ಕೆಲಸವು ಹೆಚ್ಚಿನ ಸಮಯ ಹಾಗೂ ಪರಿಶ್ರಮವನ್ನು ತೆಗೆದಿಕೊಳ್ಳುತ್ತದೆ. ಈ ದುಡಿಮೆಯ ಮೂಲಕ ಪಡೆದ ಆದಾಯವನ್ನು ದಿನ ನಿತ್ಯದ ಅವಶ್ಯಕತೆಯನ್ನು ಪೂರೈಸಿಕೊಳ್ಳಲು ವೆಚ್ಚ ಮಾಡುತ್ತಾಳೆ.

ಮನೆ ಒಳಗಿನ ಎಲ್ಲ ಕೆಲಸಗಳು ಮಹಿಳೆಯರಿಗೆ ಮೀಸಲು. ಮನೆಯೊಳಗಿನ ಕೆಲಸವೆಂದರೆ ಅಡಿಗೆ ತಯಾರಿಸುವುದು, ಸ್ವಚ್ಚಗೊಳಿಸುವಿಕೆ, ನೀರು ಪೂರೈಕೆ, ಮಕ್ಕಳ ಆರೈಕೆ ಹಾಗೂ ಮನೆಯ ಹಿರಿಯರ ಆರೈಕೆ ಮುಂತಾದವುಗಳು.

ಕುಟುಂಬದ ಅವಶ್ಯಕತೆಯನ್ನು ಪೂರೈಸಲು ಹಾಲಕ್ಕಿ ಮಹಿಳೆಯರು ವಿವಿಧ ಪ್ರಕಾರದ ಕಾಯಿಪಲ್ಯಗಳನ್ನು ಬೆಳೆಯುತ್ತಾರೆ. ಕಾಯಿಪಲ್ಯವನ್ನು ಬೆಳೆಯುವುದು ಮತ್ತು ಮಾರಾಟ ಮಾಡುವುದು ಸಹ ಹಾಲಕ್ಕಿ ಮಹಿಳೆಯರಿಗೆ ಮೀಸಲು. ಹಾಲಕ್ಕಿ ಪುರುಷರು ಕಾಯಿಪಲ್ಲೆ ಮಾರಾಟವನ್ನು ಮಾಡುವುದಿಲ್ಲ. ಹಾಲಕ್ಕಿ ಮಹಿಳೆಯರು ವಿವಿಧ ಆರ್ಥಿಕ ಚಟುವಟಿಕೆಯ

ಮೂಲಕ ಮಹತ್ವದ ಕೊಡುಗೆಯನ್ನು ಕುಟುಂಬದಲ್ಲಿ ಸಲ್ಲಿಸುತ್ತಿದ್ದಾರೆ. ಹಾಲಕ್ಕಿ ಮಹಿಳೆಯರು ದುಡಿಮೆಯಲ್ಲಿ ಪುರುಷರಿಗೆ ಸಮವಾಗಿ ದುಡಿದರೂ ಕೂಡಾ ಸ್ಥಾನದಲ್ಲಿ ಮಾತ್ರ ಕೆಳಗಿರುವುದು ಕಂಡುಬರುತ್ತದೆ.

ಮೂಲ ಉತ್ಪಾದನಾ ಘಟಕ

ಕೃಷಿ ಮುಖ್ಯ ಆರ್ಥಿಕ ಚಟುವಟಿಕೆಯಾಗಿದ್ದು, ಕೃಷಿ ಆರ್ಥಿಕತೆಯ ಸುತ್ತಲೂ ಸಾಮಾಜಿಕ, ರಾಜಕೀಯ, ಧಾರ್ಮಿಕ ರಚನೆಯಾಗುತ್ತದೆ. ಅವರ ಜೊತೆಗೆ ಹಾಲಕ್ಕಿಗಳು ಅರಣ್ಯದ ಉತ್ಪನ್ನದ ಸಂಗ್ರಹಣೆ-ಮಾರಾಟದಲ್ಲಿ ಪರಿಣತಿ ಹೊಂದಿದ್ದಾರೆ. ಮನೆ ಮತ್ತು ದೇವಸ್ಥಾನದ ರಥ, ಮೇಲ್ಛಾವಣಿ ಹೊದಿಸುವಲ್ಲಿ, ಚಾಪೆ, ಹಗ್ಗ ತಯಾರಿಕೆ ಹಾಗೂ ನಾಟೀ ಔಷಧಿ ನೀಡುವುದರಲ್ಲಿ ಕೂಡಾ ಪರಿಣಿತಿಯನ್ನು ಪಡೆದಿದ್ದಾರೆ. ಇವೆಲ್ಲವೂ ಕುಟುಂಬದಲ್ಲಿ ಮೂಲ ಆರ್ಥಿಕ ಘಟಕವಾಗಿದೆ. ಇದರಿಂದಾಗಿ ಬಂಧುತ್ವ, ಸಂಬಂಧಿಕತೆ ಉಂಟಾಗಿದೆ.

ಅದೇ ಆರ್ಥಿಕತೆಯಲ್ಲಿ ಕುಟುಂಬದ ಎಲ್ಲಾ ಸದಸ್ಯರು ಶ್ರಮವನ್ನು ನೀಡುತ್ತಾರೆ ಹಾಗೂ ನೆರೆಹೊರೆಯವರ ಕೃಷಿ ಚಟುವಟಿಕೆಯಲ್ಲಿ ಪಾಲ್ಗೊಳ್ಳುತ್ತಾರೆ. ಹಾಲಕ್ಕಿ ಕುಟುಂಬಗಳನ್ನು ನಾಲ್ಕು ಪ್ರಕಾರವಾಗಿ ವಿಂಗಡಿಸಬಹುದು. ಮೊದಲನೆಯದಾಗಿ ಸ್ವಂತ ಸಾಗುವಳಿದಾರರು, ಎರಡನೆಯದಾಗಿ ಸ್ವಂತ ಸಾಗುವಳಿದಾರರು ಹಾಗೂ ಗೇಣಿದಾರರು, ಮೂರನೆಯದಾಗಿ ಗೇಣಿದಾರರು, ನಾಲ್ಕನೆಯದಾಗಿ ಕೃಷಿ ಕಾರ್ಮಿಕರು.

ಮೇ ತಿಂಗಳು ಕೊನೆಯಿಂದ ಕೃಷಿ ಕೆಲಸ ಪ್ರಾರಂಭವಾಗುತ್ತದೆ. ಅರಣ್ಯದಿಂದ ಉರುವಲವನ್ನು ತಂದು ರಾಶಿ ಹಾಕುತ್ತಾರೆ. ಮನೆಯ ಗೊಬ್ಬರದ ಜೊತೆಗೆ ಒಣ ಎಲೆಯನ್ನು ಸೇರಿಸಿ ಭೂಮಿಯಲ್ಲಿ ಹರಡುತ್ತಾರೆ. ಆಮೇಲೆ ಭೂಮಿಯನ್ನು ಊಳುಮೆ ಮಾಡುತ್ತಾರೆ. ಗೊಬ್ಬರ ಬೀರುವುದು, ಕಳೆ ತೆಗೆಯುವುದು ಎಲ್ಲವೂ ಮಹಿಳೆಯರಿಗೆ ಮೀಸಲು. ನವಂಬರ ನಂತರ ಶಿಷ್ಠರ ಮನೆಯ ತೋಟದಲ್ಲಿ ದುಡಿಯುತ್ತಾರೆ. ಈ ಪ್ರದೇಶದ ಶಿಷ್ಠರ ಮನೆಯ ಏಲಕ್ಕಿ, ಮೆಣಸು, ತೆಂಗು, ಅಡಿಕೆ ತೋಟಗಳಲ್ಲಿ ಹಾಲಕ್ಕಿ ಮಹಿಳೆಯರಯ ದುಡಿಮೆ ಮಾಡುತ್ತಾರೆ. ಈ ಸಮಯದಲ್ಲಿ ಹಾಲಕ್ಕಿ ಮಹಿಳೆಯರು ಎಲ್ಲ ತರಹದ ಕಾಯಿಪಲ್ಲೆಗಳನ್ನು ಬೆಳೆಯುತ್ತಾರೆ. ಮಳೆಗಾಲದ ನಂತರ ಹವ್ಯಕರ ತೋಟದಲ್ಲಿ ದುಡಿಮೆ ಮಾಡಲು ಶಿರಸಿ, ಸಿದ್ಧಾಪುರ ಹಾಗೂ ಯಲ್ಲಾಪುರಕ್ಕೆ ಹಾಲಕ್ಕಿ ಮಹಿಳೆಯರು ಹೋಗುತ್ತಾರೆ.

ಈ ಪ್ರದೇಶದಲ್ಲಿ ವಿವಿಧ ಸಾಮಾಜಿಕ ಗುಂಪಿನ ನಡುವಿನ ಸಂಬಂಧ ಉತ್ತಮವಾಗಿದೆ. ಗೇಣಿದಾರರ ಕಷ್ಟದ ಸಂದರ್ಭದಲ್ಲಿ ಗೇಣಿ ರಿಯಾಯಿತಿ ಮಾಡಿದ ಒಡೆಯರಿದ್ದಾರೆ. ಆಳುಗಳನ್ನು ಮಕ್ಕಳಂತೆ ನೋಡಿಕೊಂಡವರು ಇದ್ದಾರೆ. ಹಾಲಕ್ಕಿಗಳೂ ಸಹ ಪ್ರಾಮಾಣಿಕತೆಯಿಂದ ವಿಧೇಯರಾಗಿ ಸೇವೆ ಸಲ್ಲಿಸಿದ್ದಾರೆ.

ಹಾಲಕ್ಕಿಗಳು ಬೇಟೆಯಲ್ಲಿ ನುರಿತವರು, ಹಾಲಕ್ಕಿಗಳು ಜಿಂಕೆ, ಮೊಲ, ಹಂದಿ ಕಡವೆ ಮೊದಲಾದ ಪ್ರಾಣಿಗಳನ್ನು ಬೇಟೆಯಾಡುತ್ತಿದ್ದರು. ಬೇಟೆಯ ಮಾಂಸವನ್ನು ಇದೇ ಕೊಪ್ಪಕ್ಕೆ ಹಂಚಲಾಗುತ್ತಿತ್ತು. ಸಮುದ್ರ ತೀರದಲ್ಲಿ ನೆಲೆನಿಂತ ಹಾಲಕ್ಕಿಗಳು ಮೀನನ್ನು ಹಿಡಿಯುತ್ತಾರೆ. ಇವರು ಸಿಗಡಿ, ಏಡಿ, ಆಮೆ ಇತರೆ ಮೀನುಗಳನ್ನು ಆಹಾರವಾಗಿ ಬಳಸುತ್ತಾರೆ.

ಅರಣ್ಯದ ಗಿಡಮೂಲಿಕೆ ಬಗ್ಗೆ ಅಪಾರ ಜ್ಞಾನವನ್ನು ಹೊಂದಿದ ಹಾಲಕ್ಕಿಗಳು ಜ್ವರ, ಸಂಧಿವಾತ, ಕಾಯಿಲೆಗೆ ಔಷಧವನ್ನು ನೀಡುತ್ತಿದ್ದರು. ದನಕರುಗಳಿಗೆ ಸಹ ಔಷಧಿಯನ್ನು ನೀಡುತ್ತಿದ್ದರು.

ಸಾಮಾಜಿಕವಾಗಿ ಪರಿಶಿಷ್ಟರಿಗಿಂತ ಮೇಲಿನ ಸ್ಥಾನದಲ್ಲಿರುವ ಹಾಲಕ್ಕಿಗಳು ಪರಿಶಿಷ್ಟರ ಮನೆಯಲ್ಲಿ ಊಟವನ್ನು, ಶ್ರಮವನ್ನು ಮಾಡುತ್ತಿರಲಿಲ್ಲ. ಶಿಷ್ಟರ ಮನೆಯೊಳಗೆ, ದೇವಸ್ಥಾನದೊಳಗೆ ಹಾಲಕ್ಕಿಗಳಿಗೆ ಪ್ರವೇಶವಿದೆ. ಹೀಗಾಗಿ ದೇವಸ್ಥಾನದ ಎಲ್ಲಾ ಕಾರ್ಯಕ್ರಮದಲ್ಲಿಯೂ ಶ್ರಮದ ಕಾರ್ಯವನ್ನು ಹಾಲಕ್ಕಿಗಳೇ ನಿರ್ವಹಿಸುತ್ತಿದ್ದರು.

ಹಂಚಿಕೆ ಮತ್ತು ವಿನಿಮಯ

ಸರಳ ಬುಡಕಟ್ಟು ಸಮಾಜದಲ್ಲಿ ಪ್ರತ್ಯೇಕವಾದ ಆರ್ಥಿಕ ಚಟುವಟಿಕೆ ಎಂಬುದು ಇಲ್ಲ. ಆರ್ಥಿಕ, ಧಾರ್ಮಿಕ ಹಾಗೂ ರಾಜಕೀಯ ಎಲ್ಲವೂ ಒಟ್ಟೊಟ್ಟಿಗೆ ಇರುತ್ತದೆ. ಪ್ರಾರಂಭದಲ್ಲಿ ಕುಂದ್ರಿ ಬೇಸಾಯದಲ್ಲಿ ತೊಡಗಿ, ನಂತರ ನೆಲೆಗೊಂಡ ಬೇಸಾಯ ಪದ್ಧತಿಯಲ್ಲಿ ನೆಲೆನಿಂತವರು. ಇವರಲ್ಲಿ ಉಡುಗೊರೆ ನೀಡುವ ಸಂಪ್ರದಾಯ ಇದೆ. ಇದರಿಂದಾಗಿ ಸಾಮಾಜಿಕ ಸಂಬಂಧಗಳು ಗಟ್ಟಿಗೊಳ್ಳುತ್ತವೆ. ಮಗುವಿನ ನಾಮಕರಣ ಸಂಧರ್ಭದಲ್ಲಿ ತೀರಹುತ್ತಿರದ ಸಂಬಂಧಿಕರ ಉಡುಗೊರೆಯನ್ನು ನೀಡುತ್ತಾರೆ. ನಂತರ ಸಿಹಿ ಊಟವನ್ನು ಮಾಡುತ್ತಾರೆ.

ಗಂಡು ಮಗುವಿಗೆ ಚೋಳಂಗಿ (ತಲೆಗೂದಲು) ತೆಗೆಯುವ ವಿಶೇಷ ಪದ್ಧತಿಯಿದೆ. ಹಾಲಕ್ಕಿಗಳು ವಿವಾಹ ಸಂದರ್ಭದಲ್ಲಿ ಹೆಚ್ಚು ವೆಚ್ಚ ಮಾಡುತ್ತಾರೆ. ವಿವಾಹಕ್ಕೆ ಸುಮಾರು ರೂ. ೧೦೦/- ವೆಚ್ಚ ಮಾಡುತ್ತಿದ್ದರು. (ಗೆಜೆಟಿರಿಯನ್ ೧೮೮೩) ಆಗ, ವಧುದಕ್ಷಿಣೆಯು ರೂ. ೩೦/- ಇತ್ತು. ಹೆಣ್ಣು ಮಗಳು ಮನೆ ಬಿಟ್ಟು ಹೋಗುವುದರಿಂದ ಆ ಮನೆಯ ದುಡಿಮೆಗೆ ಆಗುವ ನಷ್ಟಕ್ಕೆ ಪರಿಹಾರವಾಗಿ ವಧುದಕ್ಷಿಣೆ ನೀಡುವ ಪದ್ಧತಿಯಿತ್ತು.

ಶವ ಸಂಸ್ಕಾರದ ಸಂಧರ್ಭದಲ್ಲಿ ಹೆಚ್ಚಿನ ವೆಚ್ಚ ಭರಿಸಬೇಕಾಗುತ್ತಿತ್ತು. ಹೆಣವನ್ನು ಸುಡುಲಾಗುತ್ತದೆ. ನಂತರದ ಕ್ರಿಯಾಕರ್ಮಗಳಿಗೆ ಸಾಕಷ್ಟು ವೆಚ್ಚ ಭರಿಸುತ್ತಾರೆ.

ಸಾಂಪ್ರದಾಯಿಕ ಸಂಬಂಧಗಳು

ಸಾಂಪ್ರದಾಯಿಕ ಆರ್ಥಿಕತೆಯಲ್ಲಿ ನಿಕಟವಾದ ಸಂಬಂಧವನ್ನು ಕಾಣುತ್ತೇವೆ. ಕೃಷಿ ಆರ್ಥಿಕತೆಯಲ್ಲಿ ವಿವಿಧ ಸಮಾಜದ ಗುಂಪುಗಳು ಸೇವೆಯನ್ನು ಸಲ್ಲಿಸುತ್ತಾರೆ. ಇದೊಂದು ಜಾತಿ ಸಂಬಂಧಿಗಳ ಕೊಡುವ-ತೆಗೆದುಕೊಳ್ಳುವವರ (ಸೇವೆ ಸರಕು) ಕ್ರಿಯೆಯಾಗಿರುತ್ತವೆ. ಬೆಳೆ ಬಂದ ಮೇಲೆ, ಕಮ್ಮಾರನಿಗೆ, ಅಗಸನಿಗೆ ಹಾಗೂ ಕುಂಬಾರನಿಗೆ ವಾರ್ಷಿಕ ಧಾನ್ಯವನ್ನು ನೀಡಲಾಗುತ್ತದೆ.

ಸಾಂಪ್ರದಾಯಿಕ ಹಾಲಕ್ಕಿಗಳಲ್ಲಿ ಜಾತಿ ಬುಡಕ್ಕೆ ವಂತಿಗೆಯನ್ನು ಸಂಗ್ರಹಿಸುವ ಪದ್ಧತಿ ಇತ್ತು. ಜಾತಿ ಬುಡಕ್ಕೆ ತಮ್ಮ ಶಕ್ತಿಗೆ ಅನುಸಾರವಾಗಿ ವಂತಿಗೆ ನೀಡುತ್ತಿದ್ದರು.

ಸಾಂಪ್ರದಾಯಿಕ ಸಮಾಜವು ತನ್ನ ಸಮುದಾಯದ ಸದಸ್ಯರ ಮೇಲೆ ನಿಯಂತ್ರಣವನ್ನು ಹೊಂದಿತ್ತು. ಸದಸ್ಯರ ದುರ್ನಡತೆಗೆ ಶಿಕ್ಷಿಸುವ ಅಥವಾ ದಂಡ ಹಾಕುವ ಅಧಿಕಾರವಿತ್ತು.

ಸಾಲ-ಉಳಿತಾಯ

ಹಾಲಕ್ಕಿಗಳು ಜೀವನಾಧಾರ ಕೃಷಿಯನ್ನು ಮಾಡುತ್ತಿದ್ದರಿಂದ ಉಳಿತಾಯ ಮಾಡಲು ಸಾಧ್ಯವಾಗುತ್ತಿರಲಿಲ್ಲ. ಸಾಂಪ್ರದಾಯಿಕ ಕೃಷಿಯಲ್ಲಿ ಹಬ್ಬ-ಹರಿದಿನಗಳಿಗೆ ವಿಶೇಷವಾದ ಮಹತ್ವವಿತ್ತು. ಇದರಿಂದ ಹೆಚ್ಚಿನ ವೆಚ್ಚವನ್ನು ಮಾಡಬೇಕಾಗುತ್ತಿತ್ತು. ಹಾಲಕ್ಕಿಗಳು ದೀಪಾವಳಿ, ತುಳಸಿ, ಯುಗಾದಿ, ಸುಗ್ಗಿ ಹಾಗೂ ಹಗರಣಕ್ಕೆ ಬಹಳ ವೆಚ್ಚ ಮಾಡುತ್ತಿದ್ದರು.

ಕೋಷ್ಟಕ ೧

ಆದಾಯ ಮತ್ತು ವೆಚ್ಚ ಪಟ್ಟಿ

	ಆದಾಯದ ಪಟ್ಟಿ	
೧.	ಕೂಲಿ	
	ಪುರುಷರಿಗೆ	ನಾಲ್ಕು ಆಣೆ
	ಮಹಿಳೆಯರಿಗೆ	ಎರಡು ಆಣೆ
೨.	ಚಾಪೆ	ರೂ. ೧.೦೦
೩.	ನಾಟೀ ಔಷಧಿ	ರೂ. ೩.೦೦.

ವೆಚ್ಚದ ಪಟ್ಟಿ			
೧. ಸಂಸ್ಕೃತಿಯ ವೆಚ್ಚ			
೧. ಹೋಳಿ, ಸುಗ್ಗಿ ಗುಮಟೆ ಪಾಂಗ್		ರೂ.೧೦ರಿಂದ ರೂ. ೪೦.೦೦	
೨. ಕೂಟದ ವೆಚ್ಚ		ರೂ.೧೦೦ರಿಂದ ರೂ. ೩೦೦.೦೦	
೩. ಹರಿದಿನದ ವೆಚ್ಚ		ರೂ.೨೦.೦೦ರಿಂದ ರೂ.೪೦.೦೦	
೨. ವಿವಾಹ ವೆಚ್ಚ			
ಹೆಣ್ಣಿನವರಿಗೆ		ಗಂಡಿನವರಿಗೆ	
ಹಬ್ಬದೂಟ	ರೂ. ೪೦.೦೦	ವರದಕ್ಷಿಣೆ	ರೂ .೩೦.೦೦
ಬಟ್ಟೆ+ಆಭರಣ	ರೂ. ೬೦.೦೦	ಬಟ್ಟೆ+ಆಭರಣ	ರೂ .೩೦.೦೦
		ಹಬ್ಬದೂಟ	ರೂ. ೪೦.೦೦
ಒಟ್ಟು	ರೂ. ೧೦೦.೦೦	ಒಟ್ಟು	ರೂ. ೧೦೦.೦೦
೩. ಇತರೆ ವೆಚ್ಚ			
೧. ವಿಧವಾ ವಿವಾಹ			ರೂ. ೨.೦೦
೨. ಪ್ರಸೂತಿ ವೆಚ್ಚ			ರೂ. ೩.೦೦
೩. ಹೊಸಬಟ್ಟೆಗೆ		ರೂ. ೪.೦೦ರಿಂದ	೬.೦೦
೪. ಕರಿಮಣಿ ಸರ		ರೂ. ೧.೦೦ರಿಂದ	೪.೦೦
೫. ಬೆಳ್ಳಿ ನೆಕ್ಲೆಸ್		ರೂ. ೧೦.೦೦ರಿಂದ	೫೦.೦೦
೬. ಕುಟುಂಬದ ವೆಚ್ಚ ೫ ಜನಕ್ಕೆ			ರೂ. ೫.೦೦
೭. ಮನೆಕಟ್ಟುವುದು		ರೂ. ೨೦.೦೦ರಿಂದ	೫೦೦.೦೦
೮. ತಿರುಪತಿ ಹೋಗಲು ತಗಲುವ ವೆಚ್ಚ ರೂ.		೫.೦೦ರಿಂದ	೧೦೦೦.೦೦
೯. ದಂಡದ ವೆಚ್ಚ			ರೂ. ೧೬.೦೦

(ಮೂಲ: ಮುಂಬಯಿ ಗೆಜೆಟಿಯರ್ ೧೮೮೩)

ಇವರ ಸಂಸ್ಕೃತಿಯ ಆಚರಣೆ ಶ್ರೀಮಂತವಾಗಿರುವುದರಿಂದ ವೆಚ್ಚವು ಅಧಿಕವಾಗಿದೆ. ಹಾಲಕ್ಕಿಗಳ ಆದಾಯಕ್ಕಿಂತ ವೆಚ್ಚದ ಪ್ರಮಾಣವು ಅಧಿಕವಾಗಿರುವುದು ಕಂಡುಬರುವುದು. ಹೀಗಾಗಿ ಹಾಲಕ್ಕಿಗಳು ಸಾಲವನ್ನು ಮಾಡುತ್ತಿದ್ದರು. ಹಾಲಕ್ಕಿಗಳು ಶೇ. ೧೨ರಿಂದ ಶೇ. ೧೪ರಷ್ಟು ಬಡ್ಡಿಯನ್ನು ಕೊಟ್ಟು ಸಾಲವನ್ನು ಪಡೆಯುತ್ತಿದ್ದರು. ಕೊನೆಗೆ ಸಾಲವನ್ನು ತೀರಿಸಲು ಅವರಿಂದ ಸಾಧ್ಯವಾಗದೆ ಆರ್ಥಿಕ ಶೋಷಣೆಗೆ ಒಳಗಾಗುತ್ತಿದ್ದರು.

೫.೨. ಡೆಮೋಗ್ರಾಫಿ ಮತ್ತು ಸಾಕ್ಷರತಾಮಟ್ಟದಲ್ಲಿ ಪರಿವರ್ತನೆ

ಈ ಅಧ್ಯಾಯದಲ್ಲಿ ಹಾಲಕ್ಕಿಗಳ ಜನಸಂಖ್ಯೆಯ ಗಾತ್ರದಲ್ಲಿ ರಚನೆಯಲ್ಲಿ ಉಂಟಾಗುತ್ತಿರುವ ಬದಲಾವಣೆಯನ್ನು ವಿಶ್ಲೇಷಿಸಲಾಗಿದೆ. ಏಕೆಂದರೆ ಇಂತಹ ಬದಲಾವಣೆಯು ಸಾಮಾಜಿಕ ಬದಲಾವಣೆಗಳಿಗೆ ಕಾರಣವಾಗಬಹುದು. ಹಾಲಕ್ಕಿ ಮಹಿಳೆಯರ ಸ್ಥಿತಿಯನ್ನು ಅರಿಯಲು ಲಿಂಗಾನುಪಾತ ವಿವಾಹದ ವಯಸ್ಸು, ಕುಟುಂಬದ ಗಾತ್ರ, ಶಿಕ್ಷಣದ ಮಟ್ಟ ಹಾಗೂ ಕುಟುಂಬ ಯೋಜನೆ ಮುಂತಾದ ಅಂಶಗಳನ್ನು ಬಳಸಿಕೊಳ್ಳಲಾಗಿದೆ.

ಜನಸಂಖ್ಯೆ : ಉತ್ತರ ಕನ್ನಡ ಜಿಲ್ಲೆಯ ಪ್ರಮುಖ ಜನಾಂಗಗಳಲ್ಲಿ ಹಾಲಕ್ಕಿ ಜನಾಂಗವು ಒಂದು ೧೮೮೩ರಲ್ಲಿ ಒಟ್ಟು ಹಾಲಕ್ಕಿ ಜನಸಂಖ್ಯೆ ೨೬,೩೯೫ ಎಂದು ದಾಖಲಿಸಲ್ಪಟ್ಟಿದೆ.

ಕೋಷ್ಟಕ ೫.೨

ಹಾಲಕ್ಕಿಗಳ ಜನಸಂಖ್ಯಾ ಮಾಹಿತಿ

ಕ್ರಸಂ.	ವರ್ಷ	ಹಾಲಕ್ಕಿ ಜನಸಂಖ್ಯೆ	ಉ.ಕ. ಜನಸಂಖ್ಯೆ
೧.	೧೮೮೩	೨೬,೩೯೫	೧,೦೮,೫೭೩
೨.	೧೯೪೫	೬೦,೦೦೦	೪,೪೧,೦೦೦
೩.	೨೦೦೧	೧,೦೨,೫೦೦	೧೩,೫೩,೬೪೪

(ಮೂಲ: ಮುಂಬಯಿ ಗೆಜೆಟಿಯರ್ ೧೮೮೩, ಡಾ. ದೇಸಾಯಿ ೧೯೪೫, ಹಾಲಕ್ಕಿ ಸಂಘದ ಮಾಹಿತಿ, ೨೦೦೧)

೧೯೮೩ ಹಾಲಕ್ಕಿಗಳ ಜನಸಂಖ್ಯೆಯ ಒಟ್ಟು ಜನ ಸಂಖ್ಯೆಯು ಶೇ. ೨೪.೩೧ರಷ್ಟಿದೆ. ೧೯೪೫ರಲ್ಲಿ ಒಟ್ಟು ಜನಸಂಖ್ಯೆಯು ಶೇ. ೧೩.೬ರಷ್ಟಿದೆ. ೨೦೦೧ರಲ್ಲಿ ಒಟ್ಟು ಜನಸಂಖ್ಯೆ ಶೇ. ೭೫೧ರಷ್ಟಿದೆ.

ಕೋಷ್ಟಕ ೫.೩

ತಾಲೂಕುವಾರು ಹಾಲಕ್ಕಿಗಳ ಜನಸಂಖ್ಯೆ

ಕ್ರಸಂ.	ತಾಲೂಕುಗಳ ಹೆಸರು	ಹಾಲಕ್ಕಿಗಳ ಗ್ರಾಮಗಳ ಸಂಖ್ಯೆ	ಕುಟುಂಬ ಸಂಖ್ಯೆ	ಅಂದಾಜು ಜನಸಂಖ್ಯೆ
೧.	ಕಾರವಾರ	೪೦	೨೫೦೦	೧೮೦೦೦
೨.	ಅಂಕೋಲಾ	೫೪	೩೭೩೫	೨೬,೦೦೦
೩.	ಕುಮಟಾ	೮೫	೪೨೨೫	೮೮,೦೦೦
೪.	ಹೊನ್ನಾವರ	೪೦	೨೫೫೦	೧೮,೦೦೦
೫.	ಶಿರಸಿ	೦೨	೧೨೦	೧೫೦೦
	ಒಟ್ಟು	೨೨೧	೧೩,೪೨೦	೧೦೨೫೦೦

(ಮೂಲ: ಹಾಲಕ್ಕಿ ಒಕ್ಕಲಿಗರ ಸಂಘ ೨೦೦೧)

ಉತ್ತರ ಕನ್ನಡ ಜಿಲ್ಲೆಯ ಒಟ್ಟು ಜನ ಸಂಖ್ಯೆಯಲ್ಲಿ ಹಾಲಕ್ಕಿಗಳ ಪ್ರಮಾಣವು ಶೇ. ೭.೫ ರಷ್ಟಿದೆ. ಅಂಕೋಲಾ ಸೀಮೆಯಲ್ಲಿ ಹಾಲಕ್ಕಿಗಳ ಪ್ರಮಾಣವು ಶೇ. ೨೬.೦೯ರಷ್ಟು ಒಟ್ಟು ಜನಸಂಖ್ಯೆಯಲ್ಲಿ ಶೇ. ೨೬.೦೯ರಷ್ಟಿದೆ. ಕುಮಟಾ ಸೀಮೆಯ ಒಟ್ಟು ಜನಸಂಖ್ಯೆಯಲ್ಲಿ ಹಾಲಕ್ಕಿಗಳ ಜನಸಂಖ್ಯೆಯ ಪ್ರಮಾಣವು ಶೇ. ೨೬.೦೫ರಷ್ಟಿದೆ. ಜಿಲ್ಲೆಯ ಒಟ್ಟು ಹಾಲಕ್ಕಿಗಳ ಜನಸಂಖ್ಯೆಯಲ್ಲಿ ಅನುಕ್ರಮವಾಗಿ ಅಂಕೋಲಾ ಸೀಮೆಯಲ್ಲಿ ಶೇ. ೨೫.೮೫ರಷ್ಟು ಕುಮಟಾದಲ್ಲಿ ಸೀಮೆಯಲ್ಲಿ ಶೇ. ೩೭.೦೭ರಷ್ಟು ಇದ್ದಾರೆ.

ಕೋಷ್ಟಕ ೫.೪

ಅಧ್ಯಯನ ಸೀಮೆಯ ಹಾಲಕ್ಕಿಗಳ ಜನಸಂಖ್ಯೆ

ಕ್ರಸಂ.	ವಿವರ	ಉ.ಕ. ಜಿಲ್ಲೆ	ಅಂಕೋಲಾ	ಕುಮಟಾ
೧.	ಜನಸಂಖ್ಯೆ	೧೩,೫೩,೬೪೪	೧,೦೧,೫೪೯	೧,೪೫,೮೨೬
೨.	ಹಾಲಕ್ಕಿಗಳ ಜನಸಂಖ್ಯೆ	೧,೦೨,೫೦೦	೨೬,೫೦೦	೩೮,೦೦೦

(ಮೂಲ: ಹಾಲಕ್ಕಿ ಒಕ್ಕಲಿಗರ ಸಂಘ ೨೦೦೧)

ಅನುಷಂಗಿಕ ಮಾಹಿತಿಯ ಆಧಾರ ಮೇಲಿಂದ ಹಾಲಕ್ಕಿಗಳ ಜನಸಂಖ್ಯೆಯಲ್ಲಿ ಇಳಿಕೆ ಯಾಗುತ್ತಿರುವುದು ಕಂಡುಬರುವುದು. ಹಾಲಕ್ಕಿಗಳ ಉತ್ತರ ಕನ್ನಡ ಜಿಲ್ಲೆಯ ಕರಾವಳಿ

ಪ್ರದೇಶಕ್ಕೆ ಮಾತ್ರ ಸೀಮಿತವಾದರು ಇಂದು. ಘಟ್ಟದ ಮೇಲಿನ ಭಾಗವಾದ ಶಿರಸಿ ಯವರೆಗೆ ಚಲನೆ ಹೊಂದಿರುವುದು ಕಂಡುಬರುತ್ತದೆ.

ಕೋಷ್ಟಕ ೫.೫

ಆಯ್ದ ಕುಟುಂಬಗಳ ಜನಸಂಖ್ಯೆಯ ಗಾತ್ರ ಮತ್ತು ರಚನೆಯ ಪಟ್ಟಿ

ಕ್ರಸಂ.	ವಿವರಣೆ	ಅಂಕೋಲಾ	ಕುಮಟಾ	ಒಟ್ಟು
೧.	ಮಕ್ಕಳು	೧೯೦	೨೩೯	೪೨೯
೨.	ಪಾಲಕರು	೧೭೧	೧೯೯	೩೮೦
೩.	ಒಟ್ಟು	೩೬೧	೪೩೯	೭೯೯
೪.	ಮಹಿಳೆಯರು	೧೭೨	೨೦೨	೩೭೪
೫.	ಪುರುಷರು	೧೮೯	೨೩೬	೪೨೫
೬.	ಲಿಂಗಾನುಪಾತ	೯೧೦	೮೫೬	೮೮೦
೭	ಕುಟುಂಬದ ಗಾತ್ರ	೪.೨	೪.೩	೪.೩
೮.	ವಿವಾಹದ ವಯಸ್ಸು	<೨೦ ಅಧಿಕ	<೨೦ ಅಧಿಕ	<೨೦ ಅಧಿಕ

(ಮೂಲ: ಕ್ಷೇತ್ರಕಾರ್ಯದ ಮಾಹಿತಿ)

ಹಾಲಕ್ಕಿಗಳ ಲಿಂಗಾನುಪಾತದಲ್ಲಿ ಅಸಮಾನತೆ ಕಂಡುಬರುತ್ತದೆ. ಈ ಅಸಮಾನತೆ ಪ್ರಮಾಣವು ಅಂಕೋಲಾ ಸೀಮೆಯಲ್ಲಿ ಕಡಿಮೆ ಪ್ರಮಾಣದಲ್ಲಿದೆ. ಹಾಲಕ್ಕಿಗಳ ಕುಟುಂಬದ ಗಾತ್ರವು ಚಿಕ್ಕದಾಗಿದೆ.

ಪ್ರತಿಕೂಲವಾದ ಲಿಂಗಾನುಪಾತವು ಹಾಲಕ್ಕಿ ಮಹಿಳೆಯರ ಕೆಳಗಿನ ಸ್ಥಾನವನ್ನು ಸೂಚಿಸುತ್ತದೆ. ಮಹಿಳೆಯರ ಲಿಂಗಾನುಪಾತದ ಇಳಿಕೆಯ ಪ್ರಮಾಣವನ್ನು ಸಮಾಜವು ಗಂಭೀರವಾಗಿ ಪರಿಗಣೀಸಬೇಕಾಗಿದೆ. ಇದು ಸಮಾಜದಲ್ಲಿ ಪುರುಷ ಮತ್ತು ಮಹಿಳೆಯರ ನಡುವಿನ ಅಸಮಾನತೆಯನ್ನು ಸೂಚಿಸುತ್ತದೆ.

ಕೋಷ್ಟಕ ೫.೬

ಪ್ರತಿನಿಧಿಸಿದ ಮಹಿಳೆಯರ ವಯಸ್ಸಿನ ಮಾಹಿತಿ

ಕ್ರಸಂ.	ಮಹಿಳೆಯರ ವಯಸ್ಸು				ಅಂಕೋಲಾ	ಕುಮಟಾ	ಒಟ್ಟು
೧.	೨೦ರಿಂದ	೩೦	೧೪	೧೬.೪೧	೩೨	೪೬	೨೪.೮೬
೨.	೩೦ರಿಂದ	೪೦	೩೯	೪೫.೮೮	೫೬	೯೫	೫೧.೩೫
೩.	೪೦ರಿಂದ	೪೫	೨೪	೨೮.೨೩	೦೬	೩೦	೧೬.೨೧
೪.	೪೫ಕ್ಕಿಂತ ಹೆಚ್ಚಿಗೆ		೦೮	೯.೪೧	೦೬	೧೪	೭.೫೬
	ಒಟ್ಟು		೮೫		೧೦೦	೧೮೫	

(ಮೂಲ: ಕ್ಷೇತ್ರಕಾರ್ಯ ಮಾಹಿತಿ)

ಪ್ರತಿನಿಧಿಸಿದವರಲ್ಲಿ ಶೇ. ೫೧ರಷ್ಟು ಮಹಿಳೆಯರು ೩೦ರಿಂದ ೪೦ ವರ್ಷದವರು. ಶೇ. ೨೪ರಷ್ಟು ಪ್ರತಿನಿಧಿಸಿದವರು ೨೦ರಿಂದ ೩೦ ವರ್ಷದವರು. ಅಧ್ಯಯನಕ್ಕೆ ಮಧ್ಯಮ ಮತ್ತು ಕಿರಿಯ ವಯಸ್ಸಿನವರನ್ನು ಆರಿಸಿಕೊಳ್ಳಲಾಗಿದೆ. ಏಕೆಂದರೆ, ಇವರು ಬದಲಾವಣೆಯ ಏಜೆಂಟರುಗಳಾಗಿರುತ್ತಾರೆ.

ಕೋಷ್ಟಕ ೫.೭

ಕುಟುಂಬ ಯೋಜನೆಯ ಮಾಹಿತಿ

ಕ್ರಸಂ.	ವಿವರಣೆ	ಅಂಕೋಲಾ	ಕುಮಟಾ	ಒಟ್ಟು
೧.	ಕುಟುಂಬದ ಗಾತ್ರ	೪.೨	೪.೩	೪.೩
೨.	ಕುಟುಂಬ ಶಸ್ತ್ರ ಚಿಕಿತ್ಸೆ ಒಳಗಾದ ಮಹಿಳೆಯರು	೭೫	೭೬	೧೫೧
೩.	ಆಸ್ಪತ್ರೆಯಲ್ಲಿ ಹೆರಿಗೆ	೮೧	೧೦೦	೧೮೧
೪.	ಮಹಿಳಾ ಸಾಕ್ಷರತೆ	೫೬.೪೭	೪೫.೦೦	೫೦.೨೭

(ಮೂಲ: ಕ್ಷೇತ್ರಕಾರ್ಯ ಮಾಹಿತಿ)

ಇಂದು ಹಾಲಕ್ಕಿಗಳ ಕುಟುಂಬದ ಗಾತ್ರದಲ್ಲಿ ಬದಲಾವಣೆ ಕಂಡುಬರುತ್ತದೆ. ಶೇ. ೪೮ರಷ್ಟು ಕುಟುಂಬಗಳು ಎರಡೇ ಮಕ್ಕಳನ್ನು ಹೊಂದಿದ್ದಾರೆ. ಶೇ. ೮.೧೧ರಷ್ಟು ಕುಟುಂಬಗಳು ಒಂದು ಮಗುವನ್ನು ಹೊಂದಿವೆ. ಶೇ. ೪೦ರಷ್ಟು ಕುಟುಂಬಗಳು ಮೂವರು ಮಕ್ಕಳನ್ನು ಹೊಂದಿವೆ.

ಹಾಗೂ ಶೇ. ೨.೧೬ರಷ್ಟು ಕುಟುಂಬಗಳು ಮಾತ್ರ ನಾಲ್ಕು ಮಕ್ಕಳನ್ನು ಹೊಂದಿವೆ. ಚಿಕ್ಕ ಕುಟುಂಬವು ಮಹಿಳೆಯ ಸ್ಥಿತಿ ಉತ್ತಮಗೊಳ್ಳುವ ಸಾಧನವಾಗಿದೆ. ಶೇ. ೮೧.೬೨ರಷ್ಟು ಮಹಿಳೆಯರು ಕುಟುಂಬ ಯೋಜನೆಯ ಶಸ್ತ್ರ ಚಿಕಿತ್ಸೆ ಮಾಡಿಸಿಕೊಂಡಿದ್ದಾರೆ. ಇದು ಕೂಡಾ ಒಂದು ಮಹತ್ವ ಬದಲಾವಣೆ ಶೇ. ೧೦೦ರಷ್ಟು ಹೆರಿಗೆಗಳು ಆಸ್ಪತ್ರೆಯಲ್ಲಿ ಇಂದು ನಡೆಯುತ್ತಿವೆ. ಹಾಲಕ್ಕಿಗಳಲ್ಲಿ ಆರೋಗ್ಯದ ಬಗ್ಗೆ ಸಂಪೂರ್ಣ ಕಾಳಜಿ ಇರುವುದು ತಿಳಿದುಬರುತ್ತದೆ. ಇದಕ್ಕೆಲ್ಲ ಕಾರಣವೆಂಬಂತೆ ಹಾಲಕ್ಕಿ ಮಹಿಳೆಯರ ಸಾಕ್ಷರತೆಯ ಪ್ರಮಾಣದಲ್ಲಿ ಕೂಡಾ ಏರಿಕೆ ಉಂಟಾಗಿದೆ. ಹಾಲಕ್ಕಿ ಮಹಿಳೆಯರಲ್ಲಿ ಶೇ. ೫೦.೨೭ರಷ್ಟು ಸಾಕ್ಷರತೆ ಉಂಟಾಗಿದೆ.

ಕೋಷ್ಟಕ ೫.೮

ಹಾಲಕ್ಕಿ ಕುಟುಂಬದ ಮಕ್ಕಳ ಪಟ್ಟಿ

ಕ್ರಸಂ.	ವಿವರಣೆ	ಅಂಕೋಲಾ ಕುಟುಂಬದ ಸಂಖ್ಯೆ	ಕುಮಟಾ ಕುಟುಂಬದಸಂಖ್ಯೆ	ಒಟ್ಟು ಕುಟುಂಬದ ಸಂಖ್ಯೆ
೧.	ಮಕ್ಕಳಿಲ್ಲದ ಕುಟುಂಬಗಳು	೪	೦	೪
೨.	ಒಂದು ಮಗು	೫	೧೦	೧೫
೩.	ಇಬ್ಬರು ಮಕ್ಕಳು	೪೩	೪೫	೮೮
೪.	ಮೂವರು ಮಕ್ಕಳು	೩೩	೪೧	೭೪
೫.	ನಾಲ್ಕು ಮಕ್ಕಳು	೦೦	೦೪	೦೪
೬.	ಐದು ಮಕ್ಕಳು	೦೦	೦೦	೦೦
	ಒಟ್ಟು	೮೫	೧೦೦	೧೮೫

(ಮೂಲ: ಕ್ಷೇತ್ರಕಾರ್ಯದ ಮಾಹಿತಿ)

ಒಟ್ಟು ಹಾಲಕ್ಕಿಗಳ ಕುಟುಂಬದ ಸರಾಸರಿ ಗಾತ್ರದ ಪ್ರಮಾಣ ಶೇ. ೪.೨ರಷ್ಟಿದೆ. ಹಾಗೂ ಶೇ. ೪೦ರಷ್ಟು ಕುಟುಂಬಗಳು ಇಬ್ಬರು ಮಕ್ಕಳನ್ನು ಶೇ. ೩೮.೫೨ರಷ್ಟು ಕುಟುಂಬಗಳು ಮೂವರು ಮಕ್ಕಳನ್ನು ಹೊಂದಿವೆ. ಕುಮಟಾ ಸೀಮೆಯಲ್ಲಿ ಶೇ. ೪೫ರಷ್ಟು ಕುಟುಂಬವು ಇಬ್ಬರು ಮಕ್ಕಳನ್ನು ಹಾಗೂ ಶೇ. ೪೧ರಷ್ಟು ಕುಟುಂಬವು ಮೂವರು ಮಕ್ಕಳನ್ನು ಹೊಂದಿರುವರು.

ಕುಟುಂಬ ಗಾತ್ರದ ಚಿಕ್ಕದಾಗುವಲ್ಲಿ ಕುಟುಂಬ ಯೋಜನೆಯು ಮಹತ್ವದ ಪಾತ್ರವನ್ನು ವಹಿಸಿರುವುದು ಕಂಡುಬರುತ್ತದೆ. ಶೇ. ೮೧.೬೨ರಷ್ಟು ಕುಟುಂಬಗಳು ಕುಟುಂಬ ಯೋಜನೆಯ ಶಸ್ತ್ರಚಿಕಿತ್ಸೆಯನ್ನು (ಮಹಿಳೆಯರು) ಮಾಡಿಸಿಕೊಂಡಿದ್ದಾರೆ.

ಕೋಷ್ಟಕ ೫.೯

ಹಾಲಕ್ಕಿಗಳ ಶಿಕ್ಷಣಮಟ್ಟದ ಪಟ್ಟಿ

ಕ್ರಸಂ.	ವಿವರಣೆ	ಅಂಕೋಲಾ		ಕುಮಟಾ		ಒಟ್ಟು		ಒಟ್ಟು
		ಪು.	ಮ.	ಪು.	ಮ.	ಪು.	ಮ.	
೧.	ಶೂನ್ಯಮಟ್ಟ	೦೩	೦೫	೧೨	೧೯	೧೫	೨೪	೩೯
೨.	ಪ್ರಾಥಮಿಕ	೫೦	೪೮	೫೦	೪೫	೧೦೬	೯೩	೧೯೩
೩.	ಮಾಧ್ಯಮಿಕ	೨೬	೨೦	೩೨	೩೦	೫೨	೫೦	೧೦೨
೪.	ಬಿ.ಎ/ಬಿ.ಎಸ್ಸಿ	೦೬	೦೫	೦೪	೦೨	೧೦	೦೭	೧೭
೫.	ಬಿ.ಎಡ್	೦೨	೦೩	೦೧	೦೨	೦೩	೦೫	೦೮
೬	ಡಿ.ಎಡ್	೦೨	೦೪	೦೧	೦೨	೦೩	೦೬	೦೯
೭	ಎಂ.ಎ.	೦೨	೦೦	--	--	೦೨	--	೦೨

(ಮೂಲ: ಕ್ಷೇತ್ರಕಾರ್ಯದ ಮಾಹಿತಿ)

ಶಿಕ್ಷಣವು ಸಾಮಾಜಿಕ ಬದಲಾವಣೆ ಉಂಟುಮಾಡುವ ಒಂದು ಮುಖ್ಯವಾದ ಅಂಶವಾಗಿದೆ. ಶಿಕ್ಷಣ ಮತ್ತು ಅಭಿವೃದ್ಧಿ ಯಾವಾಗಲೂ ಧನಾತ್ಮಕ ಸಂಬಂಧವನ್ನು ಹೊಂದಿದೆ. ಒಟ್ಟು ಸಾಕ್ಷರತೆಯ ಪ್ರಮಾಣವು ಶೇ. ೫೨.೪೩ರಷ್ಟಿದೆ. ಅನುಕ್ರಮವಾಗಿ ಪ್ರಾಥಮಿಕ ಸಾಕ್ಷರತೆಯ ಪ್ರಮಾಣವು ಶೇ. ೫೨.೪೩ರಷ್ಟು, ಮಾಧ್ಯಮಿಕ ಸಾಕ್ಷರತೆಯು ಶೇ. ೨೭.೫೬ರಷ್ಟು, ಪದವಿ ಶಿಕ್ಷಣದ ಪ್ರಮಾಣ ಶೇ.೪.೫ರಷ್ಟು, ಬಿ.ಎಡ್. ಶಿಕ್ಷಣ ಪ್ರಮಾಣವು ಶೇ. ೦.೦೨ರಷ್ಟು, ಡಿಎಡ್. ೦.೦೫ರಷ್ಟು ಎಂ.ಎ. ಶೇ. ೦.೪೫ರಷ್ಟಿದೆ.

ಶೈಕ್ಷಣಿಕ ಮಟ್ಟದಲ್ಲಿ ಸುಧಾರಣೆ ಉಂಟಾಗಿದೆ. ಆದರೆ, ಶೈಕ್ಷಣಿಕ ಮಟ್ಟಗಳ ನಡುವೆ ಅಸಮಾನತೆಯನ್ನು ಗುರುತಿಸಲಾಗಿದೆ. ಶಿಕ್ಷಣದಲ್ಲಿ ಲಿಂಗ ಸಮಾನತೆ ಕಂಡು ಬರುತ್ತಿಲ್ಲ.

ಕೋಷ್ಟಕ ೫.೧೦

ಸಾಕ್ಷರತೆಯ ಶೇಕಡಾವಾರು

ಕ್ರಸಂ.	ವಿವರ	ಅಂಕೋಲಾ		ಕುಮಟಾ		ಒಟ್ಟು	
		ಪು.	ಮ.	ಪು.	ಮ.	ಪು.	ಮ.
೧.	ಶೂನ್ಯಮಟ್ಟ	೩.೫೨	೫.೮೮	೧೨	೧೯	೮.೧೦	೧೨.೯೭
೨.	ಪ್ರಾಥಮಿಕ	೫೯.೮೨	೫೬.೪೭	೫೦	೪೫	೫೪.೦೫	೫೦.೨೭
೩.	ಮಾಧ್ಯಮಿಕ	೧೦.೮೧	೨೩.೫೨	೩೨	೩೦	೨೮.೧೦	೨೭.೦೨
೪.	ಬಿಎ/ಬಿಎಸ್ಸಿ	೭೦೫	೫.೮	೦೪	೦೨	೫.೪	೩.೭೮
೫.	ಬಿ.ಎಡ್	೨.೩	೩.೫	೦೧	೦೨	೧.೬೨	೨.೭೦
೬	ಡಿ.ಎಡ್	೨.೩	೪.೭೦	೦೧	೦೨	೧.೬೨	೩.೨೪
೭	ಎಂ.ಎ.	೨.೩	--	--	--	೧.೦೮	--

(ಮೂಲ: ಕ್ಷೇತ್ರಕಾರ್ಯ ಮಾಹಿತಿ)

ಅಂಕೋಲಾ ಸೀಮೆಯಲ್ಲಿ ಸಾಕ್ಷರತೆಯ ಪ್ರಮಾಣವು ಕುಮಟಾ ಸೀಮೆಗಿಂತ ಉತ್ತಮವಾಗಿದೆ. ಸಾಕ್ಷರತೆಯ ಪ್ರಮಾಣದಲ್ಲಿ ಅಸಮಾನತೆ ಇದೆ. ಹಾಲಕ್ಕಿಗಳ ಸಾಕ್ಷರತಾ ಮಟ್ಟದಲ್ಲಿ ಉಂಟಾಗಿರುವ ಬದಲಾವಣೆಯು ಮೂರು ಮುಖ್ಯ ಮಾಹಿತಿಯ ಸೇರುವಿಕೆಯನ್ನು ಸೂಚಿಸುತ್ತದೆ.

ಕೋಷ್ಟಕ ೫.೧೧

ಇತ್ತೀಚಿನ ಶೈಕ್ಷಣಿಕ ಮಟ್ಟದ ಮಾಹಿತಿ

೨೦೦೬-೦೭

ಗೋಖಲೆ ಸೆಂಟನರಿ ಕಾಲೇಜು, ಅಂಕೋಲಾ

ವಿವರ	ಒಟ್ಟು ಸಂಖ್ಯೆ	ಹಾಲಕ್ಕಿ ಹುಡುಗರು	ಹಾಲಕ್ಕಿ ಹುಡುಗಿಯರು
ಪ್ರಥಮ ಪಿ.ಯು. (ಕಲಾ/ವಾಣಿಜ್ಯ)	೧೩೬	೧೯	೭
ಪ್ರಥಮ ಪಿ.ಯು. (ವಿಜ್ಞಾನ ವಿಭಾಗ)	೧೧೬	೦೨	೧
ದ್ವಿತೀಯ ಪಿ.ಯು (ಕಲಾ/ವಾಣಿಜ್ಯ)	೧೦೫	೧೬	೫
ದ್ವಿತೀಯ ಪಿ.ಯು (ಕಲಾ/ವಾಣಿಜ್ಯ)	೧೦೫	೦೧	೪

ದ್ವಿತೀಯ ಪಿ.ಯು (ವಿಜ್ಞಾನವಿಭಾಗ)	೧೧೦	—	—
ಬಿ.ಎ. ಪ್ರಥಮ	—	೧೧	೦೩
ಬಿ.ಎ. ದ್ವಿತೀಯ	೧೦೩	೧೪	೦೭
ಬಿ.ಎ.ತೃತೀಯ	೧೦೨	೧೨	೦೪
ಬಿ.ಎಸ್.ಸಿ.ಪ್ರಥಮ	೪೯	೦೩	೦೧
ಬಿ.ಎಸ್.ಸಿ.ದ್ವಿತೀಯ	೩೨	—	—
ಬಿ.ಎಸ್.ಸಿ.ತೃತೀಯ	೨೯	೦೧	೦೧
ಒಟ್ಟು	೮೮೯	೭೯	೩೩

೨೦೦೭-೦೮

ವರ್ಗ	ಒಟ್ಟು	ಹಾಲಕ್ಕಿ ಹುಡುಗರು	ಹಾಲಕ್ಕಿ ಹುಡುಗಿಯರು
ಪ್ರಥಮ ಪಿ.ಯು (ಕಲಾ/ವಾಣಿಜ್ಯ)	೧೩೪	೩೬	೦೯
ಪ್ರಥಮ ಪಿ.ಯು (ವಿಜ್ಞಾನ ವಿಭಾಗ)	೧೨೭	--	೦೨
ದ್ವಿತೀಯ ಪಿ.ಯು (ಕಲಾ/ವಾಣಿಜ್ಯ)	೧೧೬	೧೬	೦೬
ದ್ವಿತೀಯ ಪಿ.ಯು (ವಿಜ್ಞಾನ ವಿಭಾಗ)	೧೧೬	೦೨	೦೧
ಬಿ.ಎ.ಪ್ರಥಮ	೪೨	೦೫	೦೨
ಬಿ.ಎ. ದ್ವಿತೀಯ	೮೧	೦೯	೦೨
ಬಿ.ಎ. ತೃತೀಯ	೯೩	೧೨	೦೭
ಬಿ.ಎಸ್.ಸಿ.ಪ್ರಥಮ	೩೫	೦೧	೦೧
ಬಿ.ಎಸ್.ಸಿ.ದ್ವಿತೀಯ	೩೫	೦೨	೦೧
ಬಿ.ಎಸ್.ಸಿ. ತೃತೀಯ	೩೨	--	--
ಒಟ್ಟು	೮೧೧	೮೩	೩೧

(ಮೂಲ: ಗೋಖಲೆ ಸೆಂಟನರಿ ಕಾಲೇಜು, ಅಂಕೋಲಾ)

೨೦೦೬-೦೭ರಲ್ಲಿ ಒಟ್ಟು ವಿದ್ಯಾರ್ಥಿಗಳು ಹಾಲಕ್ಕಿ ವಿದ್ಯಾರ್ಥಿಗಳ ಪ್ರಮಾಣ ಶೇ. ೧೨.೬೨ರಷ್ಟಿದೆ. ೨೦೦೭-೦೮ರಲ್ಲಿ ಶೇ. ೧೪.೦೫ರಷ್ಟು ಏರಿಕೆಯಾಗಿದೆ. ಒಟ್ಟು ಹಾಲಕ್ಕಿಗಳಲ್ಲಿ ೨೦೦೬-೦೭ರಲ್ಲಿ ಹಾಲಕ್ಕಿ ಹುಡುಗಿಯರ ಪ್ರಮಾಣವು ಶೇ. ೪೧.೭೭ರಷ್ಟು ೨೦೦೭-೦೮ರಲ್ಲಿ ಈ ಪ್ರಮಾಣವು ಶೇ. ೩೭.೩೪ರಷ್ಟಿದೆ.

೫.೩. ದುಡಿಮೆ ಹಾಗೂ ಮಹಿಳೆ

ಪುರುಷರು ಮತ್ತು ಮಹಿಳೆಯರು ಹಾಲಕ್ಕಿ ಸಮುದಾಯದ ಎರಡು ಗುಂಪುಗಳಾಗಿವೆ. ಈ ಗುಂಪುಗಳ ನಡುವೆ ಶ್ರಮ ವಿಭಜನೆಯ ಮೂಲಕ ಜೀವನವನ್ನು ಸರಳ ಮಾಡಿಕೊಳ್ಳಲಾಗಿದೆ. ಆದರೆ, ಶ್ರಮ ವಿಭಜನೆಯ ವಯಸ್ಸು ಧರ್ಮ ಅಂಶಗಳ ಆಧಾರದ ಮೇಲೆ ಮಾಡಲ್ಪಟ್ಟಿವೆ. ಹಾಲಕ್ಕಿಗಳ ಆರ್ಥಿಕ ರಚನೆಯು ಕೃಷಿ, ಪಶುಸಂಗೋಪನೆ, ಅರಣ್ಯ ಮತ್ತು ಶ್ರಮದ ಮೂಲಕ ವಿವರಿಸಲಾಗುವುದು. ಮಹಿಳೆಯರು ಈ ಚಟುವಟಿಕೆಯಲ್ಲಿ ಪಾಲ್ಗೊಳ್ಳುವಿಕೆಯ ಪ್ರಮಾಣದಿಂದ ಅವರ ಕೊಡುಗೆಯ ಮಹತ್ವವನ್ನು ಅರಿಯಬಹುದಾಗಿದೆ.

ಮಹಿಳೆಯರ ದುಡಿಮೆಯನ್ನು ಮೂರು ರೀತಿಯಲ್ಲಿ ವಿಂಗಡಿಸಬಹುದು. ೧. ಪ್ರಜನೋತ್ಪತ್ತಿ ದುಡಿಮೆ ೨. ಕೌಟುಂಬಿಕ ದುಡಿಮೆ ಮತ್ತು ೩. ಉತ್ಪಾದನಾ ದುಡಿಮೆ. ಮಹಿಳೆಯ ದುಡಿಮೆ ಕೂಡಾ ಮಹತ್ವ ಅಂಗವಾಗಿದೆ. ವೃತ್ತಿ, ಗ್ರಾಮ/ನಗರ, ಕೌಟುಂಬಿಕ ಗಾತ್ರ, ಶಿಕ್ಷಣದ ಮಟ್ಟದ ಮೇಲಿಂದ ಆದಾಯವು ವ್ಯತ್ಯಾಸಗೊಳ್ಳುತ್ತದೆ. ಹಾಲಕ್ಕಿ ಸಮುದಾಯದಲ್ಲಿ ಮನೆಯೊಳಗಿನ ಎಲ್ಲಾ ದುಡಿಮೆಯು ಮಹಿಳೆಯರಿಗೆ ಮೀಸಲು, ಮನೆಯ ಪಾತ್ರೆ, ಬಟ್ಟೆ ಸ್ವಚ್ಛಗೊಳಿಸುವಿಕೆ, ಮಕ್ಕಳ ಆರೈಕೆ, ನೀರು ಸಂಗ್ರಹಣೆ ದನಕರುಗಳ ಆರೈಕೆ, ಮನೆಯ ಅಥವಾ ಬೇಲಿಯ ರಿಪೇರಿ ಹಾಗೂ ಆಹಾರ ದಾಸ್ತಾನು ಎಲ್ಲವನ್ನು ಮಹಿಳೆಯರೇ ಮಾಡುತ್ತಾರೆ. ಈ ಎಲ್ಲಾ ಕೆಲಸವು ಕುಟುಂಬದ ನಿರ್ವಹಣೆಯ ದೃಷ್ಟಿಯಿಂದ ಮಹತ್ವದ್ದು, ಈ ಎಲ್ಲಾ ದುಡಿಮೆಗೆ ಉಪಯುಕ್ತತೆಯ ಮೌಲ್ಯವಿದೆಯೇ ಹೊರತು ವಿನಿಮಯದ ಮೌಲ್ಯವಿರದ ಕಾರಣ ಈ ತರಹದ ಎಲ್ಲಾ ಕೆಲಸದ ಹೊರೆ ಮತ್ತು ಹೊಣೆಯನ್ನು ಹಾಲಕ್ಕಿ ಮಹಿಳೆಯರೇ ಹೊರುತ್ತಾರೆ.

ಕೋಷ್ಟಕ ೫.೧೨

ದುಡಿಮೆಯ (ದಿನದ ದುಡಿಮೆ ಗಂಟೆಗಳಲ್ಲಿ) ಪಟ್ಟಿ

ಕ್ರಸಂ.	ವಿವರಣೆ	ಅಂಕೋಲಾ	ಕುಮಟಾ	ಒಟ್ಟು
೧.	ಆರು ಗಂಟೆಗಳವರೆಗೆ	--	--	--
೨.	ಆರು ಗಂಟೆಗಳಿಂದ ಎಂಟು ಗಂಟೆ	--	--	--
೩.	೮ರಿಂದ ೧೦ ಗಂಟೆ	--	--	--
೪.	೧೦ರಿಂದ ೧೨ ಗಂಟೆ	೦೫ (೫.೮೩)	೦೩	೦೮ (೪.೩೨)
೫.	೧೨ರಿಂದ ೧೪ ಗಂಟೆ	೮೦ (೯೪.೧)	೯೭	೧೭೭ (೯೬.೬೭)

(ಮೂಲ: ಕ್ಷೇತ್ರಕಾರ್ಯದ ಮಾಹಿತಿ)

ಮಹಿಳೆಯರು ಕೃಷಿಗೆ ಮಹತ್ವದ ಕೊಡುಗೆಯನ್ನು ಸಲ್ಲಿಸುತ್ತಿದ್ದಾರೆ. ಕ್ಷೇತ್ರಕಾರ್ಯದಲ್ಲಿ ಶೇ.೯೬.೬೭ರಷ್ಟು ಮಹಿಳೆಯರು ಕೃಷಿಗೆ ಕೊಡುಗೆಯನ್ನು ಸಲ್ಲಿಸುತ್ತಿದ್ದಾರೆ. ಕೇವಲ ಶೇ. ೪.೩೨ರಷ್ಟು ಮಹಿಳೆಯರು ಮಾತ್ರ ಕೃಷಿಯಲ್ಲಿ ಒಳಗೊಳ್ಳುವಿಕೆಯಲ್ಲಿ ನಿರಾಕರಿಸಿದ್ದಾರೆ. ಭೂಮಿಯನ್ನು ಉಳುಮೆ ಮಾಡಲು ಮತ್ತು ಬೀಜ ಬಿತ್ತುವುದನ್ನು ಬಿಟ್ಟು ಉಳಿದ ಕೆಲಸ ಮಹಿಳೆಯರಿಗೆ ಮೀಸಲು. ಕಳೆ ಕೀಳುವುದು, ನಾಟಿ ಮಾಡುವುದು, ಮಹಿಳೆಯರಿಗೆ ಮೀಸಲು. ಕಟಾವು ಕೆಲಸ ಹಾಗೂ ಕುತ್ತರಿ ಹಾಕುವ ಕೆಲಸವನ್ನು ಇಬ್ಬರು ಸೇರಿ ಮಾಡುತ್ತಾರೆ. ಹಾಲಕ್ಕಿ ಮಹಿಳೆ ಕೃಷಿಯಲ್ಲಿ ಪುರುಷರಿಗಿಂತ ಅಧಿಕ ಪ್ರಮಾಣದಲ್ಲಿ ದುಡಿಮೆ ಮಾಡುತ್ತಾಳೆ. ಹಾಲಕ್ಕಿ ಪುರುಷರು ಕುಡಿತದ ಚಟಕ್ಕೆ ಬಲಿಯಾಗಿರುವುದರಿಂದ ದುಡಿಮೆಯ ಹೊರೆ ಮಹಿಳೆಯರಿಗೆ ಹೆಚ್ಚಾಗಿದೆ. ಹಾಲಕ್ಕಿ ಮಹಿಳೆ ಕೃಷಿಗೆ ಮಹತ್ವದ ಕೊಡುಗೆಯನ್ನು ಸಲ್ಲಿಸುತ್ತಿದ್ದಾಳೆ. ಅವಳು ಈ ರೀತಿಯಲ್ಲಿ ದುಡಿಮೆ ಮಾಡುವುದರಿಂದ ಕುಟುಂಬಕ್ಕೆ ಆಸ್ತಿಯಾಗಿದ್ದಾಳೆ. ಹೀಗಾಗಿ ಹಾಲಕ್ಕಿ ಸಮಾಜದಲ್ಲಿ ಅಂದು (ಮುಂಬೈ ಗೆಜೆಟಿಯರ್, ೧೮೮೩) ವಧುದಕ್ಷಿಣೆ ಪದ್ಧತಿ ಇತ್ತು.

ಕೃಷಿಯ ಜೊತೆಗೆ ಹಾಲಕ್ಕಿ ಮಹಿಳೆಯರು ಪಶುಸಂಗೋಪನೆಯಲ್ಲಿ ಕೂಡಾ ತೊಡಗಿಕೊಂಡಿದ್ದಾರೆ. ಕೊಟ್ಟಿಗೆಯನ್ನು ಸ್ವಚ್ಛಗೊಳಿಸುವುದು, ಮೇವು-ನೀರು ಕೊಡುವುದು ದನಕರುಗಳನ್ನು ಕಟ್ಟುವುದು-ಬಿಡುವುದು. ಹಾಲು ಕರೆಯುವುದು, ಮಹಿಳೆಯರಿಗೆ ಮೀಸಲು. ಪುರುಷರು ಹಾಲು ಕರೆಯುವುದು ಕಡಿಮೆ. ಇತ್ತೀಚಿನ ದಿನಗಳಲ್ಲಿ ಕೊಟ್ಟಿಗೆ ಗಾತ್ರ ಕಿರಿದುಗೊಂಡಿರುವುದರಿಂದ ಕೆಲಸದ ಪ್ರಮಾಣ ಸ್ವಲ್ಪ ಕಡಿಮೆಯಾಗುತ್ತಿದೆ. ಹಾಲಕ್ಕಿ ಮಹಿಳೆಯರು ಕೋಳಿ ಸಾಕುತ್ತಾರೆ. ಇದಕ್ಕೆ ಹೆಚ್ಚಿನ ಸಮಯ ಬೇಕಾಗುವುದಿಲ್ಲ.

ಹಾಲಕ್ಕಿ ಮಹಿಳೆ ಕೃಷಿ ಕಾರ್ಮಿಕಳಾಗಿ ದುಡಿಮೆ ಮಾಡುತ್ತಾಳೆ. ಕೃಷಿ ಕಾರ್ಮಿಕಳಾಗಿ ಕಳೆ ತೆಗೆಯುವುದು, ನಾಟಿ ಮಾಡುವುದು ಹಾಗೂ ಕಟಾವ್ ಮಾಡುವುದು ಮಾಡುತ್ತಾಳೆ. ಈ ಪ್ರದೇಶದಲ್ಲಿ ಹಾಲಕ್ಕಿಗಳು ಮಾತ್ರ ಕೃಷಿ ಕಾರ್ಮಿಕರಾಗಿರುವುದರಿಂದ ಇವರಿಗೆ ಬಹಳ ಬೇಡಿಕೆಯಿದೆ. ಶ್ರಮಿಕಳಾಗಿ ಹಾಲಕ್ಕಿ ಮಹಿಳೆ ಕೊಡುಗೆ ಕುಟುಂಬಕ್ಕೆ ಬಹಳ ಮಹತ್ವದ್ದು ಶೇ. ೮೫ರಷ್ಟು ಮಹಿಳೆಯರು ಕೃಷಿ ಕಾರ್ಮಿಕರಾಗಿ ದುಡಿಮೆ ಮಾಡುತ್ತಾರೆ.

ಹಾಲಕ್ಕಿ ಮಹಿಳೆಯು ತನ್ನ ಹೆಚ್ಚಿನ ಸಮಯವನ್ನು ಅರಣ್ಯ ಉತ್ಪನ್ನದ ಸಂಗ್ರಹಣೆ ಹಾಗೂ ಮಾರಾಟಕ್ಕೆ ಮೀಸಲಿಡುತ್ತಾಳೆ.ಅರಣ್ಯದಿಂದ ಉರುವಲನ್ನು ಕಡಿದು ತಂದು ಸಂಗ್ರಹಿಸುತ್ತಾಳೆ, ನಂತರ ಮಾರಾಟ ಮಾಡುತ್ತಾಳೆ. ಮರಗಿಡಗಳನ್ನು ಕಡಿದು ತಲೆಯ ಮೇಲೆ ಹೊತ್ತು ಅರಣ್ಯದಿಂದ ಮನೆಗೆ, ಮನೆಯಿಂದ ಪೇಟೆಗೆ ತಂದು, ದಿನಕ್ಕೆ ರೂ. ೭೦ರಿಂದ ರೂ. ೧೦೦ರವರೆಗೆ ಗಳಿಸುತ್ತಾಳೆ. ಈ ದುಡಿಮೆ ಹಾಲಕ್ಕಿಗಳ ಮಹಿಳೆಯರಿಗೆ ಮೀಸಲು. ಇದು ತುಂಬಾ ಶ್ರಮದಾಯಕವಾದ ದುಡಿಮೆಯಾಗಿದೆ. ಹಾಲಕ್ಕಿ ಮಹಿಳೆಯರು ಅರಣ್ಯದ ಇತರೆ ಉತ್ಪನ್ನವಾದ ಹಣ್ಣುಗಳನ್ನು, ಜೇನು, ಗೇರು, ಮುರಲ್, ವಾಟೆ, ಉಳೆ ಬಿದುರಿನ ಸಸಿ, ಹಾಗೂ ಅಣಬೆಗಳನ್ನು ಸಂಗ್ರಹಿಸಿ ಮಾರುಕಟ್ಟೆಗೆ ಪೂರೈಸುತ್ತಾರೆ. ಈ ಎಲ್ಲಾ ದುಡಿಮೆಯು ತುಂಬಾ ಶ್ರಮದಾಯಕವಾದದ್ದು, ತನ್ನ ಕುಟುಂಬದ ನಿರ್ವಹಣೆಗಾಗಿ ಹಾಲಕ್ಕಿ ಮಹಿಳೆಯರು ಶ್ರಮದಾಯಿಕ ದುಡಿಮೆಯನ್ನು ಮಾಡುತ್ತಿದ್ದಾಳೆ.

ಹಾಲಕ್ಕಿ ಮಹಿಳೆಯರು ತೋಟಗಾರಿಕೆಯ ಮೂಲಕ ತನ್ನ ಕುಟುಂಬಕ್ಕೆ ಮಹತ್ವದ ಕೊಡುಗೆಯನ್ನು ಸಲ್ಲಿಸುತ್ತಿದ್ದಾಳೆ. ಕಾಯಿಪಲ್ಲೆಯ ಬೀಜಗಳನ್ನು ಬಿತ್ತುವ ಕೆಲಸವನ್ನು ಮಹಿಳೆಯರೇ ಮಾಡುತ್ತಾರೆ. ಹೊಲದಲ್ಲಿ ಹಾಗೂ ಹಿತ್ತಲಿನಲ್ಲಿ ಚಪ್ಪರವನ್ನು ಹಾಕಿ ಕಾಯಿಪಲ್ಲೆ ಬೆಳೆಯುತ್ತಾರೆ. ಹಾಲಕ್ಕಿಗಳು ಬೆಳೆಸುವ ಮುಖ್ಯ ಕಾಯಿಪಲ್ಲೆಗಳೆಂದರೆ, ಹೀರೆ, ಬೆಂಡೆ, ತೊಂಡೆ, ಹಾಗಲ, ಸೌತೆ, ಮೊಗ್ಗೆ, ಇಬುಡಲ್, ಪಂಜರಗಡ್ಡೆ, ಕೆಸು, ಸೋರೆ, ಕುಂಬಳ, ನುಗ್ಗೆ, ಅಮಟೆ, ಬೇರಹಲಸು, ಬದನೆ, ಬಸಲೆ, ಹರಿವೆ, ಮೂಲಂಗಿ ಹಾಗೂ ನವಲ್ಕೋಲ್ ಮುಂತಾದವುಗಳು. ಈ ಕಾಯಿಪಲ್ಲೆಗಳನ್ನು ಸಾವಯವ ಗೊಬ್ಬರ ಹಾಕಿ ಬೆಳೆಸುವುದರಿಂದ ಮಾರುಕಟ್ಟೆಯಲ್ಲಿ ತುಂಬಾ ಬೇಡಿಕೆಯಿದೆ.

ಇತ್ತೀಚಿನ ದಿನಗಳಲ್ಲಿ ತೋಟಗಾರಿಕೆಯಲ್ಲಿ ದುಡಿಮೆ ಮಾಡುವ ಹಾಲಕ್ಕಿ ಮಹಿಳೆಯರನ್ನು ಎರಡು ಗುಂಪುಗಳಾಗಿ ವಿಂಗಡಿಸಬಹುದು. ಕಾಯಿಪಲ್ಲೆಯನ್ನು ಬೆಳೆಯುವ ಮಹಿಳೆಯರದು ಒಂದು ಗುಂಪು ಹಾಗೂ ಅವರಿಂದ ಹಣ ಕೊಟ್ಟು ಕೊಂಡು ಮಾರುಕಟ್ಟೆಗೆ ಪೂರೈಸುವ ಮಹಿಳೆಯರದು ಮತ್ತೊಂದು ಗುಂಪು. ಹಾಲಕ್ಕಿಗಳ ಕಾಯಿಪಲ್ಲೆ ತುಂಬಾ ತಾಜಾ ಮತ್ತು

ಸ್ವಚ್ಛವಾಗಿರುತ್ತವೆ. ಹಾಲಕ್ಕಿ ಮಹಿಳೆಯರು ಮಾವು, ಹಲಸು, ಬಾಳೆ, ಪಪ್ಪಾಯಿ, ಹಣ್ಣುಗಳನ್ನು ಮಾರಾಟ ಮಾಡುತ್ತಾರೆ. ಅಲ್ಲದೇ ಕೋಳಿ ಮತ್ತು ಕೋಳಿ ಮೊಟ್ಟೆಯ ಮಾರಾಟದಲ್ಲಿಯೂ ಹಾಲಕ್ಕಿ ಮಹಿಳೆಯರು ತೊಡಗಿಕೊಂಡಿದ್ದಾರೆ. ಈ ಎಲ್ಲಾ ದುಡಿಮೆಗೆ ಹೆಚ್ಚಿನ ಸಮಯ ತಗಲುತ್ತದೆ.

ಹಾಲಕ್ಕಿಗಳಲ್ಲಿ ಮಹಿಳೆಯರಿಗೆ ಕೆಲವು ಶ್ರಮದ ಕೆಲಸವನ್ನು ನಿಷೇಧಿಸಲಾಗಿದೆ. ಅವುಗಳೆಂದರೆ, ಬಾವಿ ತೋಡುವುದು, ಎತ್ತಿನ ಗಾಡಿ ಹೊಡೆಯುವುದು. ಭಾರವಾದ ಕಲ್ಲುಗಳನ್ನು ಎತ್ತುವುದು, ಭೂಮಿ ಉಳುವುದು, ಬೇಟೆಯಾಡುವುದು, ಮರ ಹತ್ತುವುದು, ದೊಡ್ಡ ಮರಗಳನ್ನು ಕಡಿಯುವುದು ಹಾಗೂ ನಾಟೀ ಔಷಧಿಯನ್ನು ನೀಡುವುದು ಇತ್ಯಾದಿ. ಹೀಗೆ ಮಹಿಳೆಯರಿಂದ ಶ್ರಮದ ಕೆಲಸ ಸಾಧ್ಯವಾಗದು ಎಂಬುದನ್ನು ಪ್ರತಿಪಾದಿಸಲಾಗಿದೆ. ಕೆಲವು ಸಂದರ್ಭದಲ್ಲಿ ಇದು ಸತ್ಯವಾಗಿರಬಹುದು. ಅದು ಸಾರ್ವತ್ರೀಕರಣವಾಗಿದೆ. ಇದರಿಂದಾಗಿ ಕೂಲಿಯಲ್ಲಿ ತಾರತಮ್ಯವನ್ನು ಮಾಡಲಾಗಿದೆ. ಕ್ಷೇತ್ರಕಾರ್ಯದಲ್ಲಿ ಪ್ರತಿಕ್ರಿಯಿಸಿದ ೧೮೫ ಮಹಿಳೆಯರು ಕೂಡಾ ಕೂಲಿಯಲ್ಲಿ ತಾರತಮ್ಯವಿರಬಾರದೆಂದು ಪ್ರತಿಪಾದಿಸಿದವರು. ಅರಣ್ಯ ಖಾತೆಯ ಕೆಲಸದಲ್ಲಿ ಸಹ ಇದೇ ತರಹದ ತಾರತಮ್ಯ ಮಾಡಲಾಗುತ್ತದೆ ಎಂದಿರುವರು. ಕಾಯಿದೆಯಲ್ಲಿ ಈ ತರಹದ ತಾರತಮ್ಯಕ್ಕೆ ಅವಕಾಶ ಇಲ್ಲ. ಹಾಲಕ್ಕಿ ಮಹಿಳೆಯರ ಯಾವುದೇ ಸಂಘಟನೆಯು ಇಲ್ಲದೇ ಇರುವುದರಿಂದ ಈ ತಾರತಮ್ಯವನ್ನು ವಿರೋಧಿಸಲು ಸಾಧ್ಯವಾಗಿಲ್ಲ.

ಹಾಲಕ್ಕಿಗಳಲ್ಲಿ ಶೇ. ೪.೬ರಷ್ಟು ಮಹಿಳೆಯರು ಕೃಷಿಯಲ್ಲಿ ಪಾಲ್ಗೊಳ್ಳುತ್ತಿಲ್ಲ. ನೌಕರಿಯಲ್ಲಿರುವ ಮಹಿಳೆಯರು ಹಾಗೂ ನೌಕರಿಯಲ್ಲಿರುವವರ ಪತ್ನಿಯರು ಹಾಗೂ ಉತ್ತಮ ಆದಾಯ ಹೊಂದಿದವರ ಮನೆಯವರು ಕೃಷಿಯಲ್ಲಿ ಪಾಲ್ಗೊಳ್ಳುತ್ತಿಲ್ಲ. ಈಗ ಈ ಮಹಿಳೆಯ ಸ್ಥಾನ ಉತ್ತಮವಾಗಿದೆ. ಹೀಗಾಗಿ ದುಡಿಮೆ ಮಾಡುವುದು ಆರ್ಥಿಕ ಅಂಶದ ಜೊತೆಗೆ ಮಹಿಳೆಯರ ಸ್ಥಾನವನ್ನು ಸೂಚಿಸುವ ಅಂಶ ಕೂಡ ಆಗಿದೆ.

ಕೃಷಿ, ಪಶುಸಂಗೋಪನೆ, ಶ್ರಮ, ಅರಣ್ಯ, ತೋಟಗಾರಿಕೆ ಮತ್ತು ಮಾರಾಟದ ಮೂಲಕ ಹಾಲಕ್ಕಿ ಮಹಿಳೆಯು ಕುಟುಂಬದ ಆರ್ಥಿಕತೆಗೆ ಮಹತ್ವದ ಕೊಡುಗೆಯನ್ನು ಸಲ್ಲಿಸುತ್ತಿದ್ದಾಳೆ. ಕೃಷಿಯಲ್ಲಿ ಪುರುಷರಿಗಿಂತ ಹೆಚ್ಚಿನ ದುಡಿಮೆ ಮಾಡುತ್ತಾರೆ, ಪುರುಷರು ಸಹ ದುಡಿಮೆ ಮಾಡುತ್ತಾರೆ. ಆದರೆ ಕುಡಿತದ ಚಟಕ್ಕೆ ಬಲಿಯಾಗಿದ್ದಾರೆ. ಹೀಗಾಗಿ ಕುಟುಂಬದ ನಿರ್ವಹಣೆಯ ಹೊರೆಯನ್ನು ಮಹಿಳೆ ಹೊರಬೇಕಾಗಿದೆ. ಗಳಿಸಿದ ಆದಾಯ ವೆಚ್ಚ ಮಾಡುವ ಸಂಪೂರ್ಣ ಸ್ವಾತಂತ್ರ್ಯವಿದೆ. ಏಕೆಂದರೆ, ಗಳಿಸಿದ ಎಲ್ಲಾ ಆದಾಯವನ್ನು ಕುಟುಂಬದ

ನಿರ್ವಹಣೆಗಾಗಿ ವೆಚ್ಚ ಮಾಡುತ್ತಿದ್ದಾಳೆ ಹೊರತು ಸ್ವಂತಕ್ಕಾಗಿ ವೆಚ್ಚ ಮಾಡುತ್ತಿಲ್ಲ. ಆದರೂ ಸಹ ಮಹಿಳೆಯನ್ನು ಪುರುಷರಿಗೆ ಸಮಾನರು ಎಂದು ಈ ಸಮುದಾಯವು ತಿಳಿದಿಲ್ಲ.

ಕೃಷಿಗೆ ಮಹತ್ವದ ಕೊಡುಗೆಯನ್ನು ಸಲ್ಲಿಸುತ್ತಿರುವ ಹಾಲಕ್ಕಿ ಮಹಿಳೆಯರಲ್ಲಿ ಸರಕಾರಿ ಅಭಿವೃದ್ಧಿಯ ಕಾರ್ಯಕ್ರಮದ ಬಗೆ ಪ್ರತಿಕ್ರಿಯಿಸುವರು ಕೇವಲ ಶೇ. ೨೦ರಷ್ಟು ಮಾತ್ರ. ಕೃಷಿಯಲ್ಲಿ ರಾಸಾಯನಿಕ ಗೊಬ್ಬರ, ಕ್ರಿಮಿನಾಶಕ ಬೀಜ ಈ ಬಗ್ಗೆ ಪುರುಷರು ಹೇಳಿದ್ದಾರೆ. ಏಕೆಂದರೆ, ಹೆಚ್ಚಿನ ಮಹಿಳೆಯರು ಕೃಷಿ ಅಭಿವೃದ್ಧಿ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುತ್ತಿಲ್ಲ.

ಹಾಲಕ್ಕಿ ಮಹಿಳೆಯರಲ್ಲಿ ಶೇ. ೨೧.೬೮ರಷ್ಟು ಮಹಿಳೆಯರು ಮಾತ್ರ ಸಾಲ ಪಡೆದಿರುತ್ತಾರೆ. ಭೂ ಒಡೆತನವನ್ನು ಪುರುಷರೇ ಹೊಂದಿರವುದರಿಂದ, ಸಾಲದ ಸೌಲಭ್ಯ ಪಡೆದುಕೊಳ್ಳಲು ತೊಂದರೆಯಾಗಿದೆ. ಮಹಿಳೆಯರ ಕಡಿಮೆ ಮಟ್ಟದ ಶೈಕ್ಷಣಿಕತೆ ಕೂಡ ಸಾಲ ಪಡೆಯಲು ಹಿಂದೇಟು ಹಾಕಿಸುತ್ತಿದೆ.

ಕೋಷ್ಟಕ ೫.೧೩

ಭೂ ಒಡೆತನದ ಪಟ್ಟಿ

ಕ್ರಸಂ.	ಭೂ ವಿಸ್ತೀರ್ಣ	ಅಂಕೋಲಾ	ಶೇ.	ಕುಮಟಾ	ಶೇ.	ಒಟ್ಟು	ಶೇ.
೧.	೧೦ರಿಂದ ೨೦ ಗುಂಟೆ		೨೦.೨೫	೨೧	೨೧.೬೪	೪೧	೨೩.೧೬
೨.	೨೦ರಿಂದ ೪೦ ಗುಂಟೆ	೫೫	೪೩.೭೫	೪೪	೪೫.೩೬	೭೯	೪೪.೬೩
೩.	೧ರಿಂದ ೨ ಎಕರೆ	೨೦	೨೫	೩೦	೩೦.೯೨	೫೦	೨೮.೨೪
೪.	೨ರಿಂದ ೩ ಎಕರೆ	೦೫	೬.೨೫	೦೨	೨.೦೬	೦೭	೩.೯೫
೫.	ಮೂರಕ್ಕಿಂತ ಅಧಿಕ	--	--	--	--	--	--
	ಒಟ್ಟು	೮೦	೧೦೦	೯೭	೧೦೦	೧೭೭	೧೦೦

(ಮೂಲ: ಕ್ಷೇತ್ರಕಾರ್ಯದ ಮಾಹಿತಿ)

ಅಂಕೋಲಾ ಮತ್ತು ಕುಮಟಾ ಸೀಮೆಯ ಹಾಲಕ್ಕಿ ಒಕ್ಕಲಿಗರು ಇಂದು ಅತಿಚಿಕ್ಕ ರೈತರಾಗಿದ್ದಾರೆ. ಅಂಕೋಲಾ ಸೀಮೆಯಲ್ಲಿ ಶೇ. ೮೦ರಷ್ಟು ಹಾಲಕ್ಕಿಗಳು ಈ ಗುಂಪಿಗೆ ಸೇರಿದರೆ, ಕುಮಟಾ ಸೀಮೆಯಲ್ಲಿ ಶೇ. ೮೫ರಷ್ಟು ಹಾಲಕ್ಕಿಗಳು ಈ ಗುಂಪಿಗೆ ಸೇರಿದವರಾಗಿದ್ದಾರೆ. ಅಂಕೋಲಾ ಸೀಮೆಯಲ್ಲಿ ಒಟ್ಟು ೮೫ ಕುಟುಂಬದದಲ್ಲಿ ೮೦ ಕುಟುಂಬಗಳು ಒಕ್ಕಲುತನದಲ್ಲಿ ನಿರತವಾಗಿವೆ. ಅದರಲ್ಲಿ ೨೦ ಕುಟುಂಬಗಳು ೧೦ರಿಂದ

೨೦ ಗುಂಟೆ ಭೂಮಿಯನ್ನು ೩೫ ಕುಟುಂಬಗಳು ೨೦ರಿಂದ ೪೦ ಗುಂಟೆ ಭೂಮಿಯನ್ನು, ೨೦ ಕುಟುಂಬಗಳು ೧ರಿಂದ ೨ ಎಕರೆ ಭೂಮಿಯನ್ನು ಹಾಗೂ ೫ ಕುಟುಂಬಗಳು ೩ ಎಕರೆ ಭೂಮಿಯನ್ನು ಹೊಂದಿದೆ. ಕುಮಟಾ ಸೀಮೆಯಲ್ಲಿ ಒಟ್ಟು ೧೦೦ ಕುಟುಂಬದಲ್ಲಿ ೯೭ ಕುಟುಂಬಗಳು ಕೃಷಿಯಲ್ಲಿ ನಿರತವಾಗಿವೆ. ಅವುಗಳಲ್ಲಿ ೨೧ ಕುಟುಂಬಗಳು ೧೦ರಿಂದ ೨೦ ಗುಂಟೆ ಭೂಮಿಯನ್ನು ೩೦ ಕುಟುಂಬಗಳು ೨೦ರಿಂದ ೪೦ ಗುಂಟೆ ಭೂಮಿಯನ್ನು ೩೦ ಕುಟುಂಬಗಳೂ ೧ರಿಂದ ೨ ಎಕರೆ ಭೂಮಿಯನ್ನು ಹಾಗೂ ೨ ಕುಟುಂಬಗಳು ೨ರಿಂದ ೩ ಎಕರೆ ಭೂಮಿಯನ್ನು ಹೊಂದಿದೆ.

ಭೌಗೋಳಿಕವಾಗಿ ಈ ಪ್ರದೇಶವು ಶೇ. ೮೦ರಷ್ಟು ಅರಣ್ಯ ಪ್ರದೇಶವನ್ನು ಹೊಂದಿದೆ. ಹೀಗಾಗಿ ಸಾಗುವಳಿಗೆ ಲಭ್ಯವಿದ್ದ ಭೂಮಿಯ ಪ್ರಮಾಣವು ಕಡಿಮೆ. ಅಂಕೋಲಾ ಸೀಮೆಯಲ್ಲಿ ಶೇ. ೯.೮ರಷ್ಟು ಪ್ರದೇಶವು ಸಾಗುವಳಿಗೆ ಲಭಿಸಿದೆ. ಕುಮಟಾದಲ್ಲಿ ಶೇ. ೧೮ರಷ್ಟು ಭೂ ಪ್ರದೇಶವು ಸಾಗುವಳಿಗೆ ಲಭ್ಯವಾಗಿದೆ.

ಅನುಷಂಗಿಕ ಮಾಹಿತಿಗೆ ಹೋಲಿಸಿದರೆ, ಇಂದು ಹಾಲಕ್ಕಿಗಳು ಸ್ವಂತ ಭೂಮಿಯನ್ನು ಹೊಂದಿದವರಾಗಿದ್ದಾರೆ. ಆದರೆ, ಅಂಚಿನಲ್ಲಿರುವ ರೈತ ಜನಾಂಗದವರಾಗಿದ್ದಾರೆ. ಊಳುವವನೇ ಭೂಮಿಯ ಒಡೆಯ ಎಂಬ ಕಾಯಿದೆಯ ಲಾಭವನ್ನು ಹಾಲಕ್ಕಿಯವರು ಪಡೆದುಕೊಂಡಿದ್ದಾರೆ. ಕ್ಷೇತ್ರಕಾರ್ಯದಲ್ಲಿ ಕಂಡುಬಂದ ವಿಷಯವೆಂದರೆ, ಹಾಲಕ್ಕಿಗಳು ಇಂದು ಗೇಣಿ ಮಾಡುವುದರಲ್ಲಿ ಆಸಕ್ತಿಯನ್ನು ತೋರಿಸುತ್ತಿಲ್ಲ. ಈ ಬಗ್ಗೆ ಹಾಲಕ್ಕಿ ಮಹಿಳೆಯೊಬ್ಬಳ ಅಭಿಪ್ರಾಯವೆಂದರೆ, ಗೇಣಿ ಮಾಡುವುದರಲ್ಲಿ ಲಾಭವಿಲ್ಲ. ಏಕೆಂದರೆ, ಬೆಳೆದುದರಲ್ಲಿ ಮಾತಾಡಿಕೊಂಡಂತೆ ಪಾಲು ನೀಡಬೇಕು. ವೆಚ್ಚ ಮಾಡಬೇಕು. ಅಧಿಕ ದುಡಿಮೆ ಮಾಡಬೇಕು. ಒಂದು ವೇಳೆ ಮಳೆ ಕೈಕೊಟ್ಟರು. ಆಡಿದ ಮಾತಿನಂತೆ ಗೇಣಿ ನೀಡಬೇಕು. ಅದಕ್ಕೆ ಬದಲು ಕೂಲಿಗೆ ಹೋದರೆ ದಿನಕ್ಕೆ ರೂ. ೧೦೦ ಕೂಲಿ ಸಿಗುತ್ತದೆ. ಕೂಲಿ ಮಾಡುವುದೇ ಉತ್ತಮ. ಅಲ್ಲದೇ ಭೂಮಿ ಸ್ವಲ್ಪ ಇದ್ದರೆ, ಬೆಳೆದದ್ದು ೯ ತಿಂಗಳು ಸಾಕಾಗುತ್ತದೆ. ರೇಷನ್ನಿನಲ್ಲಿ ರೂ. ೩ಕ್ಕೆ ೨೦ ಕೆ.ಜಿ. ತಿಂಗಳಿಗೆ ಸಿಗುವುದರಿಂದ, ಅಕ್ಕಿಯ ಕೊರತೆ ಕೂಡಾ ಉಂಟಾಗುವುದಿಲ್ಲ. ಇಂದು ಗ್ರಾಮಗಳಾದ ಬೆಳಸೆ, ಹಡಾವ, ಬೆಳಂಬರ, ತಳಗದ್ದೆ, ದೇವಣ, ತಲಗೇರಿ, ಜುಗಾ, ಕಡಿಮೆಯಲ್ಲಿ ಭೂಮಿ ಗೇಣಿ ಮಾಡುವುದನ್ನು ಬಿಟ್ಟಿದ್ದಾರೆ.

ಗೇಣಿ ಮಾಡುವುದರಲ್ಲಿ ಹಾಲಕ್ಕಿಗಳು ಆಸಕ್ತಿಯನ್ನು ಕಳೆದುಕೊಂಡಿರುವುದು ಒಂದು ಮುಖ್ಯವಾದ ಬದಲಾವಣೆಯಾಗಿದೆ. ಇಂದು ಹಾಲಕ್ಕಿಗಳು ಶಿಕ್ಷಣವನ್ನು ಪಡೆದುಕೊಳ್ಳುತ್ತಿದ್ದಾರೆ. ಗೇಣಿ ಮಾಡುವುದಕ್ಕಿಂತ ಕೂಲಿ ಮಾಡುವುದೇ ಹೆಚ್ಚು ಲಾಭದಾಯಕ ಎಂಬುದು

ಅರಿವಾಗಿದೆ. ಅಲ್ಲದೇ ಇಂದು ಕೂಲಿಗೆ ಬಹಳ ಬೇಡಿಕೆಯಿದೆ. ಈ ಭಾಗದಲ್ಲಿ ನೀರಾವರಿಯ ಸೌಲಭ್ಯದ ಕೊರತೆಯಿದೆ. ಮಳೆ ಕೈಕೊಟ್ಟರೆ ರೈತನಿಗೆ ನಷ್ಟವಾಗುತ್ತದೆ. ಇದು ಹಾಲಕ್ಕಿಗಳಲ್ಲಿ ಉಂಟಾಗುತ್ತಿರುವ ಬದಲಾವಣೆಯೆಂದು ಗುರುತಿಸಬಹುದಾಗದೆ. ಈ ಬದಲಾವಣೆಯು ಸಮಾಜದಲ್ಲಿನ ಜಾತಿಯ ಸಂಬಂಧದಲ್ಲಿ ಸುಧಾರಣೆಗೆ ಕಾರಣವಾಗಿದೆ.

ಅಧ್ಯಯನಕ್ಕೆ ಒಳಪಟ್ಟು ಒಟ್ಟು ೧೭೭/೧೮೫ ರೈತ ಕುಟುಂಬದಲ್ಲಿ, ಏಳು ಮಂದಿ ಮಹಿಳೆಯರು (ವಿಧವೆಯರು) ಮಾತ್ರ ಭೂ ಒಡೆತನವನ್ನು ಹೊಂದಿದ್ದಾರೆ. (೭/೧೭೭) ಉಳಿದ (೧೭೦/೧೭೭) ಭೂ ಒಡೆತನವನ್ನು ಪುರುಷರೇ ಹೊಂದಿದ್ದಾರೆ.

೫.೪. ಉದ್ಯೋಗದ ರಚನೆಯಲ್ಲಿ ಬದಲಾವಣೆ

ಹಾಲಕ್ಕಿಗಳ ಆರ್ಥಿಕತೆಯಲ್ಲಿ ಉಂಟಾಗುತ್ತಿರುವ ಬದಲಾವಣೆಯನ್ನು ಗುರುತಿಸಲು, ಕ್ಷೇತ್ರಕಾರ್ಯದ ಮಾಹಿತಿಯ ಆಧಾರದ ಮೇಲೆ ಈ ಕೋಷ್ಟಕವನ್ನು ರಚಿಸಲಾಗಿದೆ.

ಕೋಷ್ಟಕ ೫.೧೪

ಉದ್ಯೋಗದ ರಚನೆ

ಕ್ರಸಂ.	ಉದ್ಯೋಗ	ಅಂಕೋಲಾ	ಶೇ.	ಕುಮಟಾ	ಶೇ.	ಒಟ್ಟು	ಶೇ.
೧.	ಕೃಷಿ ಮತ್ತು	೮೦	೯೪.೧೧	೯೭	೯೭	೧೮೮	೯೫.೬೧
೨.	ಸ್ವಉದ್ಯೋಗ	೦೫	೫.೮೮	೦೩	೦೩	೦೮	೪.೩೨
	ಸರ್ಕಾರಿ ಇತರೆ						
	ಒಟ್ಟು	೮೫	೧೦೦	೧೦೦	೧೦೦	೧೮೫	೧೦೦

(ಮೂಲ: ಕ್ಷೇತ್ರಕಾರ್ಯದ ಮಾಹಿತಿ)

ಅಂಕೋಲಾ ಸೀಮೆಯಲ್ಲಿ ೮೦/೮೫ ಕುಟುಂಬಗಳು ಕೃಷಿಯಲ್ಲಿ ಹಾಗೂ ಕುಮಟಾ ಸೀಮೆಯಲ್ಲಿ ೯೭/೧೦೦ ಕುಟುಂಬಗಳು ಕೃಷಿಯಲ್ಲಿ ತೊಡಗಿಕೊಂಡಿವೆ. ಆದರೆ, ಈ ಕುಟುಂಬಗಳು ಕೃಷಿಯ ಜೊತೆಯಲ್ಲಿ ಇತರೇ ಆರ್ಥಿಕ ಚಟುವಟಿಕೆಯಲ್ಲಿ ತೊಡಗಿಕೊಂಡಿವೆ. ಇಂದು ಹಾಲಕ್ಕಿಗಳು ಕೃಷಿ ಕಾರ್ಮಿಕತೆ ಜೊತೆಗೆ ಕಾರ್ಮಿಕರಾಗಿ ಕಾರ್ಖಾನೆಗಳಲ್ಲಿ ನಿರ್ಮಾಣ ಕಾರ್ಯದಲ್ಲಿ ದುಡಿಯುತ್ತಿದ್ದಾರೆ. ಅಂಕೋಲಾ ಸೀಮೆಯಲ್ಲಿನ ಹಾಲಕ್ಕಿ ಪುರುಷರು ಹಂಚಿನ ಕಾರ್ಖಾನೆ, ಗೊಡಂಬಿ ಕಾರ್ಖಾನೆ, ಗಣಿಗಾರಿಕೆಯಲ್ಲಿ ಕಾರ್ಮಿಕರಾಗಿ ದುಡಿಯುತ್ತಿದ್ದಾರೆ. ಕುಮಟಾ ಸೀಮೆಯಲ್ಲಿನ ಹಾಲಕ್ಕಿ ಪುರುಷರು, ಹಂಚಿನ ಕಾರ್ಖಾನೆ, ಮಂಜುಗಡ್ಡೆ, ಬಟ್ಟೆ ಕಾರ್ಖಾನೆ, ಉಪ್ಪಿನ ತಯಾರಿಕೆಯಲ್ಲಿ ದಿನಗೂಲಿ ಕಾರ್ಮಿಕರಾಗಿ

ದುಡಿಯುತ್ತಾರೆ. ಹಾಲಕ್ಕಿ ಮಹಿಳೆಯರು ಅರಣ್ಯ ಖಾತೆಯ ನರ್ಸರಿಯಲ್ಲಿ ದಿನಗೂಲಿ ಕಾರ್ಮಿಕರಾಗಿ ದುಡಿಯುತ್ತಿದ್ದಾರೆ.

ಹಾಲಕ್ಕಿ ಪುರುಷರು ಕಾರ್ಮಿಕರಾಗಿ ಕಾರ್ಖಾನೆಗಳಲ್ಲಿ ದುಡಿಮೆ ಮಾಡುತ್ತಿರುವುದರಿಂದ, ಮಹಿಳೆಯರ ಮೇಲೆ ಕೆಲಸದ ಒತ್ತಡ ಅಧಿಕವಾಗಿದೆ. ಈ ಪ್ರದೇಶದಲ್ಲಿ ಇತರೇ ಸಮುದಾಯದವರ ಕೃಷಿ ಚಟುವಟಿಕೆ ಸಹ ಪೂರ್ತಿಯಾಗಿ ಹಾಲಕ್ಕಿಗಳನ್ನು ಅವಲಂಬಿಸಿದೆ. ಮಳೆಗಾಲದಲ್ಲಿ ಕೃಷಿ ಕಾರ್ಮಿಕರಿಗೆ ಬಹಳ ಬೇಡಿಕೆಯಿದೆ. ಮೊದಲು ಕೃಷಿ ಕಾರ್ಮಿಕರ ಕೊರತೆ ಇರಲಿಲ್ಲ. ಇಂದು ಬೇರೆ ಊರಿನಿಂದ ಕೃಷಿ ಕಾರ್ಮಿಕರನ್ನು ಕರೆಯಿಸಿ, ಬೇಸಾಯ ಮಾಡಿಸಬೇಕಾದ ಪರಿಸ್ಥಿತಿಯಿದೆ. ಈ ಪ್ರದೇಶದಲ್ಲಿ ಜನಸಂಖ್ಯೆ ಕಡಿಮೆಯಿರುವುದಿರಂದ ಕಾರ್ಮಿಕರ ಸಮಸ್ಯೆ ಉಂಟಾಗುತ್ತದೆ.

ಹಾಲಕ್ಕಿ ಮಹಿಳೆಯರು ಕೃಷಿಗೆ ಶೇ. ೧೦೦ರಷ್ಟು ಕೊಡುಗೆಯನ್ನು ಸಲ್ಲಿಸುತ್ತಿದ್ದಾರೆ. ಇಂದೂ ಸಹ ಕೃಷಿಯ ವಿವಿಧ ಚಟುವಟಿಕೆಗಳಾದ ಗೊಬ್ಬರ ದೀರುವ, ಬಿತ್ತುವ, ಕಳೆ ತೆಗೆಯುವ, ಕಟಾವ್ ಮುಂತಾದ ದುಡಿಮೆಯನ್ನು ಮಾಡುತ್ತಾಳೆ.

ಹಾಲಕ್ಕಿ ಮಹಿಳೆಯರು ಕಾರ್ಮಿಕರಾಗಿ ಕೃಷಿಯೇತರ ಚಟುವಟಿಕೆಯಲ್ಲಿ ತೊಡಗಿಸಿಕೊಂಡಿಲ್ಲ, ಆದರೆ ಹಾಲಕ್ಕಿ ಮಹಿಳೆಯರು ಇಂದಿಗೂ ಸಹ ಅರಣ್ಯದ ಉತ್ಪನ್ನದ ಸಂಗ್ರಹಣೆ ಮತ್ತು ಮಾರಾಟದಲ್ಲಿ ತೊಡಗಿಸಿಕೊಂಡಿದ್ದಾಳೆ. ಹಾಲಕ್ಕಿಗಳು ವಿವಿಧ ರೀತಿಯ ತರಕಾರಿಗಳನ್ನು ಬೆಳೆಯುತ್ತಾರೆ. ಅವುಗಳಲ್ಲಿ ಮುಖ್ಯವಾದವುಗಳೆಂದರೆ ಹೀರೆ, ಬೆಂಡೆ, ತೊಂಡೆ, ಹಾಗಲ, ಪಡವಲ, ಮೊಗ್ಗೆ, ಸೌತೆ, ಬಸಳೆ, ಹರಿವೆ, ನುಗ್ಗೆ, ಬದನೆ, ಮೂಲಂಗಿ, ನವಲಕೋಲ್, ಹಸಿಮೆಣಸಿನಕಾಯಿ ಮುಂತಾದವುಗಳು. ಬೆಳೆದವರೆ ಮಾರುಕಟ್ಟೆಗೆ ಪೂರೈಸುತ್ತಿದ್ದರು. ಇಂದು ಬೆಳೆದವರು ಮಾರುಕಟ್ಟೆಗೆ ನೇರವಾಗಿ ಪೂರೈಸುತ್ತಿಲ್ಲ. ಮಾರುವ ಹಾಲಕ್ಕಿ ಮಹಿಳೆಯರು ಕಾಯಿಪಲ್ಲೆ ಬೆಳೆದವರಿಂದ ಹಣಕೊಟ್ಟು ಕೊಂಡುಕೊಳ್ಳುತ್ತಾರೆ. ನಂತರ ಕೊಂಡುಕೊಂಡವರು ನೇರವಾಗಿ ಮಾರುಕಟ್ಟೆಗೆ ಪೂರೈಸುತ್ತಾರೆ, ಹೀಗೆ ಹಾಲಕ್ಕಿ ಮಹಿಳೆಯನ್ನು ಕಾಯಿಪಲ್ಲೆ ಬೆಳೆಯುವವರು ಮತ್ತು ಮಾರುವವರು ಎಂಬ ಎರಡು ಗುಂಪುಗಳಾಗಿ ಮಾಡಬಹುದು. ಹಾಲಕ್ಕಿಗಳ ನಡುವೆ ಎಲ್ಲ ವಿನಿಮಯವು ಇಂದು ಹಣದ ಮೂಲಕವೇ ನಡೆಯುತ್ತದೆ. ಸಾರಿಗೆ ಸಂಪರ್ಕದ ವ್ಯವಸ್ಥೆಯಿಂದಾಗಿ ಗೋಕರ್ಣ ಸೀಮೆಯ ಹಾಲಕ್ಕಿ ಮಹಿಳೆಯರು ಅಂಕೋಲಾ ಮಾರುಕಟ್ಟೆಗೆ ಕಾಯಿಪಲ್ಲೆಯನ್ನು ಪೂರೈಸುವುದು ಸಾಮಾನ್ಯವಾಗಿದೆ.

ಅಂಕೋಲಾ ಮತ್ತು ಕುಮಟಾ ಸೀಮೆಯ ಪ್ರತಿ ಹಾಲಕ್ಕಿ ಹಳ್ಳಿಗಳಲ್ಲಿ, ಹಾಲಕ್ಕಿಯವರದೇ ಚಹಾದಂಗಡಿ, ದಿನಸಿ ಅಂಗಡಿ, ಕೋಯಿನ್ ಬೂತ್, ಬಾಡಿಗೆ ಸೈಕಲ್ ಅಂಗಡಿಗಳು ಕಂಡುಬರುತ್ತದೆ.

ಈ ಸೀಮೆಯ ಹಾಲಕ್ಕಿ ಯುವಕರು ಚಿಕ್ಕ ಪ್ರಮಾಣದ ಗುತ್ತಿಗೆ ವ್ಯಾಪಾರದಲ್ಲಿ ತೊಡಗಿರುವುದು ಕಂಡುಬಂದಿದೆ. ಮಾವು, ಗೇರು, ಹಲಸಿನ ಮರವನ್ನು ಗುತ್ತಿಗೆ ಹಿಡಿದು ಹಣ್ಣುಗಳನ್ನು ಹುಬ್ಬಳ್ಳಿ ಮಾರುಕಟ್ಟೆಗೆ ಪೂರೈಸುತ್ತಿದ್ದಾರೆ.

ಬೆಳಸೆ ಗ್ರಾಮದಲ್ಲಿ ಯುವಕನೊಬ್ಬನು ದೊಡ್ಡ ಪ್ರಮಾಣದಲ್ಲಿ ಕೋಳಿಫಾರಂ ನಡೆಸುತ್ತಿದ್ದಾನೆ. ಕಾರವಾರದಲ್ಲಿ ನೌಕಾನೆಲೆಯಿಂದಾಗಿ ಕೋಳಿ, ಮೊಟ್ಟೆ, ಕಾಯಿಪಲ್ಲೆ ಹಾಗೂ ಹಣ್ಣುಗಳಿಗೆ ಬೇಡಿಕೆ ಜಾಸ್ತಿಯಿದೆ. ನಾಟೀ ಔಷಧಿ ನೀಡುವುದು ಇಂದು ಉತ್ತಮ ಆದಾಯವನ್ನು ನೀಡುತ್ತಿದೆ. ಈ ವೃತ್ತಿಯಲ್ಲಿ ಬೆಳಂಬಾರ ಮತ್ತು ತೋಡೂರಿನ ಹಾಲಕ್ಕಿಗಳು ಕರ್ನಾಟಕದಲ್ಲಿ ಹೆಸರು ಗಳಿಸಿರುವರು.

ಈ ಸೀಮೆಯಲ್ಲಿನ ಹಾಲಕ್ಕಿಗಳಿಗೆ ಸರ್ಕಾರಿ ಸೇವೆ ಪ್ರಮುಖ ಆದಾಯದ ಮೂಲವಾಗಿಲ್ಲ. ಹೆಚ್ಚಿನವರಿಗೆ ಸರಕಾರಿ ಕೆಲಸ ಪಡೆದುಕೊಳ್ಳಲು ಸಾಧ್ಯವಾಗುತ್ತಿಲ್ಲ. ಅಂಕೋಲಾ ಸೀಮೆಯ ತಳಗದ್ದೆಯ ಇಬ್ಬರು ಉಪನ್ಯಾಸಕರಿದ್ದಾರೆ. ಬೆಳಸೆಯ ಕುಟುಂಬವೊಂದರಲ್ಲಿ ಸತಿಪತಿಗಳು ಶಿಕ್ಷಕರಿದ್ದಾರೆ. ಹಡವಾದಲ್ಲಿ ಪೊಲೀಸ್ ಮತ್ತು ಕಛೇರಿ ಜವಾನರಿದ್ದಾರೆ. ಕುಮಟಾ ಸೀಮೆಯಲ್ಲಿ ನೂರು ಕುಟುಂಬದಲ್ಲಿ ಮೂರು ಕುಟುಂಬದಲ್ಲಿ ಶಿಕ್ಷಕರಿದ್ದಾರೆ.

ಹಾಲಕ್ಕಿ ಮಹಿಳೆಯರಲ್ಲಿ ಹೆಚ್ಚಿನವರು ಸರ್ಕಾರಿ ಶಿಕ್ಷಕಿಯರು. ಒಂದಿಬ್ಬರು ಪೊಲೀಸ್‌ರಾಗಿದ್ದಾರೆ. ಹಾಲಕ್ಕಿ ಮಹಿಳೆಯೊಬ್ಬಳು ಜಿಲ್ಲಾ ಪಂಚಾಯಿತಿ ಅಧ್ಯಕ್ಷಳಾಗಿದ್ದಾಳೆ.

ಸರ್ಕಾರಿ ಸೇವೆಯು ಜೀವನದ ಸುರಕ್ಷತೆಯ ಜೊತೆಗೆ ಜೀವನ ಶೈಲಿಯಲ್ಲಿ ಬದಲಾವಣೆ ಉಂಟುಮಾಡಿದೆ. ಈ ಸೀಮೆಯ ಹಾಲಕ್ಕಿ ಜನಸಂಖ್ಯೆಗೂ ಅವರು ಪಡೆದುಕೊಂಡಿರುವ ಉದ್ಯೋಗ ಪ್ರಮಾಣಕ್ಕೂ ವ್ಯತ್ಯಾಸ ಕಂಡುಬರುತ್ತದೆ. ಕೃಷಿ ಆರ್ಥಿಕತೆಯಲ್ಲಿ ಶಿಕ್ಷಣಕ್ಕೆ ಹೆಚ್ಚಿನ ಒತ್ತು ನೀಡದೆ ಇರುವುದು ಸಾಮಾನ್ಯ ಅಂಶವಾಗಿದೆ. ಇದುವರೆಗೆ ಹಾಲಕ್ಕಿಗಳನ್ನು ಹಿಂದುಳಿದ ವರ್ಗಕ್ಕೆ ಸೇರಿಸಲಾಗಿದೆ. ಆದರೆ, ಇತರೇ ಹಿಂದುಳಿದ ವರ್ಗದವರು ಶೈಕ್ಷಣಿಕವಾಗಿ ಮುಂದುವರೆದಿರುವುದರಿಂದ ಸರ್ಕಾರಿ ಸವಲತ್ತುಗಳನ್ನು ಬಳಸಿಕೊಳ್ಳಲು ಹಾಲಕ್ಕಿಗಳಿಗೆ ಸಾಧ್ಯವಾಗುತ್ತಿಲ್ಲ.

ಇಂದು ಉದ್ಯೋಗ ರಚನೆಯಲ್ಲಿ ಉಂಟಾದ ಬದಲಾವಣೆಯಿಂದ ಹಾಲಕ್ಕಿಗಳಲ್ಲಿ ಆರ್ಥಿಕ ಅಸಮಾನತೆ ಉಂಟಾಗುತ್ತಿರುವುದು ಕಂಡುಬರುತ್ತದೆ. ಅಲ್ಲದೇ ಪುರುಷ ಮತ್ತು ಮಹಿಳೆಯರ ನಡುವೆ ಕೂಡಾ ಆದಾಯದ ಅಸಮಾನತೆ ಉಂಟಾಗಿದೆ. ಇದರಿಂದಾಗಿ ಪುರುಷರ ಪ್ರಭುತ್ವ ಹೆಚ್ಚಾಗಿರುವುದು ಅಧ್ಯಯನದ ಸಂದರ್ಭದಲ್ಲಿ ಗಮನಿಸಲಾಗಿದೆ.

ಸಾಂಪ್ರದಾಯಿಕ ಆರ್ಥಿಕತೆಯಲ್ಲಿ ಮಕ್ಕಳು ಕಸುಬನ್ನು ಬೆಳೆಯುತ್ತಾ ಕಲಿಯುತ್ತಾರೆ. ಆದರೆ ಇಂದು ನೌಕರಿಗಾಗಿ ಪರ ಊರಿನಲ್ಲಿ ನೆಲೆಸಿರುವ ಹಾಲಕ್ಕಿಗಳ ಜೀವನಕ್ರಮದಲ್ಲಿ ಬಹಳ

ಬದಲಾವಣೆ ಉಂಟಾಗಿದೆ. ನೌಕರಿ ಮಾಡುವವರು ಅವರ ಮಕ್ಕಳ ಶಿಕ್ಷಣಕ್ಕಾಗಿ ಹೆಚ್ಚಿನ ಒತ್ತು ನೀಡುತ್ತಿದ್ದಾರೆ.

೫.೫. ಕೃಷಿಯಲ್ಲಿ ಪರಿವರ್ತನೆ

ಕೋಷ್ಟಕ ೫.೧೫

ರಾಸಾಯನಿಕ ಬಳಕೆಯ ಪಟ್ಟಿ

ಕ್ರಸಂ.	ತಾಲೂಕು	ಸಾರಜನಕXp	ರಂಜಕp	ಪೊಟಾಷಿಯಂK	ಒಟ್ಟು
೧.	ಅಂಕೋಲಾ	೧೩೨	೧೨೭	೧೪೭	೪೦೬
೨.	ಕುಮಟಾ	೨೩೧	೯೧	೧೦೬	೪೨೮

(ಮೂಲ: ಉತ್ತರ ಕನ್ನಡ ಜಿಲ್ಲೆಯ ಅಂಕಿ-ಅಂಶಗಳ ನೋಟ ೨೦೦೫-೦೬)

ಕೃಷಿಯಲ್ಲಿ ರಾಸಾಯನಿಕ ಬಳಕೆಯಲ್ಲಿ ಗಣನೀಯ ಪ್ರಮಾಣದಲ್ಲಿ ಏರಿಕೆ ಉಂಟಾಗಿದೆ. ಅಂಕೋಲಾ ಸೀಮೆಯಲ್ಲಿ ಲಭ್ಯವಿದ್ದ ಕೃಷಿ ಭೂಮಿಯ ಪ್ರಮಾಣವು ಕೇವಲ ಶೇ. ೯.೮ರಷ್ಟು ಮಾತ್ರ ಕುಮಟಾದಲ್ಲಿ ಸೀಮೆಯಲ್ಲಿ ಶೇ. ೨೦ರಷ್ಟು ಭೂಮಿ ಸಾಗುವಳಿಗೆ ಲಭ್ಯವಿದೆ. ಆದರೂ ಅಂಕೋಲಾ ಸೀಮೆಯಲ್ಲಿ ಕುಮಟಾ ಸೀಮೆಗಿಂತ ಅಧಿಕ ರಾಸಾಯನಿಕವನ್ನು ಬಳಸಲಾಗುತ್ತಿದೆ. ಸಾಂಪ್ರದಾಯಿಕ ಕೃಷಿಯು ಸಂಪೂರ್ಣ ಕೊಟ್ಟಿಗೆಯ ಗೊಬ್ಬರವನ್ನು ಅವಲಂಬಿಸಿತ್ತು.

ಕೋಷ್ಟಕ ೫.೧೬

ಕೃಷಿ ಉತ್ಪಾದಕತೆಯ ಪಟ್ಟಿ

ಕ್ರಸಂ.	ಬೆಳೆಗಳ ವಿವರ ಪ್ರತಿ ಹೆಕ್ಟರ್	ಅಂಕೋಲಾ (ಟನ್ನುಗಳಲ್ಲಿ)	ಕುಮಟಾ (ಟನ್ನುಗಳಲ್ಲಿ)
೧.	ಭತ್ತ	೧೮.೭೫	೧೯.೭೩
೨.	ಕಬ್ಬು	೮೮೦	೮೮೦
೩.	ಶೇಂಗಾ	೧೮	೧೮

(ಮೂಲ: ಉತ್ತರ ಕನ್ನಡ ಜಿಲ್ಲೆಯ ಅಂಕಿ-ಅಂಶಗಳ ನೋಟ, ೨೦೦೫-೦೬).

ಈ ಪ್ರದೇಶದಲ್ಲಿ ಅಧಿಕ ಮಳೆಯಾಗುತ್ತಿದ್ದರಿಂದ ಭತ್ತದ ಬೆಳೆಗೆ ಪೂರಕವಾಗಿದೆ. ಉಪ ಬೆಳೆಯಾಗಿ ಶೇಂಗಾ, ಕಬ್ಬು, ಬೆಳೆಯುತ್ತಾರೆ. ಕಬ್ಬು ಅರಣ್ಯ, ಶೇಂಗಾದ ಉತ್ಪಾದಕತೆ

ಅಧಿಕವಾಗಿರುವುದರಿಂದ ಉತ್ತಮ ಆದಾಯವನ್ನು ಪಡೆದುಕೊಳ್ಳುತ್ತಿದ್ದಾರೆ. ಕಬ್ಬು ಹಾಗೂ ಶೇಂಗಾ ವಾಣಿಜ್ಯ ಬೆಳೆಯಾಗಿದೆ. ಕಬ್ಬಿನಿಂದ ಉತ್ತಮ ತೆಳು (ನೀರು) ಬೆಲ್ಲವನ್ನು ತಯಾರಿಸುತ್ತಾರೆ. ಬೆಲ್ಲಕ್ಕೆ ಉತ್ತಮ ಬೇಡಿಕೆಯಿದೆ.

ಕೋಷ್ಟಕ ೫.೧೭

ಕೃಷಿ ಸಲಕರಣೆಗಳು

ಕ್ರಸಂ.	ವಿವರ	ಅಂಕೋಲಾ	ಶೇ.	ಕುಮಟಾ	ಶೇ.	ಒಟ್ಟು	ಶೇ.
೧	ಕಬ್ಬಿಣ	೭೬	೮೭.೫	೮೬	೮೨.೭	೧೫೦	೮೪.೭೪
೨	ಪಂಪ್ಸೆಟ್	೦೫	೬.೨೫	೦೭	೭.೨೧	೧೨	೬.೭೭
೩.	ಎತ್ತಿನ ಬಂಡಿ	೦೫	೬.೨೫	೧೦	೧೦.೩೦	೦೮	೮.೪೭

(ಮೂಲ: ಉತ್ತರ ಕನ್ನಡ ಜಿಲ್ಲೆಯ ಅಂಕಿ-ಅಂಶಗಳ ನೋಟ ೨೦೦೫-೦೬)

ಬಳಕೆಯಲ್ಲಿರುವ ಕೃಷಿ ಸಲಕರಣೆಗಳು ಕೃಷಿಯ ಸ್ಥಿತಿಯನ್ನು ಸೂಚಿಸುತ್ತದೆ. ಕೃಷಿ ಸಲಕರಣೆಗಳು ಬಂಡವಾಳದ ಒಂದು ಭಾಗವಾಗಿದೆ. ಕೃಷಿ ಸಲಕರಣೆಗಳು ಕೃಷಿಯ ತಾಂತ್ರಿಕತೆಯ ಮಟ್ಟವನ್ನು ಸೂಚಿಸುತ್ತದೆ. ಸಾಂಪ್ರದಾಯಿಕ ಕೃಷಿಯಲ್ಲಿ ಕಟ್ಟಿಗೆಯ ನೇಗಿಲುಗಳು ಇದ್ದವು. ಇಂದು ಅವುಗಳ ಸ್ಥಾನವನ್ನು ಕಬ್ಬಿಣದ ನೇಗಿಲುಗಳು ಆಕ್ರಮಿಸಿವೆ. ಹಾಲಕ್ಕಿಗಳು ಪಂಪ್‌ಸೆಟ್ ಮೂಲಕ ನೀರು ಹಾಯಿಸಿ ಶೇಂಗಾ, ಕಬ್ಬು, ಈರುಳ್ಳಿ, ಕಲ್ಲಂಗಡಿ, ಮುಂತಾದ ವಾಣಿಜ್ಯ ಬೆಳೆಯನ್ನು ತೆಗೆಯುತ್ತಿದ್ದಾರೆ.

ಪಶುಸಂಗೋಪನೆ

ಕೃಷಿ ಆರ್ಥಿಕತೆಯಲ್ಲಿ ಪಶು ಸಂಗೋಪನೆಯು ಮುಖ್ಯವಾದ ವಿಷಯವಾಗಿರುತ್ತದೆ. ದನಕರುಗಳು ಕೃಷಿ ಕೆಲಸಕ್ಕೆ ಪೂರಕವಾಗಿರುತ್ತವೆ. ಇದರಿಂದಾಗಿ ಸಾವಯವ ಗೊಬ್ಬರದ ಪೂರೈಕೆಯಾಗುತ್ತದೆ.

ಕೋಷ್ಟಕ ೫.೧೮

ಪಶು ಸಂಗೋಪನೆಯ ಪಟ್ಟಿ

ಕ್ರಸಂ.	ವಿವರಣೆ	ಅಂಕೋಲಾ	ಕುಮಟಾ	ಒಟ್ಟು
೧.	ದನಕರುಗಳು	೫೦೦	೬೦೦	೧೧೦೦
೨.	ಎಮ್ಮೆಗಳು	೧೦೦	೧೫೦	೨೫೦
೩.	ಕುರಿ			
೪.	ಕೋಳಿ	೧೦೦೦	೧೨೦೬	೨೨೦೬
	ಒಟ್ಟು	೧೬೬೦	೧೯೫೬	೩೩೫೫೬

(ಮೂಲ: ಕ್ಷೇತ್ರ ಕಾರ್ಯದ ಮಾಹಿತಿ)

ಕ್ಷೇತ್ರಕಾರ್ಯದಲ್ಲಿ ಕಂಡುಬಂದ ವಿಷಯವೆಂದರೆ, ಕೊಟ್ಟಿಗೆಯ ಗಾತ್ರದಲ್ಲಿನ ಬದಲಾವಣೆ, ಬೇಸಾಯ ಮಾಡುವ ಕೆಲ ಕುಟುಂಬಗಳು ಹೊಲವನ್ನು ಊಳಲು ಬಾಡಿಗೆ ಎತ್ತುಗಳನ್ನು ಪಡೆದುಕೊಳ್ಳುತ್ತಿರುವುದು. ಕೊಟ್ಟಿಗೆ ಗಾತ್ರ ಕಡಿಮೆಯಾಗಲು ಕಾರಣವೇನೆಂದರೆ, ಮೊದಲನೆಯದಾಗಿ ನೀರಾವರಿ, ರಾಸಾಯನಿಕ ಗೊಬ್ಬರದ ಬಳಕೆಯಲ್ಲಿ ಏರಿಕೆಯಾಗಿದೆ. ಎರಡನೆಯದಾಗಿ ಸಾಕ್ಷರತೆಯಿಂದಾಗಿ ಹಾಲಕ್ಕಿಗಳು ವೆಚ್ಚವನ್ನು ಅಂದಾಜು ಮಾಡುತ್ತಿದ್ದಾರೆ. ಇಂದು ದನಕರು ನಿರ್ವಹಣೆ ಮಾಡಲು ಅಧಿಕ ಸಮಯ, ಅಧಿಕ ಹಣ ಹಾಗೂ ಅಧಿಕ ಶ್ರಮ ಬೇಕಾಗುತ್ತದೆ. ಮಾರುಕಟ್ಟೆಯಲ್ಲಿ ಪ್ಯಾಕೆಟ್ ಹಾಲು ಸಿಗುವುದರಿಂದ, ಸ್ಥಳೀಯ ಹಾಲಿನ ಬೇಡಿಕೆ ಕಡಿಮೆಯಾಗಿದೆ. ಹೀಗಾಗಿ ಹಾಲಕ್ಕಿಗಳ ಕೊಟ್ಟಿಗೆ ಗಾತ್ರ ಚಿಕ್ಕದಾಗಿದೆ.

ಆದರೆ, ಹಾಲಕ್ಕಿಗಳು ಕೋಳಿ ಸಾಕಾಣಿಕೆಯಲ್ಲಿ ಆಸಕ್ತಿ ತೋರಿಸುತ್ತಿದ್ದಾರೆ. ನಾಟೀ ಕೋಳಿಗೆ ಮತ್ತು ಮೊಟ್ಟೆಗೆ ಬಾರಿ ಬೇಡಿಕೆಯಿದೆ. ಕೋಳಿಗೆ ವೆಚ್ಚ ಕಡಿಮೆ. ಕೋಳಿ ಸಾಕಲು ಕಡಿಮೆ ಮೀಸಲು ಸಮಯ ಸಾಕು. ಕೋಳಿ ಹಾಲಕ್ಕಿಗಳ ಆಹಾರದ ಮೂಲವು ಆಗಿದೆ.

೫.೬. ಕುಟುಂಬದ ಆದಾಯದಲ್ಲಿ ಬದಲಾವಣೆ

ಕುಟುಂಬದ ಆದಾಯವು ಸಮಾಜದಲ್ಲಿ ಕುಟುಂಬದ ಸ್ಥಿತಿಯನ್ನು ಸೂಚಿಸುತ್ತದೆ. ಇಂದು ಹಾಲಕ್ಕಿಗಳು ಕೃಷಿಯ ಜೊತೆಗೆ ಕೃಷಿಯೇತರ ಚಟುವಟಿಕೆಯಲ್ಲಿಯೂ ತೊಡಗಿಕೊಂಡಿದ್ದಾರೆ. ಹಾಲಕ್ಕಿಗಳು ಹಂಚಿನ ಕಾರ್ಖಾನೆ, ಬಟ್ಟೆ ಕಾರ್ಖಾನೆ, ಮಂಜುಗಡ್ಡೆ ಕಾರ್ಖಾನೆ ಹಾಗೂ ರಸ್ತೆ ಕಾಮಗಾರಿ ಕೆಲಸದಲ್ಲಿ ದುಡಿಮೆ ಮಾಡುತ್ತಿದ್ದಾರೆ. ಸಾಂಪ್ರದಾಯಿಕ ಕೃಷಿಗಿಂತ ವಾಣಿಜ್ಯ ಕೃಷಿಯಲ್ಲಿ ಆಸಕ್ತಿ ತೋರಿಸುತ್ತಿದ್ದಾರೆ. ಪ್ರತಿ ಗ್ರಾಮದಲ್ಲಿ ರಾಷ್ಟ್ರೀಯ ಹೆದ್ದಾರಿಗಳಲ್ಲಿ ಚಿಕ್ಕ ಪ್ರಮಾಣದ ಚಹದಂಗಡಿ, ದಿನಸಿ ಅಂಗಡಿ ಹಾಗೂ ಟೇಲಿಫೋನ್ ಭೂತ್ ನಡೆಸುತ್ತಿದ್ದಾರೆ.

ಕೋಷ್ಟಕ ೫.೧೯

ಕುಟುಂಬದ ಆದಾಯದ ಪಟ್ಟಿ

ಕ್ರಸಂ.	ಎಲ್ಲ ಮೂಲಗಳಿಂದ ವಾರ್ಷಿಕ ಆದಾಯ	ಅಂಕೋಲಾ	ಶೇ.	ಕುಮಟಾ	ಶೇ.	ಒಟ್ಟು	ಶೇ.
೧.	ರೂ. ೧೦೦೦-೫೦೦೦	೩೦	೩೦.೨೯	೪೦	೪೦	೭೬	೩೭.೮೩
೨.	ರೂ. ೫೦೦೦-೧೦೦೦೦	೧೪	೧೬.೪೭	೨೬	೨೬	೪೦	೨೧.೬೨
೩.	ರೂ. ೧೦,೦೦೦-೧೫೦೦೦	೨೪	೨೮.೨೩	೨೦	೨೦	೪೪	೨೩.೭೮
೪.	ರೂ. ೧೫,೦೦೦-೨೦,೦೦೦	೧೦	೧೧.೭೬	೧೦	೧೦	೨೦	೧೬.೮
೫.	ರೂ. ೨೦,೦೦೦-೨೫,೦೦೦	--	--	--	--	--	--
೬	ರೂ. ೨೫,೦೦೦ ಅಧಿಕ	೦೭	೮.೨	೦೪	೦೪	೧೧	೮.೧
	ಒಟ್ಟು	೮೫	೧೦೦	೧೮೫	೧೦೦	೧೮೫	೧೦೦

(ಮೂಲ: ಕ್ಷೇತ್ರಕಾರ್ಯದ ಮಾಹಿತಿ)

ಕೇವಲ ರೈತಾಪಿಗಳಾಗಿದ್ದ ಹಾಲಕ್ಕಿಗಳು ಇಂದು ಕೃಷಿಯೇತರ ರಂಗದಲ್ಲಿ ಕಾರ್ಮಿಕರಾಗಿ ಕೆಲಸ ಮಾಡುತ್ತಿದ್ದಾರೆ. ಹಾಲಕ್ಕಿಗಳು, ಸಣ್ಣ ಪ್ರಮಾಣದಲ್ಲಿ ಗುತ್ತಿಗೆಯನ್ನು ಹಿಡಿಯುತ್ತಿದ್ದಾರೆ. ಈ ಗುತ್ತಿಗೆಯೆಂದರೆ ಮಾಲಕ್ಕಿ ಮಾಡುವುದು, ಗೇರು ಗುಡ್ಡದ ಗುತ್ತಿಗೆ ಹಿಡಿಯುವುದು, ಮಾವು, ಹಲಸಿನ ಮರದ ಗುತ್ತಿಗೆ ಹಿಡಿಯುತ್ತಿದ್ದಾರೆ. ಹಾಲಕ್ಕಿಗಳಲ್ಲಿ ಸ್ಥಿತಿವಂತರು ಲೇವಾದೇವಿ ವ್ಯವಹಾರವನ್ನು ಕೂಡಾ ಮಾಡುತ್ತಿದ್ದಾರೆ.

ಕೋಷ್ಟಕದಲ್ಲಿ ನೀಡಿರುವ ಆದಾಯವು ಕೃಷಿ ಮತ್ತು ಇತರೆ ಮೂಲದಿಂದ ಪಡೆದ ಆದಾಯವಾಗಿದೆ. ಈ ಆದಾಯದ ಆಧಾರದ ಮೇಲಿಂದ ಐದು ಗುಂಪುಗಳಾಗಿ ವಿಂಗಡಿಸಬಹುದು. ಕೆಳಮಟ್ಟದ ಆದಾಯ. ಕೆಳಮಧ್ಯಮ ಆದಾಯ, ಮಧ್ಯಮ ಆದಾಯ, ಮೇಲ್ಮಟ್ಟ ಮಧ್ಯಮ ಆದಾಯ ಹಾಗೂ ಮೇಲ್ಮಟ್ಟದ ಆದಾಯ.

ಕೆಳಮಟ್ಟದ ಆದಾಯದ ಗುಂಪಿನಲ್ಲಿ ಒಟ್ಟು ೭೦ ಕುಟುಂಬಗಳಿಗೆ ಶೇ. ೩೭.೮೩ರಷ್ಟು ಕುಟುಂಬಗಳಿಗೆ ತಿಂಗಳಿಗೆ ರೂ. ೫೦೦೦/- ಕೆಳಮಟ್ಟ ಆದಾಯವಿದೆ. ಹೆಚ್ಚಿನವರು ಈ ಗುಂಪಿಗೆ ಸೇರಿದವರಾಗಿದ್ದಾರೆ. ಶೇ. ೨೧.೬೨ರಷ್ಟು ಕುಟುಂಬಗಳಿಗೆ ರೂ. ೧೦೦೦೦/- ಕೆಳಮಟ್ಟದ ಮಧ್ಯಮ ಆದಾಯವಿದೆ. ಶೇ. ೨೩.೭೦ರಷ್ಟು ಕುಟುಂಬಗಳು ರೂ. ೧೦,೦೦೦ದಿಂದ ರೂ. ೧೫,೦೦೦ಗಳವರೆಗೆ ಆದಾಯ ಹೊಂದಿದೆ. ಶೇ. ೧೦.೮ರಷ್ಟು ಕುಟುಂಬಗಳು ರೂ. ೧೫,೦೦೦ದಿಂದ ರೂ. ೨೦,೦೦೦ ಆದಾಯವನ್ನು ಹೊಂದಿವೆ.

ಶೇ.೮.೧ರಷ್ಟು ಕುಟುಂಬಗಳು ರೂ. ೨೫,೦೦೦ಕ್ಕಿಂತ ಅಧಿಕ ಆದಾಯವನ್ನು ಹೊಂದಿವೆ. ಮೇಲ್ಕಟ್ಟದ ಆದಾಯವನ್ನು ಹೊಂದಿದವರು ಸ್ವ ಉದ್ಯೋಗ (ನಾಟೀ ವೈದ್ಯರು, ಕೋಳಿ ಫಾರಂ) ಮಾಡುವವರು ಹಾಗೂ ಸರ್ಕಾರಿ ಉದ್ಯೋಗವನ್ನು ಹೊಂದಿದವರಾಗಿದ್ದಾರೆ.

ಕೋಷ್ಟಕ ೫.೨೦

ಬಿ.ಪಿ.ಎಲ್./ಎ.ಪಿ.ಎಲ್. ಕಾರ್ಡಿನ ವಿವರ

ಕ್ರಸಂ.	ವಿವರ	ಅಂಕೋಲಾ	ಶೇ.	ಕುಮಟಾ	ಶೇ.	ಒಟ್ಟು	ಶೇ.
೧.	ಬಿ.ಪಿ.ಎಲ್.	೭೩	೮೫.೮೮	೯೦	೯೦	೧೬೩	೮೮.೧೮
೨.	ಎ.ಪಿ.ಎಲ್	೧೨	೧೪.೧೧	೧೦	೧೦	೨೨	೧೧.೮೨
	ಒಟ್ಟು	೮೫	೧೦೦	೧೦೦	೧೦೦	೧೮೫	೧೦೦

(ಮೂಲ: ಕ್ಷೇತ್ರಕಾರ್ಯದ ಮಾಹಿತಿ)

ಅಧ್ಯಯನ ಪ್ರದೇಶದಲ್ಲಿ ೧೬೩/೧೮೫ರಷ್ಟು ಬಿ.ಪಿ.ಎಲ್. ಹೊಂದಿದವರು ಹಾಗೂ ಶೇ. ೨೨/೧೮೫ರಷ್ಟು ಎ.ಪಿ.ಎಲ್ ಹೊಂದಿದವರು ಕಂಡುಬರುತ್ತಾರೆ. ಹಾಲಕ್ಕಿಗಳಲ್ಲಿ ಆದಾಯದ ಅಸಮಾನತೆ ಉಂಟಾಗುತ್ತಿರುವುದು ಕಂಡುಬರುತ್ತದೆ.

೫.೭ ಜೀವನಮಟ್ಟದ ಬದಲಾವಣೆ

ಸಾಂಪ್ರದಾಯಿಕ ವ್ಯವಸ್ಥೆಯಲ್ಲಿ ಹಾಲಕ್ಕಿಗಳ ಜೀವನವು ತುಂಬಾ ಸರಳವಾಗಿತ್ತು. ಅಂಬಲಿ ಮತ್ತು ಮೀನು ಮುಖ್ಯ ಆಹಾರವಾಗಿತ್ತು. ಹಾಲಕ್ಕಿಗಳು ಮಾರುಕಟ್ಟೆಯಿಂದ ಒಣಮೆಣಸು, ಕೊತ್ತಂಬರಿ, ಸಾಸಿವೆ, ಸಕ್ಕರೆ ಹಾಗೂ ಚಹಾಪುಡಿ ಮುಂತಾದವುಗಳನ್ನು ದಿನನಿತ್ಯ ಕೊಂಡುಕೊಳ್ಳುತ್ತಿದ್ದರು. ವರ್ಷಕ್ಕೆ ಒಮ್ಮೆ ಮಾತ್ರ ಬಟ್ಟೆಯನ್ನು ಖರೀದಿಸುತ್ತಿದ್ದರು. ಹಬ್ಬ-ಹರಿದಿನಗಳಲ್ಲಿ ಮಾತ್ರ ಸಿಹಿ ಊಟವನ್ನು ತಯಾರಿಸುತ್ತಿದ್ದರು. ಆದರೆ, ಹಾಲಕ್ಕಿಗಳು ಹಿಂದಿನಿಂದಲೂ ಧಾರ್ಮಿಕ ಸಾಮಾಜಿಕ ಕಾರ್ಯಗಳಿಗೆ ಹೆಚ್ಚಿನ ವೆಚ್ಚವನ್ನು ಮಾಡುತ್ತಾ ಬಂದಿದ್ದಾರೆ. ಹಾಲಕ್ಕಿಗಳು, ಸುಗ್ಗಿ ಹಬ್ಬ, ದೀಪಾವಳಿ, ಕಾರಹಬ್ಬ, ಯುಗಾದಿ ಹಬ್ಬ ಹಾಗೂ ಬಂಡಿಹಬ್ಬಕ್ಕೆ ವೆಚ್ಚ ಮಾಡುತ್ತಾರೆ.

ಕೋಷ್ಟಕ ೫.೨೧

ತಿಂಗಳ ವೆಚ್ಚದ ಪಟ್ಟಿ

ಕ್ರಸಂ.	ವಿವರಣೆ	ಅಂಕೋಲಾ	ಶೇ.	ಕುಮಟಾ	ಶೇ.	ಒಟ್ಟು	ಶೇ.
೧.	ರೂ. ೩೦೦ಕ್ಕಿಂತ ಕಡಿಮೆ	೦೨	೨.೩೫	೨೦	-	೨೨	೧೧.೮೯
೨.	ರೂ. ೩೦೦ರಿಂದ ೪೦೦	೦೪	೪.೭೦	೨೦	-	೨೪	೧೨.೯೭
೩.	ರೂ. ೪೦೦ರಿಂದ ೫೦೦	೧೯	೨೨.೩೫	೨೧	-	೪೦	೨೧.೬೨
೪.	ರೂ. ೫೦೦ರಿಂದ ೬೦೦	೧೨	೧೪.೧೧	೧೬	-	೨೮	೧೫.೧೩
೫.	ರೂ. ೬೦೦ರಿಂದ ೭೦೦	೦೮	೯.೪೧	೦೯	-	೧೭	೯.೧೮
೬.	ರೂ. ೭೦೦ರಿಂದ ೮೦೦	೧೬	೧೮.೬೨	೦೪	-	೨೦	೧೦.೮೧
೭.	ರೂ. ೮೦೦ರಿಂದ ೯೦೦	೦೪	೪.೭೦	೦೧	-	೦೫	೨.೭೦
೮.	ರೂ. ೯೦೦ರಿಂದ ೧೦೦೦	೦೮	೯.೪೧	೦೩	-	೧೧	೫.೯೪
೯.	ರೂ. ೧೦೦೦ರಿಂದ ೨೦೦೦	೦೬	೭.೦೫	೦೨	-	೦೮	೪.೩
೧೦.	ರೂ. ೨೦೦೦ರಿಂದ ೩೦೦೦	--	--	--	--	--	--
೧೧.	ರೂ. ೩೦೦೦ ಅಧಿಕ	೦೬	೭.೦೫	೦೪	-	೧೦	೫.೧೦
	ಒಟ್ಟು	೮೫	೧೦೦	೧೦೦		೧೮೫	

(ಮೂಲ: ಕ್ಷೇತ್ರಕಾರ್ಯದ ಮಾಹಿತಿ)

ಇಂದು ಹಾಲಕ್ಕಿಗಳ ಅನುಭೋಗದ ನಮೂನೆಯಲ್ಲಿ ಬದಲಾವಣೆ ಉಂಟಾಗಿದೆ. ಬೆಳಗ್ಗೆ ಅಂಬಲಿಯ ಬದಲು ಚಹಾ-ತಿಂಡಿಯನ್ನು ಹಾಗೂ ಮಧ್ಯಾಹ್ನ ಗಂಜಿ- ತಿನ್ನುವುದು. ರಾತ್ರಿ ಅನ್ನ-ಮೀನಿನ ಪಳದಿ (ಸಾರು) ಬಳಸುತ್ತಾರೆ. ಹಿಂದೆ ಸಾರಾಯಿಯನ್ನು ಮುಟ್ಟದ ಹಾಲಕ್ಕಿಗಳಲ್ಲಿ ಇಂದು ಈ ಚಟಕ್ಕೆ ಬಲಿಯಾದವರೇ ಹೆಚ್ಚಿನವರಾಗಿದ್ದಾರೆ.

ಹಿರಿಯ ಹಾಲಕ್ಕಿ ಜನರು ಮಾತ್ರ ತಮ್ಮ ಸಾಂಪ್ರದಾಯಿಕ ಉಡುಗೆಯನ್ನು ತೊಡುತ್ತಾರೆ. ಉಳಿದವರು ಆಧುನಿಕ ಉಡುಗೆ-ತೊಡುಗೆಯನ್ನು ಬಳಸುತ್ತಾರೆ. ಪಾದರಕ್ಷೆಯನ್ನು ಬಳಸುವವರ ಸಂಖ್ಯೆಯಲ್ಲಿ ಏರಿಕೆಯಾಗಿದೆ. ಮಕ್ಕಳ ಶಿಕ್ಷಣಕ್ಕಾಗಿ ಹಾಲಕ್ಕಿಗಳು ವೆಚ್ಚವನ್ನು ಮಾಡುತ್ತಿದ್ದಾರೆ.

ಕೋಷ್ಟಕ ೫.೨೨

ಆಸ್ತಿಯ ವಿವರಣೆಯ ಪಟ್ಟಿ

ಕ್ರಸಂ.	ವಿವರಣೆ	ಅಂಕೋಲಾ	ಶೇ.	ಕುಮಟಾ	ಶೇ.	ಒಟ್ಟು	ಶೇ.
೧.	ಮನೆ						
	ಪಕ್ಕ	೮೫		೧೦೦		೧೮೫	
	ಸ್ವಂತ	೮೫		೧೦೦		೧೮೫	
೨.	ಮನೆಯಲ್ಲಿನ ಕೋಣೆಗಳು						
	೨ ಕೋಣೆ	೧೦	—	೧೧.೭೬	--	೧೦	೫.೪೦
	೩ ಕೋಣೆ	೪೦	೪೭.೦೫	೨೬	—	೬೬	೩೫.೬೭
	೪ ಕೋಣೆ	೩೦	೩೫.೨೯	೬೬	—	೯೬	೫೧.೮೯
	ಅಕ್ಕಿಂತ ಹೆಚ್ಚು	೦೫	೫.೮೮	೦೮	—	೧೩	೦೭.೦೨
೩.	ವಿದ್ಯುತ್ ಬಳಕೆ						
	ಇರುವ ಮನೆ	೮೧	೯೫.೨೯	೯೯	—	೧೮೦	೯೭.೨೯
	ಇಲ್ಲದಿರುವ ಮನೆ	೦೪	೪.೭೦	೦೧	--	೦೫	೨.೭೦
೪.	ಗೃಹಬಳಕೆ ಸಾಮಾನು						
	ರೇಡಿಯೋ	೪೦	೪೭.೦೫	೫೦	—	೯೦	೪೮.೬೪
	ಟಿ.ವಿ.	೧೦	೧೧.೭೬	೨೦	—	೩೦	೧೬೨.೦೧
	ಸೈಕಲ್	೫೦	೫೮.೮೨	೬೦	—	೧೧೦	೫೯.೪೫
	ದ್ವಿಚಕ್ರ ವಾಹನ	೧೬	೧೮.೮೨	೨೦	—	೩೬	೧೯.೪೫
	ಫೋನ್	೧೬	೧೮.೮೨	೨೦	—	೩೬	೧೯.೪೫
	ಫ್ರಿಜ್	೦೨	೨.೩೫	೦೪	--	೦೬	೩.೨೪
೫.	ಬಾವಿ						
	ಸ್ವಂತಬಾವಿ	೧೫	೧೭೬೪	೮೫	—	೧೯೫	೫೪.೦೫
	ಸರಕಾರಿ ಬಾವಿ	೭೦	೮೨.೩೫	೧೫	—	೮೫	೪೫.೯೪
೬.	ಶೌಚಾಲಯ						
	ಇದ್ದವರು	೪೯	೫೭೬೪	೫೫	—	೧೦೪	೫೬.೨೧
	ಇಲ್ಲದವರು	೪೬	೪೨.೩೫	೪೫	—	೮೧	೪೩.೭೮

(ಮೂಲ: ಕ್ಷೇತ್ರಕಾರ್ಯದ ಮಾಹಿತಿ)

ಅಧ್ಯಯನ ಕ್ಷೇತ್ರದಲ್ಲಿ ಶೇ. ೧೦೦ರಷ್ಟು ಹಾಲಕ್ಕಿಗಳು ಸ್ವಂತ ಮತ್ತು ಪಕ್ಕಾ ಮನೆಗಳನ್ನು ಹೊಂದಿರುವರು. ಮನೆಗಳಲ್ಲಿ ಎರಡು ಕೋಣೆ ಹೊಂದಿದವರ ಪ್ರಮಾಣವು ಕೇವಲ ಶೇ. ೫.೪೦ರಷ್ಟಿದೆ. ನಾಲ್ಕು ಕೋಣೆಯನ್ನು ಹೊಂದಿದವರ ಪ್ರಮಾಣವು ಶೇ. ೫೧.೮೯ರಷ್ಟಿದ್ದಾರೆ. ಇಂದು ಶೇ. ೯೭.೨೯ರಷ್ಟು ಹಾಲಕ್ಕಿಗಳು ಮನೆಯಲ್ಲಿ ವಿದ್ಯುತ್ ಬಳಸುತ್ತಿದ್ದಾರೆ. ಹಾಲಕ್ಕಿಗಳ ಗೃಹ ಬಳಕೆಯ ಅನುಭೋಗದ ಪ್ರಮಾಣದಲ್ಲಿ ಸಹ ಏರಿಕೆಯಾಗಿದೆ. ಶೇ. ೫೪.೦೫ರಷ್ಟು ಹಾಲಕ್ಕಿಗಳು ಸ್ವಂತ ಬಾವಿಯನ್ನು ಹೊಂದಿದ್ದಾರೆ. ಶೇ. ೫೬.೨೫ರಷ್ಟು ಹಾಲಕ್ಕಿಗಳು ಶೌಚಾಲಯವನ್ನು ಬಳಸುತ್ತಿದ್ದಾರೆ. ಈ ಮೇಲಿನ ಸೂಚಿಗಳಿಂದ ಹಾಲಕ್ಕಿಗಳ ಆಸ್ತಿಯ ಪ್ರಮಾಣದಲ್ಲಿ ಏರಿಕೆ ಉಂಟಾಗಿರುವುದು ಕಂಡುಬರುತ್ತದೆ.

೫.೮. ಶಿಕ್ಷಣವು ಸಾಮಾಜಿಕ ಬದಲಾವಣೆಯ ಪ್ರಮುಖ ಸೂಚಿ ಮತ್ತು ಸಾಧನ

ಶಿಕ್ಷಣವು ಸಾಮಾಜಿಕ ಬದಲಾವಣೆಗೆ ಪ್ರಮುಖ ಸೂಚಿ ಮತ್ತು ಸಾಧನವಾಗಿದೆ. ಈ ಅಧ್ಯಯನವು ಕಳೆದ ಅರವತ್ತು ವರ್ಷಗಳಲ್ಲಿ ಹಾಲಕ್ಕಿ ಮಹಿಳೆಯರಲ್ಲಿ ಉಂಟಾಗುತ್ತಿರುವ ಸಾಮಾಜಿಕ ಬದಲಾವಣೆಗಳಲ್ಲಿ ಶಿಕ್ಷಣವು ಪ್ರಮುಖ ಸೂಚಿಯಾಗಿದೆ. ಶಿಕ್ಷಣದ ಜೊತೆಗೆ ಆಧುನಿಕತೆಯ ಒತ್ತಡವು ಸಹ ಸಮುದಾಯದವರ ಜೀವನದಲ್ಲಿ ಹಲವಾರು ಬದಲಾವಣೆಗಳನ್ನು ತಂದಿದೆ. ಅವೆಂದರೆ, ಸಾರಿಗೆ ಮತ್ತು ಸಂಪರ್ಕದ ಅಭಿವೃದ್ಧಿ, ಅಭಿವೃದ್ಧಿಯ ಆಧುನಿಕ, ಆರ್ಥಿಕ ಮತ್ತು ರಾಜಕೀಯ ಪ್ರಕ್ರಿಯೆಗಳು, ಸುಧಾರಿಸಿದ ತಂತ್ರಜ್ಞಾನ ಮುಂತಾದವುಗಳು. ಹೀಗಾಗಿ ಹಾಲಕ್ಕಿ ಸಮುದಾಯದಲ್ಲಿ ಶಿಕ್ಷಣದಿಂದಲೇ ಸಾಮಾಜಿಕ ಬದಲಾವಣೆ ಆಗಿದೆ ಎಂದು ಹೇಳುವುದು ಕಷ್ಟವೇ. ಏಕೆಂದರೆ, ಇತರೆ ಅಂಶಗಳು ಸಹ ಸಾಮಾಜಿಕ ಬದಲಾವಣೆಗೆ ಪೂರಕವಾಗಿವೆ. ಆದರೆ, ಶಿಕ್ಷಣವೇ ಸಾಮಾಜಿಕ ಬದಲಾವಣೆಗೆ ಪ್ರಮುಖ ಸಾಧನ ಎಂಬುದನ್ನು ಪ್ರಮಾಣೀಕರಿಸಲಾಗಿದೆ. ಈ ಪ್ರದೇಶದ ಶಿಕ್ಷಣದ ಪ್ರಗತಿಯ ಚಾರಿತ್ರಿಕ ಹಿನ್ನಲೆಯು ಸಾಮಾಜಿಕ ಬದಲಾವಣೆಗೆ ಪೂರಕವಾಗಿ ಕೆಲಸ ಮಾಡಿದೆ. ಶಿಕ್ಷಣವೇ ಸಾಮಾಜಿಕ ಬದಲಾವಣೆಗೆ ಪ್ರಮುಖ ಅಂಶವೆಂಬುದನ್ನು ಈ ಮೂಲಕ ಪ್ರಮಾಣೀಕರಿಸಬಹುದು,

೧. ಮೊದಲ ಹಂತದಲ್ಲಿ ಅಧ್ಯಯನಕ್ಕೆ ಆಯ್ದುಕೊಂಡಿರುವ ಎರಡು ಸೀಮೆಗಳಲ್ಲಿನ ಸಾಮಾನ್ಯ ಅಂಶವನ್ನು (ಶಿಕ್ಷಣ) ಗುರುತಿಸಲಾಗಿದೆ.

೨. ಎರಡನೆಯ ಹಂತದಲ್ಲಿ ಆಯ್ದುಕೊಂಡಿರುವ ಎರಡು ಸೀಮೆಗಳ ಸಾಮಾನ್ಯ ಅಂಶವಾದ ಶಿಕ್ಷಣದ ಪ್ರಗತಿಯಲ್ಲಿ ತುಲನಾತ್ಮಕವಾಗಿ ವಿಶ್ಲೇಷಿಸಲಾಗಿದೆ.

೩. ಮೂರನೆಯ ಹಂತದಲ್ಲಿ ಅಧ್ಯಯನಕ್ಕೆ ಆಯ್ದುಕೊಂಡಿರುವ ಎರಡು ಸೀಮೆಗಳಲ್ಲಿ ಅಧ್ಯಯನ ಐದು ಸೂಚಿಗಳ ಮೇಲೆ ಸಾಮಾನ್ಯ ಅಂಶವಾದ ಶಿಕ್ಷಣದ ಪರಿಣಾಮವನ್ನು ತುಲನಾತ್ಮಕವಾಗಿ ವಿಶ್ಲೇಷಿಸಲಾಗಿದೆ.

೪. ನಾಲ್ಕನೆಯ ಹಂತದಲ್ಲಿ ಶಿಕ್ಷಣ ಸೂಚಿಯನ್ನು ಬಿಟ್ಟು ಇತರೆ ಅಂಶಗಳ ಪ್ರಭಾವವನ್ನು ಗಮನಿಸಲಾಗಿದೆ. ಸಾಮಾನ್ಯ ಅಂಶವಾಗಿರುವ ಶಿಕ್ಷಣದ ಮಟ್ಟವು ಹೆಚ್ಚಿರುವಲ್ಲಿ ಸಾಮಾಜಿಕ ಬದಲಾವಣೆಯು ಹೆಚ್ಚಿನ ಮಟ್ಟದಲ್ಲಿರುವುದನ್ನು ಗುರುತಿಸಲಾಗಿದೆ.

ಶಿಕ್ಷಣ ಮಟ್ಟದಲ್ಲಿನ ಅಸಮಾನತೆಯಿಂದ ಸಾಮಾಜಿಕ ಬದಲಾವಣೆಯಲ್ಲಿ ಅಸಮಾನತೆ ಉಂಟಾಗಿರುವುದನ್ನು ಗುರುತಿಸಲಾಗಿದೆ. ಹೀಗೆ ಛೇದಕ್ ಚೆಕ್ ವಿಧಾನವನ್ನು ಅನುಸರಿಸಿದಾಗ ಶಿಕ್ಷಣವೇ ಹಾಲಕ್ಕಿಗಳ ಸಾಮಾಜಿಕ ಬದಲಾವಣೆಯ ಪ್ರಮುಖ ಅಂಶವಾಗಿರುವುದು ಸ್ಪಷ್ಟವಾಯಿತು. ಇತರೆ ಅಂಶಗಳ ಪರಿಣಾಮ ಸಹ ಸಾಮಾಜಿಕ ಬದಲಾವಣೆಗೆ ಪೂರಕವಾಗಿ ಕೆಲಸ ಮಾಡಿದನ್ನು ಗಮನಿಸಲಾಗಿದೆ.

ಕೋಷ್ಟಕ ೫.೨೩

ಅಧ್ಯಯನ ಪ್ರದೇಶದ ಗ್ರಾಮೀಣ ಸಾಕ್ಷರತಾ ಪಟ್ಟ

ಕ್ರಸಂ. ವಿವರ	ಉತ್ತರ ಕನ್ನಡ	ಅಂಕೋಲಾ ಸೀಮೆ	ಕುಮಟಾ ಸೀಮೆ
೧. ಒಟ್ಟು ಗ್ರಾಮೀಣ ಸಾಕ್ಷರತೆ	೭೨.೭	೭೩.೨	೭೭.೭
೨. ಒಟ್ಟು ಗ್ರಾಮೀಣ ಪು.ಸಾಕ್ಷರತೆ	೮೧.೬	೮೩.೧	೮೬.೩
೩. ಒಟ್ಟು ಗ್ರಾಮೀಣ ಮ.ಸಾಕ್ಷರತೆ	೬೩.೬	೬೨.೯	೬೯.೦

(ಮೂಲ: ಉತ್ತರ ಕನ್ನಡ ಜಿಲ್ಲಾ ಅಂಕಿ ಅಂಶಗಳ ನೋಟ, ೨೦೦೫-೦೬)

ಅಧ್ಯಯನ ಸೀಮೆಯಲ್ಲಿ ಗ್ರಾಮೀಣ ಸಾಕ್ಷರತಾ ಮಟ್ಟವು ಉತ್ತಮವಾಗಿದೆ. ಜಿಲ್ಲಾ ಮಟ್ಟಕ್ಕಿಂತಲೂ ಅಂಕೋಲಾ ಸೀಮೆ ಮತ್ತು ಕುಮಟಾ ಸೀಮೆಯ ಗ್ರಾಮೀಣ ಸಾಕ್ಷರತೆ ಉತ್ತಮವಾಗಿದೆ. ಗ್ರಾಮೀಣ ಮಹಿಳೆಯರ ಮತ್ತು ಗ್ರಾಮೀಣ ಪುರುಷರ ಸಾಕ್ಷರತೆಯ ನಡುವೆ ಅಸಮಾನತೆ ಕಂಡುಬರುತ್ತದೆ.

ಕೋಷ್ಟಕ ೫.೨೪

ಹಾಲಕ್ಕಿ ಮಹಿಳೆಯರ ಸಾಕ್ಷರತಾ ಪ್ರಮಾಣ ಪಟ್ಟಿ

ಕ್ರಸಂ.	ವಿವರ ಹಾಲಕ್ಕಿ ಮಹಿಳೆಯರ ಶೈಕ್ಷಣಿಕವಾರು	ಅಂಕೋಲಾ ಸೀಮೆ	ಕುಮಟಾ ಸೀಮೆ	ಒಟ್ಟು ಸಾಕ್ಷರತೆ
೧.	ಶೂನ್ಯ ಮಟ್ಟ	೫.೮೮	೧೯	೧೨.೯೭
೨.	ಪ್ರಾಥಮಿಕ	೫೬.೪೭	೪೫	೫೦.೨೭
೩.	ಮಾಧ್ಯಮಿಕ	೩.೫೨	೩೦	೨೭೦೨
೪.	ಬಿ.ಎ./ಬಿ.ಎಸ್ಸಿ	೫.೮	೨	೩.೭೮
೫.	ಬಿ.ಎಡ್	೩.೫	೨	೨.೭೦
೬.	ಡಿ./ಎಡ್	೪.೭೦	೨	೩.೨೪
೭.	ಎಂ.ಎ			
೮.	ಒಟ್ಟು ಸಾಕ್ಷರತೆ	೫೬.೪೭	೪೫	೫೦.೨೭
೯.	ಗ್ರಾಮ. ಒಟ್ಟು ಸಾಕ್ಷರತೆ	೬೨.೯	೬೯	—

(ಮೂಲ: ಕ್ಷೇತ್ರಕಾರ್ಯ)

ಅಧ್ಯಯನ ಸೀಮೆಗಳ ಸಾಕ್ಷರತೆ ಮಟ್ಟದಲ್ಲಿ ಅಸಮಾನತೆಯನ್ನು ಗುರುತಿಸಬಹುದಾಗಿದೆ. ಅಂಕೋಲಾ ಸೀಮೆಯಲ್ಲಿ ಹಾಲಕ್ಕಿ ಮಹಿಳೆಯ ಸಾಕ್ಷರತಾ ಮಟ್ಟವು ಕುಮಟಾದ ಸಾಕ್ಷರತಾ ಮಟ್ಟಕ್ಕಿಂತ ಉತ್ತಮವಾಗಿದೆ. ಆದರೆ, ಒಟ್ಟು ಗ್ರಾಮೀಣ ಮಹಿಳೆಯರ ಸಾಕ್ಷರತಾ ಮಟ್ಟಕ್ಕಿಂತ ಹಾಲಕ್ಕಿ ಸಮುದಾಯ ಮಹಿಳೆಯರ ಸಾಕ್ಷರತಾಮಟ್ಟ ಕಡಿಮೆಯಿದೆ. ಇಂದಿಗೂ ಸಹ ಹಾಲಕ್ಕಿ ಮಹಿಳೆಯ ಒಟ್ಟು ಪ್ರಾಥಮಿಕ ಶಿಕ್ಷಣದ ಮಟ್ಟವು ಕೇವಲ ಶೇ. ೫೦.೨೭ರಷ್ಟು ಇದೆ. ಒಟ್ಟು ಮಾಧ್ಯಮಿಕ ಶಿಕ್ಷಣದ ಮಟ್ಟ ಕೇವಲ ಶೇ. ೨೭೦೨ರಷ್ಟಿದೆ. ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣ ಮಟ್ಟದಲ್ಲಿ ಅಂತರವಿದೆ. ಒಟ್ಟು ಪದವಿ ಶಿಕ್ಷಣದ ಮಟ್ಟವು ಕೇವಲ ಶೆ.೩.೭೮ರಷ್ಟಿದೆ. ವೃತ್ತಿಪರ ಶಿಕ್ಷಣವನ್ನು ಪಡೆಯುವಲ್ಲಿ ಮಹಿಳೆಯರು ನಿಧಾನಗತಿಯಲ್ಲಿರುವುದು ಕಂಡುಬರುತ್ತದೆ.

ಹಾಲಕ್ಕಿ ಮಹಿಳೆಯರಲ್ಲಿ ಈ ಬಗ್ಗೆ ವಿಚಾರಿಸಿದಾಗ ಕೆಲವು, ವಿಷಯಗಳು ಬೆಳಕಿಗೆ ಬಂದಿವೆ, ಒಕ್ಕಲಿಗ ಸಮುದಾಯಕ್ಕೆ ಸೇರಿದ ಹಾಲಕ್ಕಿಗಳು ಮೊದಲಿನಿಂದಲೂ ಶಿಕ್ಷಣದಲ್ಲಿ ಆಸಕ್ತಿ ವಹಿಸಿದವರಲ್ಲ, ಆದರೆ, ಇತ್ತೀಚಿನ ದಿನಗಳಲ್ಲಿ ಶಿಕ್ಷಣದಲ್ಲಿ ಆಸಕ್ತಿಯನ್ನು ಹೊಂದಿದ್ದಾರೆ. ಶಿಕ್ಷಣದ ಮೂಲವು ಆರ್ಥಿಕ ಆಸಕ್ತಿಯನ್ನು ಕಾಪಾಡುವುದೇ ಆಗಿದೆ.

ಆದ್ದರಿಂದ ಶಿಕ್ಷಣ ಪಡೆದ ಮೇಲೆ ವಿವಿಧ ರೀತಿಯ ಉದ್ಯೋಗವನ್ನು ಪಡೆದುಕೊಳ್ಳಲು ಆಸಕ್ತಿ ಹೊಂದಿದ್ದಾರೆ. ಶಿಕ್ಷಣದಿಂದ ನೌಕರಿ ಸಿಕ್ಕರೆ ತಮ್ಮ ಸ್ಥಿತಿಯನ್ನು ಸುಧಾರಿಸಿಕೊಳ್ಳುವ ಗುರಿ ಹೊಂದಿದ್ದಾರೆ. ಧೀರ್ಘಕಾಲದ ಶಿಕ್ಷಣ ಪಡೆಯುವಲ್ಲಿ ಕೂಡಾ ಆಸಕ್ತಿಯಿಲ್ಲ, ಆದ್ದರಿಂದಾಗಿ ಪ್ರಾಥಮಿಕ ಶಿಕ್ಷಣದ ನಂತರ ಶಾಲೆ ಬಿಡುವ ಸಂಖ್ಯೆ ಹೆಚ್ಚಿದೆ.

ಡೆಮೋಗ್ರಾಫಿಯಲ್ಲಿ ಬದಲಾವಣೆ

ಕರ್ನಾಟಕದಲ್ಲಿ ಡೆಮೋಗ್ರಾಫಿಯ ಸೂಚಿಯು ಮಹಿಳೆಯರ ಕೆಳಗಿನ ಸ್ಥಿತಿಯನ್ನು ಸೂಚಿಸುತ್ತದೆ. ಸರ್ಕಾರದ ಕುಟುಂಬ ಯೋಜನೆಯ ಕಾರ್ಯಕ್ರಮಗಳು ಈ ಸೀಮೆಯವರ ಗಾತ್ರದಲ್ಲಿ ಇಳಿಕೆ ಮಾಡಿವೆ.ಕುಟುಂಬ ಯೋಜನೆಯ ಕಾರ್ಯಕ್ರಮವನ್ನು ಇದುವರೆಗೆ ಸರ್ಕಾರವು ಕಡ್ಡಾಯಗೊಳಿಸಿಲ್ಲ. ೧೯೫೨ ಜಾರಿಗೊಳಿಸಿದ ಈ ಯೋಜನೆಯ ಮೂಲಕ ಮಹಿಳಾ ಆರೋಗ್ಯ ಸ್ಥಿತಿಯನ್ನು ಸುಧಾರಿಸಲು ಪ್ರಯತ್ನಿಸಲಾಗಿದೆ.

ಕೋಷ್ಟಕ ೫.೨೫

ಹಾಲಕ್ಕಿಗಳ ಕುಟುಂಬ ಯೋಜನೆಯ ಪಟ್ಟಿ

ಕ್ರಸಂ. ವಿವರಣೆ	ಉ.ಕ. ಜಿಲ್ಲೆ	ಅಂಕೋಲಾ ಸೀಮೆ	ಕುಮಟಾ ಸೀಮೆ	ಒಟ್ಟು ಶೇ.
೧. ಹಾಲಕ್ಕಿ ಮಹಿಳಾ ಸಾಕ್ಷರತೆ	೬೩.೫	೫೬.೪೭	೪೫	೫೦.೨೭
೨. ಹಾಲಕ್ಕಿ ಲಿಂಗಾನುಪಾತ	೯೬೧	೯೧೦	೮೫೬	೮೮೦
೩. ಹಾಲಕ್ಕಿ ಮ.ಕುಮಟದ ಗಾತ್ರ	ಎನ್.ಎ.	೪.೨	೪.೩	೪.೩
೪. ಕುಟುಂಬ ಯೋಜನೆ	ಎನ್.ಎ.	೮೮.೨೩	೭೬	೮೧.೬೨

(ಮೂಲ: ಕ್ಷೇತ್ರಕಾರ್ಯದ ಮಾಹಿತಿ)

ಶಿಕ್ಷಣ ಮತ್ತು ಸರ್ಕಾರಿ ಕಾರ್ಯಕ್ರಮದ ಫಲವಾಗಿ ಹಾಲಕ್ಕಿ ಸಮುದಾಯವು ಬದಲಾಗುತ್ತಿರುವ ಸಾಮಾಜಿಕ ಮೌಲ್ಯವನ್ನು ಅಳವಡಿಸಿಕೊಂಡಿರುವುದನ್ನು ಗುರುತಿಸಬಹುದು. ಅವಿಭಕ್ತ ಕುಟುಂಬಗಳ ಬದಲಿಗೆ ವಿಭಕ್ತ ಕುಟುಂಬಗಳ ಮೌಲ್ಯವನ್ನು ಅಳವಡಿಸಿಕೊಂಡಿವೆ. ಸರ್ಕಾರ ಮತ್ತು ಖಾಸಗಿ ಪ್ರಯತ್ನದ ಫಲವಾಗಿ ಕುಟುಂಬ ಯೋಜನೆಗಳು ಸಫಲಗೊಂಡಿವೆ. ಸಾಕ್ಷರತೆ ಪ್ರಮಾಣ ಹೆಚ್ಚಿರುವ ಅಂಕೋಲಾ ಸೀಮೆಯಲ್ಲಿ ಕುಟುಂಬ ಯೋಜನೆ ಅಳವಡಿಸಿಕೊಂಡವರ ಪ್ರಮಾಣವು ಸಾಕ್ಷರತೆಯ ಪ್ರಮಾಣ ಕಡಿಮೆ ಇರುವ ಕುಮಟಾ ಸೀಮೆಗಿಂತ ಹೆಚ್ಚಿರುವುದು ಕಂಡುಬಂದಿದೆ.

ಆರ್ಥಿಕತೆಯಲ್ಲಿ ಬದಲಾವಣೆ

ಇಂದು ಹಾಲಕ್ಕಿ ಮಹಿಳೆಯರು ಈ ಸೀಮೆಯಲ್ಲಿನ ಮಾರುಕಟ್ಟೆಯ ಒಂದು ಭಾಗವಾಗಿದ್ದಾರೆ. ದಿನನಿತ್ಯದ ಅವಶ್ಯಕ ವಸ್ತುಗಳಾದ ಕಾಯಿಪಲ್ಲೆ-ಹಣ್ಣು, ಹಾಲು, ಕೋಳಿ, ಮೊಟ್ಟೆ ಮತ್ತು ಉರುವಲು ಎಲ್ಲವನ್ನು ಬೇಡಿಕೆಗೆ ಅನುಸಾರವಾಗಿ ಪೂರೈಸುತ್ತಿದ್ದಾರೆ. ಮಾರುಕಟ್ಟೆಯ ಸಲುವಾಗಿ ಕಾಯಿಪಲ್ಯೆಗಳನ್ನು ಹಣ್ಣು ಹಂಪಲಗಳನ್ನು ಬೆಳೆಯುತ್ತಿದ್ದಾರೆ.

ಕೋಷ್ಟಕ ೫.೨೬

ಉದ್ಯೋಗ ರಚನೆಯ ಪಟ್ಟಿ

ಕ್ರಸಂ.	ವಿವರಣೆ	ಅಂಕೋಲಾ ಸೀಮೆ	ಕುಮಟಾ ಸೀಮೆ	ಒಟ್ಟು ಶೇ.
೧.	ಕೃಷಿ	೯೪.೧೧	೯೭	೯೫.೬೧
೨.	ಸರ್ಕಾರಿ ಮತ್ತು ಖಾಸಗಿ ಉದ್ಯೋಗ	೫.೮೮	೩	೪.೩೨
೩.	ಒಟ್ಟು ಸಾಕ್ಷರತೆ	೫೭.೬೪	೭೫	೫೦.೭೮

(ಮೂಲ: ಕ್ಷೇತ್ರಕಾರ್ಯದ ಮಾಹಿತಿ)

ಹಾಲಕ್ಕಿಗಳು ಬೇಟೆ ಸಂಸ್ಕೃತಿಯಿಂದ ಕುಂದ್ರ ಬೇಸಾಯವನ್ನು ಕೈಗೊಂಡವರು. ನಂತರದಲ್ಲಿ ನೆಲೆನಿಂತ ಬೇಸಾಯ ಪದ್ಧತಿಯನ್ನು ಪ್ರಾರಂಭಿಸಿದವರು. ಇಂದು ಸರಳ, ಕೃಷಿ ಪದ್ಧತಿಯಿಂದ ಮಾರುಕಟ್ಟೆಯ ಅರ್ಥವ್ಯವಸ್ಥೆಗೆ ಹೊಂದಿಕೊಂಡಿದ್ದಾರೆ. ಅವರಲ್ಲಿ ಶಿಕ್ಷಣ ಪಡೆದವರು ಶೇ. ೪.೩೨ರಷ್ಟು ಕೃಷಿಯೇತರ ರಂಗದಲ್ಲಿ ನೆಲೆಗೊಂಡಿದ್ದಾರೆ. ಈ ಎಲ್ಲಾ ಬದಲಾವಣೆಗೆ ಶಿಕ್ಷಣವು ಒಂದು ಪ್ರಮುಖ ಸೂಚಿಯಾಗಿದೆ. ಇಂದು ಹಾಲಕ್ಕಿಗಳಿಗೆ ತಮ್ಮ ಮೂಲ ಕಸುಬಾದ ಒಕ್ಕಲುತನದಲ್ಲಿ ಆಸಕ್ತಿ ಕಡಿಮೆಯಾಗಿದೆ. ಶಿಕ್ಷಣ ಪಡೆದವರು ಸರ್ಕಾರಿ ಅಥವಾ ಖಾಸಗಿ ಉದ್ಯೋಗ ಪಡೆಯಲು ಇಚ್ಛಿಸುತ್ತಿದ್ದಾರೆ.

ದುಡಿಮೆಯ ಅವಧಿಯಲ್ಲಿ ಬದಲಾವಣೆ

ಹಾಲಕ್ಕಿ ಮಹಿಳೆಯರು ಕೃಷಿಯಲ್ಲಿ ಶೇ. ೯೫.೬೧ರಷ್ಟು ತೊಡಗಿಸಿಕೊಂಡಿದ್ದಾರೆ. ಸಮುದಾಯದ ಲಿಂಗಾಧಾರಿತ ಶ್ರಮ ವಿಭಜನೆಯಿಂದ ಮನೆಯೊಳಗಿನ ದುಡಿಮೆಯನ್ನೂ ನಿರ್ವಹಿಸಿರುತ್ತಾರೆ. ಕೃಷಿಯಲ್ಲಿ ಹಾಲಕ್ಕಿ ಮಹಿಳೆಯರು ಕಾರ್ಮಿಕಳಾಗಿ ಕೂಡಾ ದುಡಿಮೆ ಮಾಡುತ್ತಾರೆ.

ಹಾಲಕ್ಕಿ ಮಹಿಳೆಯರು ಹೆಚ್ಚಿನ ಶ್ರಮವನ್ನು ಹೊರಗಿನ ದುಡಿಮೆಯಲ್ಲಿ ತೊಡಗಿಸುತ್ತಾರೆ. ಅರಣ್ಯ ಉತ್ಪನ್ನದ ಸಂಗ್ರಹಣೆ, ಕಾಯಿಪಲ್ಯೆ ಬೆಳೆಸುವುದು ಮತ್ತು ಮಾರಾಟ, ತೋಟದಲ್ಲಿ

ಕಾರ್ಮಿಕಳಾಗಿ ದುಡಿಮೆ ಮಾಡುವುದು. ಹೀಗೆ ಹಾಲಕ್ಕಿ ಮಹಿಳೆಯರು ಸಮಯವನ್ನು ಉತ್ಪನ್ನದಾಯಕ ದುಡಿಮೆಯಲ್ಲಿ ತೊಡಗಿಸಿಕೊಳ್ಳುತ್ತಾಳೆ.

ಕೋಷ್ಟಕ ೫.೨೭

ಹಾಲಕ್ಕಿ ಮಹಿಳೆಯ ದುಡಿಮೆಯ ಪಟ್ಟಿ

ಕ್ರಸಂ.	ವಿವರಣೆ (ದುಡಿಯುವ ಅವಧಿ)	ಅಂಕೋಲಾ ಸೀಮೆ	ಕುಮಟಾ ಸೀಮೆ	ಒಟ್ಟು ಶೇ.
೧.	೧೦ರಿಂದ ೧೨ ತಾಸು	೫.೨೩	೩	೪.೩೨
೨.	೧೨ರಿಂದ ೧೪ ತಾಸು	೯೪.೧	೯೭	೯೬.೬೭
೩.	ಹಾ.ಮಹಿಳಾ ಸಾಕ್ಷರತೆ	೫೬.೪೭	೪೫	೫೦.೩೭

(ಮೂಲ: ಕ್ಷೇತ್ರಕಾರ್ಯದ ಮಾಹಿತಿ)

ಶಿಕ್ಷಣವು ಹಾಲಕ್ಕಿ ಮಹಿಳೆಯರಿಗೆ ಉದ್ಯೋಗದ ಅವಕಾಶವನ್ನು ಪಡೆದುಕೊಳ್ಳುವಂತೆ ಮಾಡಿದೆ. ಹೆಚ್ಚಿನ ಹಾಲಕ್ಕಿ ಮಹಿಳೆಯರು ಪ್ರಾಥಮಿಕ, ಮಾಧ್ಯಮಿಕ ಶಿಕ್ಷಕಿಯರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಉದ್ಯೋಗದಲ್ಲಿರುವ ಶೇ. ೪.೩೨ರಷ್ಟು ಮಹಿಳೆಯರ ದುಡಿಮೆಯ ಅವಧಿಯು ಇತರ ಮಹಿಳೆಯರಿಗಿಂತ ಕಡಿಮೆಯಿದೆ.

ಕೋಷ್ಟಕದಲ್ಲಿ ಅಂಕೋಲಾ ಸೀಮೆಯಲ್ಲಿ ಶೇ. ೫.೨೩ರಷ್ಟು ಮಹಿಳೆಯರ ೧೨ ತಾಸು ದುಡಿಮೆ ಮಾಡುತ್ತಾರೆ. ಸಾಕ್ಷರತೆ ಪ್ರಮಾಣ ಕಡಿಮೆವಿರುವ ಕುಮಟಾ ಸೀಮೆಯಲ್ಲಿ ಶೇ. ೩ರಷ್ಟು ಮಹಿಳೆಯರು ೧೨ ತಾಸು ದುಡಿಮೆ ಮಾಡುತ್ತಾರೆ. ಶಿಕ್ಷಣವು ಮಹಿಳೆಯ ದುಡಿಮೆ ಮೇಲೆ ಅನುಕೂಲಕರವಾದ ಪರಿಣಾಮ ಬೀರಿದೆ. ಸರ್ಕಾರಿ ದುಡಿಮೆ ಮಾಡುವ ಮಹಿಳೆಯರು ತಮ್ಮ ಕುಟುಂಬಕ್ಕೆ ಆರ್ಥಿಕ ಬೆಂಬಲವನ್ನು ಒದಗಿಸುತ್ತಿದ್ದಾರೆ. ಹೀಗಾಗಿ ಕುಟುಂಬದಲ್ಲಿ ಅವಳಿಗೆ ಹೆಚ್ಚಿನ ಗೌರವ ಕೂಡಾ ಸಿಗುತ್ತಿದೆ. ಶಿಕ್ಷಣವು ಸಮುದಾಯದ ಸಾಮಾಜಿಕ ಮೌಲ್ಯದಲ್ಲಿ ಸಹ ನಿಧಾನವಾಗಿ ಬದಲಾವಣೆ ಉಂಟುಮಾಡಿದೆ.

ಆದಾಯದ ಬದಲಾವಣೆ

ಶಿಕ್ಷಣವು ಮಾನವನ ಸಮರ್ಥ್ಯವನ್ನು ಹೆಚ್ಚಿಸುವ ಸಾಧನವಾಗಿದೆ. ಶಿಕ್ಷಣವು ಹಾಲಕ್ಕಿಗಳ ವ್ಯಕ್ತಿತ್ವವನ್ನು ಹೆಚ್ಚಿಸಿದೆ. ಶಿಕ್ಷಣದ ಮೂಲಕವಾಗಿ ಹಾಲಕ್ಕಿಗಳು ತಮ್ಮ ಆರ್ಥಿಕ, ರಾಜಕೀಯ ಮತ್ತು ಧಾರ್ಮಿಕ ಕಾರ್ಯವನ್ನು ಪರಿಣಾಮಕಾರಿಯಗಿ ನಿರ್ವಹಿಸುತ್ತಿರುವುದು ಕಂಡು ಬಂದಿದೆ.

ಅಧ್ಯಯನ ಸೀಮೆಯ ಆದಾಯದ ಮೇಲೆ ಮೂರು ಗುಂಪುಗಳಾಗಿ ವಿಂಗಡಿಸಿಕೊಳ್ಳಲಾಗಿದೆ. ಕಡಿಮೆ ಆದಾಯದ ಗುಂಪು, ಮಧ್ಯಮ ಆದಾಯದ ಗುಂಪು ಮತ್ತು ಹೆಚ್ಚು ಆದಾಯದ ಗುಂಪು.

ಕೋಷ್ಟಕ ೫.೨೮

ಹಾಲಕ್ಕಿಗಳ ಆದಾಯ ಮಟ್ಟದ ಪಟ್ಟಿ

ಕ್ರಸಂ.	ವಾರ್ಷಿಕ ಆದಾಯ	ಅಂಕೋಲಾ ಸೀಮೆ	ಕುಮಟಾ ಸೀಮೆ	ಒಟ್ಟು ಶೇ.
೧.	ಕಡಿಮೆ ಆದಾಯ ರೂ. ೧೦೦೦-೧೦,೦೦೦.	೪೬.೬೬	೬೬	೫೪.೦೫
೨.	ಮಧ್ಯಮ ಆದಾಯ ರೂ. ೧೦,೦೦೦-೨೦,೦೦೦.	೩೯.೯೯	೩೦	೩೪.೫೯
೩.	ಹೆಚ್ಚು ಆದಾಯ ರೂ. ೨೦,೦೦೦ ಅಧಿಕ -	೮.೨	೪	೫.೯೪
೪.	ಒಟ್ಟು ಸಾಕ್ಷರತೆ	೫೭.೬೪	೪೭.೦೫	೫೦.೭೮

(ಮೂಲ: ಕ್ಷೇತ್ರಕಾರ್ಯದ ಮಾಹಿತಿ)

ಮೇಲಿನ ಕೋಷ್ಟಕದಿಂದ ಕಂಡುಬರುವುದೇನೆಂದರೆ, ಶೇ.೫೪.೦೫ ಹಾಲಕ್ಕಿಗಳು ರೂ.೧,೦೦೦ ಇರುವ ರೂ. ೧೦,೦೦೦ ಕಡಿಮೆ ಆದಾಯದ ಗುಂಪಿಗೆ, ಶೇ. ೩೪.೫೯ರಷ್ಟು ಹಾಲಕ್ಕಿಗಳು ಮಧ್ಯಮ ಆದಾಯದ ಗುಂಪಿಗೆ, ಶೇ. ೫.೯೪ರಷ್ಟು ಹಾಲಕ್ಕಿಗಳು ಹೆಚ್ಚು ಆದಾಯದ ಗುಂಪಿಗೆ ಸೇರಿದ್ದಾರೆ.

ಉದ್ಯೋಗದ ರಚನೆಯಲ್ಲಿ ಬದಲಾವಣೆ ಉಂಟಾಗಿದೆ. ಎರಡು ಸೀಮೆಗಳಲ್ಲಿನ ಉದ್ಯೋಗದ ರಚನೆಯಲ್ಲಿ ವ್ಯತ್ಯಾಸವಿದೆ. ಶಿಕ್ಷಣದ ಮಟ್ಟವು ಈ ಅಸಮಾನತೆಗೆ ಒಂದು ಕಾರಣವಾಗಿದೆ ಎಂಬುದನ್ನು ಗುರುತಿಸಬಹುದಾಗಿದೆ.

ಎರಡು ಸೀಮೆಗಳಲ್ಲಿ ಆದಾಯದ ಅಸಮಾನತೆ ಕಂಡುಬರುತ್ತದೆ. ಆದಾಯಕ್ಕೂ ಶಿಕ್ಷಣ ಮಟ್ಟಕ್ಕೂ ನೇರ ಸಂಬಂಧವಿರುವುದನ್ನು ಗುರುತಿಸಬಹುದಾಗಿದೆ. ಹೀಗಾಗಿ ಶಿಕ್ಷಣವು ಬದಲಾವಣೆಯ ಪ್ರಮುಖ ಅಂಶವೆಂದು ಗುರುತಿಸಬಹುದಾಗಿದೆ.

ಕೋಷ್ಟಕ ೫.೨೯

ಬಿ.ಪಿ.ಎಲ್ ಮತ್ತು ಎ.ಪಿ.ಎಲ್ ಕಾರ್ಡ್ ಹೊಂದಿರುವವರ ಪಟ್ಟಿ

ಕ್ರಸಂ.	ವಿವರ	ಅಂಕೋಲಾ ಸೀಮೆ	ಕುಮಟಾ ಸೀಮೆ	ಒಟ್ಟು ಶೇ.
೧.	ಬಿ.ಪಿ.ಎಲ್	೮೫.೮೮	೯೦	೮೮.೧೮
೨.	ಎ.ಪಿ.ಎಲ್	೧೩.೧೧	೧೦	೧೧.೮೯
೩.	ಒಟ್ಟು ಸಾಖ್ಷರತೆ	೫೭.೬೪	೪೭.೫	೫೨.೭೮

(ಮೂಲ: ಕ್ಷೇತ್ರಕಾರ್ಯದ ಮಾಹಿತಿ)

ಜೀವನಮಟ್ಟದ ಬದಲಾವಣೆ

ಅಧ್ಯಯನ ಪ್ರದೇಶದ ತಿಂಗಳ ವೆಚ್ಚದ ಆಧಾರದ ಮೇಲಿಂದ ನಾಲ್ಕು ಗುಂಪುಗಳನ್ನಾಗಿ ವಿಂಗಡಿಸಲಾಗಿದೆ.

ಕೋಷ್ಟಕ ೫.೩೦

ತಿಂಗಳ ವೆಚ್ಚದ ಪಟ್ಟಿ

ಕ್ರಸಂ.	ವೆಚ್ಚದ ಗುಂಪುಗಳು	ಅಂಕೋಲಾ ಸೀಮೆ	ಕುಮಟಾ ಸೀಮೆ
೧.	ರೂ. ೩೦೦ರಿಂದ ರೂ.೫೦೦	೨೯.೪	೬೧
೨.	ರೂ. ೫೦೦ರಿಂದ ರೂ.೧೦೦೦	೫೬.೨೫	೩೩
೩.	ರೂ. ೧೦೦೦ರಿಂದ ರೂ.೩೦೦೦	೭.೦೫	೨
೪.	ರೂ. ೩೦೦೦ಕ್ಕಿಂತ ಅಧಿಕ	೭.೦೫	೪
೫.	ಒಟ್ಟು ಸಾಕ್ಷರತೆ	೫೭.೬೪	೪೭.೫

(ಮೂಲ: ಕ್ಷೇತ್ರಕಾರ್ಯದ ಮಾಹಿತಿ)

ಅಧ್ಯಯನ ಸೀಮೆಗಳಲ್ಲಿ ವೆಚ್ಚದಲ್ಲಿ ಅಸಮಾನತೆಯಿದೆ. ಅಭಿವೃದ್ಧಿಯ ಫಲವನ್ನು ಪಡೆದಿರುವ ಹಾಲಕ್ಕಿಗಳೂ ತಮ್ಮ ಆರ್ಥಿಕ ಸ್ಥಿತಿಯನ್ನು ಸುಧಾರಿಸಿಕೊಂಡಿರುವುದು ಕಂಡುಬರುತ್ತಿದೆ. ಸಾಕ್ಷರತಾ ಹೆಚ್ಚಿರುವ ಅಂಕೋಲಾ ಸೀಮೆಯ ಹಾಲಕ್ಕಿಗಳಲ್ಲಿ ತಿಂಗಳ ವೆಚ್ಚದ ಪ್ರಮಾಣವು ಸಾಕ್ಷರತೆ ಕಡಿಮೆ ಇರುವ ಕುಮಟಾ ಸೀಮೆಗಿಂತ ಹೆಚ್ಚಿರುವುದು ಅಧ್ಯಯನದಿಂದ ಕಂಡುಬರುತ್ತದೆ. ಹೆಚ್ಚಿನ ಸಾಕ್ಷರತೆ ಪ್ರಮಾಣವು ಅಂಕೋಲಾ ಸೀಮೆಯ ಹಾಲಕ್ಕಿಗಳ ಉದ್ಯೋಗದ ಸಾಧ್ಯತೆಯನ್ನು ಹೆಚ್ಚಿಸುವುದರ ಮೂಲಕ ಅವರ ವೆಚ್ಚದ ಸಾಮರ್ಥ್ಯದಲ್ಲಿ ಏರಿಕೆಯನ್ನು ಉಂಟು ಮಾಡಿರುವುದು ಕಂಡುಬರುತ್ತದೆ.

ಲಿಂಗ ಸಮಾನತೆಯ ಅರಿವು

ಶಿಕ್ಷಣದ ಮೂಲ ಉದ್ದೇಶವು ಅರಿವನ್ನು ಉಂಟು ಮಾಡುವುದು. ಶಿಕ್ಷಣವು ಸಮಾನತೆಯನ್ನು ಸಾಧಿಸುವ ಸಾಧನವಾಗಿದೆ. ಅಧ್ಯಯನ ಪ್ರದೇಶವು ೧೯೫೬ರವರೆಗೆ ಮುಂಬೈ ಕರ್ನಾಟಕಕ್ಕೆ ಸೇರಿದ ಪ್ರಾಂತ್ಯವಾಗಿತ್ತು. ಭಾರತದಲ್ಲಿ ೧೯೨೮ರಲ್ಲಿ ಶಿಕ್ಷಣವನ್ನು ಕಡ್ಡಾಯಗೊಳಿಸಿದ ರಾಜ್ಯವೇ ಮುಂಬೈ ೧೯೫೦ರ ನಂತರ ರಾಜ್ಯ ಸರ್ಕಾರವು ಶಿಕ್ಷಣಕ್ಕೆ ಹೆಚ್ಚಿನ ಪ್ರಾಶಸ್ತ್ಯವನ್ನು ನೀಡಿದೆ. ಗ್ರಾಮೀಣ ಪ್ರದೇಶದಲ್ಲಿ ಶಿಕ್ಷಣದ ಸೌಲಭ್ಯವನ್ನು ನೀಡಿದ್ದರಿಂದ ಹಿಂದುಳಿದ ವರ್ಗದವರಲ್ಲಿ ಅರಿವನ್ನು ಉಂಟು ಮಾಡಿರುವುದನ್ನು ಗುರುತಿಸಲಾಗಿದೆ.

ಕೋಷ್ಟಕ ೫.೩೧

ಲಿಂಗ ಸಮಾನತೆಯ ಮನೋಭಾವದ ಪಟ್ಟಿ

ಕ್ರಸಂ.	ವಿವರ	ಅಂಕೋಲಾ ಸೀಮೆ	ಕುಮಟಾ ಸೀಮೆ
		ಹೌದು ಶೇ.	ಹೌದು ಶೇ.
೧.	ಬಹಳ ದಿನ ಹಬ್ಬ ಆಚರಿಸಬೇಕು	೧೬.೪೭	೯೫
೨.	ಪುರುಷರು ಮಾತ್ರ ಸುಗ್ಗಿ ಕುಣಿಯಬೇಕು	೯೫.೨೯	೧೦೦
೩.	ಸ್ತ್ರೀ ಪುರುಷರು ಸಮಾನರು	೯೨.೯೪	೧೦೦
೪.	ಪುರುಷರು ಶ್ರೇಷ್ಠರು	೩೨.೯೪	೯೨
೫.	ಗಂಡು ಮಗು ಬೇಕು	೯೪.೧೧	೯೬
೬.	ಮಹಿಳಾ ಸಾಕ್ಷರತೆ	೫೬.೪೭	೪೫

(ಮೂಲ: ಕ್ಷೇತ್ರಕಾರ್ಯದ ಮಾಹಿತಿ)

ಮೇಲಿನ ಕೋಷ್ಟಕದಿಂದ ಮಹಿಳೆಯ ಲಿಂಗ ಸಮಾನತೆಗೆ ಒಲವು ತೋರಿಸುತ್ತಿರುವುದು ಸ್ಪಷ್ಟವಾಗುತ್ತಿದೆ. ಸಾಕ್ಷರತೆ ಪ್ರಮಾಣ ಹೆಚ್ಚಿರುವ ಅಂಕೋಲಾ ಸೀಮೆಯಲ್ಲಿ ಕುಮಟಾ ಸೀಮೆಗಿಂತ ಮನೋಭಾವದಲ್ಲಿ ಹೆಚ್ಚಿನ ಪ್ರಮಾಣದ ಬದಲಾವಣೆ ಕಂಡುಬರುತ್ತದೆ. ಅಂಕೋಲದಲ್ಲಿ ಶೇ. ೩೨.೯೪ರಷ್ಟು ಪುರುಷರು ಶ್ರೇಷ್ಠ ಎಂದು ಒಪ್ಪಿಕೊಂಡರೆ, ಕುಮಟಾದಲ್ಲಿ ಶೇ. ೯೨ರಷ್ಟು ಮಹಿಳೆಯರು ಪುರುಷರು ಶ್ರೇಷ್ಠರೆಂದು ಒಪ್ಪಿಕೊಂಡಿದ್ದಾರೆ. ಗಂಡು ಮಗುವಿನ ಬಗ್ಗೆ ಒಲವನ್ನು ಕಡಿಮೆ ಮಾಡುವಲ್ಲಿ ಶಿಕ್ಷಣ ವಿಫಲವಾಗಿದೆ. ಆದ್ದರಿಂದ ಶಿಕ್ಷಣಕ್ಕಿಂತ ಸಂಸ್ಕೃತಿಯ ಪ್ರಭಾವವೇ ಹಾಲಕ್ಕಿ ಮಹಿಳೆಯರ ಮೇಲೆ ಹೆಚ್ಚಿನ ಪ್ರಭಾವ ಬೀರುತ್ತಿರುವುದು ಕಂಡುಬರುತ್ತದೆ.

ಶಿಕ್ಷಣ ಮತ್ತು ಸಮಾನತೆಯ ನಡುವೆ ನೇರ ಸಂಬಂಧವಿರುವುದನ್ನು ಗುರುತಿಸಬಹುದಾಗಿದೆ. ಶಿಕ್ಷಣಮಟ್ಟ ಹೆಚ್ಚಿರುವ ಅಂಕೋಲಾ ಸೀಮೆಯ ಮಹಿಳೆಯರ ಮನೋಭಾವದಲ್ಲಿ ಹೆಚ್ಚಿನ ಪ್ರಮಾಣದ ಬದಲಾವಣೆಯಿಂದಾಗಿ ಈ ಅಂಶವನ್ನು ಗುರುತಿಸಬಹುದಾಗಿದೆ.

ರಾಜಕೀಯದಲ್ಲಿ ಬದಲಾವಣೆ

ಇಂದಿಗೂ ಸಹ ಹಾಲಕ್ಕಿಗಳು ತಮ್ಮ ಸಾಂಪ್ರದಾಯಿಕ ಸಂಸ್ಥೆಯ ಬಗ್ಗೆ ಆದರವನ್ನು ಹೊಂದಿರುವರು. ಸಾಮಾಜಿಕ ಸಂಸ್ಥೆಯ ವಿವಿಧ ಪದಾಧಿಕಾರಿಗಳಾದ ಊರಗೌಡ, ಸೀಮೆಗೌಡ, ಅರಸುಗೌಡ, ಕೋಲ್ಕರನನ್ನು ಗೌರವಿಸುತ್ತಾರೆ. ಇವರಲ್ಲಿ ಅಧಿಕಾರವು ವಂಶಪರಂಪರೆಯಿಂದ ಬರುತ್ತದೆ.

ಪ್ರಸ್ತುತ ಪ್ರಜಾಪ್ರಭುತ್ವ ವ್ಯವಸ್ಥೆಯ ಫಲವಾಗಿ ಗ್ರಾಮೀಣ ಪ್ರದೇಶದಲ್ಲಿ ಗ್ರಾಮ ಪಂಚಾಯತಿ ಪದ್ಧತಿ ಜಾರಿಯಾದ ಮೇಲೆ ಸಾಂಪ್ರದಾಯಿಕ ಸಂಸ್ಥೆಯ ಅಧಿಕಾರ ಕಡಿಮೆಯಾಯಿತು. ಇಂದು ಹಾಲಕ್ಕಿಗಳು ಗ್ರಾಮೀಣ ಮಟ್ಟದ, ತಾಲೂಕು ಮಟ್ಟದ, ಜಿಲ್ಲಾಮಟ್ಟದ, ರಾಜ್ಯಮಟ್ಟದ ಅಧಿಕಾರ ವ್ಯವಸ್ಥೆಯಲ್ಲಿ ಪಾಲ್ಗೊಳ್ಳುವುದು ಕಂಡುಬರುತ್ತದೆ. ಇದುವರೆಗೆ ಈ ಸಮುದಾಯದ ಇಬ್ಬರು ಪುರುಷರು ವಿಧಾನ ಸಭೆಯನ್ನು ಪ್ರತಿನಿಧಿಸಿದ್ದಾರೆ. ಪ್ರಸ್ತುತ ಹಾಲಕ್ಕಿ ಮಹಿಳೆಯೊಬ್ಬರು ಉತ್ತರ ಕನ್ನಡ ಜಿಲ್ಲಾ ಪಂಚಾಯತಿಯ ಅಧ್ಯಕ್ಷರಾಗಿರುವರು.

ಶಿಕ್ಷಣವು ಹಾಲಕ್ಕಿ ಮಹಿಳೆಯರಿಗೆ ರಾಜಕೀಯ ಪ್ರವೇಶಿಸಲು ಅನುವು ಮಾಡಿಕೊಟ್ಟಿದೆ. ಏಕೆಂದರೆ, ಶಿಕ್ಷಣ ಪಡೆದವರು ರಾಜಕೀಯದಲ್ಲಿ ಕ್ರಿಯಾಶೀಲರಾಗಿರುವುದು ಕಂಡುಬರುತ್ತದೆ. ಹಾಲಕ್ಕಿಗಳು ರಾಜಕೀಯ ಪಕ್ಷದ ಸದಸ್ಯರಾಗಿ, ಬೆಂಬಲಿಗರಾಗಿ, ಕಾರ್ಯನಿರ್ವಹಿಸುತ್ತಿದ್ದಾರೆ. ಶಿಕ್ಷಣವು ಹಾಲಕ್ಕಿಗಳಲ್ಲಿ ರಾಜಕೀಯದ ಅರಿವು ಮೂಡಿಸುವಲ್ಲಿ ಸಹಕಾರಿಯಾಗಿದೆ. ರಾಜಕೀಯದ ಮೂಲಕ ತಮ್ಮ ಸಮುದಾಯದ ಆಸಕ್ತಿಯನ್ನು ಕಾಪಾಡಲು (ಪರಿಶಿಷ್ಟ ಪಂಗಡಕ್ಕೆ ಸೇರಿಸಲು) ಹೋರಾಡುತ್ತಿದ್ದಾರೆ.

ನಾಯಕತ್ವ

ಶಿಕ್ಷಣದಿಂದಾಗಿ ಹಾಲಕ್ಕಿ ಸಮುದಾಯದಲ್ಲಿ ಹೊಸ ಧುರೀಣತ್ವ ಕಂಡುಬರುತ್ತಿದೆ. ಸಾಂಪ್ರದಾಯಿಕ ಸಂಸ್ಥೆಯ ಪದಾಧಿಕಾರಿಗಳು ಶಿಕ್ಷಣ ಪಡೆಯದವರೆಂದು ತಮ್ಮ ಮಹತ್ವವನ್ನು ಕಳೆದುಕೊಳ್ಳುತ್ತಿದ್ದಾರೆ. ಶಿಕ್ಷಣ ಪಡೆದ ಯುವಕರು ಇಂದು ಸಾಂಪ್ರದಾಯಿಕ ಸಂಸ್ಥೆಯಲ್ಲಿ ಕ್ರಿಯಾ ಶೀಲರಾಗಿರುವುದನ್ನು ಗುರುತಿಸಲಾಗಿದೆ. ಇದರಿಂದ ಹೊಸ ಕಾರ್ಯ ಚಟುವಟಿಕೆಗಳು ಸೇರ್ಪಡೆಗೊಳ್ಳುತ್ತಿದೆ. ಶಿಕ್ಷಿತರು ತಮ್ಮ ಸಮುದಾಯದ ಸಂಸ್ಕೃತಿಯನ್ನು ರಕ್ಷಿಸಲು ಮುಂದಾಗಿದ್ದಾರೆ, ತಮ್ಮ ಸಂಸ್ಕೃತಿಯ ಬಗ್ಗೆ ತಾವೇ ಬರೆದುಕೊಳ್ಳುತ್ತಿದ್ದಾರೆ. ತಮ್ಮದೇ

ಸಂಘವನ್ನು ಕಟ್ಟಿಕೊಂಡಿದ್ದಾರೆ. ಹಾಲಕ್ಕಿಗಳು ಇಂದು ಮಾಧ್ಯಮಗಳನ್ನು ಸರಿಯಾಗಿ ಬಳಸಿಕೊಳ್ಳುವುದನ್ನು ಅರಿತುಕೊಂಡಿದ್ದಾರೆ. ಹಾಲಕ್ಕಿಗಳು ತಮ್ಮ ಸಂಸ್ಕೃತಿಯ ವಿಶೇಷ ಹಬ್ಬವಾದ ಸುಗ್ಗಿ ಹಬ್ಬವನ್ನು ಸಾರ್ವಜನಿಕ ಉತ್ಸವವನ್ನಾಗಿ ಆಚರಿಸುವುದರ ಮೂಲಕ ಇತರ ಜನಸಮುದಾಯದ ಜನರಲ್ಲಿ ತಮ್ಮ ಸಂಸ್ಕೃತಿಯ ಬಗ್ಗೆ ಅರಿವನ್ನು ಮೂಡಿಸುವ ಪ್ರಯತ್ನವನ್ನು ಮಾಡುತ್ತಿರುವುದು ಪ್ರಶಂಸನೀಯವಾಗಿದೆ.

ಈ ಮೇಲಿನ ಎಲ್ಲಾ ಅಂಶಗಳನ್ನು ಗಮನಿಸಿದಾಗ ಶಿಕ್ಷಣವು ಸಾಮಾಜಿಕ ಬದಲಾವಣೆಯ ಪ್ರಮುಖ ಸೂಚಿಯು ಮತ್ತು ಸಾಧನವು ಆಗಿದೆ ಎಂಬುವುದು ಸ್ಪಷ್ಟಗೊಳ್ಳುತ್ತದೆ. ಹಾಲಕ್ಕಿ ಸಮುದಾಯವು ಇಂದು ತೀವ್ರಗತಿಯ ಪರಿವರ್ತನೆಗೆ ಒಳಗಾಗಿದೆ. ಅದು ಪ್ರಧಾನ ಧಾರೆ ಸಂಸ್ಕೃತಿಯಲ್ಲಿ ವಿಲೀನಗೊಳ್ಳುತ್ತಿದೆ.

ಅಧ್ಯಾಯ ೬

ಉಪಸಂಹಾರ

ಅಧ್ಯಾಯ ೬

ಉಪಸಂಹಾರ

ಪ್ರಸ್ತಾವನೆ

ಪ್ರತಿಯೊಂದು ಸಂಶೋಧನೆಯ ಫಲಿತವು ಇದುವರೆಗಿನ ಅರಿವಿಗೆ ಹೊಸ ಆಯಾಮವನ್ನು ನೀಡುತ್ತದೆ. ನಾವು ನಂಬಿಕೊಂಡು ಬಂದ ಸಾಮಾನ್ಯ ಅಂಶವನ್ನು ವಿಭಿನ್ನವಾದ ದೃಷ್ಟಿಕೋನದಿಂದ ನೋಡುವಂತೆ ಮಾಡುತ್ತದೆ. ಹೊರಗಿನಿಂದ ಸಮಾಜವನ್ನು ನೋಡಿದಾಗ ಬಹು ಸುಂದರವಾಗಿ ಕಾಣಬಹುದು. ಆದರೆ, ಅದನ್ನು ಸೂಕ್ಷ್ಮವಾಗಿ ಅವಲೋಕಿಸುತ್ತಾ ಹೋದಂತೆ ಸಮುದಾಯದ ಯಾವ ಸಾಮಾಜಿಕ ಗುಂಪಿಗೆ ಅನುಕೂಲಕರವಾಗಿದೆ ಎಂಬುದು ತಿಳಿಯುತ್ತದೆ. ಆದ್ದರಿಂದ ಅಮೂರ್ತ ರೂಪದಲ್ಲಿರುವ ಸತ್ಯಗಳು ಅಧ್ಯಯನದಿಂದ ಹೊರ ಬರುತ್ತವೆ. ಈ ಅಧ್ಯಯನದ ವಸ್ತುವಾದ ಮಹಿಳೆಯರ ಸಾಮಾಜಿಕ, ಆರ್ಥಿಕ ಪರಿಕಲ್ಪನೆಯನ್ನು ಅಭಿವೃದ್ಧಿ ನೆಲೆಯಿಂದ ನೋಡಿದಾಗ ವಿಫಲಗೊಂಡಿರುವುದು ಸ್ಪಷ್ಟವಾಗುತ್ತದೆ. ಆರ್ಥಿಕ ಅಭಿವೃದ್ಧಿಯನ್ನು ಅಖಂಡವಾಗಿ ಪರಿಭಾವಿಸಿಕೊಂಡು ಬಂದರೆ ಹಾಲಕ್ಕಿಗಳ ಫಲವನ್ನು ಪಡೆಯುವಲ್ಲಿ ಅಂಚಿನಲ್ಲಿರುವುದು ತಿಳಿದುಬರುತ್ತದೆ. ಸಂವಿಧಾನದ ಎದುರು ಎಲ್ಲರೂ ಸಮಾನರು. ಈ ಸಮಾನತೆಯ ಆಧಾರದ ಮೇಲೆ ಯೋಜನೆಗಳು ರೂಪಿತಗೊಂಡವು. ಆದರಿಂದ ಅಸಮಾನತೆಯಿಂದ ಕೂಡಿದ ಈ ಸಮಾಜದಲ್ಲಿ ರಚನಾತ್ಮಕವಾದ ಬದಲಾವಣೆ ಉಂಟುಮಾಡುವಲ್ಲಿ ಯೋಜನೆಗಳು ವಿಫಲಗೊಂಡವು. ಆದರಿಂದಲೇ ಸಮುದಾಯದ ಎರಡು ಗುಂಪಿನ ನಡುವೆ ಅಸಮಾನತೆ ಬೆಳೆಯಿತು. ಹೀಗಾಗಿ ಅಭಿವೃದ್ಧಿ ಲಿಂಗ ನಿರಪೇಕ್ಷವೆಂದು ಗುರುತಿಸಲಾಯಿತು. ಅಭಿವೃದ್ಧಿಯ ಪರಿಕಲ್ಪನೆಗೆ ಸಾಮಾಜಿಕ ಅಂಶಗಳನ್ನು ಒಳಗೊಳ್ಳುವಂತೆ ಮಾಡಲಾಯಿತು. ಅಮರ್ತ್ಯ ಸೇನ್‌ರವರು ಹೇಳುವಂತೆ ಬದುಕನ್ನು ಉತ್ತಮಪಡಿಸುವುದೇ ಅಭಿವೃದ್ಧಿ.

ಅಭಿವೃದ್ಧಿಯು ಜನರಿಗೆ ಜೀವನದಲ್ಲಿ ಭರವಸೆಯನ್ನು ಮೂಡಿಸಬೇಕು. ಇದರ ಮೂಲಕವಾಗಿ ಹಲವಾರು ಗುರಿಗಳನ್ನು ಸಾಧಿಸುವ ಉದ್ದೇಶವನ್ನು ಹೊಂದಿರಬೇಕು.

ಈ ಹಿನ್ನೆಲೆಯಲ್ಲಿ ಹಾಲಕ್ಕಿ ಜನಸಮುದಾಯದ ಮಹಿಳೆಯರ ಬದುಕನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸಲಾಗಿದೆ. ಜನಪದ ಅಧ್ಯಯನದಲ್ಲಿ ಹಾಲಕ್ಕಿ ಸಮುದಾಯದಲ್ಲಿ ಪುರುಷರು ಮತ್ತು ಮಹಿಳೆಯರು ಸಮಾನರು ಎಂದು ಭಾವಿಸಲಾಗಿದೆ. ಹಾಲಕ್ಕಿ ಸಮುದಾಯವು ಇದೇ ಸಮಾಜದ ಒಂದು ಭಾಗವಾಗಿದೆ. ವಿಶಾಲ ಸಮಾಜದಲ್ಲಿರುವ ಅಸಮಾನತೆಯು ಕೂಡಾ ಸೂಕ್ಷ್ಮ ಮಟ್ಟದಲ್ಲಿ ಕಂಡುಬರುತ್ತದೆ. ಹಾಲಕ್ಕಿ ಸಮುದಾಯದಲ್ಲಿ ಮಹಿಳೆಯರಿಗೆ ಹೆಚ್ಚು ಸ್ವಾತಂತ್ರ್ಯವಿದೆ ಎಂದು ಭಾವಿಸಿಕೊಳ್ಳಲಾಗಿದೆ. ಹೀಗಾಗಿ ಈ ಸಮುದಾಯದಲ್ಲಿ ಮಹಿಳೆಯರು ಶೋಷಣೆಗೆ ಒಳಗಾದವರು ಎಂದು ತಿಳಿಯಲಾಗಿದೆ. ಹೊರಗಿನಿಂದ ಸಮುದಾಯ ನೋಡಿದಾಗ ಹಾಗೆ ಅನಿಸುತ್ತದೆ. ಆದರೆ, ವಾಸ್ತವಿಕವಾಗಿ ಮಹಿಳೆಯರ ಜೀವನವನ್ನು ವಿಶ್ಲೇಷಣಾತ್ಮಕವಾಗಿ ಅಧ್ಯಯನ ಮಾಡಿದಾಗ ಒಳನೋಟಗಳನ್ನು ಅರಿಯಬಹುದು. ಸಮುದಾಯದಲ್ಲಿನ ಸಾಮಾಜಿಕ ರಚನೆ ಮತ್ತು ಆದರ್ಶಗಳಿಂದ ಹಾಲಕ್ಕಿ ಮಹಿಳೆಯರ ಸ್ಥಾನವನ್ನು ಅರಿಯಲಾಗಿದೆ. ಹೀಗಾಗಿ ಸಮುದಾಯದ ಸಾಮಾಜಿಕ-ಆರ್ಥಿಕ ರಚನೆ, ಧಾರ್ಮಿಕ ನಂಬಿಕೆ, ಸಾಮಾಜಿಕ ನಿಯಂತ್ರಣ ಎಲ್ಲವನ್ನು ಗಣನೆಯಲ್ಲಿ ತೆಗೆದುಕೊಳ್ಳಲಾಗಿದೆ.

ಆರ್ಥಿಕ ಯೋಜನೆಗಳನ್ನು ರೂಪಿಸಿಕೊಂಡ ಮಾತ್ರದಿಂದಲೇ ಸಮಾಜದಲ್ಲಿ ಪರಿವರ್ತನೆ ಉಂಟಾಗುತ್ತದೆ ಎಂದು ಭಾವಿಸಲಾಗದು. ಏಕೆಂದರೆ ಸಮುದಾಯದಲ್ಲಿನ ಬದಲಾವಣೆ ಕೇವಲ ಆರ್ಥಿಕ ದೃಷ್ಟಿಕೋನದಿಂದ ಮಾತ್ರ ನೋಡದೆ ಸಾಮಾಜಿಕ ನೆಲೆಯಿಂದ ನೋಡಬೇಕು. ಹೀಗಾಗಿ ಹಾಲಕ್ಕಿ ಮಹಿಳೆಯರಲ್ಲಿ ಉಂಟಾಗುತ್ತಿರುವ ಪರಿವರ್ತನೆಯನ್ನು ಬಹು ನೆಲೆಯಿಂದ ನೋಡುವ ಅವಶ್ಯಕತೆಯಿದೆ. ನಾವು ಬಹುನೆಲೆಯಿಂದ ಅಭಿವೃದ್ಧಿಯನ್ನು ನೋಡದ ಕಾರಣ ಮಹಿಳೆಯರ ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ.

ಅಭಿವೃದ್ಧಿಯ ಲಿಂಗ ಪರಿಕಲ್ಪನೆಯು ಮಹತ್ವದ ಪಾತ್ರ ಪಡೆದುಕೊಂಡಿದೆ. ಆದರೆ, ಅಂಚಿನಲ್ಲಿರುವ ಹಾಲಕ್ಕಿ ಮಹಿಳೆಯರ ದೃಷ್ಟಿಯಿಂದ ನೋಡುವುದು ಅವಶ್ಯಕವಾಗಿದೆ. ಹಾಲಕ್ಕಿ ಮಹಿಳೆಯರು ಅಭಿವೃದ್ಧಿ ಫಲವನ್ನು ಪಡೆದುಕೊಳ್ಳುತ್ತಿದ್ದಾರೆಯೋ? ಎಂಬುವುದನ್ನು ತಿಳಿಯಲು ಆ ಸಮುದಾಯದ ಸಾಮಾಜಿಕ, ಆರ್ಥಿಕ ರಚನೆ, ಧಾರ್ಮಿಕ ನಂಬಿಕೆ, ಸಾಮಾಜಿಕ ನಿಯಂತ್ರಣವನ್ನು ಪರಿಗಣನೆಗೆ ತೆಗೆದುಕೊಳ್ಳಬೇಕಾಗಿದೆ. ಈ ಸಮುದಾಯದಲ್ಲಿ ಸಾಮಾಜಿಕವಾಗಿ ಮಹಿಳೆಗೆ ಹೆಚ್ಚಿನ ಸ್ಥಾನ ನೀಡಿರಬಹುದು. ಈ ಸ್ಥಾನವು ಸಾಮಾನ್ಯ

ಮಹಿಳೆಯರಿಗೆ ಹೋಲಿಸಿದಾಗ ಆ ಪ್ರಾಧ್ಯಾನತೆ ಇರಲಾರದು. ಆದುದರಿಂದ ಸ್ಥಾನದ ಪರಿಕಲ್ಪನೆ ಜಟಿಲವಾಗಿದೆ. ಮೇಲ್ವರ್ಗದಲ್ಲಿ ಸ್ಥಾನವು ಆಸ್ತಿಯ ಮೇಲೆ ನಿಂತಿರಬಹುದು. ಆದರೆ, ಹಾಲಕ್ಕಿಗಳಲ್ಲಿ ಸ್ಥಾನವು ಸಂಸ್ಕೃತಿಯ ಮೇಲೆ ನಿಂತಿರಬಹುದು(ಮಾರ್ಕ್ಸ್ ವೆಬರ್-೧೯೪೬). ಹೀಗಾಗಿ ಈ ಅಧ್ಯಯನದಲ್ಲಿ ಅಭಿವೃದ್ಧಿಯನ್ನು ಸಾಮಾಜಿಕ ನೆಲೆಯಿಂದ ನೋಡಲಾಗಿದೆ.

ಹಾಲಕ್ಕಿ ಮಹಿಳೆಯರ ಸಾಮಾಜಿಕ ಆರ್ಥಿಕ ಪರಿವರ್ತನೆ ನೆಲೆಗಳು. ಒಂದು ಅಧ್ಯಯನದ ಸಂಶೋಧನೆಯಲ್ಲಿ ರೂಪಿಸಿಕೊಂಡಿರುವ ಪ್ರಶ್ನೆಯೆಂದರೆ ಹಾಲಕ್ಕಿಗಳೇಕೆ ಅಭಿವೃದ್ಧಿಯ ಪ್ರಕ್ರಿಯೆಯಲ್ಲಿ ಹಿಂದುಳಿದಿದ್ದಾರೆ? ಹಾಲಕ್ಕಿ ಮಹಿಳೆಯರ ಸಾಮಾಜಿಕ ಮತ್ತು ಆರ್ಥಿಕ ನೆಲೆಗಳ ಸ್ವರೂಪವೇನು? ಎಂಬುದಾಗಿದೆ. ಹಾಲಕ್ಕಿ ಮಹಿಳೆಯರ ಬಗೆಗಿನ ಇದುವರೆಗಿನ ತಾತ್ವಿಕ ತಿಳುವಳಿಕೆಗೂ ಮತ್ತು ವಾಸ್ತವಿಕ ತಿಳುವಳಿಕೆಗೂ ಇರುವ ವ್ಯತ್ಯಾಸವೇನು? ಹಾಲಕ್ಕಿ ಮಹಿಳೆಯರ ದುಡಿಮೆಯ ಸ್ವರೂಪವೇನು? ಇವೆ ಮೊದಲಾದ ಪ್ರಶ್ನೆಗಳಿಗೆ ಉತ್ತರವನ್ನು ಕಂಡುಕೊಳ್ಳಲು ಪ್ರಯತ್ನಿಸಲಾಗಿದೆ. ಈ ನೆಲೆಯಲ್ಲಿ ಅಧ್ಯಯನ ಸಾರಾಂಶ, ಫಲಿತಗಳು, ಸಲಹೆಗಳು ಮತ್ತು ಹೊಸ ಅಧ್ಯಯನದ ಸಾಧ್ಯತೆಗಳನ್ನು ನೀಡಲಾಗಿದೆ.

೭.೧. ಅಧ್ಯಯನದ ಸಾರಾಂಶ

ಪ್ರಸ್ತುತ ಅಧ್ಯಯನವು ಎಂಪಿರಿಕಲ್ ಆಗಿದ್ದರೂ ಅದಕ್ಕೆ ಪೂರಕವಾದ ತಾತ್ವಿಕ ಸಂಗತಿಯನ್ನು ಚರ್ಚಿಸಲಾಗಿದೆ. ಇಂದು ಲಿಂಗ ಸಮಾನತೆಯನ್ನು ಸಾಧಿಸುವುದು ಅಭಿವೃದ್ಧಿಯ ಗುರಿಯಾಗಿದೆ. ಸಮಾಜದ ಒಂದು ಭಾಗವಾಗಿರುವ ಮಹಿಳೆಯರನ್ನು ಅಭಿವೃದ್ಧಿಯಿಂದ ಹೊರಗಿಟ್ಟ ಕಾರಣ ಮಹಿಳಾ ಅಭಿವೃದ್ಧಿಗೆ ಹೆಚ್ಚಿನ ಒತ್ತನ್ನು ನೀಡುತ್ತಿರುವುದು ಕಂಡುಬರುತ್ತಿದೆ. ಭಾರತದಂತಹ ಬಹುರೂಪಿ, ಸಾಮಾಜಿಕ ವ್ಯವಸ್ಥೆಯಲ್ಲಿ ಮಹಿಳೆಯರ ಪಾತ್ರಗಳು ವಿಭಿನ್ನವಾಗಿರುತ್ತದೆ. ನಮ್ಮ ಸಮಾಜದಲ್ಲಿರುವ ಅಸಮಾನತೆ, ಜಾತೀಯತೆ, ಲಿಂಗ ತಾರತಮ್ಯ ಶ್ರೇಣೀಕರಣ ಎಲ್ಲವೂ ಅಭಿವೃದ್ಧಿಗೆ ತಡೆಗಳಾಗಿವೆ. ಇದರಿಂದಾಗಿ ಸಮಾಜದ ತಳದಲ್ಲಿರುವರಿಗೆ ಅಭಿವೃದ್ಧಿಯ ಹೆಚ್ಚಿನ ಪ್ರಯೋಜನೆ ಪಡೆದುಕೊಳ್ಳಲು ಆಗದೇ ಇರುವುದು ಸ್ಪಷ್ಟವಾಗುತ್ತದೆ.

ಸಮುದಾಯ ಒಂದರಲ್ಲಿ ಸಾಮಾಜಿಕ ಆರ್ಥಿಕ ಬದಲಾವಣೆಯು ಈ ಮೇಲಿನ ಸಂಗತಿಗಳಿಂದ ಹೊರತಾಗಿಲ್ಲ. ಸಂವಿಧಾನದ ಎದುರು ಮಾತ್ರ ಎಲ್ಲರು ಸಮಾನರು. ಆದರೆ, ವಾಸ್ತವಿಕತೆಯಲ್ಲಿ ಸಮಾನತೆಯನ್ನು ಸಾಧಿಸುವುದು ಅಸಾಧ್ಯವಾಗಿದೆ. ಅಸಮಾನತೆಯಿಂದ ಕೂಡಿದ ಸಮಾಜದಲ್ಲಿ ಮಹಿಳೆಯರಿಗೆ ಅವಕಾಶ ಪಡೆದುಕೊಳ್ಳಲು ಸಾದ್ಯವಾಗುತ್ತಿಲ್ಲ.

ಸಮುದಾಯ ಒಂದರಲ್ಲಿ ಮಹಿಳೆಯರ ಸ್ಥಾನವು ಲಿಂಗಾಧಾರಿತವಾಗಿದೆ. ಸಾಮಾಜಿಕ ನಿಯಂತ್ರಣ ತಾಂತ್ರಿಕೆಯಿಂದ ಮಹಿಳೆಯನ್ನು ಹೊರಗಿಡಲಾಗಿದೆ.

ಸಮುದಾಯದ ಒಂದರ ಅಭಿವೃದ್ಧಿಯ ಸಹ ಆ ಸಮುದಾಯದ ಭಾಗವೇ ಆದ ಮಹಿಳೆಯರ ಸ್ಥಿತಿಯನ್ನೇ ಅವಲಂಬಿಸಿರುತ್ತದೆ.ಅದರಿಂದ ಅಭಿವೃದ್ಧಿ ಕಾರ್ಯಕ್ರಮದಲ್ಲಿ ಮಹಿಳೆಯರ ಒಳಗೊಳ್ಳವಿಕೆಯು ಬದಲಾವಣೆ ತರಲು ಸಾಧ್ಯವಾಗುತ್ತದೆ. ಒಂದು ವೇಳೆ ಸಾಂಪ್ರದಾಯಿಕ ಸ್ಥಾನವೇ ಮುಂದುವರಿಸಿಕೊಂಡು ಬಂದರೆ, ಹೊಸ ಅವಶ್ಯಕತೆಗೆ ಅನುಗುಣವಾಗಿ ಪಾತ್ರ ನಿರ್ವಹಿಸಲು ಸ್ಥಾನವು ಅನುವು ಮಾಡಿಕೊಡಲಾರದು.

ನಾವು ಅಭಿವೃದ್ಧಿಯ ಕಾರ್ಯಗಳನ್ನು ಮಹಿಳೆಯರ ದೃಷ್ಟಿಕೋನದಿಂದ ನೋಡಿದಾಗ ಯೋಜನೆಯ ಫಲಗಳನ್ನು ಪಡೆದುಕೊಳ್ಳಲಾಗದ ಅಸಹಾಯಕತೆ ಕಾಣಿಸುವುದು. ಹೀಗಾಗಿ ಅಭಿವೃದ್ಧಿಯು ಸಮಾಜದ ತಳದಲ್ಲಿರುವ ಮಹಿಳೆಯರ ಜೀವನದಲ್ಲಿ ಹೊಸ ಭರವಸೆಯನ್ನು ಮೂಡಿಸುವಲ್ಲಿ ವಿಫಲಗೊಂಡಿದೆ. ಅದರಿಂದ ಅಭಿವೃದ್ಧಿಯು ಮಹಿಳೆಯರ ಜೀವನವನ್ನು ಉತ್ತಮಪಡಿಸುವ ಒಂದು ಸಾಧನವಾಗಬೇಕಾಗಿದೆ.

ಈ ಅಧ್ಯಯನವು ನಾಲ್ಕು ಉದ್ದೇಶಗಳನ್ನು ಹೊಂದಿದೆ. ಹಾಲಕ್ಕಿ ಮಹಿಳೆಯರ ಸಾಮಾಜಿಕ, ಆರ್ಥಿಕ ಪರಿವರ್ತನೆಯ ನೆಲೆಗಳನ್ನು ಗುರುತಿಸುವುದೇ ಈ ಅಧ್ಯಯನದ ಪ್ರಥಮ ಉದ್ದೇಶವಾಗಿದೆ. ಹಾಲಕ್ಕಿ ಮಹಿಳೆಯರಲ್ಲಿ ಉಂಟಾಗುತ್ತಿರುವ ಬದಲಾವಣೆಯನ್ನು ಗುರುತಿಸಲು ಐದು ಸೂಚಿಗಳನ್ನು ಬಳಸಿಕೊಳ್ಳಲಾಗಿದೆ. ಅವೆಂದರೆ, ಡೆಮೋಗ್ರಾಫಿಸೂಚಿ, ಆರ್ಥಿಕ ಸೂಚಿ, ಸಾಮಾಜಿಕ ಸೂಚಿ, ರಾಜಕೀಯ ಸೂಚಿ ಮತ್ತು ಧಾರ್ಮಿಕ ಸೂಚಿ.

ಹಾಲಕ್ಕಿಗಳ ಸಾಮಾಜಿಕ–ಆರ್ಥಿಕ ನೆಲೆಯಲ್ಲಿ ಗುರುತಿಸಬಹುದಾದ ಬದಲಾವಣೆ ಉಂಟಾಗಿದೆ. ಸಾಂಪ್ರದಾಯಿಕ ಹಾಲಕ್ಕಿಗಳು ೧೯೪೫ರವರೆಗೆ ನಿರಕ್ಷರಿಗಳೇ ಆಗಿದ್ದವರು. ಇಂದು ಹಾಲಕ್ಕಿ ಮಹಿಳೆಯರ ಸಾಕ್ಷರತೆಯು ಶೇ. ೫೦.೨೭ರಷ್ಟಿದೆ. ಜಿಲ್ಲೆಯ ಒಟ್ಟು ಮಹಿಳಾ ಗ್ರಾಮೀಣ ಸಾಕ್ಷರತೆಯ ಮಟ್ಟವು ಶೇ. ೬೮ರಷ್ಟಿದೆ. ಇಂದು ತಮ್ಮ ಮಕ್ಕಳಿಗೆ ಶಿಕ್ಷಣವನ್ನು ನೀಡುವಲ್ಲಿ ಹಾಲಕ್ಕಿಗಳು ಲಿಂಗತಾರತಮ್ಯವನ್ನು ಅನುಸರಿಸುತ್ತಿಲ್ಲ. ಹಾಲಕ್ಕಿ ಮಹಿಳೆಯರ ಪ್ರಕಾರ ಕಲಿಯಲು ಯಾರು (ಹುಡುಗ/ಹುಡುಗಿ) ಬುದ್ಧಿವಂತರಿರುತ್ತಾರೆ ಅವರಿಗೆ ಶಿಕ್ಷಣವನ್ನು ನೀಡುತ್ತೇವೆ ಅನ್ನುತ್ತಾರೆ. ಇದೊಂದು ಶಿಕ್ಷಣ ಕುರಿತು ಅವರ ಮನೋಭಾವದಲ್ಲಿ ಉಂಟಾಗಿರುವ ಮಹತ್ವದ ಬದಲಾವಣೆಯಾಗಿದೆ.

ಶಿಕ್ಷಣವು ಹಾಲಕ್ಕಿಗಳ ಸಾಂಪ್ರದಾಯಿಕ ಸಾಮಾಜಿಕ ಮೌಲ್ಯಗಳಲ್ಲಿ ಬದಲಾವಣೆ ತರುವಲ್ಲಿ ಸಹಕಾರಿಯಾಗಿರುದನ್ನು ಗುರುತಿಸಲಾಗಿದೆ. ಸಾಂಪ್ರದಾಯಿಕವಾಗಿ ಹಾಲಕ್ಕಿಗಳು

ಒಕ್ಕಲುತನದಲ್ಲಿ ತೊಡಗಿಕೊಂಡವರು. ಹೀಗಾಗಿ ಕುಟುಂಬಗಳು ಅವಿಭಕ್ತ ಕುಟುಂಬಗಳಾಗಿದ್ದವು. ಇಂದು ಎಲ್ಲಾ ಕುಟುಂಬಗಳು ವಿಭಕ್ತ ಕುಟುಂಬಗಳಾಗಿವೆ. ಸರಕಾರಿ ಮತ್ತು ಖಾಸಗಿ ಪ್ರಯತ್ನದ ಫಲವಾಗಿ ಇಂದು ಶೇ. ೮೨ರಷ್ಟು ಹಾಲಕ್ಕಿ ಕುಟುಂಬಗಳು ಕುಟುಂಬ ಯೋಜನೆಯ ಶಸ್ತ್ರ ಚಿಕಿತ್ಸೆಯನ್ನು ಮಾಡಿಸಿಕೊಂಡಿದ್ದಾರೆ. ಇಂದು ಹಾಲಕ್ಕಿ ಕುಟುಂಬದ ಸರಾಸರಿ ಗಾತ್ರವು ಶೇ. ೪.೩ರಷ್ಟಿದೆ. ಚಿಕ್ಕ ಕುಟುಂಬವು ಆರ್ಥಿಕ ಹೊರೆಯನ್ನು ಕಡಿಮೆ ಮಾಡುತ್ತಿರುವುದನ್ನು ಮಹಿಳೆಯರು ಅರಿತುಕೊಂಡಿದ್ದಾರೆ.

ಕುಟುಂಬದ ಗಾತ್ರದಲ್ಲಿ ಉಂಟಾಗಿರುವ ಬದಲಾವಣೆಯು ಮಹಿಳೆಯ ಆರೋಗ್ಯದ ಮೇಲೆ ಉತ್ತಮ ಪರಿಣಾಮ ಬೀರಿದೆ. ಇಂದು ಹಾಲಕ್ಕಿಗಳಲ್ಲಿ ಶೇ. ೧೦೦ರಷ್ಟು ಹೆರಿಗೆಗಳು ಆಸ್ಪತ್ರೆಯಲ್ಲಿ ನಡೆಯುತ್ತವೆ. ಮನೆಯು ಹೆರಿಗೆಗೆ ಸುರಕ್ಷಿತ ಸ್ಥಳವಲ್ಲ ಎಂಬ ಅರಿವು ಹಾಲಕ್ಕಿ ಮಹಿಳೆಯರಿಗೆ ಆಗಿದೆ. ಸಾಂಪ್ರದಾಯದಂತೆ ಹಾಲಕ್ಕಿಗಳು ಅನಾರೋಗ್ಯ ಕಾಣಿಸಿಕೊಂಡಾಗ ನಾಟೀ ಔಷಧಿಯನ್ನು ಮಾಡದೇ ಇಂಗ್ಲೀಷ್ ಔಷಧವನ್ನು ಬಳಸುತ್ತಾರೆ. ತಮ್ಮ ಮಕ್ಕಳ ಆರೋಗ್ಯದ ಬಗ್ಗೆ ಅರಿವು ಮೂಡಿರುವುದರಿಂದ ಚುಚ್ಚು ಮದ್ದುಗಳನ್ನು ತಪ್ಪದೇ ಹಾಕಿಸುತ್ತಾರೆ.

ಸಾಂಪ್ರದಾಯಿಕ ಹಾಲಕ್ಕಿ ಸಮುದಾಯವು ತನ್ನ ವಿಶಿಷ್ಟವಾದ ಸಾಂಪ್ರದಾಯಗಳ ಮೂಲಕ ಪ್ರತ್ಯೇಕತೆಯನ್ನು ಉಳಿಸಿಕೊಂಡು ಬಂದಿತ್ತು. ಆದರೆ, ಇಂದು ಅಂತಹ ವಿಶಿಷ್ಟವಾದ ಪ್ರತ್ಯೇಕತೆಯು ಮುಖ್ಯವಾಹಿನಿಯ ಜೊತೆಗೆ ಸೇರಿ ಹೋಗುತ್ತಿದೆ. ಈ ವಿಶಿಷ್ಟವಾದ ಸಾಂಪ್ರದಾಯಗಳೆಂದರೆ ವಿವಾಹ ಪದ್ಧತಿ, ವಧುದಕ್ಷಿಣೆ, ಬಳಿ ನೋಡುವುದು ಮತ್ತು ಅಡಗಿಸಿಡುವುದು ಮುಂತಾದವುಗಳು. ಹಾಲಕ್ಕಿ ಸಮುದಾಯದಲ್ಲಿ ಬಳಿ ನೋಡುವ ಸಾಂಪ್ರದಾಯ ಕಾರಣದಿಂದಾಗಿ 'ಮಾತೃ ಪ್ರಧಾನ' ಕುಟುಂಬಕ್ಕೆ ಸೇರಿದವರು ಎಂಬುದು ಜನಪದ ಅಧ್ಯಯನಕಾರರ ಅಭಿಪ್ರಾಯ. ಇಂದಿನ ಹಾಲಕ್ಕಿ ಯುವತಿಯರು ತಮಗೆ ತಮ್ಮ ಬಳಿ ಯಾವುದೆಂದು ಗೊತ್ತಿಲ್ಲವೆಂದಿರುವರು. ಹಾಲಕ್ಕಿಗಳಲ್ಲಿ ಸಾಂಪ್ರದಾಯಿಕವಾಗಿ ಇದ್ದ 'ವಧುದಕ್ಷಿಣೆ' ಇಂದು ಮಾಯವಾಗಿದೆ. ಶೇ. ೧೦೦ರಷ್ಟು ವರದಕ್ಷಿಣೆ ಪದ್ಧತಿಯನ್ನು ಗುರುತಿಸಲಾಗಿದೆ. ಸಾಮಾಜೀಕರಣದ ಪ್ರಕ್ರಿಯೆಯಲ್ಲಿ ಹಾಲಕ್ಕಿಗಳು ಈ ಅನಿಷ್ಟ ಪದ್ಧತಿಯನ್ನು ತಮ್ಮವನ್ನಾಗಿಕೊಂಡಿದ್ದಾರೆ. ಸಾಂಪ್ರದಾಯಿಕ ವಿವಾಹವು ಗೌಡನ ಹಿರಿತನದಲ್ಲಿ ನಡೆಸಲಾಗುತ್ತಿತ್ತು. ಇಂದು ಬ್ರಾಹ್ಮಣ ಪೌರೋಹಿತ್ಯವನ್ನು ಒಪ್ಪಿಕೊಂಡಿದ್ದನ್ನು ಗುರುತಿಸಲಾಗಿದೆ.

ಹಾಲಕ್ಕಿ ಸಮುದಾಯವು ತಮ್ಮ ವಿಶಿಷ್ಟತೆಯಲ್ಲಿ ಉಡುಗೆ, ತೊಡುಗೆ, ಆಹಾರ, ಮಾತು, ಹೆಸರು ಎಲ್ಲದರಲ್ಲಿಯೂ ಕಂಡುಬರುತ್ತದೆ. ಶಿಕ್ಷಣ ಪ್ರಕ್ರಿಯೆಯಿಂದಾಗಿ ಹಾಲಕ್ಕಿಗಳ

ಉಡುಗೆ ತೊಡುಗೆ ಸಂಪೂರ್ಣ ಬದಲಾವಣೆಯಾಗಿದೆ. ಹಿಂದಿನವರಷ್ಟೆ ಸಾಂಪ್ರದಾಯಿಕ ಉಡುಗೆ ತೊಡುಗೆಯನ್ನು ಧರಿಸುತ್ತಾರೆ. ಹಾಲಕ್ಕಿಗಳಿಗೆ ಪ್ರೀತಿಯ ಆಹಾರವಾದ 'ಅಂಬಲಿ' ಇಂದು ತನ್ನ ಸ್ಥಾನವನ್ನು ಕಳೆದುಕೊಂಡಿದೆ. ಸಮುದಾಯದವರ ವಿಶಿಷ್ಟವಾದ ಹೆಸರು ಮತ್ತು ಮಾತಿನ ಶೈಲಿಯಿಂದಲೇ ಪ್ರತ್ಯೇಕತೆಯನ್ನು ಹೊಂದಿದ್ದು, ಇಂದು ಹಾಲಕ್ಕಿಗಳನ್ನು ಅವರ ಮಾತಿನ ಶೈಲಿ ಹಾಗೂ ಹೆಸರಿನ ಮೂಲಕ ಗುರುತಿಸಲು ಸಾಧ್ಯವಾಗುತ್ತಿಲ್ಲ.

ವಿವಾಹದ ಪದ್ಧತಿಯಲ್ಲಿ ಉಂಟಾಗಿರುವ ಮಹತ್ವದ ಬದಲಾವಣೆಯಿಂದ ವಿವಾಹದ ವಯಸ್ಸಿನಲ್ಲಿ ಗಣನೀಯ ಏರಿಕೆಯಾಗಿದೆ. ಶೇ. ೧೦೦ರಷ್ಟು ಹಾಲಕ್ಕಿ ಮಹಿಳೆಯರು ವಿವಾಹದಲ್ಲಿ ೨೨ ವರ್ಷಕ್ಕಿಂತ ಮೇಲ್ಪಟ್ಟಾಗಿರುವುದು ಕಂಡುಬರುತ್ತದೆ. ಶಿಕ್ಷಣವು ವಿವಾಹದ ವಯಸ್ಸಿನ ಏರಿಕೆಗೆ ಸಹಕಾರಿಯಾಗಿದೆ. ಈ ಸಮುದಾಯದಲ್ಲಿ ಬಾಲ್ಯವಿವಾಹಗಳು ನಡೆಯುತ್ತಿಲ್ಲ. ಸಾಂಪ್ರದಾಯಿಕ ಸಮಾಜದಲ್ಲಿ ಒಕ್ಕಲುತನ ಮಾಡುವವನಿಗೆ ಹೆಚ್ಚಿನ ಬೇಡಿಕೆಯಿತ್ತು. ಇಂದು ಶಿಕ್ಷಣದಿಂದಾಗಿ ನೌಕರಿಯಲ್ಲಿರುವಾತನಿಗೆ ಬೇಡಿಕೆ ಹೆಚ್ಚಾಗಿದೆ. ಸಾಂಪ್ರದಾಯಿಕ ಸಮಾಜದಲ್ಲಿ ವಿವಾಹಗಳು ಸುಲಭವಾಗಿ ನಡೆಯುತ್ತಿದ್ದವು. ಶಿಕ್ಷಣ ಪಡೆದು ನೌಕರಿ ಮಾಡಿ ತಮ್ಮ ಆರ್ಥಿಕ ಸ್ಥಿತಿಯನ್ನು ಸುಧಾರಿಸಿಕೊಂಡಿದ್ದಾರೆ. ಇದರಿಂದಾಗಿ ಕೆಲವರ ಸ್ಥಾನ ಕೂಡಾ ಹೆಚ್ಚಾಗಿದೆ. ನೌಕರಿಯಲ್ಲಿರುವ ಯುವಕರು ನೌಕರಿಯಲ್ಲಿರುವ ಯುವತಿಯರನ್ನ ಹುಡುಕುತ್ತಾರೆ. ಹೆಚ್ಚಿನ ಶಿಕ್ಷಣ ಪಡೆದ ಯುವಕರಿಗೆ ಹೆಚ್ಚಿನ ಶಿಕ್ಷಣ ಪಡೆದ ಯುವತಿಯರು ಸಿಗುತ್ತಿಲ್ಲ. ಹಾಲಕ್ಕಿಯವರು ಅನ್ಯಜಾತಿಯವರೊಡನೆ ವಿವಾಹ ಸಂಬಂಧ ಬೆಳೆಸಬೇಕು ಎನ್ನುವ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಿರುವುದನ್ನು ಗುರುತಿಸಲಾಗಿದೆ. ಹಾಲಕ್ಕಿ ಸಮುದಾಯದಲ್ಲಿರುವ ಇನ್ನೊಂದು ವಿಶಿಷ್ಟ ಸಾಂಪ್ರದಾಯವೆಂದರೆ ವಿಧವಾ ವಿವಾಹ. ಹಾಲಕ್ಕಿಗಳಲ್ಲಿ ಕಾಲಿಟ್ಟ ವರದಕ್ಷಿಣೆ ಪದ್ಧತಿಯಿಂದಾಗಿ ವಿಧವಾ ವಿವಾಹ ಸಾಧ್ಯವಾಗುತ್ತಿಲ್ಲ ಎನ್ನುವುದನ್ನು ಗುರುತಿಸಲಾಗಿದೆ.

ಹಾಲಕ್ಕಿಗಳ ಸಾಂಪ್ರದಾಯಿಕ ಸಮುದಾಯವು ಬಲಿಷ್ಠವಾದ ಸಾಮಾಜಿಕ ಸಂಘಟನೆಯನ್ನು ಹೊಂದಿತ್ತು. ಈ ಸಮುದಾಯದ ಸಂಘಟನೆಯಲ್ಲಿ ಪುರುಷರು ವಿವಿಧ ಪದಾಧಿಕಾರಿಗಳನ್ನು ಹೊಂದಿದ್ದರು. ಹೀಗಾಗಿ ಸಮುದಾಯದ ಎಲ್ಲಾ ಅಧಿಕಾರವು ಪುರುಷರ ಕೈಯಲ್ಲಿ ಕೇಂದ್ರೀಕೃತಗೊಂಡಿತ್ತು. ಈ ಪ್ರದೇಶದ ಇತರೆ ಸಮುದಾಯದವರಂತೆ, ಹಾಲಕ್ಕಿ ಮಹಿಳೆಯರನ್ನು ಸಂಘಟನೆಯಿಂದ ಹೊರಗೆ ಇಡಲಾಗಿತ್ತು. ಇಂದು ಸಾಂಪ್ರದಾಯಿಕ ಸಂಘಟನೆಯಲ್ಲಿ ಹಲವಾರು ಬದಲಾವಣೆ ಗುರುತಿಸಬಹುದಾಗಿದೆ. ಇಂದು ಸಾಂಪ್ರದಾಯಿಕ ಪದಾಧಿಕಾರಿಗಳು ಹೆಸರಿಗೆ ಮಾತ್ರ ಇದ್ದಾರೆ. ಈ ಪದಾಧಿಕಾರಿಗಳ ಹಿಡಿತವು ಸಡಿಲಗೊಂಡಿರುವದನ್ನು ಗುರುತಿಸಲಾಗಿದೆ. ಶಿಕ್ಷಣ ಪಡೆದು ಅರ್ಥಿಕವಾಗಿ ಸುಧಾರಿಸಿಕೊಂಡಿರುವವರ ಮಾತನ್ನು ಇಂದು ಸಾಂಪ್ರದಾಯಿಕ ಸಂಘಟನೆ ಪದಾಧಿಕಾರಿಗಳು ಕೇಳುತ್ತಾರೆ.

ಇಂದು ತಮ್ಮ ಸಮುದಾಯದ ಸದಸ್ಯರು ತಪ್ಪು ಮಾಡಿದಾಗ, ಜಾತಿಯಿಂದ ಕಟ್ಟುಕೊಡುವ (ಬಹಿಷ್ಕಾರ) ಪದ್ಧತಿ ಇಲ್ಲವಾಗಿದೆ. ಹಾಲಕ್ಕಿ ಮಹಿಳೆಯರು ಗೌಡನ ಬಗ್ಗೆ ಆದರ ಮತ್ತು ಗೌರವವನ್ನು ಹೊಂದಿದ್ದಾರೆ. ಆದರೆ, ಇಂದು ಗೌಡನು ಹಾಲಕ್ಕಿಗಳ ದುಶ್ಚಟದ (ಕುಡಿತ) ಮೇಲೆ ಯಾವುದೇ ಕ್ರಮವನ್ನು ಕೈಗೊಳ್ಳಲಾಗದ ಸ್ಥಿತಿಯಲ್ಲಿರುವುದನ್ನು ಗುರುತಿಸಲಾಗಿದೆ. ಇದರಿಂದಾಗಿ ಹೆಚ್ಚಿನ ತೊಂದರೆಗೆ ಒಳಗಾದವರು ಮಹಿಳೆಯರು, ನಾಡೋಜ ಪ್ರಶಸ್ತಿ ವಿಜೇತ ಸುಕ್ರಿ ಬೊಮ್ಮಗೌಡಳ ನೇತೃತ್ವದಲ್ಲಿ ಸಾಕಷ್ಟು ಸಲ ಸಾರಾಯಿ ವಿರೋಧಿ ಪ್ರತಿಭಟನೆಯನ್ನು ಮಹಿಳೆಯರು ನಡೆಸಿರುವರು.

ಸಾಂಪ್ರದಾಯಿಕ ನಾಯಕತ್ವದಲ್ಲಿ ಆರ್ಥಿಕ ಸ್ಥಿತಿ ಮಾನದಂಡವಾಗಿರಲಿಲ್ಲ. ವಂಶಪರಂಪರೆಯಿಂದ ಈ ಸ್ಥಾನವು ಹರಿದು ಬರುತ್ತಿತ್ತು. ಆದರೆ, ಇಂದು ಸಮುದಾಯದ ನಾಯಕರ ಸ್ಥಾನವು ಶಿಕ್ಷಣ ಹಾಗೂ ಆರ್ಥಿಕ ಸ್ಥಿತಿಯಿಂದ ನಿರ್ಧಾರಗೊಳ್ಳುತ್ತದೆ. ಇಂದು ಶಿಕ್ಷಣ ಪಡೆದುಕೊಂಡು ಉತ್ತಮ ಸ್ಥಿತಿಯಲ್ಲಿ ಇರುವವರೇ ಅನೌಪಚಾರಿಕ ನಾಯಕರು.

ಈ ಸಮುದಾಯದ ಸಾಂಪ್ರದಾಯಿಕ ಸಾಮಾಜಿಕ ಆರ್ಥಿಕ ರಚನೆಯನ್ನು ಪರಿಶೀಲಿಸಿದಾಗ ಅಧಿಕಾರ ಮತ್ತು ನಿಯಂತ್ರಣ ಪುರುಷರ ಕೈಯಲ್ಲಿರುವುದನ್ನು ಗುರುತಿಸಲಾಗಿದೆ. ಈ ಪ್ರದೇಶದ ಇತರೆ ಸಮುದಾಯದವರಂತೆ ಹಾಲಕ್ಕಿ ಕುಟುಂಬವು ಸಹ ಮಹಿಳೆಯರ ಬಗ್ಗೆ ನಕಾರಾತ್ಮಕ ಮನೋಭಾವವನ್ನು ಹೊಂದಿರುವುದು ಸಾಮಾಜಿಕ ಸಂಘಟನೆಯ ರಾಜಕೀಯ ನಿಯಂತ್ರಣದ ಮೂಲಕ ಅರಿಯಬಹುದು. ಇದುವರೆಗೆ ಹಾಲಕ್ಕಿ ಒಕ್ಕಲಿಗರ ಸಂಘವು ಮಹಿಳೆಯರನ್ನು ಸದಸ್ಯರನ್ನಾಗಿ ಸೇರಿಸಿಕೊಂಡಿಲ್ಲ. ಸಂಘವು ಮಹಿಳೆಯರನ್ನು ಸೇರಿಸಿಕೊಳ್ಳಬಾರದು ಎಂಬ ಮನೋಭಾವನೆಯನ್ನು ಹೊಂದಿಲ್ಲ. ಬಹುಶಃ ಮಹಿಳೆಯರನ್ನು ತಮ್ಮ ಸಂಘಕ್ಕೆ ಸೇರಿಸಿಕೊಳ್ಳಬೇಕು ಎಂಬ ಅರಿವು ಇನ್ನು ಅವರಲ್ಲಿ ಉಂಟಾಗದೇ ಇರುವುದು ಕಂಡುಬರುತ್ತದೆ.

ಹಾಲಕ್ಕಿಗಳ ಸಾಂಪ್ರದಾಯಿಕ ಸಾಮಾಜಿಕ ರಚನೆಯಲ್ಲಿ ಬದಲಾವಣೆಯು ಗ್ರಾಮ ಪಂಚಾಯತಿಯ ಮೂಲಕ ಉಂಟಾಗಿದೆ. ಜಿಲ್ಲೆಯಲ್ಲಿ ಹಾಲಕ್ಕಿ ಮಹಿಳೆಯರು ಗ್ರಾಮ ಪಂಚಾಯತಿ ಹಾಗೂ ಜಿಲ್ಲಾ ಪಂಚಾಯತಿಯಲ್ಲಿ ಸದಸ್ಯರು ಅಧ್ಯಕ್ಷರಾಗಿ ಕಾರ್ಯವನ್ನು ನಿರ್ವಹಿಸುತ್ತಿದ್ದಾರೆ. ಸಾಂಪ್ರದಾಯಿಕ ಸಮುದಾಯದ ಸದಸ್ಯರು ನಿರಾಕರಿಸಿದ ಅವಕಾಶವನ್ನು ಇಂದಿನ ಪುರುಷರು ನೀಡುತ್ತಿದ್ದಾರೆ. ಇದು ಪ್ರೇರಿತ ಬದಲಾವಣೆಯಾದರು, ಇದರ ಸಫಲತೆಗೆ ಪುರುಷರ ಸಹಕಾರ ಅವಶ್ಯಕವಾಗಿದೆ. ಇಂದು ಮತದಾನದಲ್ಲಿ ಶೇ. ೯೩.೫೧ರಷ್ಟು ಮಹಿಳೆಯರು ಪಾಲ್ಗೊಳ್ಳುತ್ತಿದ್ದಾರೆ. ಮಹಿಳೆಯರಿಗೆ ಮತದಾನದ ಮತ್ತು ಗ್ರಾಮ ಪಂಚಾಯತಿಯ

ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವುದರ ಮೂಲಕ ನಿರ್ಧಾರ ತೆಗೆದುಕೊಳ್ಳುವ ಪ್ರಕ್ರಿಯೆಯಲ್ಲಿ ಭಾಗವಹಿಸಲು ಅವಕಾಶ ದೊರೆಯುತ್ತಿರುವುದನ್ನು ಗುರುತಿಸಲಾಗಿದೆ. ಉತ್ತರ ಕನ್ನಡ ಜಿಲ್ಲೆಯಲ್ಲಿ ನಡೆಯುವ ಎಲ್ಲಾ ಮುಖ್ಯ ರಾಜಕೀಯ ಸಭೆಯಲ್ಲಿ ಸುಕ್ರಿ ಬೊಮ್ಮುಗೌಡ ಪಾಲ್ಗೊಳ್ಳುತ್ತಿರುವುದನ್ನು ಗಮನಿಸಲಾಗಿದೆ.

ಹಾಲಕ್ಕಿಗಳ ಆರ್ಥಿಕ ನೆಲೆಯಲ್ಲಿ ಸಾಕಷ್ಟು ಬದಲಾವಣೆ ಉಂಟಾಗಿದೆ. ಸಮುದಾಯವು ಹೊಸದಾದ ಆರ್ಥಿಕ ಮೌಲ್ಯಗಳನ್ನು ತನ್ನದಾಗಿಸಿಕೊಂಡಿದೆ. ಹಾಲಕ್ಕಿಗಳಲ್ಲಿ ಖಾಸಗಿ ಆಸ್ತಿ ಸಂಪಾದನೆಯ ಆಲೋಚನೆ ಬೆಳೆಯುತ್ತಿದೆ. ಇದರಿಂದ ಬುಡಕಟ್ಟು ಕೇಂದ್ರೀಕೃತವಾದ ಬೆಳವಣಿಗೆಯು ವ್ಯಕ್ತಿ ಕೇಂದ್ರೀಕೃತವಾಗಿ ಬೆಳೆಯುತ್ತಿರುವುದು ಕಂಡುಬರುತ್ತದೆ. ಇಂದು ಹಾಲಕ್ಕಿಗಳು ಕೃಷಿಯಲ್ಲಿ ಆಧುನಿಕ ತಂತ್ರಜ್ಞಾನದ ಬಳಕೆಯನ್ನು ಮಾಡುತ್ತಿದ್ದಾರೆ. ಕೆಲವು ಹಾಲಕ್ಕಿಗಳ ಮನೆಗಳಲ್ಲಿ ಐಶಾರಾಮದ ವಸ್ತುಗಳನ್ನು ಬಳಸುತ್ತಿರುವುದು ಅವರ ಜೀವನಮಟ್ಟದಲ್ಲಿ ಉಂಟಾಗಿರುವ ಏರಿಕೆಯ ಸೂಚಿಯಾಗಿದೆ. ಇಂದು ಕುಟುಂಬಗಳ ನಡುವೆ ಆರ್ಥಿಕ ಅಸಮಾನತೆ ಬೆಳೆಯುತ್ತಿದೆ. ಎಲ್ಲಾ ವ್ಯವಹಾರಗಳು ಹಣದ ಮೂಲಕವೇ ನಡೆಯುತ್ತಿವೆ. ಸಾಂಪ್ರದಾಯಿಕವಾಗಿ ಒಕ್ಕಲುತನದಲ್ಲಿ ತೊಡಗಿದ್ದ ಹಾಲಕ್ಕಿಗಳು ಇಂದು ಭೂಮಿಯನ್ನು ಗೇಣಿ ಮಾಡುವುದರಲ್ಲಿ ಆಸಕ್ತಿಯನ್ನು ತೋರಿಸುತ್ತಿಲ್ಲ. ಹಾಲಕ್ಕಿಗಳು ಇಂದು ಚಿಕ್ಕ ವ್ಯಾಪಾರ, ಗುತ್ತಿಗೆ ಹಿಡಿಯುವುದು ಹಾಗೂ ಕಾರ್ಖಾನೆಗಳಲ್ಲಿ ಕಾರ್ಮಿಕರಾಗಿ ದುಡಿಮೆ ಮಾಡುವುದು ಕಂಡು ಬಂದಿದೆ.

ಈ ಮೇಲಿನ ಅಂಶಗಳಿಂದ ಹಾಲಕ್ಕಿಗಳ ಆರ್ಥಿಕ ನೆಲೆಯಲ್ಲಿ ಆರ್ಥಿಕವಾಗಿ ಅಭಿವೃದ್ಧಿ ಹೊಂದುತ್ತಿರುವ ಸೂಚನೆ ಲಭ್ಯವಾಗುತ್ತದೆ. ಆದರೂ ಕೆಲ ಹಾಲಕ್ಕಿಗಳಲ್ಲಿ ಸಾಮಾಜಿಕ ಆರ್ಥಿಕ ವ್ಯವಸ್ಥೆಯ ಸಾಂಪ್ರದಾಯಿಕ ಮೌಲ್ಯಗಳು ಕಂಡುಬರುತ್ತವೆ. ಸೀಮೆಯಲ್ಲಿ ಸಾಮೂಹಿಕ ಒಡೆತನ, ಸಾಂಪ್ರದಾಯಿಕ ಸಂಸ್ಕಾರಗಳು ಹಾಗೂ ಧಾರ್ಮಿಕ ಆಚರಣೆಗಳನ್ನು ಸಾಮೂಹಿಕ ಸಹಕಾರದಿಂದ ನಿರ್ವಹಿಸಲಾಗುತ್ತದೆ. ಈಗಲೂ ಕಡಿಮೆ ಪ್ರಮಾಣದಲ್ಲಿ ಅರಣ್ಯ ಉತ್ಪನ್ನಗಳನ್ನು ಅವಲಂಬಿಸಿರುವರು. ಆಧುನಿಕ ಬ್ಯಾಂಕ್ ವ್ಯವಸ್ಥೆಯನ್ನು ಬಳಸಿಕೊಳ್ಳದೇ ಸಾಂಪ್ರದಾಯ ಲೇವಾದೇವಿಯನ್ನೇ ಅವಲಂಬಿಸುವುದು.

ಶಿಕ್ಷಣದಿಂದ ಹಾಲಕ್ಕಿ ಮಹಿಳೆಯರ ಆರ್ಥಿಕ ಬದಲಾವಣೆ ಉಂಟಾಗಿದೆ. ಇಂದಿಗೂ ಶೇ. ೯೭.೬೧ ರಷ್ಟುಮಹಿಳೆಯರು ಕೃಷಿಯನ್ನು ಅವಲಂಬಿಸಿದ್ದಾರೆ. ಇಂದು ತೋಟಗಾರಿಕೆಯು ಹಾಲಕ್ಕಿ ಮಹಿಳೆಯರ ಮುಖ್ಯ ಉದ್ಯೋಗವಾಗಿದೆ. ಮಹಿಳೆಯರನ್ನು ಎರಡು ಗುಂಪುಗಳಾಗಿವಿಭಾಗಿಸಬಹುದಾಗಿದೆ. ಒಂದು ಗುಂಪು ಎಲ್ಲಾ ತರಹದ ಕಾಯಿಪಲ್ಲೆಗಳನ್ನು

ಬೆಳೆಯುತ್ತಾರೆ. ಮತ್ತೊಂದು ಗುಂಪು ಬೆಳೆದವರಿಂದ ಕಾಯಿಪಲ್ಲೆಗಳನ್ನು ಹಣ ಕೊಟ್ಟು ಖರೀದಿಸಿ, ಮಾರುಕಟ್ಟೆಗೆ ತಂದು ಮಾರಾಟ ಮಾಡುತ್ತಾರೆ. ಶೇ.೪.೩೨ರಷ್ಟು ಮಹಿಳೆಯರು ಕೃಷಿಯೇತರ ರಂಗದಲ್ಲಿ ಪ್ರವೇಶ ಪಡೆದಿರುವರು.

ಸಾಂಪ್ರದಾಯಿಕವಾಗಿ ಕುಂಬ್ರಿ ಬೇಸಾಯವನ್ನು ಪ್ರಾರಂಭಿಸಿದ ಹಾಲಕ್ಕಿಗಳು ಬ್ರಿಟಿಷ್ ಕಾಲದಲ್ಲಿ ನೆಲೆನಿಂತ ಬೇಸಾಯವನ್ನು ಪ್ರಾರಂಭಿಸಿದರು. ಹಾಲಕ್ಕಿಗಳು ಒಕ್ಕಲುತನದಲ್ಲಿಯೇ ಅತ್ಯಂತ ಆಸಕ್ತಿಯನ್ನು ಹೊಂದಿದ್ದರು. ಆದರೆ ಇಂದು ಹಾಲಕ್ಕಿಗಳಿಗೆ ಕೃಷಿಯಲ್ಲಿ ಆಸಕ್ತಿ ಇಲ್ಲ. ಈ ಪ್ರದೇಶದ ಭೂಮಿಯನ್ನು ಹಾಲಕ್ಕಿಗಳು ಗೇಣಿ ಮಾಡುತ್ತಿದ್ದರು. ಆದರೆ, ಹಾಲಕ್ಕಿಗಳಿಗೆ ಗೇಣಿ ಮಾಡುವುದರಲ್ಲಿ ಆಸಕ್ತಿ ಇಲ್ಲ. ಏಕೆದರೆ ಗೇಣಿಗೆ ಒಪ್ಪಿದರೆ ಎಂಥಾ ಪರಿಸ್ಥಿತಿಯಲ್ಲಿಯೂ ಗೇಣಿ ನೀಡಬೇಕಾಗಿರುವುದರಿಂದ ನಷ್ಟ ಉಂಟಾಗುತ್ತದೆ. ಇಲ್ಲಿಯ ಕೃಷಿ ಮಳೆಯನ್ನು ಅವಲಂಬಿಸಿದೆ. ಆದರಿಂದ ಉತ್ಪನ್ನ ಪಡೆಯುವಲ್ಲಿ ಅನಿಶ್ಚಿತೆ ಹೆಚ್ಚು ಹಾಲಕ್ಕಿಗಳು ಅತಿ ಚಿಕ್ಕ ರೈತರಾದ್ದರಿಂದ, ಅವರ ಭೂಮಿಯಲ್ಲಿ ಬೆಳೆದದ್ದು ಅವರಿಗೆ ಸಾಕುಗುತ್ತಿಲ್ಲ. ಆದರೆ ಇಂದು ಪಡಿತರ ಅಂಗಡಿಯಲ್ಲಿ ಕಡಿಮೆ ಬೆಲೆಗೆ ಸಾಕಷ್ಟು ಅಕ್ಕಿ ದೊರೆಯುತ್ತದೆ. ಅದಕ್ಕಾಗಿ ಗೇಣಿ ಮಾಡುವುದು ಬಿಟ್ಟು ಕಾರ್ಮಿಕರಾಗಿ ದುಡಿಮೆ ಮಾಡಿದರೆ ಹಾಲಕ್ಕಿಗಳಿಗೆ ನಿಶ್ಚಿತ ಆದಾಯವು ದೊರೆಯುತ್ತದೆ ಎಂದು ಅಭಿಪ್ರಾಯಪಟ್ಟಿರುವರು.

ಗೇಣಿ ಮಾಡುವುದು ಲಾಭದಾಯಕವಾಗಿಲ್ಲ ಎಂಬ ಅರಿವು ಇಂದು ಮಹಿಳೆಯರಲ್ಲಿ ಉಂಟಾಗಿರುವುದನ್ನು ಗುರುತಿಸಲಾಗಿದೆ. ಇಂದಿಗೂ ಶೇ. ೧೦೦ರಷ್ಟು ಹಾಲಕ್ಕಿಗಳು ಅತಿ ಚಿಕ್ಕ ರೈತರಾಗಿದ್ದು, ಸ್ವಂತ ಚಿಕ್ಕ ಮನೆಯನ್ನು ಹೊಂದಿದ್ದಾರೆ. ಶೇ. ೫೪.೦೫ರಷ್ಟು ಹಾಲಕ್ಕಿ ಮಹಿಳೆಯರು ಸ್ವಂತ ಭೂಮಿಯನ್ನು ಹೊಂದಿದ್ದಾರೆ. ಶೇ. ೫೬.೨೧ರಷ್ಟು, ಹಾಲಕ್ಕಿಗಳು ಶೌಚಾಲಯವನ್ನು ಬಳಸುತ್ತಿದ್ದಾರೆ. ಶೇ. ೯೭.೫ರಷ್ಟು ಮನೆಗಳಿಗೆ ವಿದ್ಯುತ್ ಸಂಪರ್ಕವಿದೆ. ಇವೆಲ್ಲವು ಹಾಲಕ್ಕಿಗಳ ಆರ್ಥಿಕ ನೆಲೆಯಲ್ಲಿ ಉಂಟಾಗುತ್ತಿರುವ ಬದಲಾವಣೆಯನ್ನು ಸೂಚಿಸುತ್ತದೆ.

ಹಾಲಕ್ಕಿಗಳ ಕೃಷಿಯಲ್ಲಿ ಗಮನಿಸಬಹುದಾದ ಬದಲಾವಣೆಯೆಂದರೆ ಮಹಿಳೆಯರೇ ಕೃಷಿಯಲ್ಲಿ ತೊಡಗಿಕೊಳ್ಳುವಿಕೆಯು ಅಧಿಕಗೊಂಡಿದೆ. ಹಾಲಕ್ಕಿ ಪುರುಷರು ಕೃಷಿಯೇತರ ಚಟುವಟಿಕೆಯಲ್ಲಿ ಆಸಕ್ತಿಯನ್ನು ತೋರಿಸುತ್ತಿದ್ದಾರೆ. ಸಣ್ಣ ಪ್ರಮಾಣದ ವ್ಯಾಪಾರ, ದಿನಸಿ ಅಂಗಡಿ ಮತ್ತು ಚಹಾ ಅಂಗಡಿ ನಡೆಸುವುದು, ಗುತ್ತಿಗೆ ಹಿಡಿಯುವುದು, ಕಾರ್ಖಾನೆಗಳಲ್ಲಿ, ಕಾರ್ಮಿಕರಾಗಿ ದುಡಿಮೆ ಮಾಡುವುದು ಕಂಡುಬರುತ್ತದೆ. ಕೃಷಿಯಲ್ಲಿ ಸುಧಾರಿಸಿದ ಬೀಜ, ಗೊಬ್ಬರ, ಪಂಪ್ಸೆಟ್ ಉಪಯೋಗಿಸುತ್ತಿದ್ದು ಸಹಕಾರಿ ಸಂಘದಿಂದ ಸಾಲ ಪಡೆದುಕೊಳ್ಳುತ್ತಿದ್ದಾರೆ.

ಸರಕಾರಿ ನೌಕರಿಯಲ್ಲಿರುವ ಹಾಲಕ್ಕಿಗಳು ತಮ್ಮ ಆರ್ಥಿಕ ನೆಲೆಯನ್ನು ಉತ್ತಮ ಪಡಿಸಿಕೊಂಡಿದ್ದಾರೆ. ಸರಕಾರಿ ನೌಕರಿಯಲ್ಲಿರುವ ಮಹಿಳೆಯರು ತಮ್ಮ ಆದಾಯವನ್ನು ವೆಚ್ಚ ಮಾಡುವಲ್ಲಿ ಸ್ವಲ್ಪ ಮಟ್ಟಿಗೆ ಸ್ವಾತಂತ್ರ್ಯ ಹೊಂದಿದ್ದಾರೆ. ಹಾಲಕ್ಕಿಗಳಲ್ಲಿ ಇತರೆ ಸಮುದಾಯದಂತೆ ಪುರುಷರೇ ಪಿತ್ರಾರ್ಜಿತ ಆಸ್ತಿಯ ಹಕ್ಕನ್ನು ಹೊಂದಿದ್ದಾರೆ. ಪಿತೃಪ್ರಧಾನ ಕುಟುಂಬಕ್ಕೆ ಸೇರಿದ ಹಾಲಕ್ಕಿ ಮಹಿಳೆಯರ ಪಿತ್ರಾರ್ಜಿತ ಆಸ್ತಿಯ ಹಕ್ಕಿನ ಮನೋಭಾವನೆಯಲ್ಲಿ ಬದಲಾವಣೆ ಉಂಟಾಗಿದೆ. ಶೇ. ೮೫.೯೪ರಷ್ಟು ಪ್ರತಿಕ್ರಿಯಿಸಿದ ಮಹಿಳೆಯರು ಹೆಣ್ಣು ಮಕ್ಕಳಿಗೆ ಆಸ್ತಿಯನ್ನು ನೀಡಬೇಕೆಂದು ಅಭಿಪ್ರಾಯಪಟ್ಟಿದ್ದಾರೆ. ಮಹಿಳೆಯರು ವಿವಾಹದ ನಂತರ ಪರಗ್ರಾಮದಲ್ಲಿ ನೆಲೆಸುತ್ತಾರೆ. ಒಂದು ವೇಳೆ ಮಗಳಿಗೆ ವಿವಾಹ ನಂತರ ತೊಂದರೆ ಬಂದಾಗ ಭೂಮಿ ಅಥವಾ ಹಣವನ್ನು ನೀಡುವುದನ್ನು ಗುರುತಿಸಲಾಗಿದೆ. ಹಾಲಕ್ಕಿಗಳು ಕೇವಲ ಯಾಂತ್ರಿಕ ದೃಷ್ಟಿಯಿಂದ ಲಿಂಗ ಸಮಾನತೆಯನ್ನು ನೋಡದೆ ಉಪಯುಕ್ತತೆಯ ಆಧಾರದಿಂದ ನೋಡುವುದು ಕಂಡುಬರುತ್ತದೆ. ಈ ಎಲ್ಲಾ ಬದಲಾವಣೆಯಿಂದ ಹಾಲಕ್ಕಿಯವರು ಮುಖ್ಯ ವಾಹಿನಿಯಲ್ಲಿ ಸೇರಿಕೊಂಡಿರುವುದನ್ನು ಸೂಚಿಸುತ್ತದೆ.

ಹಾಲಕ್ಕಿ ಮಹಿಳೆಯರ ದುಡಿಮೆಯ ಸ್ವರೂಪವನ್ನು ಗುರುತಿಸುವುದು ಅಧ್ಯಯನದ ಎರಡನೆಯ ಉದ್ದೇಶವಾಗಿದೆ. ಸಮುದಾಯದಲ್ಲಿ ಮಹಿಳೆ ನಿರ್ವಹಿಸುತ್ತಿರುವ ಪಾತ್ರವು ವ್ಯಕ್ತಿಯ ಮಹತ್ವವನ್ನು ನಿರ್ಣಯಿಸುತ್ತದೆ. ಸಾಂಪ್ರದಾಯಿಕವಾಗಿ ಹಾಲಕ್ಕಿಗಳು ಮಾತೃ ಪ್ರಧಾನ ಕುಟುಂಬಕ್ಕೆ ಸೇರಿದವರೆಂದು ಜನಪದ ಅಧ್ಯಯನಕಾರರ ಅಭಿಪ್ರಾಯವಾಗಿದೆ. ಹಾಲಕ್ಕಿಗಳಲ್ಲಿ ಬಳಿ ನೋಡುವ ಸಾಂಪ್ರದಾಯದಿಂದ ಇಂತಹ ಅಭಿಪ್ರಾಯಕ್ಕೆ ಬರಲಾಗಿದೆ. ಈ ಪ್ರದೇಶದ ಇತರೆ ಸಮುದಾಯದಲ್ಲಿ ಕೂಡಾ ಬಳಿ ನೋಡುವ ಪದ್ಧತಿ ಇತ್ತು. ಆದರೆ, ಇಂದು ಬಳಿ ನೋಡು ಪದ್ಧತಿ ಕಡ್ಡಾಯವಾಗಿಲ್ಲ. ಈ ಪ್ರದೇಶದ ಇತರೆ ಸಮುದಾಯದವರಂತೆ ಹಾಲಕ್ಕಿ ಮಹಿಳೆಯು ವಿವಾಹದ ಬಳಿಕ ತಂದೆ ಮನೆಯನ್ನು ಬಿಟ್ಟು ಗಂಡನ ಮನೆಯಲ್ಲಿ ವಾಸಿಸುತ್ತಾಳೆ. ಎಲ್ಲಾ ಸಮುದಾಯದಲ್ಲಿ ಕಾರ್ಯ ಹಂಚಿಕೆಯು ಜೈವಿಕ ಮತ್ತು ವಯಸ್ಸಿನ ಆಧಾರದ ಮೇಲೆ ಮಾಡಲಾಗಿದೆ. ಮಹಿಳೆಯರ ದುಡಿಮೆಯ ಸ್ವರೂಪವು ಆರ್ಥಿಕ ರಚನೆಯ ಮೇಲೆ ನಿಂತಿದೆ. ಈ ದುಡಿಮೆಯು ಕೃಷಿ, ಪಶುಸಂಗೋಪನೆ, ಅರಣ್ಯ ಉತ್ಪನ್ನದ ಸಂಗ್ರಹಣೆ ಮತ್ತು ಶ್ರಮವನ್ನು ಒಳಗೊಂಡಿದೆ. ಈ ಸಮುದಾಯದಲ್ಲಿ ಶೇ. ೯೬.೬೧ರಷ್ಟು ಮಹಿಳೆಯರು ಕೃಷಿಯನ್ನು ಅವಲಂಬಿಸಿದ್ದಾರೆ. ಶೇ. ೪.೩೯ರಷ್ಟು ಮಹಿಳೆಯರು ಮಾತ್ರ ಕೃಷಿಯಲ್ಲಿ ಪಾಲ್ಗೊಳ್ಳುವಿಕೆಯನ್ನು ನಿರಾಕರಿಸಿರುವರು. ಅದರಿಂದ ಶೇ. ೯೬.೬೧ರಷ್ಟು ಮಹಿಳೆಯರು ದಿನವು ಹನ್ನೆರಡರಿಂದ ಹದಿನಾಲ್ಕು ತಾಸು ದುಡಿಮೆ ಮಾಡುತ್ತಾರೆ.

ಹಾಲಕ್ಕಿ ಮಹಿಳೆಯರು ಕೃಷಿಯಲ್ಲಿ ಉಳುಮೆ ಮಾಡುವುದನ್ನು ಬಿಟ್ಟು ಎಲ್ಲಾ ಚಟುವಟಿಕೆಯಲ್ಲಿ ಪಾಲ್ಗೊಳ್ಳಲೇಬೇಕು. ಗೊಬ್ಬರ ಹೊರುವುದು, ಬೀಜ ಬಿತ್ತುವುದು, ಸಸಿ ನೆಡುವುದು, ಕಳೆ ತೆಗೆಯುವುದು, ಗದ್ದೆ ಕೊಯ್ಲು, ಹುತ್ತರಿ ಹಾಕುವುದು ಎಲ್ಲವನ್ನು ಮಹಿಳೆಯರೇ ಮಾಡುತ್ತಾರೆ. ಕೃಷಿ ಕಾರ್ಮಿಕರಾಗಿ ದುಡಿಮೆ ಮಾಡುವವರು ಮಹಿಳೆಯರೇ ಆಗಿರುವುದನ್ನು ಗುರುತಿಸಲಾಗಿದೆ. ಹಾಲಕ್ಕಿ ಮಹಿಳೆಯರು ಪುರುಷರಿಗಿಂತ ಅಧಿಕ ದುಡಿಮೆಯನ್ನು ಮಾಡುತ್ತಿರುವುದನ್ನು ಗುರುತಿಸಲಾಗಿದೆ. ಹಾಲಕ್ಕಿ ಪುರುಷರು ಕುಡಿತದ ಚಟಕ್ಕೆ ಬಲಿಯಾಗಿರುವುದರಿಂದ ದುಡಿಮೆಯ ಭಾರ ಮಹಿಳೆಯರ ಮೇಲಿದೆ. ತನ್ನ ಕುಟುಂಬದ ದಿನನಿತ್ಯದ ಅವಶ್ಯಕತೆಯನ್ನು ಪೂರೈಸಲು ಅಗತ್ಯವಿರುವ ಆದಾಯವನ್ನು ಕೂಡಾ ಮಹಿಳೆಯರೇ ಸಂಪಾದಿಸಬೇಕಾಗಿದೆ. ಆದರಿಂದ ಮಹಿಳೆಯರು ತೋಟಗಾರಿಕೆ, ಅರಣ್ಯ ಉತ್ಪನ್ನಗಳ ಸಂಗ್ರಹಣೆ ಹಾಗೂ ಕಾರ್ಮಿಕಳಾಗಿ ದುಡಿಮೆ ಮಾಡುತ್ತಾರೆ. ಹಾಲಕ್ಕಿ ಮಹಿಳೆಯರು ಎಲ್ಲಾ ರೀತಿಯ ತರಕಾರಿಯ ಉತ್ಪಾದಕರಾಗಿ ಮತ್ತು ಮಾರುಕಟ್ಟೆಗೆ ಪೂರೈಕೆದಾರರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಅರಣ್ಯದ ಉತ್ಪನ್ನಗಳಾದ ಉರುವಲು, ಜೇನು, ವಿವಿಧ ರೀತಿಯ ಹಣ್ಣುಗಳ ಸಂಗ್ರಹಣೆಯಲ್ಲಿ ತೊಡಗಿಕೊಂಡಿರುವುದನ್ನು ಗುರುತಿಸಲಾಗಿದೆ. ಅರಣ್ಯದಿಂದ ಉತ್ಪನ್ನಗಳ ಸಂಗ್ರಹಣೆ ಶ್ರಮದಾಯಕ ದುಡಿಮೆಯಾಗಿದೆ. ಅರಣ್ಯದಿಂದ ಉತ್ಪನ್ನಗಳ ಸಂಗ್ರಹಣೆ ಮತ್ತು ಮಾರಾಟವು ಬಹಳ ಸಮಯದ ಅನುಭೋಗವನ್ನು ಮಾಡುತ್ತದೆ. ತನ್ನ ದುಡಿಮೆಯನ್ನು ಉತ್ಪನ್ನದಾಯಿಕವಾಗಿ ಮಾಡಿಕೊಳ್ಳುವ ಸಲುವಾಗಿ ಹಾಲಕ್ಕಿ ಮಹಿಳೆಯರು ಹೆಚ್ಚಿನ ಸಮಯವನ್ನು ಹೊರಗಿನ ದುಡಿಮೆಯಲ್ಲಿ ತೊಡಗಿಸುತ್ತಾರೆ.

ಕೃಷಿಯಲ್ಲಿ ರಾಸಾಯನಿಕದ ಬಳಕೆ ಹೆಚ್ಚಾಗುತ್ತಿದ್ದರಿಂದ ಕೊಟ್ಟಿಗೆಯ ಗಾತ್ರ ಚಿಕ್ಕದಾಗಿದೆ. ದನಕರುಗಳ ಸಂಖ್ಯೆ ಕಡಿಮೆಯಾಗಿದ್ದರಿಂದ ದುಡಿಮೆ ಪ್ರಮಾಣದಲ್ಲಿ ಇಳಿಕೆಯಾಗಿದೆ. ಆದರೆ, ಹಾಲಕ್ಕಿ ಮಹಿಳೆಯರು ಕೋಳಿ ಸಾಕುವುದರಲ್ಲಿ ಹೆಚ್ಚಿನ ಆಸಕ್ತಿಯನ್ನು ತೋರಿಸಿದ್ದಾರೆ. ಕೋಳಿ ಸಾಕಾಣಿಕೆಗೆ ಮೀಸಲು ಸಮಯ ಕಡಿಮೆ.

ಶ್ರಮಿಕಳಾಗಿ ಹಾಲಕ್ಕಿ ಮಹಿಳೆಯರು ಕೊಡುಗೆ ಮಹತ್ವದ್ದು. ಹಾಲಕ್ಕಿ ಮಹಿಳೆಯರ ಶ್ರಮವು ಕುಟುಂಬದ ಆದಾಯದ ಮೂಲವಾಗಿದೆ. ಶೇ. ೮೯.೫೫ರಷ್ಟು ಮಹಿಳೆಯರು ಕೃಷಿ ಕೂಲಿ ಕಾರ್ಮಿಕಳಾಗಿ ದುಡಿಮೆ ಮಾಡುವುದನ್ನು ಗುರುತಿಸಲಾಗಿದೆ. ಈ ಪ್ರದೇಶದಲ್ಲಿ ಶ್ರಮಿಕರ ಕೊರತೆ ಬಹಳವಿದೆ. ಹೀಗಾಗಿ ಶ್ರಮಿಕರಿಗೆ ಕೃಷಿಯಲ್ಲಿ ಬಲು ಬೇಡಿಕೆ ಇದೆ. ಗಂಡಾಳಿಗೆ ಬೇರೆ ಕೂಲಿ ಮತ್ತು ಹೆಣ್ಣಾಳಿಗೆ ಬೇರೆ ಕೂಲಿಯಿದೆ. ಮಹಿಳೆಯರಿಗೆ

ರೂ.೮೦ರಿಂದ ರೂ.೧೦೦ ಕೂಲಿ ದೊರೆಯುತ್ತದೆ. ಸಮಾಜದಲ್ಲಿರುವ ಕೂಲಿ ತಾರತಮ್ಯ ನೀತಿಯಿಂದ ಕಡಿಮೆ ಆದಾಯ ಪಡೆದುಕೊಳ್ಳುತ್ತಾಳೆ. ಹಾಲಕ್ಕಿ ಮಹಿಳೆಯರು ತಾರತಮ್ಯ ಕೂಲಿ ನೀತಿಯಿಂದ ಅಧಿಕ ದುಡಿಮೆ ಮಾಡಬೇಕಾಗುತ್ತದೆ. ಹಾಲಕ್ಕಿ ಮಹಿಳೆಯರು ಸೊಸೈಟಿಯ ಸಾಲ ಪಡೆದುಕೊಂಡಿರುವ ಪ್ರಮಾಣ ಕಡಿಮೆಯಿದೆ. ಈ ಬಗ್ಗೆ ಅವರಿಗೆ ಹೆಚ್ಚಿನ ಮಾಹಿತಿ ಇಲ್ಲ. ಪುರುಷರೇ ಸಾಲವನ್ನು ಪಡೆದುಕೊಂಡಿದ್ದಾರೆ. ಈ ತರಹದ ಅವಕಾಶವನ್ನು ಎಲ್ಲಿಯವರೆಗೆ ಮಹಿಳೆಯರು ಪಡೆದುಕೊಳ್ಳಲಾರರೊ ಅಲ್ಲಿಯವರೆಗೆ ಆರ್ಥಿಕ ಪರಿವರ್ತನೆಗೆ ಅನುವು ಮಾಡಿಕೊಡಲಾರದು.

ಲಿಂಗಾಧಾರಿತ ಶ್ರಮ ವಿಭಜನೆಯಿಂದಾಗಿ ಕುಟುಂಬದ ಒಳಗಿನ ದುಡಿಮೆ ಹೊರೆ ಮಹಿಳೆಯರ ಮೇಲಿದೆ. ಹಾಲಕ್ಕಿ ಮಹಿಳೆಯರು ಶ್ರಮದಾಯಕ ಹೊರಗಿನ ದುಡಿಮೆ ಮಾಡುವುದರಿಂದ, ಮನೆಯೊಳಗಿನ ದುಡಿಮೆ ಹುರುಳಿಲ್ಲದ ದುಡಿಮೆಯಾಗಿರದನ್ನು ಗುರುತಿಸಲಾಗಿದೆ. ಮನೆಗೆಲಸದಲ್ಲಿ ಶೇ. ೧೦೦ರಷ್ಟು ಹುಡುಗಿಯರು ದುಡಿಮೆ ಮಾಡುತ್ತಾರೆ. ಆ ದೃಷ್ಟಿಯಿಂದ ನೋಡಿದಾಗ ಅವಳು ಆಸ್ತಿಯಾಗುತ್ತಾಳೆ. ಹುಡುಗಿಯರು ಚಿಕ್ಕವರು ಇರುವಾಗಲೇ ಸ್ವಚ್ಛಗೊಳಿಸುವ ಕೆಲಸದಲ್ಲಿ ಪರಿಣಿತಳಾಗುತ್ತಾಳೆ. ಹೀಗಾಗಿ ಹೆಣ್ಣು ಮಕ್ಕಳಿಗೆ ಶಿಕ್ಷಣದಲ್ಲಿ ಆಸಕ್ತಿ ಕಡಿಮೆಯಾಗುತ್ತದೆ. ಹೀಗೆ ಕೃಷಿ ಪ್ರಧಾನ ಸಮುದಾಯವು ಲಿಂಗಾಧಾರಿತ ಪಾತ್ರದ ಮೌಲ್ಯವನ್ನು ಕಾಪಾಡಿಕೊಂಡು ಬರುವುದನ್ನು ಗುರುತಿಸಲಾಗಿದೆ. ಸಮುದಾಯದೊಳಗಿನ ಲಿಂಗ ತಾರತಮ್ಯದಿಂದಾಗಿ ಹಾಲಕ್ಕಿ ಮಹಿಳೆಯರು ಅಧಿಕ ದುಡಿಮೆ ಮಾಡಬೇಕಾಗಿದೆ. ಇದು ಹಲವಾರು ಸಮಸ್ಯೆಗಳಿಗೆ ಎಡೆಮಾಡಿಕೊಡುತ್ತದೆ.

ಸಮುದಾಯದಲ್ಲಿ ಪಾತ್ರಗಳು ಸಾಮಾಜಿಕರಣವಾಗಿ ಪುರುಷರು ಆದಾಯವನ್ನು ಗಳಿಸಿದವನೆಂದು, ಮಹಿಳೆಯರು ಮನೆಯನ್ನು, ಮಕ್ಕಳನ್ನು ನೋಡಿಕೊಳ್ಳುವರು ಎಂದು ತಿಳಿಯಲಾಗಿದೆ. ಆದರೆ, ಈ ದುಡಿಮೆಯ ಸ್ವರೂಪದಲ್ಲಿ ಕೂಡಾ ಬದಲಾವಣೆ ಉಂಟಾಗಿದೆ. ಮಹಿಳೆಯರು ಆದಾಯ ಗಳಿಸುತ್ತಿದ್ದಾರೆ. ಅಂದರೆ ಪುರುಷರ ಶ್ರಮಿಕ ಮಾರುಕಟ್ಟೆಯನ್ನು ಪ್ರವೇಶಿಸಿದ್ದಾರೆ. ಆದರೆ, ಪುರುಷರು ಅಡಿಗೆ ಮನೆಯನ್ನು ಪ್ರವೇಶಿಸಿಲ್ಲ. ಕುಟುಂಬದಲ್ಲಿ ಪಾತ್ರವು ಲಿಂಗಾಧಾರಿತವಾಗಿತ್ತಷ್ಟೆ ಅಲ್ಲದೇ, ಒಮ್ಮೆ ನಿರ್ವಹಿಸಿದ ಪಾತ್ರವನ್ನು ಕೊನೆವರೆಗೆ ನಿರ್ವಹಿಸಿಕೊಂಡು ಬರಬೇಕಾಗುತ್ತದೆ.

ಆಹಾರ, ಆಶ್ರಯ, ಬಟ್ಟೆ ಎಲ್ಲವು ಮೂಲಭೂತ ಮಾನವನ ಬೇಡಿಕೆಯಾಗಿದೆ. ಹೀಗಾಗಿ ಎಲ್ಲರೂ ದುಡಿಮೆ ಮಾಡಬೇಕಾಗಿರುವುದು ಅವಶ್ಯಕ. ಅದರಿಂದ ಹಣಕ್ಕಾಗಿ ದುಡಿಮೆ ಮಾಡುವುದು ಅಗತ್ಯವಾಗಿದೆ. ಮನೆಯೊಳಗಿನ ದುಡಿಮೆಯಾದ ಅಡುಗೆ

ಮಾಡುವುದು, ಸ್ವಚ್ಛಗೊಳಿಸುವುದು, ಮಕ್ಕಳನ್ನು ನೋಡಿಕೊಳ್ಳುವುದರಿಂದ ಹಣ ಪಡೆಯಲು ಸಾಧ್ಯವಿಲ್ಲ. ಆದ್ದರಿಂದ ಮನೆಯೊಳಗಿನ ದುಡಿಮೆಗೆ ಸಾಮಾಜಿಕ ಸ್ಥಾನ ಇಲ್ಲ. ಆದ್ದರಿಂದಲೆ ಮಕ್ಕಳನ್ನು ಬೆಳೆಸುವ ಜವಾಬ್ದಾರಿಯನ್ನು ಮಹಿಳೆಯರಿಗೆ ನೀಡಲಾಗಿದೆ.

ಕೃಷಿ ಚಟುವಟಿಕೆಯಲ್ಲಿ ಹಾಲಕ್ಕಿ ಮಹಿಳೆಯರು ನಿರ್ಣಾಯಕ ಪಾತ್ರವನ್ನು ವಹಿಸುತ್ತಿದ್ದಾರೆ. ಆದರೆ ಈ ಪ್ರದೇಶದ ಕೃಷಿ ಮಳೆಯನ್ನೆ ಅವಲಂಬಿಸಿದೆ. ಈ ಪ್ರದೇಶದಲ್ಲಿ ಅತಿ ಹೆಚ್ಚು ಮಳೆ ಬೀಳುವುದರಿಂದ ಎಲ್ಲ ದಿನವು ದುಡಿಮೆ ಮಾಡಲು ಸಾಧ್ಯವಾಗದು. ಕೃಷಿ ದುಡಿಮೆ ಕಠಿಣತೆಯಿಂದ ಕೂಡಿದೆ. ಅತಿ ಮಳೆಯಾದರೆ ಕಾರ್ಮಿಕರ ಚಲನೆ ಸಾಧ್ಯವಾಗದು. ಅದರಿಂದ ಮಳೆಗಾಲದಲ್ಲಿ ಆದಾಯದ ಪ್ರಮಾಣದಲ್ಲಿ ಇಳಿಕೆಯಾಗುತ್ತದೆ. ಮಳೆಗಾಲದಲ್ಲಿ ಅರಣ್ಯದ ಉತ್ಪನ್ನಗಳನ್ನು ಸಂಗ್ರಹಿಸುವಿಕೆಯು ಸಾಧ್ಯವಿಲ್ಲ. ಮಳೆಗಾಲದಲ್ಲಿ ತರಕಾರಿ ಬೆಳೆಯುವುದರಲ್ಲಿ ಹಾಲಕ್ಕಿ ಮಹಿಳೆಯರು ತೊಡಗಿಕೊಳ್ಳುತ್ತಾರೆ. ಈ ಪ್ರದೇಶದಲ್ಲಿ ತರಕಾರಿಗಳ ಮುಖ್ಯ ಉತ್ಪಾದಕರು ಮತ್ತು ಮಾರಾಟಗಾರರು ಹಾಲಕ್ಕಿ ಮಹಿಳೆಯರೆ ಆಗಿರುವುದನ್ನು ಗುರುತಿಸಲಾಗಿದೆ.

ಹಾಲಕ್ಕಿ ಮಹಿಳೆಯರ ದುಡಿಮೆಯನ್ನು ಗಮನಿಸಿದಾಗ ಅವರು ಕುಟುಂಬಕ್ಕೆ ಸಂಪನ್ಮೂಲವಾಗಿರುವುದು ಸ್ಪಷ್ಟಗೊಳ್ಳುತ್ತದೆ. ಹಾಲಕ್ಕಿ ಮಹಿಳೆಯರು ಗಳಿಸಿದ ಆದಾಯವನ್ನು ವೆಚ್ಚ ಮಾಡುವಲ್ಲಿ ಸ್ವಾತಂತ್ರ್ಯವನ್ನು ಅನುಭವಿಸುತ್ತಿದ್ದಾರೆ. ಏಕೆಂದರೆ, ಗಳಿಸಿದ ಆದಾಯ ವೆಚ್ಚ ಮಾಡುವುದೇ ಕುಟುಂಬದ ಅಗತ್ಯತೆಯ ಮೇಲೆ ಸಮುದಾಯವು ಮಹಿಳೆಯರ ಈ ಕೊಡುಗೆಯ ಮಹತ್ವವನ್ನು ಪರಿಗಣಿಸಬೇಕಾಗಿದೆ.

ಲಿಂಗ ಸಮಾನತೆಯಲ್ಲಿ ಬದಲಾವಣೆಯನ್ನು ಗುರುತಿಸುವುದು ಅಧ್ಯಯನದ ಮೂರನೆಯ ಉದ್ದೇಶವಾಗಿದೆ. ಹಾಲಕ್ಕಿಗಳ ಸಾಮಾಜಿಕ ಆರ್ಥಿಕ ನೆಲೆಯಲ್ಲಿ ಲಿಂಗ ಸಮಾನತೆಯನ್ನು ಅವಲೋಕಿಸಿದಾಗ ಬದಲಾವಣೆಯನ್ನು ಗುರುತಿಸಲಾಗಿದೆ. ಸಾಂಪ್ರದಾಯಿಕ ಸಮುದಾಯದಲ್ಲಿ ಸಾಮಾಜಿಕ ಸಂಘಟನೆಯು ಮಹಿಳೆಯರ ಪ್ರವೇಶವನ್ನು ನಿರಾಕರಿಸುವ ಮೂಲಕ ಅಧಿಕಾರವನ್ನು ಕೇಂದ್ರೀಕರಿಸಿಕೊಂಡಿತ್ತು. ಆಧುನಿಕ ಪಂಚಾಯತಿ ವ್ಯವಸ್ಥೆಯ ಮೂಲಕ ಮಹಿಳೆಯರು ಪಂಚಾಯತಿಯಲ್ಲಿ ಪ್ರವೇಶವನ್ನು ಪಡೆದುಕೊಂಡಿದ್ದಾರೆ. ಸಾಂಪ್ರದಾಯಿಕ ಸಾಮಾಜಿಕ ಮೌಲ್ಯದಲ್ಲಿ ಬದಲಾವಣೆಗೆ ಎಡೆ ಮಾಡಿಕೊಟ್ಟಿದೆ. ಹಾಲಕ್ಕಿ ಪುರುಷರು ತಮ್ಮ ಮಹಿಳೆಯರಿಗೆ ಪ್ರೋತ್ಸಾಹವನ್ನು ನೀಡುತ್ತಿರುವುದನ್ನು ಗುರುತಿಸಲಾಗಿದೆ.

ಸಾಂಪ್ರದಾಯಿಕ ಸಮುದಾಯವು ತಮ್ಮ ಮಕ್ಕಳಿಗೆ ಶಿಕ್ಷಣ ನೀಡುವಲ್ಲಿ ಆಸಕ್ತಿ ವಹಿಸಿರಲಿಲ್ಲ. ಆದರೆ, ಇಂದು ಹಾಲಕ್ಕಿಗಳು ತಮ್ಮ ಮಕ್ಕಳ ಶಿಕ್ಷಣದಲ್ಲಿ ಆಸಕ್ತಿಯನ್ನು

ತೋರುತ್ತಿರುವರು. ಇದನ್ನು ಮಹಿಳೆಯರ ಸಾಕ್ಷರತೆಯ (ಶೇ. ೫೦.೨೭) ಮಟ್ಟದಿಂದ ಗುರುತಿಸಬಹುದು. ಇದರಿಂದ ಹಾಲಕ್ಕಿಗಳು ತಮ್ಮ ವೃತ್ತಿಯನ್ನು ಬದಲಾಯಿಸಿಕೊಳ್ಳುವಲ್ಲಿ ಆಸಕ್ತಿಯನ್ನು ವಹಿಸುತ್ತಿರುವುದು ಸ್ಪಷ್ಟಗೊಳ್ಳುತ್ತದೆ. ಹಾಲಕ್ಕಿಗಳು ತಮ್ಮ ಮಕ್ಕಳಿಗೆ ಶಿಕ್ಷಣ ನೀಡುವಲ್ಲಿ ಲಿಂಗ ತಾರತಮ್ಯವನ್ನು ಅನುಸರಿಸುತ್ತಿಲ್ಲ ಎಂಬುದನ್ನು ಗುರುತಿಸಲಾಗಿದೆ. ಹಾಲಕ್ಕಿ ಸಮುದಾಯವು ಸಮಾನತೆಯ ಸಾಮಾಜಿಕ ಮೌಲ್ಯವನ್ನು ನಿಧಾನವಾಗಿ ಅಳವಡಿಸಿಕೊಳ್ಳುತ್ತಿರುವುದನ್ನು ಗುರುತಿಸಬಹುದಾಗಿದ.

ಸಾಂಪ್ರದಾಯಿಕವಾಗಿ ದುಡಿಮೆ ಮಾಡುವುದು ಪುರುಷರ ಕರ್ತವ್ಯವಾಗಿತ್ತು. ಮಹಿಳೆಯರು ಪುರುಷರಿಗೆ ಸಹಾಯಕರಾಗಿ ಕೆಲಸ ನಿರ್ವಹಿಸುತ್ತಿದ್ದರು. ಇಂದು ಈ ಚಿತ್ರಣ ಬದಲಾಗಿದೆ. ಪುರುಷರ ಕೆಲಸವೆಂದು ಗುರುತಿಸುವ ಕ್ಷೇತ್ರಗಳಲ್ಲಿ ಮಹಿಳೆಯರು ನಿಧಾನವಾಗಿ ಪ್ರವೇಶವನ್ನು ಪಡೆದುಕೊಳ್ಳುತ್ತಿದ್ದಾರೆ. ಹಾಲಕ್ಕಿ ಪುರುಷರು ಕೃಷಿಯೇತರ ಚಟುವಟಿಕೆಯಲ್ಲಿ ನಿಧಾನವಾಗಿ ಚಲನೆಯನ್ನು ಹೊಂದುತ್ತಿರುವರು. ಕೃಷಿಯ ಎಲ್ಲಾ ಚಟುವಟಿಕೆಯನ್ನು ಮಹಿಳೆಯರೇ ನಿರ್ವಹಿಸುತ್ತಿದ್ದಾರೆ. ಮಹಿಳೆಯೇ ಕೃಷಿಯ ಮುಖ್ಯ ದುಡಿಮೆಗಾರಳಾಗಿದ್ದಾಳೆ.

ಮಹಿಳೆಯರು ಅಸಂಘಟಿತ ವಲಯದಿಂದ ಸಂಘಟಿತ ವಲಯಕ್ಕೆ ಪ್ರವೇಶವನ್ನು ಪಡೆದುಕೊಂಡಿರುವರು. ಕುಟುಂಬದ ಆದಾಯಕ್ಕೆ ಮೂಲಾಧಾರವಾಗಿದ್ದಾರೆ. ಸಂಘಟಿತ ವಲಯದಲ್ಲಿ ದುಡಿಮೆ ಮಾಡುವ ಮಹಿಳೆಯ ಸ್ಥಾನವು ಕುಟುಂಬದಲ್ಲಿ ಉತ್ತಮಗೊಳ್ಳುತ್ತಿರುವುದನ್ನು ಗುರುತಿಸಲಾಗಿದೆ. ಸಮುದಾಯದಲ್ಲಿ ಕೂಡಾ ಅವರಿಗೆ ಹೆಚ್ಚಿನ ಗೌರವವನ್ನು ನೀಡಲಾಗುತ್ತಿದೆ ಎಂದು ಗಮನಿಸಲಾಗಿದೆ.

ಲಿಂಗ ಸಮಾನತೆಯಲ್ಲಿ ಉಂಟಾದ ಬದಲಾವಣೆಯನ್ನು ವಿವಾಹ ಪದ್ಧತಿಯಲ್ಲಿನ ಬದಲಾವಣೆಯ ಮೂಲಕ ಅರಿಯಬಹುದು. ಸಾಂಪ್ರದಾಯಿಕ ಹಾಲಕ್ಕಿ ಸಮುದಾಯದಲ್ಲಿ ವಧುದಕ್ಷಿಣೆ ಸಾಂಪ್ರದಾಯವಿತ್ತು. ಆದರೆ, ಇಂದು ವಧುದಕ್ಷಿಣೆ ಪದ್ಧತಿಗೆ ಬದಲಾಗಿ ವರದಕ್ಷಿಣೆ ಪದ್ಧತಿ ಜಾರಿಯಲ್ಲಿರುವುದನ್ನು ಗುರುತಿಸಲಾಗಿದೆ. ವರದಕ್ಷಿಣೆಯ ಮೊತ್ತವು ಪುರುಷರ ನೌಕರಿಯ ಆಧಾರದ ಮೇಲೆ ನಿರ್ಧಾರಗೊಳ್ಳುತ್ತಿದೆ. ಸಾಮಾಜೀಕರಣ ಪ್ರಕ್ರಿಯೆಯಿಂದ ಮೇಲ್‌ವರ್ಗದವರ ಸಾಮಾಜಿಕ ಪದ್ಧತಿಯನ್ನು ಅನುಸರಿಸಲು ಅನುವು ಮಾಡಿರುವುದು ಕಂಡುಬರುತ್ತದೆ.

ಮಹಿಳೆಯರು ಪುರುಷರ ವಲಯವೆಂದು ಗುರುತಿಸಿಕೊಂಡಲ್ಲಿ ಪ್ರವೇಶ ಪಡೆದುಕೊಂಡಿದ್ದಾರೆ, ಆದರೆ, ಕುಟುಂಬದೊಳಗಿನ ದುಡಿಮೆಯ ಸ್ವರೂಪದಲ್ಲಿ ಬದಲಾವಣೆ ಉಂಟಾಗದಿರುವುದನ್ನು ಗುರುತಿಸಲಾಗಿದೆ. ಅದರಿಂದ ಮಹಿಳೆಯರ ಮೇಲೆ ದುಡಿಮೆಯ ಹೊರೆ ದ್ವಿಗುಣಗೊಂಡಿದೆ. ಸರಕಾರಿ ಮತ್ತು ಖಾಸಗಿ ವಲಯದಲ್ಲಿ ದುಡಿಮೆ ಮಾಡುವ

ಮಹಿಳೆ ಕುಟುಂಬದೊಳಗಿನ ದುಡಿಮೆಯಲ್ಲಿ ಲಿಂಗ ಅಸಮಾನತೆ ಮುಂದುವರಿಯುತ್ತಿರುವುದನ್ನು ಗುರುತಿಸಲಾಗಿದೆ. ಸರಕಾರದ ಅಂಗನವಾಡಿ-ಬಾಲವಾಡಿ ಕೇಂದ್ರಗಳು, ಸರ್ಕಾರದ ಕುಡಿಯುವ ನೀರಿನ ಪೂರೈಕೆ ಹಾಗೂ ಆರೋಗ್ಯದ ಕಾರ್ಯಕ್ರಮಗಳು ಮಹಿಳೆಯರ ದುಡಿಮೆಯ ಮೇಲೆ ಅನುಕೂಲಕರವಾದ ಪರಿಣಾಮ ಬೀರಿವೆ.

ಹಾಲಕ್ಕಿ ಮಹಿಳೆಯರಲ್ಲಿ ಪ್ರಾಥಮಿಕ ಮಟ್ಟದವರೆಗೆ ಶಿಕ್ಷಣ ಪಡೆದುಕೊಂಡಿರುವವರ ಸಂಖ್ಯೆಯೇ ಹೆಚ್ಚು. ಹೀಗಾಗಿ ಸಂಘಟಿತ ವಲಯದಲ್ಲಿ ಉದ್ಯೋಗ ಪಡೆದುಕೊಳ್ಳಲು ಸಾಧ್ಯವಾಗುತ್ತಿಲ್ಲ. ಅದರಿಂದ ಅಸಂಘಟಿತ ವಲಯದಲ್ಲಿ ಕಾರ್ಮಿಕರಾಗಿ ದುಡಿಮೆ ಮಾಡುತ್ತಾರೆ. ಆದರೆ, ಕೂಲಿಯ ತಾರತಮ್ಯದಿಂದ ಕಡಿಮೆ ಕೂಲಿ ಪಡೆದುಕೊಳ್ಳುತ್ತಾರೆ. ಅದರಿಂದ ಆದಾಯದ ಪ್ರಮಾಣ ಕಡಿಮೆಯಾಗುತ್ತದೆ. ಮತ್ತು ಅಧಿಕ ದುಡಿಮೆ ಕೂಡಾ ಮಾಡಬೇಕಾಗುತ್ತದೆ ಎಂಬುದನ್ನು ಗುರುತಿಸಲಾಗಿದೆ.

ಶಿಕ್ಷಣ ಮತ್ತು ಸಾಮಾಜಿಕ ಆರ್ಥಿಕ ಪರಿವರ್ತನೆಯ ನಡುವಿನ ಸಂಬಂಧವನ್ನು ವಿಶ್ಲೇಷಿಸುವುದು ಈ ಅಧ್ಯಯನದ ಸಾಲ್ಯನೆಯ ಉದ್ದೇಶವಾಗಿದೆ. ಶಿಕ್ಷಣವು ಸಾಮಾಜಿಕ ಬದಲಾವಣೆಯ ಪ್ರಮುಖ ಸೂಚಿ ಮತ್ತು ಸಾಧನವು ಆಗಿರುವುದನ್ನು ಅಧ್ಯಯನವು ಗುರುತಿಸಿದೆ. ಸಾಂಪ್ರದಾಯಿಕ ಹಾಲಕ್ಕಿಗಳು ತಮ್ಮ ಮಕ್ಕಳಿಗೆ ಶಿಕ್ಷಣವನ್ನು ನೀಡುತ್ತಿರಲಿಲ್ಲ. ಇಂದು ಹಾಲಕ್ಕಿ ಮಹಿಳೆಯರ ಸಾಕ್ಷರತೆಯ ಮಟ್ಟವು ಶೇ. ೫೦.೨೭ರಷ್ಟಿದೆ. ಈ ಪ್ರದೇಶದ ಚಾರಿತ್ರಿಕ ಹಿನ್ನೆಲೆಯ ಹಾಲಕ್ಕಿಗಳ ಶಿಕ್ಷಣದ ಪ್ರಗತಿಗೆ ಪೂರಕವಾಗಿ ಕಾರ್ಯನಿರ್ವಹಿಸಿದೆ. ಇಂದು ಶಿಕ್ಷಣದಿಂದಾಗಿ ಹಾಲಕ್ಕಿಗಳ ಡೆಮೋಗ್ರಾಫಿಯಲ್ಲಿ ಗುರುತಿಸಬಹುದಾದ ಬದಲಾವಣೆ ಉಂಟಾಗಿದೆ. ಒಟ್ಟು ಹಾಲಕ್ಕಿಗಳ ಜನಸಂಖ್ಯೆಯ ಪ್ರಮಾಣದಲ್ಲಿ ಇಳಿಕೆ ಉಂಟಾಗುತ್ತದೆ. ಹಾಲಕ್ಕಿಗಳ ಕುಟುಂಬದ ಒಟ್ಟು ಸರಾಸರಿ ಗಾತ್ರವು ಶೇ. ೪.೩ರಷ್ಟಿದೆ. ಎಲ್ಲಾ ಕುಟುಂಬಗಳು ವಿಭಕ್ತವಾಗಿರುವುದನ್ನು ಗುರುತಿಸಲಾಗಿದೆ. ಇಂದು ಶೇ. ೮೧.೬೨ರಷ್ಟು ಹಾಲಕ್ಕಿಗಳು ಕುಟುಂಬದ ಯೋಜನೆ ಶಸ್ತ್ರ ಚಿಕಿತ್ಸೆಯನ್ನು ಮಾಡಿಸಿಕೊಂಡಿದ್ದಾರೆ. ಈ ಎಲ್ಲಾ ಬದಲಾವಣೆಗೆ ಶಿಕ್ಷಣವು ಸಹಕಾರಿ ಅಂಶವಾಗಿರುವುದು ಕಂಡುಬಂದಿದೆ.

ಹಾಲಕ್ಕಿ ಮಹಿಳೆಯರಲ್ಲಿ ಒಟ್ಟು ಸಾಕ್ಷರತೆಯ ಪ್ರಮಾಣವು ೫೦.೨೭ರಷ್ಟಿದೆ. ಶೇ. ೨೭.೦೨ರಷ್ಟು ಮಹಿಳೆಯರು ಪ್ರಾಥಮಿಕ ಶಿಕ್ಷಣವನ್ನು ಪಡೆದುಕೊಂಡಿದ್ದಾರೆ. ಶೇ. ೩.೧೮ರಷ್ಟು ಪದವಿ ಶಿಕ್ಷಣವನ್ನು ಮಹಿಳೆಯರು ಪಡೆದಿದ್ದಾರೆ. ಶಿಕ್ಷಣದಿಂದ ಸಾಮಾಜಿಕ ಪದ್ಧತಿಯಲ್ಲಿ ಬದಲಾವಣೆ ಉಂಟಾಗಿದೆ. ಹಾಲಕ್ಕಿ ಮಹಿಳೆಯರ ವಿವಾಹದ ವಯಸ್ಸಿನಲ್ಲಿ ಗಣನೀಯ ಏರಿಕೆ ಉಂಟಾಗಿದೆ.

ಹಾಲಕ್ಕಿಗಳ ಉದ್ಯೋಗದ ರಚನೆಯ ಬದಲಾವಣೆಯಲ್ಲಿ ಶಿಕ್ಷಣವು ಸಹಕಾರಿ ಅಂಶವಾಗಿರುವುದನ್ನು ಗುರುತಿಸಲಾಗಿದೆ. ಇಂದು ಶೇ. ೪.೩೨ರಷ್ಟು ಮಹಿಳೆಯರು ಸರಕಾರಿ ವಲಯದಲ್ಲಿ ಸೇವೆಯನ್ನು ಸಲ್ಲಿಸುತ್ತಿದ್ದಾರೆ. ಇದರಿಂದಾಗಿ ದುಡಿಮೆಯ ಅವಧಿಯ ಪ್ರಮಾಣದಲ್ಲಿ ಇಳಿಕೆಯಾಗಿರುವುದನ್ನು ಗುರುತಿಸಲಾಗಿದೆ. ಸರಕಾರಿ ನೌಕರಿಯಲ್ಲಿರುವ ಮಹಿಳೆಯರು ಆಧುನಿಕ ಸೌಲಭ್ಯಗಳನ್ನು ಬಳಸಿಕೊಂಡಿದ್ದಾರೆ. ಉದ್ಯೋಗ ಮಾಡುವ ಮಹಿಳೆಯರಿಗೆ ಕುಟುಂಬದಲ್ಲಿ ಸಮುದಾಯದಲ್ಲಿ ಮತ್ತು ಸಮಾಜದಲ್ಲಿ ಹೆಚ್ಚಿನ ಗೌರವವನ್ನು ಪಡೆದುಕೊಳ್ಳುತ್ತಿದ್ದಾರೆ. ಈ ಮಹಿಳೆಯ ಸಾಮಾಜಿಕ ಸಂಬಂಧಗಳು ಉತ್ತಮಗೊಳ್ಳುತ್ತಿರುವುದನ್ನು ಗಮನಿಸಲಾಗಿದೆ.

ಶಿಕ್ಷಣವು ಹಾಲಕ್ಕಿಗಳ ಆದಾಯದಲ್ಲಿ ಏರಿಕೆಯಾಗಲು ಸಹಕಾರಿ ಅಂಶವಾಗಿದೆ. ಶೇ. ೧೧.೮೯ರಷ್ಟು ಹಾಲಕ್ಕಿಗಳು ಬಡತನದ ರೇಖೆಗಿಂತ ಮೇಲಿದ್ದಾರೆ. ಹಾಲಕ್ಕಿಗಳು ಆಧುನಿಕ ಆರ್ಥಿಕ ಅಂಶಗಳನ್ನು ತಮ್ಮದನ್ನಾಗಿಸಿಕೊಂಡಿದ್ದಾರೆ. ಹಾಲಕ್ಕಿಗಳಲ್ಲಿ ಖಾಸಗಿ ಆಸ್ತಿಯ ಪರಿಕಲ್ಪನೆ ಬೆಳೆಯುತ್ತಿದೆ. ಹಾಲಕ್ಕಿಗಳಲ್ಲಿ ಕೆಲವರು ಆಧುನಿಕ ಐಷಾರಾಮದ ವಸ್ತುಗಳನ್ನು ಉಪಯೋಗಿಸುವುದರ ಮೂಲಕ ತಮ್ಮ ಜೀವನ ಮಟ್ಟವನ್ನು ಹೆಚ್ಚಿಸಿಕೊಂಡಿದ್ದಾರೆ. ಹಾಲಕ್ಕಿಗಳು ತಾಂತ್ರಿಕತೆಯನ್ನು ಬಳಸಿಕೊಂಡು ಕೃಷಿಯನ್ನು ಮಾಡುತ್ತಿದ್ದಾರೆ. ಹಾಲಕ್ಕಿಗಳ ನಡುವೆ ಆರ್ಥಿಕ ಅಸಮಾನತೆ ಉಂಟಾಗುತ್ತಿರುವುದನ್ನು ಗುರುತಿಸಲಾಗಿದೆ.

ಶಿಕ್ಷಣವು ಹೊಸ ವೃತ್ತಿಯಲ್ಲಿ ಆಸಕ್ತಿಯನ್ನು ಉಂಟುಮಾಡುವಲ್ಲಿ ಸಹಾಯಕ ಅಂಶವಾಗಿ ಕೆಲಸ ಮಾಡುತ್ತದೆ. ಇಂದಿನ ಹಾಲಕ್ಕಿ ಯುವಕರು ಕೃಷಿಯಲ್ಲಿ ಆಸಕ್ತಿಯನ್ನು ವಹಿಸುತ್ತಿಲ್ಲ. ಸಾಂಪ್ರದಾಯಿಕವಾಗಿ ಕೃಷಿಯಲ್ಲಿ ತೊಡಗಿಕೊಂಡವರು ಕೂಡಾ ಇಂದು ವ್ಯಾಪಾರ, ಕಾರ್ಖಾನೆ ಕೆಲಸ, ಗುತ್ತಿಗೆ ಕೆಲಸ ಹಾಗೂ ಇತರ ಉದ್ಯೋಗಗಳಲ್ಲಿ ಆಸಕ್ತಿ ತೋರುತ್ತಿದ್ದಾರೆ. ಇಂದು ಹಾಲಕ್ಕಿಗಳು ಭೂಮಿಯನ್ನು ಗೇಣಿ ಮಾಡುವುದನ್ನು ಬಿಟ್ಟುಕೊಟ್ಟಿದ್ದಾರೆ. ಗೇಣಿ ಪದ್ಧತಿ ತಮ್ಮನ್ನು ಶೋಷಣೆ ಮಾಡುತ್ತಿದೆ ಎಂಬ ಅರಿವು ಅವರಲ್ಲಿ ಉಂಟಾಗಿದ್ದನ್ನು ಗುರುತಿಸಲಾಗಿದೆ.

ಶೇ. ೯೭.೭೭ರಷ್ಟು ಪ್ರತಿಕ್ರಿಯಿಸಿದ ಮಹಿಳೆಯರು ಪುರುಷರು ಮತ್ತು ಮಹಿಳೆಯರು ಸಮಾನರು ಎಂದು ಅಭಿಪ್ರಾಯಪಟ್ಟಿದ್ದಾರೆ. ಶೇ.೬೪.೮೭ ಮಹಿಳೆಯರು ಪುರುಷರು ಶ್ರೇಷ್ಠ ಎಂದು ಪ್ರತಿಕ್ರಿಯಿಸಿದ್ದಾರೆ. ಶೇ. ೧೦೦ರಷ್ಟು ಮಹಿಳೆಯರು ಹೆಣ್ಣು ಮಕ್ಕಳು ನೌಕರಿ ಮಾಡಬೇಕು ಎಂದು ಪ್ರತಿಕ್ರಿಯಿಸಿರುವರು. ಇಂದು ಶಿಕ್ಷಣವನ್ನು ನೀಡುವಲ್ಲಿ ಹಾಲಕ್ಕಿಗಳು ಲಿಂಗ ತಾರತಮ್ಯವನ್ನು ಅನುಸರಿಸುತ್ತಿಲ್ಲ. ಕಲಿಯಲು ಯಾರು ಜಾಣರು ಇರುತ್ತಾರೆ.

(ಹುಡುಗ/ಹುಡುಗಿ) ಅವರಿಗೆ ಶಿಕ್ಷಣವನ್ನು ನೀಡುತ್ತಿರುವುದನ್ನು ಗಮನಿಸಲಾಗಿದೆ. ಮಹಿಳೆಯರಿಗೆ ಆಸ್ತಿಯಲ್ಲಿ ಪಾಲು ನೀಡುವಲ್ಲಿ ಸಕಾರಾತ್ಮಕ ಮನೋಭಾವವನ್ನು ಹೊಂದಿದ್ದಾರೆ. ಅತಿ ಚಿಕ್ಕ ರೈತರಾದ್ದರಿಂದ ಭೂಮಿಯನ್ನು ಹಂಚುವಷ್ಟು ಹೊಂದಿಲ್ಲ. ಮಗಳಿಗೆ ತೊಂದರೆಯಾದಾಗ ಮಾತ್ರ ಭೂಮಿ ಅಥವಾ ಹಣವನ್ನು ನೀಡುತ್ತಾರೆ.

ಪ್ರತಿಕ್ರಿಯಿಸಿದ ಶೇ. ೮೧.೦೮ರಷ್ಟು ಮಹಿಳೆಯರು, ಪುರುಷರು ಮನೆಗೆಲಸವನ್ನು ಮಾಡಬೇಕು ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿರುವರು.ಹಾಲಕ್ಕಿಗಳ ಜೀವನದಲ್ಲಿ ಹಬ್ಬಗಳಿಗೆ ವಿಶೇಷವಾದ ಸ್ಥಾನವಿದೆ. ಶೇ. ೯೭೮೩ರಷ್ಟು ಪ್ರತಿಕ್ರಿಯಿಸಿದವರು ಹಬ್ಬವನ್ನು ಆಚರಿಸಬೇಕು ಅಂದಿದ್ದಾರೆ. ಶೇ. ೫೮.೯೧ರಷ್ಟು ಮಾತ್ರ ಹಬ್ಬಗಳನ್ನು ಬಹಳ ದಿನ ಆಚರಿಸಬೇಕು ಅಂದಿದ್ದಾರೆ. ಉಳಿದವರ ಪ್ರಕಾರ ಹಬ್ಬಗಳು ಮಹಿಳೆಯರ ದುಡಿಮೆಯ ಪ್ರಮಾಣದಲ್ಲಿ ಇಳಿಕೆಗೆ ಕಾರಣವಾಗುತ್ತವೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿರುವರು.

ಆದರೆ, ಶಿಕ್ಷಣವು ಸಾಂಸ್ಕೃತಿಕ ಮೌಲ್ಯವನ್ನು ಬದಲಾವಣೆ ಉಂಟುಮಾಡುವಲ್ಲಿ ವಿಫಲಗೊಂಡಿದೆ. ಪ್ರತಿಕ್ರಿಯಿಸಿದ ಶೇ. ೯೫.೧೩ರಷ್ಟು ಮಹಿಳೆರು ಗಂಡು ಮಗುವಿನ ಬಗ್ಗೆ ಒಲವನ್ನು ಹೊಂದಿದ್ದಾರೆ. ಪ್ರತಿಕ್ರಿಯಿಸಿದ ಶೇ. ೭೨.೧೬ರಷ್ಟು ಮಹಿಳೆಯರು ಗೌಡನಿಗೆ ಅಧಿಕಾರವಿರಬೇಕು ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿರುವರು. ಪ್ರತಿಕ್ರಿಯಿಸಿದ ಶೇ. ೯೭೮೦ರಷ್ಟು ಮಹಿಳೆಯರು ಪುರುಷರು ಮಾತ್ರ ಸುಗ್ಗಿ ಕುಣಿಯಬೇಕು ಮತ್ತು ಸುಗ್ಗಿಯ ಹಾಡನ್ನು ಹಾಡಬೇಕು ಎಂಬ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಅದರಿಂದ ಶಿಕ್ಷಣಕ್ಕಿಂತಲೂ ಸಂಸ್ಕೃತಿಯು ಮಹಿಳೆಯರ ಮೇಲೆ ಹೆಚ್ಚು ಪ್ರಭಾವ ಬೀರಿದೆ ಎಂದು ಗುರುತಿಸಲಾಗಿದೆ.

ಶಿಕ್ಷಣವು ಮಹಿಳೆಯರಲ್ಲಿ ರಾಜಕೀಯ ಅರಿವು ಉಂಟುಮಾಡುವಲ್ಲಿ ಕೂಡಾ ಸಹಕಾರಿ ಅಂಶವಾಗಿರುವುದನ್ನು ಗುರುತಿಸಲಾಗಿದೆ. ಹಾಲಕ್ಕಿಗಳ ಸಾಂಪ್ರದಾಯಿಕ ಸಾಮಾಜಿಕ ರಚನೆಯಲ್ಲಿ ಮಹಿಳೆಯರ ಪ್ರವೇಶವನ್ನು ನಿಷೇಧಿಸಲಾಗಿತ್ತು, ಆಡಳಿತಾತ್ಮಕ ಸುಧಾರಣೆಯು ಮಹಿಳೆಯರಿಗೆ ಪಂಚಾಯತಿ ಪ್ರವೇಶವನ್ನು ನೀಡಿದೆ. ಪ್ರಸ್ತುತವಾಗಿ ಹಾಲಕ್ಕಿ ಮಹಿಳೆಯೇ ಉತ್ತರ ಕನ್ನಡ ಜಿಲ್ಲೆಯಲ್ಲಿ ಜಿಲ್ಲಾ ಪಂಚಾಯತಿ ಅಧ್ಯಕ್ಷಳಾಗಿರುವಳು. ಇಂದು ಶೇ. ೯೩.೫೧ರಷ್ಟು ಹಾಲಕ್ಕಿ ಮಹಿಳೆಯರು ಮತದಾನ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳುತ್ತಾರೆ. ಶೇ. ೭೧.೨೦ರಷ್ಟು ಪ್ರತಿಕ್ರಿಯಿಸಿದ ಮಹಿಳೆಯರ ಪ್ರಕಾರ ಗ್ರಾಮ ಪಂಚಾಯತಿಯಿಂದ ಅನುಕೂಲವಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ. ಇದುವರೆಗೆ ಹಾಲಕ್ಕಿಗಳನ್ನು ಪರಿಶಿಷ್ಟ ಪಂಗಡದವರೆಂದು ಗುರುತಿಸಿಲ್ಲ. ಅಂದು ಡಾ.ದೇಸಾಯಿಯವರು ಈ ಬಗ್ಗೆ ಸರ್ಕಾರವನ್ನು ಒತ್ತಾಯಿಸಿದ್ದರು. ಆದರೆ, ಇಂದು ಪ್ರತಿಕ್ರಿಯಿಸಿದ ಶೇ. ೯೭.೨೯ರಷ್ಟು ಮಹಿಳೆಯರು ತಮ್ಮನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಬೇಕು ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿರುವರು.

ಹಾಲಕ್ಕಿಗಳು ತಮ್ಮ ಹಾಲಕ್ಕಿ ಒಕ್ಕಲಿಗರ ಸಂಘದ ಮುಖಾಂತರ ತಮ್ಮನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಬೇಕು ಎಂದು ಸರ್ಕಾರಕ್ಕೆ ಹಲವಾರು ಬಾರಿ ಮನವಿ ಪತ್ರವನ್ನು ಸಲ್ಲಿಸಿರುವರು. ಈ ಬಗ್ಗೆ ಹಲವಾರು ಸಭೆಗಳನ್ನು ಹಾಗೂ ಜಾಥಾಗಳನ್ನು ನಡೆಸಿರುವರು. ರಾಜಕೀಯ ಪಕ್ಷದ ನಾಯಕರೊಡನೆ ಉತ್ತಮ ಸಂಬಂಧವನ್ನು ಇಟ್ಟುಕೊಂಡಿದ್ದಾರೆ. ಶಿಕ್ಷಣ ಪಡೆದವರಲ್ಲಿ ಇಬ್ಬರುವಿಧಾನ ಸಭೆಯನ್ನು ಪ್ರತಿನಿಧಿಸಿದ್ದಾರೆ.

ಹಾಲಕ್ಕಿಗಳು ತಮ್ಮ ಸಾಂಸ್ಕೃತಿಕ ಕಲೆಯ ಬಗ್ಗೆ ಅಭಿಮಾನವನ್ನು ಹೊಂದಿದ್ದಾರೆ. ಹಾಲಕ್ಕಿಗಳು ತಮ್ಮ ಬಗ್ಗೆ ತಾವೇ ಬರೆದುಕೊಂಡಿದ್ದಾರೆ. ತಮ್ಮ ವಿಶಿಷ್ಟ ಕಲೆಯಾದ ಸುಗ್ಗಿಯನ್ನು ರಾಜ್ಯಮಟ್ಟದಲ್ಲಿ ಗುರುತಿಸಿಕೊಂಡಿದ್ದಾರೆ. ಹಾಲಕ್ಕಿಗಳ ಜನಪದ ಕೋಗಿಲೆಯಾದ ಸುಕ್ರಿ ಬೊಮ್ಮುಗೌಡ ಅವರ ಜನಪದ ಸಾಹಿತ್ಯವನ್ನು ಸಂರಕ್ಷಣೆ ಮಾಡಿಕೊಂಡು ಬರುತ್ತಿರುವುದನ್ನು ಗುರುತಿಸಲಾಗಿದೆ. ಹಾಲಕ್ಕಿಗಳು ಇಂದು ಸುಗ್ಗಿಯ ಸಮ್ಮೇಳನವನ್ನು ನಡೆಸುತ್ತಿದ್ದಾರೆ. ತಮ್ಮ ಸಾಮಾಜಿಕ ಸಂಘಟನೆಯನ್ನು ಬಲಪಡಿಸಲು, ಹಲವಾರು ವರ್ಷಗಳಿಂದ ನಿಂತು ಹೋದ ಸೀಮೆಯ ಸಭೆಯನ್ನು ಸೇರಿಸುತ್ತಿರುವುದನ್ನು ಗಮನಿಸಲಾಗಿದೆ. ತಮ್ಮ ಪ್ರದರ್ಶನಾತ್ಮಕ ಕಲೆಗೆ ಮಾಧ್ಯಮಗಳನ್ನು ಬಳಕೆ ಮಾಡುತ್ತಿರುವುದು ಅವರಲ್ಲಿ ಉಂಟಾಗಿರುವ ಬದಲಾವಣೆಯನ್ನು ಸೂಚಿಸುತ್ತದೆ. ಹಾಲಕ್ಕಿಗಳ ಸಾಂಪ್ರದಾಯಿಕ ನಾಟೀ ಔಷಧದ ಪದ್ಧತಿಯನ್ನು ದೊಡ್ಡ ಪ್ರಮಾಣದಲ್ಲಿ ಬೆಳೆಸಿಕೊಂಡು ಸಂರಕ್ಷಣೆ ಮಾಡಿಕೊಂಡು ಬರುತ್ತಿರುವರು.

೬.೨. ಅಧ್ಯಯನದ ಮುಖ್ಯ ತಥ್ಯಗಳು

ಹಾಲಕ್ಕಿ ಮಹಿಳೆಯರ ಜೀವನದಲ್ಲಿ ಸಂಸ್ಕೃತಿಯು ವಿಶ್ಲೇಷಣಾತ್ಮಕವಾಗಿ ಒಳನೋಟವನ್ನು ನೀಡುತ್ತದೆ. ಹಾಲಕ್ಕಿ ಸಮುದಾಯದ ಸಾಮಾಜಿಕ ರಚನೆ, ಧಾರ್ಮಿಕ ನಂಬಿಕೆ, ನಿಯಂತ್ರಣಗಳಿಂದ ಮಹಿಳೆಯರ ವಾಸ್ತವಿಕತೆಯನ್ನು ಅರಿಯಲಾಗಿದೆ. ಈ ಸಮುದಾಯದಲ್ಲಿ ಮಹಿಳೆಯರ ಸ್ಥಾನವು ಲಿಂಗಾಧಾರವಾಗಿದೆ. ಸಮುದಾಯದ ಧಾರ್ಮಿಕ ನಿಷೇಧ, ನಿಯಂತ್ರಣ, ಅಶುದ್ಧತೆ ಎಲ್ಲವೂ ಲಿಂಗಾಧಾರವಾಗಿದೆ. ಧಾರ್ಮಿಕ ಹಾಗೂ ಸಾಮಾಜಿಕ ಜೀವನದ ತಾಂತ್ರಿಕತೆಯ ಮೂಲಕ ಮಹಿಳೆಯರನ್ನು ಹೊರಗಿಡಲಾಗಿದೆ. ಹೊಸ ಅವಶ್ಯಕತೆಗೆ ಅನುಗುಣವಾಗಿ ಪಾತ್ರ ನಿರ್ವಹಿಸಲು ಮಹಿಳೆಯರು ಬಲು ದೂರ ಕ್ರಮಿಸಬೇಕಾಗಿದೆ.

ಸಮುದಾಯದಲ್ಲಿ ಮಹಿಳೆಯರ ಪಾತ್ರಗಳು ಸಾಮಾಜಿಕವಾಗಿ ನಿರ್ಧರಿಸಲ್ಪಟ್ಟಿದೆ. ಒಮ್ಮೆ ನಿರ್ವಹಿಸಿದ ಪಾತ್ರವನ್ನು ಕೊನೆವರೆಗೆ ನಿರ್ವಹಿಸಬೇಕಾಗುತ್ತದೆ. ಹೀಗಾಗಿ ವೈಯಕ್ತಿಕ ಮತ್ತು ಸಮುದಾಯದ ಆಸಕ್ತಿಗಳು ಪರಸ್ಪರ ಸಂಘರ್ಷಕ್ಕೆ ಒಳಗಾಗುತ್ತಿರುವುದನ್ನು ಗಮನಿಸಲಾಗಿದೆ.

ಸಮುದಾಯದಲ್ಲಿನ ವಧುದಕ್ಷಿಣೆ ಪದ್ಧತಿ, ವಿಧವಾ ವಿವಾಹ ಹಾಗೂ ಬಳಿ ನೋಡುವ ಪದ್ಧತಿಯಿಂದ ಮಹಿಳೆಯರ ಸ್ಥಾನ ಉತ್ತಮವಾಗಿದೆಯೆಂದು ಭಾವಿಸಿಕೊಂಡು ಬರಲಾಗಿತ್ತು. ಆದರೆ, ವಾಸ್ತವಿಕೆಯಲ್ಲಿ ಈ ಪದ್ಧತಿಗಳು ಕಂಡುಬರುತ್ತಿಲ್ಲ. ಬಳಿ ನೋಡುವ ಪದ್ಧತಿ ಹೆಸರಿಗೆ ಮಾತ್ರ ಇದೆ. ಸಮುದಾಯದಲ್ಲಿ ವರದಕ್ಷಿಣೆ ಪದ್ಧತಿ ಇರುವುದನ್ನು ಗುರುತಿಸಲಾಗಿದೆ.

ಸಮುದಾಯವು ಮಹಿಳೆಯರನ್ನು ಇಬ್ಬಗೆಯಲ್ಲಿ ನಡೆಸಿಕೊಳ್ಳುವುದು ಕಂಡುಬರುತ್ತದೆ. ಒಂದೆಡೆಗೆ ಗೌರವ ನೀಡಿ ನಡೆಸಿಕೊಂಡರೆ, ಇನ್ನೊಂದೆಡೆಗೆ ಅಗೌರವವನ್ನು ನೀಡುತ್ತಿರುವುದನ್ನು ಕಾಣಲಾಗಿದೆ. ಉದಾ: ಗಂಡು ಮಗು ಜನಿಸಿದಾಗ ಉತ್ತಮ ಸ್ಥಾನ ನೀಡಲಾಗುತ್ತಿದೆ. ಅದೇ ಬಂಜೆ ಅಥವಾ ವಿಧವೆಯಾದಾಗ ಸಾಮಾಜಿಕ ಮತ್ತು ಧಾರ್ಮಿಕ ಪಾಲ್ಗೊಳ್ಳುವಿಕೆಯಲ್ಲಿ ಕೆಳಗಿನವರಾಗಿ ನೋಡಲಾಗುತ್ತಿದೆ.

ಸಮುದಾಯದಲ್ಲಿನ ಮಹಿಳೆಯರ ಬಗೆಗಿನ ನಕಾರಾತ್ಮಕ ಮನೋಭಾವವನ್ನು ಸಾಂಪ್ರದಾಯಿಕ ಸಾಮಾಜಿಕ ರಚನೆಯ ರಾಜಕೀಯ ನಿಯಂತ್ರಣದ ಮೂಲಕ ಅರಿಯಬಹುದು. ಆಂತರಿಕ ಸಂಘಟನೆಯಲ್ಲಿ ಮಹಿಳೆಯರು ಭಾಗವಹಿಸುವಿಕೆಗೆ ಅವಕಾಶ ನೀಡಿದಾಗ ಮಾತ್ರ ಮಹಿಳೆಯ ಪಾತ್ರದ ಮೌಲ್ಯದಲ್ಲಿ ಪರಿವರ್ತನೆ ಉಂಟಾಗಿರುವುದನ್ನು ಗುರುತಿಸಬಹುದು. ಈ ವಿಷಯದಲ್ಲಿ ಹಾಲಕ್ಕಿಗಳು ಮೇಲ್ವರ್ಗದವರ ಮಾರ್ಗವನ್ನು ಮಾದರಿಯನ್ನಾಗಿ ಇಟ್ಟುಕೊಂಡಿದ್ದಾರೆ.

ಸಾಂಪ್ರದಾಯಿಕವಾಗಿ ಹಾಲಕ್ಕಿಗಳಲ್ಲಿ ಧುರೀಣತ್ವವು ಪುರುಷರ ಕೈಯಲ್ಲಿ ಕೇಂದ್ರಿಕೃತಗೊಂಡಿದೆ. ಹೀಗಾಗಿ ಅವರೇ ಮಹಿಳೆಯರ ಹಣೆಬರಹ ಕೂಡ ಬರೆಯಬಲ್ಲರು. ಪಂಚಾಯತಿಯ ಸಂದರ್ಭದಲ್ಲಿ ಕೂಡಾ ಇದು ಸತ್ಯ. ಹಾಲಕ್ಕಿ ಮಹಿಳೆಯರು ಬದಲಾಗುತ್ತಿರುವ ಪರಿಸ್ಥಿತಿಗೆ ಹೊಂದಿಕೊಳ್ಳುತ್ತಿದ್ದಾರೆ. ಪುರುಷರಿಗಿಂತ ಅಧಿಕವಾಗಿ ದುಡಿಮೆ ಮಾಡುವ ಹಾಲಕ್ಕಿ ಮಹಿಳೆಯರಿಗೂ ಕೂಡಾ ಪುರುಷರಿಗೆ ಸಮವಾದ ಸ್ಥಾನ ಪಡೆದುಕೊಳ್ಳಲು ಸಾಧ್ಯವಾಗಿಲ್ಲ.

ಹಿಂದೂ ಸಮಾಜವು ನಿಂತಿರುವುದೇ ಜಾತಿಯ ನೀತಿಯ ಮೇಲೆ. ಹಿಂದುಳಿದ ಜಾತಿಗೆ ಸೇರಿದ ಹಾಲಕ್ಕಿಗಳು ಅತಿ ಚಿಕ್ಕ ರೈತರ ಗುಂಪಿಗೆ ಸೇರಿದವರು. ಮೇಲ್‌ವರ್ಗದವರ ಭೂಮಿಯನ್ನು ಗೇಣಿ ಮಾಡಿಕೊಂಡು ಆರ್ಥಿಕವಾಗಿ ಶೋಷಣೆಗೆ ಒಳಗಾದವರು. ಇಲ್ಲಿ ಊಳಿಗಮಾನ್ಯ ಪದ್ಧತಿ ಇತ್ತು. ಮೇಲ್ವರ್ಗದವರಿಗೆ ತಗ್ಗಿ ಬಗ್ಗಿ ಜೀವನವನ್ನು ನಡೆಸಿದವರು. ತಾವು ಶೈಕ್ಷಣಿಕವಾಗಿ ಆರ್ಥಿಕವಾಗಿ ಹಿಂದುಳಿದವರು ಎಂಬ ಭಾವನೆಯು ಹಾಲಕ್ಕಿ ಮಹಿಳೆಯರಲ್ಲಿದೆ. ಜಾತಿಯಿಂದ, ಸಾಮಾಜಿಕವಾಗಿ ಹಾಗೂ ಆರ್ಥಿಕವಾಗಿ ಹಿಂದುಳಿದವರೆಂಬ

ಮಹಿಳೆಯರಲ್ಲಿ ಕೀಳರಿಮೆಯ ಭಾವನೆಯು ಕೂಡಾ ಅವರನ್ನು ಮಾನಸಿಕವಾಗಿ ಕುಗ್ಗಿಸಿರುವುದನ್ನು ಗಮನಿಸಲಾಗಿದೆ.

ಶಿಕ್ಷಣ ಹಾಗೂ ಸರ್ಕಾರದ ಅಭಿವೃದ್ಧಿ ಕಾರ್ಯಕ್ರಮಗಳು ಸಾಮಾಜಿಕ-ಆರ್ಥಿಕ ಪರಿವರ್ತನೆಗೆ ಕಾರಣವಾದರೂ ಸಹ ಮಹಿಳೆಯರ ಪಾತ್ರದಲ್ಲಿ ಯಾವುದೇ ಬದಲಾವಣೆ ಉಂಟಾಗಿಲ್ಲ. ಆಧುನಿಕತೆಗೆ ಮಹಿಳೆಯರು ಪ್ರತಿಕ್ರಿಯಿಸಿದ್ದಾರೆ. ಆದರೆ, ಅವರು ಅಭಿವೃದ್ಧಿ ಕಾರ್ಯಕ್ರಮದಲ್ಲಿ ಒಳಗೊಳ್ಳುವಿಕೆಯು ಪ್ರೋತ್ಸಾಹದಾಯಕವಾಗಿಲ್ಲ. ಹಾಲಕ್ಕಿ ಮಹಿಳೆಯರ ಉಪಯುಕ್ತತೆ ಮೌಲ್ಯ ಇರುವ ವಿಷಯದಲ್ಲಿ ಮಾತ್ರ ನಿರ್ಧಾರ ತೆಗೆದುಕೊಳ್ಳುತ್ತಾರೆ. ಆದರೆ, ವಿನಿಮಯದ ಮೌಲ್ಯವಿರುವಲ್ಲಿ ಪುರುಷರೇ ನಿರ್ಧಾರವನ್ನು ತೆಗೆದುಕೊಳ್ಳುತ್ತಿರುವುದನ್ನು ಗುರುತಿಸಲಾಗಿದೆ.

ಹಾಲಕ್ಕಿ ಪುರುಷರು ದುಶ್ಚಟಕ್ಕೆ ಬಲಿಯಾಗುತ್ತಿರುವುದನ್ನು ಗುರುತಿಸಲಾಗಿದೆ. ಇದರಿಂದ ಸಂಸಾರದ ಹೊರೆ ಮತ್ತು ಮಕ್ಕಳ ಜವಾಬ್ದಾರಿಯನ್ನು ಮಹಿಳೆಯರೇ ಹೊತ್ತುಕೊಂಡಿರುವುದನ್ನು ಗಮನಿಸಲಾಗಿದೆ.

ಹಾಲಕ್ಕಿ ಮಹಿಳೆಯರು ತಮ್ಮ ಮಕ್ಕಳ ಶಿಕ್ಷಣದಲ್ಲಿ ಆಸಕ್ತಿಯನ್ನು ವಹಿಸುತ್ತಿರುವುದನ್ನು ಗುರುತಿಸಲಾಗಿದೆ. ಧೀರ್ಘಕಾಲದ ಶಿಕ್ಷಣದಲ್ಲಿ ಹಾಲಕ್ಕಿಗಳಿಗೆ ಆಸಕ್ತಿಯಲ್ಲಿ ಅವರ ಸಾಮಾಜಿಕ ಆರ್ಥಿಕ ಸಾಂಸ್ಕೃತಿಕ ಪರಿಸರವು ದೀರ್ಘಕಾಲದ ಶಿಕ್ಷಣಕ್ಕೆ ಅನುಕೂಲಕರವಾಗಿಲ್ಲ ಎಂಬುದನ್ನು ಗುರುತಿಸಲಾಗಿದೆ.

ಹಾಲಕ್ಕಿಗಳಲ್ಲಿ ಉತ್ತಮ ಸ್ಥಿತಿಯಲ್ಲಿರುವರು, ಶಿಕ್ಷಣದಿಂದ ಪ್ರಯೋಜನ ಪಡೆದುಕೊಂಡಿರುವುದನ್ನು ಗುರುತಿಸಲಾಗಿದೆ. ಕುಟುಂಬಗಳ ನಡುವೆ ಹಾಗೂ ಮಹಿಳೆ-ಪುರುಷರ ನಡುವೆ ಆರ್ಥಿಕ ಅಸಮಾನತೆ ಬೆಳೆಯುತ್ತಿರುವುದನ್ನು ಗುರುತಿಸಲಾಗಿದೆ.

ಹಾಲಕ್ಕಿಗಳ ಕಡಿಮೆಮಟ್ಟದ ಸಾಕ್ಷರತೆಯು (ಪ್ರಾಥಮಿಕ) ಅವರ ಉದ್ಯೋಗ ಮತ್ತು ಸಾಮಾಜಿಕ ರಚನೆಯಲ್ಲಿ ಹೆಚ್ಚಿನ ಮಟ್ಟದ ಬದಲಾವಣೆಯನ್ನು ಉಂಟು ಮಾಡದೇ ಇರುವುದನ್ನು ಈ ಅಧ್ಯಯನದಲ್ಲಿ ಗುರುತಿಸಲಾಗಿದೆ.

ಹಾಲಕ್ಕಿಗಳ ವಿಶಿಷ್ಟತೆಯು ಬದಲಾವಣೆಗೆ ಒಳಗಾಗಿರುವುದನ್ನು ಗುರುತಿಸಲಾಗಿದೆ. ಈ ಸಮುದಾಯವು ಪರಿವರ್ತನೆಗೆ ಒಳಗಾಗಿದೆ. ಅದು ತನ್ನ ಬುಡಕಟ್ಟು ಚಹರೆಯನ್ನು ಕಳೆದುಕೊಳ್ಳುತ್ತಿದೆ. ಹಾಲಕ್ಕಿ ಒಕ್ಕಲಿಗರ ಮಹಿಳೆಯರು ಪ್ರಧಾನ ಧಾರೆ ಸಂಸ್ಕೃತಿಯ ಒಳಗೆ ವಿಲೀನಗೊಳ್ಳಲು ಬಯಸುತ್ತಿರುವುದನ್ನು ಗುರುತಿಸಲಾಗಿದೆ.

ಇಂದು ಹಾಲಕ್ಕಿಗಳು ಬದಲಾವಣೆಯ ಪ್ರಕ್ರಿಯೆಗೆ ಒಳಗಾಗುತ್ತಿದ್ದಾರೆ. ಇಂದು ಹಾಲಕ್ಕಿಗಳು ಸ್ಥಿತ್ಯಂತರದ ಸ್ಥಿತಿಯಲ್ಲಿದ್ದಾರೆ. ಸಾಮಾಜಿಕ ಮೌಲ್ಯದಲ್ಲಿ ಬದಲಾವಣೆ

ಉಂಟಾಗಿದೆ. ಕೆಲವು ವಿಷಯದಲ್ಲಿ ಸಂಸ್ಕೃತೀಕರಣದ ಪ್ರಭಾವ ಕಂಡುಬಂದಿದೆ. ಕೆಲವು ವಿಷಯದಲ್ಲಿ ಆಧುನಿಕತೆಯನ್ನು ಅಳವಡಿಸಿಕೊಂಡಿರುವುದನ್ನು ಗುರುತಿಸಲಾಗಿದೆ.

೬.೩. ಅಧ್ಯಯನದ ಪ್ರಮುಖ ಶಿಫಾರಸ್ಸುಗಳು

ಹಾಲಕ್ಕಿ ಮಹಿಳೆಯರು ಸಮುದಾಯದ ಒಂದು ಭಾಗವಾಗಿರುವುದರಿಂದ ಅವರ ಸಮಸ್ಯೆಗಳನ್ನು ಸಮುದಾಯದ ಸಮಸ್ಯೆಯನ್ನಾಗಿ ಪರಿಗಣಿಸಬೇಕಾಗುತ್ತದೆ. ಸಮುದಾಯವು ಮಹಿಳೆಯರ ಸಾಮಾಜಿಕ ಆರ್ಥಿಕ ಸಬಲೀಕರಣಕ್ಕಾಗಿ ಪ್ರಯತ್ನ ಮಾಡಬೇಕಾದ ಅವಶ್ಯಕತೆಯಿದೆ.

ಮಹಿಳೆ ಸಬಲತೆಯನ್ನು ಹೊಂದುವುದು ಅವರ ಕೈಯಲ್ಲಿದೆ. ತಾಯಿ-ಮಕ್ಕಳನ್ನು ಬೆಳೆಸುವಾಗ ಸಮಾನವಾಗಿ ಬೆಳೆಸಬೇಕು. ಕುಟುಂಬದಲ್ಲಿ ತಾಯಿ ತನ್ನ ಮಕ್ಕಳನ್ನು ನೋಡುವ ಮನೋಭಾವದಲ್ಲಿ ಬದಲಾವಣೆ ಉಂಟಾಗಬೇಕು. ತಾಯಿ ಹೆಣ್ಣು ಮಕ್ಕಳ ಶಿಕ್ಷಣದಲ್ಲಿ ಹೆಚ್ಚಿನ ಆಸಕ್ತಿ ವಹಿಸುವುದು ಅವಶ್ಯಕ. ತಾಯಿ ಹೆಣ್ಣು ಮಕ್ಕಳ ಶಿಕ್ಷಣ ಆರೋಗ್ಯ ಸ್ವಚ್ಛತೆಯ ಬಗ್ಗೆ ಹೆಚ್ಚಿನ ಗಮನ ನೀಡಬೇಕು. ಹೆಣ್ಣು ಮಗುವಿಗೆ ಸಮುದಾಯದ ಸಾಮಾಜಿಕ ಆರ್ಥಿಕ ರಚನೆಯ ಅರಿವು ಮೂಡಿಸಬೇಕು. ಮಹಿಳೆಯರು ಸ್ವಸಹಾಯ ಗುಂಪುಗಳನ್ನು ರಚಿಸಿಕೊಂಡು ತಾವು ಬೆಳೆದ ತರಕಾರಿ ಉತ್ಪನ್ನಗಳನ್ನು ವ್ಯವಸ್ಥಿತವಾಗಿ ಮಾರಾಟ ಮಾಡುವ ನೈಪುಣ್ಯತೆಯನ್ನು ಬೆಳೆಸಿಕೊಳ್ಳಬೇಕು. ಉದ್ಯೋಗದಲ್ಲಿರುವ ಮಹಿಳೆಯರು ಇತರೆ ಮಹಿಳೆಯರಿಗೆ ಸರ್ಕಾರದ ಕಾರ್ಯಕ್ರಮ ಬಗ್ಗೆ ಅರಿವು ಮೂಡಿಸಬೇಕು. ಹಾಲಕ್ಕಿ ಮಹಿಳೆಯರು ತಮ್ಮದೇ ಆದ ಸಂಘವನ್ನು ರಚಿಸಿಕೊಳ್ಳಬೇಕು. ಹೆಣ್ಣುಮಕ್ಕಳು ವೃತ್ತಿಪರ ಕೋರ್ಸ್‌ಗಳ ತರಬೇತಿಯನ್ನು ಪಡೆದುಕೊಳ್ಳಬೇಕು.

ಸಮುದಾಯದಲ್ಲಿನ ಪುರುಷರು ಮಹಿಳೆಯರ ಕೊಡುಗೆಯನ್ನು ಅರ್ಥಮಾಡಿಕೊಳ್ಳಬೇಕಿದೆ. ಮಹಿಳೆಯರ ಶಿಕ್ಷಣ, ವಿವಾಹ, ಸಾಮಾಜಿಕ ಚಲನೆಗೆ ಸ್ವಾತಂತ್ರ್ಯವನ್ನು ನೀಡಬೇಕು. ಮನೆಯೊಳಗಿನ ದುಡಿಮೆಯನ್ನು ಅರ್ಥಮಾಡಿಕೊಂಡು ಹಂಚಿಕೊಳ್ಳಬೇಕು. ಮಹಿಳೆಯರಿಗೆ ಮನೆ ಒಳಗೆ ಮತ್ತು ಹೊರಗೆ ನಿರ್ಧಾರ ತೆಗೆದುಕೊಳ್ಳುವಲ್ಲಿ ಪ್ರೋತ್ಸಾಹವನ್ನು ನೀಡಬೇಕು. ಪ್ರತಿ ಮನೆಯಲ್ಲಿ ಪ್ರಜಾಪ್ರಭುತ್ವವಿರಬೇಕು. ಪುರುಷರು ತಮ್ಮ ದುಶ್ಚಟವನ್ನು ಬಿಟ್ಟುಕೊಡಬೇಕು. ಕೃಷಿ ಭೂಮಿ ಮತ್ತು ಮನೆಯ ಒಡೆತನವನ್ನು ಜಂಟಿಯಾಗಿ ಹೊಂದಬೇಕು.

ಸರ್ಕಾರೇತರ ಸಂಸ್ಥೆಗಳು ಸಹ ಮಹಿಳೆಯರ ಸರ್ವತೋಮುಖ ಅಭಿವೃದ್ಧಿಗೆ ಕಾರ್ಯಕ್ರಮವನ್ನು ರೂಪಿಸಬೇಕಾಗಿದೆ. ಹಾಲಕ್ಕಿ ಹೆಣ್ಣು ಮಕ್ಕಳಿಗೆ ಹಾಸ್ಟೆಲ್ ಸೌಲಭ್ಯ ನೀಡಬೇಕು. ಸ್ವಸಹಾಯ ಗುಂಪುಗಳನ್ನು ರಚಿಸಬೇಕು. ಸಮುದಾಯದಲ್ಲಿ ಮಹಿಳೆಯರ ಸ್ಥಿತಿಯ ಕುರಿತು ಅರಿವು ಮೂಡಿಸುವ ಕಾರ್ಯಕ್ರಮಗಳು ನಡೆಯಬೇಕು.

ಈ ಪ್ರದೇಶದ ಇತರೆ ಸಮುದಾಯದವರಿಗೆ ಹೋಲಿಸಿದರೆ, ಹಾಲಕ್ಕಿ ಮಹಿಳೆಯರು ಶೈಕ್ಷಣಿಕವಾಗಿ, ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಹಿಂದುಳಿದಿದ್ದಾರೆ. ಅದರಿಂದ ಅವರ ಶೈಕ್ಷಣಿಕ, ಸಾಮಾಜಿಕ, ಆರ್ಥಿಕ ಅಭಿವೃದ್ಧಿಯನ್ನು ಸಾಧಿಸಬೇಕಾಗಿದೆ. ಇದುವರೆಗೆ ಹಿಂದುಳಿದ ವರ್ಗದವರೆಂದು ಗುರುತಿಸಲಾಗಿದೆ. ಅದರಿಂದ ಇವರನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸುವುದು ಅವಶ್ಯಕವಾಗಿದೆ. ಆ ಮೂಲಕ ಅವರ ಶೈಕ್ಷಣಿಕ-ಸಾಮಾಜಿಕ-ಆರ್ಥಿಕ ಅಭಿವೃದ್ಧಿಗೆ ಅನುವು ಮಾಡಿಕೊಡಬೇಕು. ಮಹಿಳೆಯರ ಶಿಕ್ಷಣಕ್ಕೆ ಉತ್ತೇಜ ನೀಡುವ ದೃಷ್ಟಿಯಿಂದ ಶಿಕ್ಷಣವನ್ನು ಉಚಿತವಾಗಿ ನೀಡಬೇಕು. ಉದ್ಯೋಗದಲ್ಲಿ ಮಹಿಳೆಯರಿಗೆ ಶೇ. ೫೦ರಷ್ಟು ಮೀಸಲಾತಿಯನ್ನು ನೀಡಬೇಕು. ಪ್ರತಿ ಮಗುವಿನ ಜವಾಬ್ದಾರಿಯನ್ನು ಸರ್ಕಾರದ ಜವಾಬ್ದಾರಿಯನ್ನಾಗಿ ಮಾಡಬೇಕು. ಶಿಕ್ಷಣದಲ್ಲಿ ಹಾಲಕ್ಕಿ ಮಹಿಳೆಯರಿಗೆ ಮೀಸಲಾತಿ ನೀಡಬೇಕು. ಇದರಿಂದಾಗಿ ಲಿಂಗಸಮಾನತೆ ಸಾಧಿಸಲು ಸಾಧ್ಯವಾಗುತ್ತದೆ. ಶಿಕ್ಷಣದ ಮೂಲಕ ಮಾತ್ರ ಸಮುದಾಯದ ಅಸಮಾನತೆಯನ್ನು ಹೋಗಲಾಡಿಸಬಹುದು.

ಉತ್ತರ ಕನ್ನಡ ಜಿಲ್ಲೆಯಲ್ಲಿಯೇ ಹಾಲಕ್ಕಿಗಳು ಒಂದು ವಿಶಿಷ್ಟವಾದ ಹೊಂದಿರುವ ಸಮುದಾಯ. ಅದರಿಂದ ವಿಶಿಷ್ಟವಾದ ಸಂಸ್ಕೃತಿಯ ಸಂರಕ್ಷಣೆಯನ್ನು ಮಾಡಿಕೊಂಡು ಬರಬೇಕು. ಪಿತೃಪ್ರಧಾನ ವ್ಯವಸ್ಥೆಯ ಚೌಕಟ್ಟಿನೊಳಗೆ ಮಹಿಳೆಯರು ಸಾಮಾಜಿಕ ಸ್ಥಾನವನ್ನು ಪಡೆದುಕೊಳ್ಳುವಂತರಾಗಬೇಕು.

೬.೪. ಅಧ್ಯಯನದ ಹೊಸ ಸಾಧ್ಯತೆಗಳು

ಇಲ್ಲಿ ಚರ್ಚಿಸಿದ ಅಧ್ಯಯನದ ಫಲಿತಾಂಶಗಳಿಂದ ಹಾಲಕ್ಕಿ ಮಹಿಳೆಯರ ವಾಸ್ತವಿಕತೆ ಪರಿಸ್ಥಿತಿಯನ್ನು ಅರಿತುಕೊಳ್ಳಲು ಸಾಧ್ಯವಾಗಿದೆ. ಈ ನಿಟ್ಟಿನಲ್ಲಿ ಅಧ್ಯಯನವು ಹೊಸ ಸಂಶೋಧನೆಗೆ ಸಹಾಯಕವಾಗುತ್ತದೆ. ಹಾಲಕ್ಕಿ ಮಹಿಳೆಯರ ಸಾಮಾಜಿಕ, ಆರ್ಥಿಕ ಪರಿವರ್ತನೆ ಎಂಬುದು ತುಂಬಾ ಸಂಕೀರ್ಣವಾದ ವಿಷಯವಾಗಿದೆ. ಈ ವಿಷಯದ ವಿವಿಧ ಮಗ್ಗಲುಗಳನ್ನು ಶೋಧಿಸಲು ಅಧ್ಯಯನಕಾರರಿಗೆ ಅವಕಾಶವಿದೆ. ಈ ಅಧ್ಯಯನದ ಮಿತಿಗಳನ್ನು ದಾಟಿ ಹೊಸ ವಿಧಾನಗಳಿಂದ ಕಟ್ಟಿ ಕೊಡುವ ಸಾಧ್ಯತೆಗಳಿವೆ.

ಹಾಲಕ್ಕಿ ಮಹಿಳೆಯರ ಸಶಕ್ತೀಕರಣದ ದೃಷ್ಟಿಯಿಂದ ಅಭಿವೃದ್ಧಿಯ ವಿಕೇಂದ್ರೀಕರಣದ ಪ್ರಕ್ರಿಯೆಯು ಯಾವ ರೀತಿಯಲ್ಲಿ ಕಾರ್ಯನಿರ್ವಹಿಸುತ್ತಿದೆ ಎಂಬುದರ ಕುರಿತು ಅಧ್ಯಯನ ನಡೆಯಬೇಕಿದೆ.

ಅನುಬಂಧಗಳು

೧. ಹಾಲಕ್ಕಿ ಮಹಿಳೆಯರ ಸಾಮಾಜಿಕ, ಆರ್ಥಿಕ ಪರಿವರ್ತನೆಯ ಪ್ರಶ್ನಾವಳಿಯ ಪಟ್ಟಿ

೨. ಹಾಲಕ್ಕಿ ಸೀಮೆಗಳ ಗ್ರಾಮಗಳ ಪಟ್ಟಿ

೩. ಆಕರಸೂಚಿ

೪. ಹಾಲಕ್ಕಿ ಮಹಿಳೆಯರ ಸಾಮಾಜಿಕ, ಆರ್ಥಿಕ ಪರಿವರ್ತನೆಯ ಛಾಯಾಚಿತ್ರಗಳು

ಅನುಬಂಧ

ಅಭಿವೃದ್ಧಿ ಅಧ್ಯಯನ ವಿಭಾಗ,
ಕನ್ನಡ ವಿಶ್ವವಿದ್ಯಾಲಯ, ಹಂಪಿ
ಹಾಲಕ್ಕಿ ಮಹಿಳೆಯರ ಸಾಮಾಜಿಕ ಆರ್ಥಿಕ ಪರಿವರ್ತನೆಯ
ಪ್ರಶ್ನಾವಳಿಯ ಪಟ್ಟಿ

೧. ಸಾಮಾನ್ಯ ಮಾಹಿತಿ

೧. ಮನೆಯ ಯಜಮಾನನ ಹೆಸರು :

೨. ವರ್ಷ :

೩. ಜಾತಿ :

೪. ಧರ್ಮ :

೫. ಶಿಕ್ಷಣ :

೬. ವಿಳಾಸ :

೭. ಮುಖ್ಯ ಉದ್ಯೋಗ :

೮. ಕೃಷಿಯಾಗಿದ್ದರೆ ಭೂಮಿಯ ವಿಸ್ತೀರ್ಣ :

ಒಣ ಭೂಮಿ :

ನೀರಾವರಿ :

ಬಂಜರು :

ಗೇಣಿ :

೨. ಡೆಮೋಗ್ರಾಫಿಕ್ ಅಥವಾ ಜನಸಂಖ್ಯಾ ಸಂಬಂಧಿ ಸಂಗತಿಗಳು

೧. ಕುಟುಂಬದ ಮಾಹಿತಿ

ಕುಟುಂಬದ ಸದಸ್ಯರು	ಲಿಂಗ ಮುಖ್ಯಸ್ಥರೊಡನೆ ಸಂಬಂಧ	ವಯಸ್ಸು ವಿವಾಹಿತ ಅವಿವಾಹಿತ	ವಿಚ್ಛೇದಿತ	ಶಿಕ್ಷಣ	ಉದ್ಯೋಗ		ವಾರ್ಷಿಕ ಆದಾಯ	
					ಮುಖ್ಯ	ಉಪ	ಮುಖ್ಯ	ಉಪ

•ಸ್ವ ಉದ್ಯೋಗದ ಮಾಹಿತಿ

ಕೆಲಸದ ಲಕ್ಷಣ

೨. ಕುಟುಂಬ ಯೋಜನೆಯನ್ನು ಅನುಸರಿಸುತ್ತಾರೆಯೇ? ಇದ್ದರೆ

೧. ಶಸ್ತ್ರ ಚಿಕಿತ್ಸೆ ೨. ಮಾತ್ರೆಗಳು ೩. ತಾತ್ಕಾಲಿಕ ವಿಧಾನಗಳು ೪. ನಿರೋಧ/ವಂಕಿ

೩. ನಿಮ್ಮಲ್ಲಿ ಮಹಿಳೆಯರ ವಿವಾಹದ ವಯಸ್ಸು?

೧. ೧೫ ವರ್ಷ ೨. ೧೫-೨೦ ವರ್ಷ ೩. ೨೦ ವರ್ಷಕ್ಕೆ ಮೇಲ್ಪಟ್ಟು

೪. ಗಂಡು ಮಗು ಬೇಕೇಬೇಕು ಎಂದು ಅನಿಸುತ್ತದೆಯೇ? ಹೌದು/ಇಲ್ಲ

ಹೌದು ಎಂದಾದರೆ ಕಾರಣ

೫. ನಿಮ್ಮ ಸಂಗಾತಿಯ ಜೊತೆ ಕುಟುಂಬ ಯೋಜನೆ ಬಗ್ಗೆ ಚರ್ಚಿಸಿದ್ದೀರಾ? ಹೌದು/ ಇಲ್ಲ.

೬ ಭ್ರೂಣದ ಲಿಂಗ ಪರೀಕ್ಷೆ ಮಾಡಿಸುವುದು ಗೊತ್ತೆ? ಹೌದು/ಇಲ್ಲ

೭ ಭ್ರೂಣದ ಲಿಂಗ ಪರೀಕ್ಷೆಯನ್ನು ಮೊದಲೆಂದಾದರೂ ಮಾಡಿಸಿರುವಿರಾ?

೩. ಸಾಮಾಜಿಕ ಸಾಂಸ್ಥಿಕ ಸ್ವರೂಪ

೧. ಅವಿಭಕ್ತ ಕುಟುಂಬವೇ? ಅಥವಾ ಏಕ ಕುಟುಂಬವೇ? ಅವಿಭಕ್ತ/ವಿಭಕ್ತ

೨. ವೈವಾಹಿಕ ಸಂಬಂಧಗಳಲ್ಲಿ ವರದಕ್ಷಿಣೆ/ವಧುದಕ್ಷಿಣೆ ಆಚಾರಣೆಯಲ್ಲಿದೆಯೇ?

೩. ಬಾಲ್ಯ ವಿವಾಹ ಪದ್ಧತಿ ಆಚರಣೆಯಲ್ಲಿದೆಯೇ? ಇದೇ/ಇಲ್ಲ

೪. ಗಂಡು ಮಕ್ಕಳ ಶಿಕ್ಷಣವು ಹೆಣ್ಣು ಮಕ್ಕಳ ಶಿಕ್ಷಣಕ್ಕಿಂತ ಮುಖ್ಯ ಹೌದು/ಇಲ್ಲ

೫. ಹೆಣ್ಣು ಮಕ್ಕಳು ಶಿಕ್ಷಣ ಪಡೆದು ಉದ್ಯೋಗ ಮಾಡುವುದನ್ನು ಬಯಸುತ್ತೀರಾ? ಹೌದು/ಇಲ್ಲ.

೬. ರೋಗ ರುಜಿನ ಬಂದರೆ ವೈದ್ಯರಲ್ಲಿ ತೋರಿಸುವ ಕ್ರಮವು ಪುರುಷರು ಜಾಸ್ತಿಯೋ ಅಥವಾ ಮಹಿಳೆಯರಲ್ಲಿ ಜಾಸ್ತಿಯೋ? ಮಹಿಳೆಯರು/ಪುರುಷರು

೭. ಮದುವೆ ಸಾಂಪ್ರದಾಯಿಕವಾಗಿರಬೇಕೋ ಅಥವಾ ನೋಂದಣಿಯಾಗಬೇಕೋ? ಸಾಂಪ್ರದಾಯಿಕ/ನೋಂದಣಿ

೮. ಉದ್ಯೋಗದಲ್ಲಿರುವ ಗಂಡಿಗೆ ಬೇಡಿಕೆ ಜಾಸ್ತಿಯೋ? ಅಥವಾ ಕೃಷಿ ಇತರೆ ಕುಲಕಸುಬುಗಳಲ್ಲಿರುವ ಗಂಡಿಗೆ ಬೇಡಿಕೆ ಜಾಸ್ತಿಯೋ? ಉದ್ಯೋಗ/ಕುಲಕಸುಬು

೯. ಹೆರಿಗೆ ಮನೆಯಲ್ಲಾಗುತ್ತದೆಯೋ ಅಥವಾ ಆಸ್ಪತ್ರೆಯಲ್ಲಿಯೇ? ಮನೆ/ಆಸ್ಪತ್ರೆ

೧೦. ಕಾಲೇಜಿಗೆ ಹೆಣ್ಣು ಮಕ್ಕಳನ್ನು ಕಳುಹಿಸುವುದು ಸೂಕ್ತವೇ? ಸೂಕ್ತ/ಸೂಕ್ತವಲ್ಲ

೧೧. ಮಕ್ಕಳಿಗೆ ಚುಚ್ಚು ಮದ್ದುಗಳನ್ನು ಹಾಕಿಸುತ್ತಾರೆಯೇ? ಹೌದು/ಇಲ್ಲ

೧೨. ಮನೋರಂಜನೆಗಾಗಿ ಟಿ.ವಿ. ನೋಡುತ್ತೀರಾ? ಹೌದು/ಇಲ್ಲ

೧೩. ಮನೆ ಮದ್ದು ಮೇಲು ಅಥವಾ ಔಷಧ ಮೇಲು? ಹೌದು/ಇಲ್ಲ

೪. ಆರ್ಥಿಕ ಮಾಹಿತಿ

೧. ಬಿ.ಪಿ.ಎಲ್.ಕಾರ್ಡ್ ಹೊಂದಿರುವಿರಾ? ಹೌದು/ಇಲ್ಲ

೨. ಮನೆಯ ಮಾದರಿ (ಗುಡಿಸಲು) ೧. ಕಚ್ಚಾ ೨. ಪಕ್ಕಾ ಮನೆ ೩.

೩. ಮನೆಯ ಒಡೆತನ (ಸ್ವಂತ) ೧. ಬಾಡಿಗೆ ೨. ಉಳಿದ ೩.

೪. ಮನೆಯ ವಿಸ್ತೀರ್ಣ

೫. ಮನೆಯಲ್ಲಿರುವ ಕೋಣೆಗಳು

೬. ವಿದ್ಯುತ್ ಇದೆಯೇ? ಹೌದು ೧. ಇಲ್ಲ ೨

೭. ಹೊಲ (ಭೂಮಿ) ಇದೆಯಾ? ಇದ್ದರೆ ವಿಸ್ತೀರ್ಣ

೮. ಮನೆ ಸಾಮಾನುಗಳ ಪಟ್ಟಿ (ಇದ್ದರೆ ಚಿಹ್ನೆ ಹಾಕಿರಿ)

ಟಿ.ವಿ.	ಎಲ್.ಪಿ.ಜಿ.
ಫೋನ್	ಸೈಕಲ್
ಫ್ರಿಜ್	ದ್ವಿಚಕ್ರ
ಮಿಕ್ಸರ್	ಕಾರ್

ರೇಡಿಯೋ/ಟೇಪ್ ಕಂಪ್ಯೂಟರ್

ಒಗೆಯುವ ಯಂತ್ರ ಇತರೆ

ಕೃಷಿ ಸಲಕರಣೆಗಳು

ಟ್ರ್ಯಾಕ್ಟರ್ ಕಬ್ಬಿಣದ ನೇಗಿಲು

ಪಂಪಸೆಟ್ ಎತ್ತಿನ ಬಂಡಿ

ನೀರಾವರಿ

೯. ಸಾಕು ಪ್ರಾಣಿಗಳ ಒಡೆತನ

ಎತ್ತು ಎಮ್ಮೆ ಆಕಳು ಕುರಿ ಮೊಲ ಕೋಳಿ ಇತರೆ ತಿಳಿಸಿ

೧೦. ಮನೆಯ ವೆಚ್ಚದ ಮಾಹಿತಿ

ಬಾಬುಗಳು ಮೊತ್ತ (ರೂ.)

೧. ಆಹಾರ

ಹಣ್ಣು

ಹಾಲು

ಧಾನ್ಯ/ಬೇಳೆಕಾಳುಗಳು

ಮೀನು/ಮೊಟ್ಟೆ/ಮಾಂಸ

ಉಳಿದ

ಒಟ್ಟು ಆಹಾರ

೨. ಬಟ್ಟೆ

೩. ಶಿಕ್ಷಣ

೪. ಆರೋಗ್ಯ

೫. ಇಂಧನ

ಎಲ್.ಪಿ.ಜಿ./ಸೀಮೆಎಣ್ಣೆ/ಕಟ್ಟಿಗೆ

೬. ತಂಬಾಕು/ಎಲೆ/ಅಡಿಕೆ

೭. ಪ್ರವಾಸ

೮. ಮನೋರಂಜನೆ

೯. ಫೋನ್

೧೦. ವಿದ್ಯುತ್

೧೧. ನೀರಿನ ಶುಲ್ಕ

೧೨. ಮನೆ ತೆರಿಗೆ

೨೦೦೬-೦೭ ಸಾಲ ಪಡೆದ ವಿವರಣೆ

ಸಂಖ್ಯೆ	ಉದ್ದೇಶ	ಮೊತ್ತ	ಸಾಲ ಪಡೆದ ಮೂಲ	ಬಡ್ಡಿ ದರ	ಸಾಲ ವಾಪಸ್ಸು ಮಾಡಿದ ಮೊತ್ತ
೧					
೨					
೩					
೪					

ಉದ್ದೇಶ : ಜೀವನಕ್ಕಾಗಿ (ಮದುವೆ-೧. ಹಬ್ಬ ಹರಿದಿನ-೨. ಮನೆಕಟ್ಟು-೩. ಆರೋಗ್ಯ-೪. ಶಿಕ್ಷಣ-೫. ಆಸ್ತಿ ಖರೀದಿ-೬. ಗ್ರಾಹಕರ ಬಳಕೆಗಾಗಿ ಬರುವ ವಸ್ತುವಿಗಾಗಿ-೭. ಕೃಷಿಗಾಗಿ-೮. ಉಳಿದ-೯)

ಮೂಲಗಳು: ವಾಣಿಜ್ಯ ಬ್ಯಾಂಕು/ಸಹಕಾರಿ ಬ್ಯಾಂಕು ೧. ಖಾಸಗಿ ಸಾಹುಕಾರರು/ಲೇವಾದೇವಿಗಾರರು ವ್ಯವಹಾರ ಮಾಡುವವರು ೨. ಸ್ನೇಹಿತರು/ಸಂಬಂಧಿಕರು ೩. ಉಳಿದ ೪.

೧೧. ಉಳಿತಾಯ

೧೨. ಸಧ್ಯದ ಆದಾಯದಿಂದ ಮನೆಯ ವೆಚ್ಚ ಭರಿಸಲು ಸಾಧ್ಯವೇ? ಹೌದು/ಇಲ್ಲ
ಇಲ್ಲವಾದಲ್ಲಿ ಹೇಗೆ ವೆಚ್ಚವನ್ನು ನಿಭಾಯಿಸುತ್ತೀರಿ?

೧೩. ನೀವು ಬೆಳೆದಿದ್ದು ವರ್ಷವಿಡೀ ಸಾಲುವುದೇ? ಹೌದು/ಇಲ್ಲ

೧೪. ಹೆಣ್ಣು ಮಕ್ಕಳಿಗೆ ಆಸ್ತಿಯಲ್ಲಿ ಪಾಲು ನೀಡುತ್ತೀರಾ? ಹೌದು/ಇಲ್ಲ ಇಲ್ಲವಾದರೆ ಕಾರಣ

೧೫. ಹೆಣ್ಣು ಮಕ್ಕಳನ್ನು ನೌಕರಿಗೆ ಕಳುಹಿಸಿ ಕೊಡುವಿರಾ? ಹೌದು/ಇಲ್ಲ

೧೬. ಮನೆಯ ಒಳಗಿನ ಕೆಲಸವನ್ನು ಗಂಡಸರು ಮಾಡಬಾರದು? ಹೌದು/ಇಲ್ಲ

೧೭. ನೌಕರಿಯಲ್ಲಿ ಇರುವ ಹೆಣ್ಣು ಮಕ್ಕಳ ಜೀವನ ಉತ್ತಮವಾಗಿದೆ. ಹೌದು/ಇಲ್ಲ

೧೮. ಗಂಡು ಮಕ್ಕಳಿಗೆ ಮಾತ್ರ ನೌಕರಿ ಅವಶ್ಯಕವೇ? ಹೌದು/ಇಲ್ಲ

೧೯. ಸ್ವಸಹಾಯ ಗುಂಪಿನ ಸದಸ್ಯರೇ? ಹೌದು/ಇಲ್ಲ

೨೦. ನೌಕರಿಯಲ್ಲಿ ಇರುವ ಹೆಣ್ಣು ಮಕ್ಕಳಿಗೆ ಹೆಚ್ಚು ಗೌರವ ನೀಡುವಿರಾ? ಹೌದು/ಇಲ್ಲ.

೨೧. ಕೃಷಿ ಕೂಲಿಯಲ್ಲಿ ಲಿಂಗ ತಾರತಮ್ಯ ಇರಬೇಕು ಅಧ್‌ವಾ ಬೇಡ? ಹೌದು/ಇಲ್ಲ

೨೨. ಹೆಣ್ಣು ಮಕ್ಕಳು ಗಳಿಸಿದ ಆದಾಯವನ್ನು ವೆಚ್ಚ ಮಾಡಲು ಅವರು ಸ್ವತಂತ್ರರು. ಹೌದು/ಇಲ್ಲ

೨೩. ಆಧುನಿಕ ರೀತಿಯಲ್ಲಿ ಕೃಷಿ ಮಾಡಬೇಕು? ಹೌದು/ಇಲ್ಲ

೨೪. ನೀರಿನ ಮೂಲ ಸ್ವಂತ ಬಾವಿ ೧. ಸ್ವಂತ ನಳ ೨. ಸಾರ್ವಜನಿಕ ಬಾವಿ ೩. ಸಾರ್ವಜನಿಕ ನಳ ೪.

೨೫. ನಿಮಗೆ ಸಾಕಷ್ಟು ನೀರು ಸಿಗುತ್ತದೆಯೇ? ಹೌದು/ಇಲ್ಲ

೨೬. ನೀವು ಶೌಚಾಲಯ ಬಳಸುತ್ತೀರಾ? ಹೌದು/ಇಲ್ಲ

೨೭. ಅನಾರೋಗ್ಯವಾದಾಗ ಖಾಸಗಿ ಆಸ್ಪತ್ರೆಗೆ ಹೋಗುವಿರಾ ಅಥವಾ ಸಾರ್ವಜನಿಕ ಆಸ್ಪತ್ರೆಗೆ ಹೋಗುವಿರಾ? ಖಾಸಗಿ/ಸಾರ್ವಜನಿಕ

೨೮. ವಲಸೆ ಬಗ್ಗೆ ಮಾಹಿತಿ

ನೀವು ವಲಸೆ ಹೋಗುವಿರಾ? ಹೌದು/ಇಲ್ಲ

ಹೌದಾದರೆ

ಎಲ್ಲಿಗೆ ಹೋಗಿದ್ದೀರಿ?

ಉದ್ದೇಶ?

ಯಾವ ವರ್ಷ?

ವಲಸೆಯ ಮಾಹಿತಿ

ವ್ಯಕ್ತಿಗಳ ಹೆಸರು	ಸ್ಥಳದ ಹೆಸರು	ಶಿಕ್ಷಣ	ವೃತ್ತಿ	ಆದಾಯ

೫. ರಾಜಕೀಯ ಮಾಹಿತಿ

೧. ನೀವು ಓಟು ಮಾಡುವಿರಾ? ಹೌದು/ಇಲ್ಲ

೨. ಗ್ರಾಮ ಸಭೆಯಲ್ಲಿ ಪಾಲ್ಗೊಳ್ಳುವಿರಾ? ಹೌದು/ಇಲ್ಲ

೩. ಮಹಿಳೆಯರು ಪಂಚಾಯತಿಯ ಸದಸ್ಯರಾಗಿರುವರೇ? ಹೌದು/ಇಲ್ಲ

೪. ಇದರಿಂದ ನಿಮಗೆ ಪ್ರಯೋಜನವಾಗಿದೆಯೇ? ಹೌದು/ಇಲ್ಲ

೫. ಮಹಿಳೆಯರಿಗೆ ಪಂಛಾಯಿತಿಯಲ್ಲಿ ಮೀಸಲು ಬೇಕೇ? ಹೌದು/ಇಲ್ಲ

೬. ನಿಮ್ಮಲ್ಲಿ ಜಾತಿ ಸಂಘಟನೆ ಇದೆಯೇ? ಹೌದು/ಇಲ್ಲ

೭. ಮಹಿಳೆಯರು ಜಾತಿ ಸಂಘಟನೆಯ ಕಾರ್ಯಕ್ರಮದಲ್ಲಿ ಭಾಗವಹಿಸುವರೇ? ಹೌದು/ಇಲ್ಲ.

೮. ನಿಮ್ಮನ್ನು ಎಸ್.ಟಿ. ಯಾದಿ(ಪಟ್ಟಿ)ಯಲ್ಲಿ ಸೇರಿಸಬೇಕು ಅಥವಾ ಬೇಡ? ಬೇಕು/ಬೇಡ.

೯. ಮಹಿಳೆಯರು ಪಂಚಾಯತಿಯಲ್ಲಿ ಭಾಗವಹಿಸುವುದನ್ನು ಗಂಡಸರು ಬೆಂಬಲಿಸುವರೇ? ಹೌದು/ಇಲ್ಲ

೧೦. ಊರ ಗೌಡನಿಗೆ ದಂಡಿಸುವ ಅಧಿಕಾರ ಇರಬೇಕೆ? ಹೌದು/ಇಲ್ಲ

೧೧. ವ್ಯಾಜ್ಯ ಬಗೆಹರಿಸಲು ನ್ಯಾಯಾಂಗಕ್ಕೆ ಹೋಗಬೇಕು? ಹೌದು/ಇಲ್ಲ

೬. ಧಾರ್ಮಿಕ ಮಾಹಿತಿ

೧. ಊರಿನ ಬಂಡಿ ಹಬ್ಬ ಹಾಗೂ ವೆಂಕಟರಮಣ ರಥೋತ್ಸವದಲ್ಲಿ ಭಾಗವಹಿಸುವಿರಾ? ಹೌದು/ಇಲ್ಲ

೨. ಸುಗ್ಗಿ ಕುಣಿತ ಪುರುಷ ಮಾತ್ರ ಮಾಡಬೇಕು. ಹೌದು/ಇಲ್ಲ

೩. ಹಬ್ಬ ಹರಿದಿನ ಮತ್ತು ಮದುವೆ ಹಿಂದಿನಂತೆ ಬಹಳ ದಿನಗಳವರೆಗೆ ಆಚರಿಸಬೇಕು. ಹೌದು/ಇಲ್ಲ

೪. ಮಹಿಳೆ ಮತ್ತು ಪುರುಷರು ಸಮಾನರು ಹೌದು/ಇಲ್ಲ

೫. ಪುರುಷರು ಮಹಿಳೆಯರಿಗಿಂತ ಶ್ರೇಷ್ಠರು ಹೌದು/ಇಲ್ಲ

೬. ಮಹಿಳೆಯರಿಗೆ ಮನೆಯಲ್ಲಿ ನಿರ್ಧಾರ ತೆಗೆದುಕೊಳ್ಳುವ ಹಕ್ಕು ಇರಬೇಕು. ಹೌದು/ಇಲ್ಲ.

ಹಾಲಕ್ಕಿಯ ಏಳು ಸೀಮೆಗಳಲ್ಲಿ ಬರುವ ಗ್ರಾಮಗಳು

೧. ಚಂದಾವರ ಸೀಮೆ

೧. ಸಾಣೆಮಕ್ಕಿ
೨. ನಾಲಗಳ್ಳಿ
೩. ಹಾರೊಡ್ಡಿ
೪. ಹೆಗರೆ
೫. ಕೂಜಳ್ಳಿ
೬. ವಡಗೇರಿ
೭. ದೀವಳ್ಳಿ
೮. ಕವಲಡ್ಡಿ
೯. ಕಲವೆ
೧೦. ಸಾಂತಗಲ್
೧೧. ಮೇಲಿನ ಕಂಡ್ರಕೋಣ
೧೨. ಕೆಳಗಿನ ಕಂಡ್ರಕೋಣ
೧೩. ಮೇಲಿನ ಹಟ್ಟೀಕೇರಿ
೧೪. ಕೆಳಗಿನ ಹಟ್ಟಿಕೇರಿ
೧೫. ಕೆಕ್ಕಾರ
೧೬. ಬಾದೊಳ್ಳಿ
೧೭. ತಲಗೇರಿ
೧೮. ತಲಗೋಡ
೧೯. ಉಂಟಗಿ
೨೦. ಬಗ್ಗೋಣ
೨೧. ದಿಡಗಣಿ ೧
೨೨. ಬಡಗಣ್ಣಿ ೨
೨೩. ಮಾದಿಕೊಟ್ಟಿಗೆ
೨೪. ಹಳದೀಪುರ ೧
೨೫. ಹಳದೀಪುರ ೨
೨೬. ಹಳದೀಪುರ ೩
೨೭. ಸಾಲೇಕೇರಿ
೨೮. ಅಘನಾಶಿನಿ
೨೯. ಕಾಗಾಲ
೩೦. ಬಾಳೇಗದ್ದೆ
೩೧. ಆರೊಳ್ಳಿ
೩೨. ಹೊನ್ನಾವರ ೧
೩೩. ಹೊನ್ನಾವರ ೨
೩೪. ಹೊನ್ನಾವರ ೩
೩೫. ದುಗ್ಗೂರು ೧
೩೬. ದುಗ್ಗೂರು ೨
೩೭. ವಂದೂರು
೩೮. ಅಪ್ಪೇಕೆರೆ
೩೯. ಹೊರೆಸಾಳ
೪೦. ಕಡ್ಲೆ ೧

೪೧. ಕಡ್ಲೆ ೨
೪೨. ಕಡ್ಲೆ ೩
೪೩. ಅಂಬ್ಲೆ
೪೪. ಗುಡಬಳ್ಳಿ
೪೫. ಲುಕ್ಕೆರಿ
೪೬. ಕಲ್ಲೊಡ
೪೭. ತಣ್ಣೀರುಕುಳಿ
೪೮. ಹರಕಡೆ
೪೯. ವಕ್ಕಲ್ಲಳ್ಳಿ ೧
೫೦. ವಕ್ಕಲ್ಲಳ್ಳಿ ೨
೫೧. ವಕ್ಕಲ್ಲಳ್ಳಿ ೩
೫೨. ಕರ್ಕಿಮಕ್ಕಿ
೫೩. ಮುಸುಗುಪ್ಪೆ ೧
೫೪. ಮುಸುಗುಪ್ಪೆ ೨
೫೫. ಹೊಸಹಳ್ಳಿ

೨. ಗೋಕರ್ಣ ಸೀಮೆ

೧. ದೇವಣ
೨. ತಲಗೇರಿ
೩. ಬಿದರಗೆರೆ
೪. ಬಿಜ್ಜೂರ
೫. ಹುಳಸೇಕೇರಿ
೬. ಬಂಡೀಕೇರಿ
೭. ಕುಡ್ಲೆ
೮. ಅಶೋಕೆ
೯. ದೇವನಂಗಿ
೧೦.ತೋಟಗೆರೆ

೩. ಕುಂಬಾರಗದ್ದೆ ಸೀಮೆ

೧. ಕಡಮೆ
೨. ಹನೇಹಳ್ಳಿ
೩. ಬೈಲಕೇರಿ
೪. ಹೊಸಕೇರಿ
೫. ಹೆಗರೆ
೬. ಗೋಳಿತಿಪ್ಪೆ
೭. ಬಾವಿಕೊಡ್ಲ
೮. ಕಾಮಗಿ
೯. ಜೂಗ
೧೦. ಬಳಸರೆ
೧೧. ಕೇಸಗುಡ್ಡೆ

೪. ಹರಟೆಸೀಮೆ

೧. ಮಿರ್ಜಾನ ೧
೨. ಮಿರ್ಜಾನ ೨
೩. ದುಂಡಕುಳಿ
೪. ಮಣಕೋಣ
೫. ಸಿಳ್ಳೆ
೬. ಬೆಳ್ಳೆ
೭. ಕುಡ್ಡೆ
೮. ಉಪ್ಪಿನಪಟ್ಣಾ
೯. ಶಿರಗುಂಜಿ
೧೦. ಮಲವಳ್ಳಿ
೧೧. ಕಬ್ರಿಗಿ

೫. ನುಶಿಕೋಟೆ ಸೀಮೆ

೧. ಮಾದನಗೇರಿ
೨. ಮೂಲೇಕೇರಿ
೩. ದೇವಿಗದ್ದೆ

೪. ಉಳುವರೆ

೫. ಹೊಸೂರು

೬. ಆಂದ್ಲೆ

೭. ಶಿವಪೂರ

೮. ಮೊರಳ್ಳಿ

೯. ಗುಂಡಬಾಳಾ

೧೦. ನೇವಳಸೆ

೧೧. ಮರಕಾಲ

೧೨. ಮೂಲೆಕೆರೆ

೧೩. ಕಂಡಗಾರ

೧೪. ಕೋಳಿ ಮಂಜಗುಣಿ

೧೬. ಶಿರಗುಂಜ

೧೭. ಹೊನ್ನಳ್ಳಿ

೧೮. ಆಗಸೂರು

೧೯. ಆಡ್ಲೂರ

೨೦. ಮಾರುಗದ್ದೆ

೨೧. ಮಕ್ಕಿಗದ್ದೆ

೨೨. ತಳಗದ್ದೆ

೨೩. ಬೆಲೆಕೇರಿ

೨೪. ಅಲಿಗೇರಿ

೨೫. ಮಾಸ್ತಿಕಟ್ಟಾ

೨೬. ಕೇಗಡಗೇರಿ.

೬. ಅಂಕೋಲೆ ಸೀಮೆ

೧. ಹೊನ್ನೆಬೈಲ

೨. ಶಿಂಗಣಮಕ್ಕಿ

೩. ಬೆಳಂಬಾರ

೪. ಬಡಗೇರಿ ೧

೫. ಬಡಗೇರೀ ೨

೬. ಬಾವಿಕೇರಿ

೭. ಕಂತ್ರಿ

೮. ಅಂಬರಕೊಡ್ಲ

೯. ಶಿರಕುಳಿ

೧೦. ಹೊಸಗದ್ದೆ

೧೧. ಹಡವ

೧೨. ಬೆಳಸೆ

೧೩. ಸಿರೂರ

೧೪. ಕೋಡಸಣಿ

೧೫. ಕುದ್ರಿಗೆ

೭. ಕಡವಾಡ ಸೀಮೆ

೧. ಕುಚ್ಚಿಗಾರ

೨. ಹರಟುಗಾ

೩. ಕೊನಸೆ

೪. ವಿರಜೆ

೫. ಕೋಡ್ರೆ

೬. ಹಳ್ಳೂರ

೭. ಬಣಗೆ

೮. ನಗ್ಗೆ

೯. ಕೋವೆ

೧೦. ನೀವಳಿ

೧೧. ಸಿರವೆ

೧೨. ಮಲೆಗದ್ದೆ

೧೩. ಬಟಡೆ

೧೪. ಸೋರೆಗದ್ದೆ

೧೫. ಬೇಳೂರು

೧೬. ಹರಸಗದ್ದೆ

೧೭. ಸಿದ್ಧರ

೧೮. ಕಂಚಿಗದ್ದೆ

೧೯. ಹಳೇಕೋಟೆ

೨೦. ನಾರಗೆರಿ

೨೧. ಶಿರವಾಡ ೨೨. ಆಲಿಗದ್ದೆ

೨೩. ಬೈತಖೋಲ್

೨೪. ಬಿಣಗೆ

೨೫. ಗುಡ್ಡೆಹಳ್ಳಿ

೨೬. ಮೂಡಲಮಕ್ಕಿ

೨೭. ಅರಗೆ

೨೮. ಚೆಂಡಿಯೆ

೨೯. ತೋಡೂರು

೩೦. ಕೋಡಾರ

೩೧. ಸಾಣೆಮಕ್ಕಿ

೩೨. ಕೀಕೋಣ

೩೩. ಮುದಗ

೩೪. ಹಾರವಾಡ

೩೫. ಕೆಳಗಿನ ಬೇಣ (ಸಕಲಬೇಣ)

೩೬. ಮೇಲಿನ ಬೇಣ (ವೈಲಬೇಣ)

೩೭. ಗುಳೆ

ಆಕರಸೂಚಿ

ವಿಷ್ಣು ನಾಯ್ಕ, ೨೦೦೫, ದುಡಿಯುವ ಕೈಗಳ ಹೋರಾಟದ ಕತೆ, ರಾಘವೇಂದ್ರ ಪ್ರಕಾಶನ, ಅಂಬಾರಕೊಡ್ಲ, ಅಂಕೋಲಾ.

ವಿಷ್ಣು ನಾಯ್ಕ, ೨೦೦೫, ಜನ ಸೇವಕ ಕವಿ, ದಿನಕರ ದೇಸಾಯಿ, ರಾಘವೇಂದ್ರ ಪ್ರಕಾಶನ, ಅಂಬಾರಕೊಡ್ಲ, ಅಂಕೋಲಾ.

ನಾಯಕ ಎನ್.ಆರ್., ೧೯೯೨, ಉತ್ತರ ಕನ್ನಡ ಜಿಲ್ಲೆಯ ಸಿದ್ಧಿ ಜನ, ಜಾನಪದ ಪ್ರಕಾಶನ, ಹೊನ್ನಾವರ, ಉತ್ತರ ಕನ್ನಡ.

ನಾಯಕ ಎನ್.ಆರ್. ೧೯೯೩, ಹಾಲಕ್ಕಿ ಒಕ್ಕಲಿಗರ ಸಾಂಸ್ಕೃತಿಕ ಕರ್ನಾಟಕ, ಸಾಹಿತ್ಯ ಅಕಾಡೆಮಿ, ನೃಪತುಂಗ ರಸ್ತೆ, ಬೆಂಗಳೂರು.

ನಾಯಕ ಎನ್.ಆರ್. ೨೦೦೪, ಗಾಮೊಕ್ಕಲು ಒಂದು ಸಾಂಸ್ಕೃತಿಕ ಅಧ್ಯಯನ, ಜಾನಪದ ಪ್ರಕಾಶನ, ಹೊನ್ನಾವರ, ಉತ್ತರ ಕನ್ನಡ.

ನಾಯಕ ಎನ್.ಆರ್., ೧೯೮೯, ಉತ್ತರ ಕನ್ನಡ ಜಿಲ್ಲೆಯ ಬುಡಕಟ್ಟು ಜನಾಂಗಗಳ ಜಾನಪದ, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ನಾಯಕ ಎನ್.ಆರ್., ೨೦೦೧, ಉತ್ತರ ಕನ್ನಡ ಜಿಲ್ಲೆಯ ನಾಡವರ ಸಂಸ್ಕೃತಿ, ಜಾನಪದ ಪ್ರಕಾಶನ, ಹೊನ್ನಾವರ.

ಭಟ್ ಎಲ್.ಜಿ., ೧೯೮೬, ಹಾಲಕ್ಕಿ ಒಕ್ಕಲಿಗರು, ವೈಜಯಂತಿ, ಉತ್ತರ ಕನ್ನಡ ಜಿಲ್ಲಾ ಸಾಂಸ್ಕೃತಿಕ ಸಂಘ, ಮೈಸೂರು.

ಭಟ್ ಎಲ್.ಜಿ., ೧೯೮೮, ಹಾಲಕ್ಕಿ ಒಕ್ಕಲಿಗರು, ಐ.ಬಿ.ಎಚ್.ಪ್ರಕಾಶನ, ಗಾಂಧಿನಗರ, ಬೆಂಗಳೂರು.

ಭಟ್ ಎಲ್.ಜಿ. ೧೯೭೪, ಹಾಲಕ್ಕಿ ಪಾಯಸ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

ಬೋರಲಿಂಗಯ್ಯ ಹಿ.ಚಿ., ೨೦೦೧, ವಿಸ್ಮೃತಿ ಮತ್ತು ಸಂಸ್ಕೃತಿ, ಸಿ.ವಿ.ಜಿ. ಪಬ್ಲಿಕೇಷನ್ ಬೆಂಗಳೂರು.

ಬೋರಲಿಂಗಯ್ಯ ಹಿ.ಚಿ., ೨೦೦೨, ಹಾಲಕ್ಕಿ ಒಕ್ಕಲಿಗರ ಪರಂಪರೆ, ಸಿ.ವಿ.ಜಿ. ಪಬ್ಲಿಕೇಷನ್ ಬೆಂಗಳೂರು.
ಬೋರಲಿಂಗಯ್ಯ ಹಿ.ಚಿ., ೧೯೯೩, ಸಿದ್ದಿಯರ ಸಂಸ್ಕೃತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.
ಪ್ರಭಾಕರ ಎ.ಎಸ್., ೨೦೦೦, ಬುಡಕಟ್ಟು ಬದುಕಿನ ಸ್ಥಿತ್ಯಂತರಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
ಪ್ರಭಾಕರ ಎ.ಎಸ್., (ಸಂ) ೨೦೦೬, ಆದಿವಾಸಿ ಆಖ್ಯಾನ, ಸಿದ್ಧಾರ್ಥ ಪ್ರಕಾಶನ, ಹೊಸಪೇಟೆ.
ಹೆಗಡೆ ಎಲ್.ಆರ್., ೧೯೮೮, ಹಾಲಕ್ಕಿ ಒಕ್ಕಲಿಗರ ಮದುವೆಯ ಹಾಡುಗಳು, ಕದಂಬ ಸಾಂಸ್ಕೃತಿಕ ಅಧ್ಯಯನ ಸಂಸ್ಥೆ, ಶಿರಸಿ.
ಹೆಗಡೆ ಎಲ್.ಆರ್., ೧೯೮೨, ಉತ್ತರ ಕನ್ನಡದ ಸಿದ್ಧಿ ಜನರು, ಐ.ಬಿ.ಎಚ್. ಪ್ರಕಾಶನ, ಬೆಂಗಳೂರು.
ಇಂದಿರಾ ಹೆಗ್ಗಡೆ, ೨೦೦೪, ಬಂಟರು ಒಂದು ಸಮಾಜೋ ಸಾಂಸ್ಕೃತಿಕ ಅಧ್ಯಯನ, ಕರ್ನಾಟಕ ಸರ್ಕಾರ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.
ಕೃಷ್ಣಾನಂದ ಕಾಮತ, ೧೯೯೯, ಅಕ್ಷತ, ನವಕರ್ನಾಟಕ ಪ್ರಕಾಶನ, ಬೆಂಗಳೂರು.
ಖಂಡೋಬಾ ಪಿ.ಕೆ., ೧೯೯೧, ಕರ್ನಾಟಕದ ಲಂಬಾಣಿಗಳು ಒಂದು ಸಾಂಸ್ಕೃತಿಕ ಅಧ್ಯಯನ, ದಿ.ತೇಜಸಿಂಗ್ ರಾಠೋಡ್ ಮೆಮೋರಿಯಲ್ ಟ್ರಸ್ಟ್, ಗುಲ್ಬರ್ಗಾ.
ಗಂಗಾಧರ ದೈವಜ್ಞ, ೨೦೦೦, ಬುಡಕಟ್ಟು ಸಮಾಜ: ಹುಟ್ಟು ಸಾವಿನ ನಡುವೆ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.
ರಾಮಕೃಷ್ಣ ಗುಂದಿ, ೧೯೯೩, ಆಗೇರರ ಸಂಸ್ಕೃತಿ, ಕರ್ನಾಟಕದ ಸಾಹಿತ್ಯ ಅಕಾಡೆಮಿ ನೃಪತುಂಗ ರಸ್ತೆ, ಬೆಂಗಳೂರು.
ಡಾ.ಸಣ್ಣರಾಮ, ೨೦೦೧, ಬುಡಕಟ್ಟು ಸಂಸ್ಕೃತಿ, ಪ್ರಸಾರಾಂಗ, ಕುವೆಂಪು ವಿಶ್ವವಿದ್ಯಾಲಯ.
ಚ.ನ.ಶಂಕರ ರಾವ್, ೧೯೯೯, ಭಾರತದ ಸಾಮಾಜಿಕ ಸಮಸ್ಯೆಗಳು ಮತ್ತು ಸಾಮಾಜಿಕ ವಿಘಟನೆ, ಜೈ ಭಾರತ ಪ್ರಕಾಶನ, ಮಂಗಳೂರು.
ಡಾ.ಎಚ್.ಎಸ್.ಶ್ರೀಮತಿ, ೨೦೦೩, ಸ್ತ್ರೀವಾದ, ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
ಡಾ.ಆರ್.ಇಂದಿರಾ, ೨೦೦೨, ಮಹಿಳೆ ಸಮಾಜ ಮತ್ತು ಸಂಸ್ಕೃತಿ, ಪ್ರಸಾರಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.
ಚಂದ್ರಶೇಖರ್ ಟಿ.ಆರ್., ೨೦೦೩, ಕರ್ನಾಟಕದ ಅಭಿವೃದ್ಧಿಯ ಸಾಮಾಜಿಕ ನೆಲೆಗಳು, ಸಿ.ವಿ.ಜಿ. ಪ್ರಕಾಶನ, ಬೆಂಗಳೂರು.

ಟಿ.ಆರ್.ಚಂದ್ರಶೇಖರ್, ೨೦೦೫, ಜನರ ಯೋಜನೆ ಕರ್ನಾಟಕದ ಅನುಭವಗಳು, ಪ್ರಸಾರಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಚಂದ್ರಪೂಜಾರಿ ಎಂ., ೨೦೦೫, ಸಮಾಜ ಸಂಶೋಧನೆ, ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಸೂರ್ಯನಾಥ ಕಾಮತ, (ಸಂ) ೧೯೮೦, ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು,

ನಾಗೇಗೌಡ ಎಚ್.ಎಲ್., ೨೦೦೪, ವೆರಿಯರ್ ಎಲ್ವಿನರ ಗಿರಿಜನ ಪ್ರಪಂಚ, ಸಾಹಿತ್ಯ ಸದನ ಪ್ರಕಾಶನ, ಬೆಂಗಳೂರು.

ವಿ.ಎ.ಜೋಶಿ, ೧೯೮೪, ಅಂಕೋಲ ತಾಲೂಕು ದರ್ಶನ, ಐ.ಬಿ.ಎಚ್. ಪ್ರಕಾಶನ, ಬೆಂಗಳೂರು.

ಜಿ.ಎಸ್.ಭಟ್ಟ, ೧೯೮೪, ಕುಮಟ ತಾಲೂಕು ದರ್ಶನ, ಐ.ಬಿ.ಎಚ್. ಪ್ರಕಾಶನ, ಬೆಂಗಳೂರು.

ನಿಯತಕಾಲಿಕೆಗಳು

ಚಂದ್ರಶೇಖರ ಟಿ.ಆರ್., ೧೯೯೯, ಅಭಿವೃದ್ಧಿ ಪ್ರಕ್ರಿಯೆ ಲಿಂಗ ಸಂಬಂಧೀ ಆಯಾಮಗಳು, ಮಹಿಳಾ ಅಧ್ಯಯನ, ಸಂಪುಟ ೯, ಸಂಚಿಕೆ ೧, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಚಂದ್ರಶೇಖರ ರಾ.ನಂ., ೨೦೦೩, ಕರ್ನಾಟಕದ ಅಭಿವೃದ್ಧಿ ಹೇಗೆ? ಹೊಸತು, ವಿಶೇಷ ಸಂಚಿಕೆ.

ಎಂ.ಉಷಾ, ೨೦೦೩, ಶ್ರೀಲತಾ ಬಾಟ್ಲಿವಾಲ ಮತ್ತು ಇತರರು, ಸ್ಟೇಟಸ್ ಆಫ್ ರೂರಲ್ ವುಮೆನ್ ಇನ್ ಕರ್ನಾಟಕ, ಅಭಿವೃದ್ಧಿ ಅಧ್ಯಯನ, ಸಂಪುಟ-೨, ಸಂಚಿಕೆ-೧.

ಟಿ.ಆರ್. ಚಂದ್ರಶೇಖರ, ೨೦೦೩, ಆಹಾರ ಮತ್ತು ಸ್ವಾತಂತ್ರ್ಯ ಅಭಿವೃದ್ಧಿ ಅಧ್ಯಯನ, ಸಂಪುಟ-೩, ಸಂಚಿಕೆ-೧.

ಎಚ್.ಡಿ.ಪ್ರಶಾಂತ, ೨೦೦೬, ಹೆಣ್ಣು ಮಕ್ಕಳ ಶಿಕ್ಷಣ ಒಂದು ಸ್ಥೂಲ ನೋಟ, ಅಭಿವೃದ್ಧಿ ಅಧ್ಯಯನ, ಸಂಪುಟ-೫, ಸಂಚಿಕೆ-೧.

ಸಿದ್ಧಗಂಗಮ್ಮ, ೨೦೦೬, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಅಭಿವೃದ್ಧಿ ಅಧ್ಯಯನ ಸಂಪುಟ-೫, ಸಂಚಿಕೆ-೧.

ವಿ.ಶ್ರೀಧರ, ೨೦೦೬, ಪಂಚಾಯಿತಿಗಳು ಮತ್ತು ಅಧಿಕಾರ (ವಿ)ಕೇಂದ್ರೀಕರಣ ಅಭಿವೃದ್ಧಿ ಅಧ್ಯಯನ, ಸಂಪುಟ-೫, ಸಂಚಿಕೆ-೨

ಎಂ.ಚಂದ್ರ ಪೂಜಾರಿ, ೨೦೦೬, ಭವಿಷ್ಯದ ಸುವರ್ಣ ಕರ್ನಾಟಕ, ಅಭಿವೃದ್ಧಿ ಅಧ್ಯಯನ ಸಂಪುಟ-೫, ಸಂಚಿಕೆ-೨.

ಸಿದ್ಧಗಂಗಮ್ಮ, ೨೦೦೫, ಕರ್ನಾಟಕದಲ್ಲಿ ಮಹಿಳೆ ಮತ್ತು ಮಕ್ಕಳ ಆರೋಗ್ಯ ಸ್ಥಿತಿಗತಿ, ಅಭಿವೃದ್ಧಿ ಅಧ್ಯಯನ, ಸಂಪುಟ-೧, ಸಂಚಿಕೆ-೨

ಟಿ.ಆರ್.ಚಂದ್ರಶೇಖರ, ೨೦೦೬, ಅಸ್ಪೃಶ್ಯತೆ, ಆರ್ಥಿಕತೆ ಮತ್ತು ಅಭಿವೃದ್ಧಿ, ಅಭಿವೃದ್ಧಿ ಅಧ್ಯಯನ, ಸಂಪುಟ-೪, ಸಂಚಿಕೆ-೩

ಎ.ಶ್ರೀಧರ, ೨೦೦೬, ಪಂಚಾಯತ ಮತ್ತು ಮಹಿಳೆ, ಅಭಿವೃದ್ಧಿ ಅಧ್ಯಯನ ಸಂಪುಟ-೪, ಸಂಚಿಕೆ-೩

ಡಾ.ಟಿ.ಆರ್.ಚಂದ್ರಶೇಖರ, ೨೦೦೬, ಆರ್ಥಿಕ ಸಮೀಕ್ಷೆ, ಜನವರಿ, ೨೦೦೬, ಹೊಸತು.

ಡಾ.ಟಿ.ಆರ್.ಚಂದ್ರಶೇಖರ, ೨೦೦೬, ಕರ್ನಾಟಕದ ಅಭಿವೃದ್ಧಿ ೫೦ ವರ್ಷಗಳ ಹಾಡು ಪಾಡು, ಹೊಸತು, ವಿಶೇಷ ಸಂಚಿಕೆ.

ವರದಿಗಳು

ಉತ್ತರ ಕನ್ನಡ ಜಿಲ್ಲೆಯ ಅಂಕಿ ಅಂಶಗಳ ನೋಟ, ೨೦೦೫-೦೬

ಕರ್ನಾಟಕದ ಗೆಝೆಟಿಯರ್ ಭಾಗ-೧, ೧೯೭೩

ಕರ್ನಾಟಕದ ಆರ್ಥಿಕ ಸಮೀಕ್ಷೆ, ೨೦೦೩-೦೪

ಉತ್ತರ ಕನ್ನಡ ಜಿಲ್ಲೆ ಹಾಲಕ್ಕಿ ಒಕ್ಕಲಿಗರ ಸಂಘ.

Books

Dinkar Desai, 1945 Vakkals the ab originals of kanara servants of India Society, Bombay.

A.R.Desai, 1988 Rural Sociology in India Popular Prakashan, Bombay.

Devendra Thakur 1995 Tribal development and Planning deep & deep publications, New Delhi.

Dr. V. Chandra 2004 "Human Right" Allahabad law agency Publication.

Suraj Sinha. B.D. Sharma (editions) 1977 Primitive Tribes, Printed by Govt of Inida Press, New Delhi.

S.C.Dube 1993, understanding change vikas publication Home Pvt. LTD.

Hemalatha H.M. Rameswari varma 2005 empowerment of Rural women in India, Hema Prakashana, Mysore.

B.Kuppreswamy 1972, Social change in India Vikas Publishing House Pvt Ltd Ghaziabad U.P.

George Prefer, Deepak Kumar behara 1997. Contemporary Society, Tribal Studies, Volume-II Concept Publishing company, New Delhi 1997.

Rao V.M. 2006 Tribal woment in India ADB Publication, Jaipur.

Cambell James M. 1883 Bombay Gazetter Karnataka (Kanara) Bombay, Govt Bombay Presidency.

M.K. Mohanty 1996 Tribal Society Programme Planning and eco change Ghugh Publication Allahabad, India.

K.S.Singh 1982 Economics of the Tribes & rural development print well publicaiton, Rupa books Pvt Ltd, jaipur.

Vijay Kaushik Bela rani Sharma 1998, planning for womens development published swrup & sons. New Delhi.

R.K. Sahoo S.N. Tripathi (edi) 2006 self Helf groups & women empowerment, Anmol pub, Pvt Ltd, New Delhi.

Madhuri Nath 2003, Rural women works force in India, B.R. Publishing, Corporation, Delhi.

Saraswathi Mishra 2002 Status of Indian women, Gyan Publishing House Publishing House, New Delhi,

V.V. Devasia Leelamma Devasia (1994) Empowering women for sustainable development, Ashish publishing, House, New Delhi.

M.C. Jairth 1991, Tribal Economy and Society, Mittal Publications, New Delhi.

R. Swrup and Ranveer Singh 1988 Social economy of a Tribal Village, Mitthal Publications, New Delhi, 1988.

Govind Rath (edi) 2006 Tribal development in India, Sage Publications, New Delhi.

Ray Buemen B.K. 1994 "Tribes in Perapectives "Mital Publication, New Delhi.

Thakur D. & D.N.Thakur (Ed) 1996 "Tribal women of India. Deep publication, Delhi.

Pariyaram M. Chacko (edi) 2005 Tribal communities and Social change sage publications, New Delhi.

M.S.Jairath 1991 Tribal economy and Society Mitthal Publications, New Delhi.

R.Swrup and Ranveer Singh 1988 social economy of a Tribal Village Mitthal Publications, New Delhi.

Journals Articles

Dubey D.C.Bardhan A 1978, Development, status of women & Fertility case study of a Tribal group, Demography India Vol No-7 Issue No 1-2 page No-91

Mishra Ashok Kumar 1999 Orissa Tribal women against Liquor. Economic & Political weekly, Vol no - 34 Issue No 19 page No 1089

Das Achyuth Das Vidya 1992, Development & Tribal women. Economic Political weekly Vol- No 27 issue No. 27, page No. 1378.

Radhakrishna Meena 1989 From Tribal Community to working class consciousness Yerkula women. Economic & Political weekly weekly Vol No. 24 issue No 17 Page No W S-2

DN 1988 Significance of womens Position Tribal society.

Econocim & Political weekly Vol No- 23 Issue No-26 page No 1311

Kishtwaria J. Ogale N. Manavathi A.U 1998 Economic contribution of gaddi Tribal women through market and non market work. Indian Journal of Economics Vol No. 79 Issue No 312 Page No.31

Chauhan S.K. Oberai R.C 1990 Role Of Tribal women in Farm operations. Indian Journal of Home Science Vol No 20 Issue No 1 page No 33

Saxena D. Bhantnagars 1988 weekly, Monthly and Seasonal time utilization by Tribal women in Rajashtan. Inidan journal of Home Science Vol No. 18 Issue No 1 page No 31.

Sarvana Velayutham 1999. Economic Transformation Of Tribal Women in Tamil Nadu. Indian Journal Of Labour Economics Vol No. 42 Issue 4 page No. 699.

Devi Lakshmi K.R. 1995 westren Ghat Dvelopment programmeant & Tribal women of Kerala. Indian Journal Of Regional Science. Vol No. 27 Issue No 1-2 Page 135.

Panigarhi Sudarsance Menon Geetas. Joshi Vibha 1987. Education Of Tribal Women A Socio-Economic Perspective. Indian Journal Of Social Work Vol No. 47, Issue 4 page No. 417.

Garg B.M. 1960 status of women in Tribal communities in India Vol No. 21, Issue no 2 page No. 191.

Sharma Vinit Sharma Anuragini 1993 the states of Women Fertility & family planning among Tribals of South Rajasthan, Journal of Family welfare. Vol No. 39 Issue No. 4, Page No. 20.

Singh Seema 1994 Tribal Rural Women Poverty and the Challenge Of Sustainable Development Journal Of Social & Economic Studies Vol No. II Issue No. 1-2 page No. 157.

Journal of social and Economics Studies. Manohar Lal 1990 Tribal Women Workers In India & their Problems Vol No. 3 Issue No 3 page No. 93.

Ghose Bholanath Bhandhyopadhya Kunal, 1995, Which Hunting & Status of Tribal women & Development, Man and Development Vol. No. 17 Issue No. 3, Page No. 130.

Khandekar Nita Kunzru, On 1996, employment Generation from animal husbandry among Tribal Women Productivity Vol. No. 37, Issue No.3, Page No. 524.

Thekkekar Mari, 1993, Tribal Womens the Trauma of Transition Social Action Vol. No. 43, Issue No. 1, page No. 23.

Menon Geeta, 1997, Tribal Women's Victims of the Development Process, Vol. No. 37, Issue No. 4, Page No. 373, Social Action.

Singh Seema, 1999, Employment of Women Tribal Region of Bihar Social Change Vol. No. 23, Issue No. 1-2, Page No. 239.

Singh Kulwinder Ohri Renu, 1993, Education of Tribal Attitude & Dynamics Social Change Vol. No. 23, Issue No. 44, Page No. 78.

Dmbasht N.K. 1993, Status of Tribal Women in India Social Change Vol. No. 23, Issue No. 44, Page No. 78.

Ambasht N.K. 1993, Status of Tribal Women in India social Change Vol. No. 23, Issue No.4, Page No. 60.

Ray Ranjana Banerjee Jayant, 1993, Health Studies among Tribal Women Social Change Vol. No. 23, Issue No. 4, Page No. 57.

Singh Amar Kumar, Rajyalaxmi, 1993, Status of Tribal Women In India Social Change Vol. No. 23, Issue No.4, Page No. 57.

Singh Amar Kumar, Rajyalaxmi, 1993, Status of Tribal Women In India Social Change Vol. No. 23, Issue No. 4, Page No.3.

Basu S.K. 1993, Health Status of Tribal Women In India Social Change Vol. No. 23, Issue No.4, page No.19.

Jabbi M.K., 1993, National Work Shop on the Status of Tribal in India, a Report Social Change Vol. No.23, Issue No.4, Page No.116.

Ramalingaswamy Prabha, 1986, Impact of Social Change and Health Problems of Tribal Women, Social Change Vol. No. 16, Issue No. 3, Page No. 100.

Dashora Rakesh Sharma Anushree, 2003, Rule of Tribal Women In Education Yojana Vol. No.47, Issue No.6, Page No.40.

Kashwan Prakash, 1999, Tribal Womens Participation in farm Forestry -A case study yojana Vol. No.44, Issue No.6, page No.30.

Kashwan Prakash, 1999, Tribal Womens Participation in Farm Forestry - A Case Study Yojana Vol. No. 46, Issue No. 6, page No. 30.

ಛಾಯಾಚಿತ್ರಗಳು

ಹಾಲಕ್ಕಿಗಳಲ್ಲಿ ವಿವಾಹದ ದೃಶ್ಯಗಳು



ಹಾಲಕ್ಕಿಗಳಲ್ಲಿ ವರನಿಗೆ ಅರಶಿನ ಹಚ್ಚುತ್ತಿರುವ ಚಿತ್ರ



ಕಳಸದ ಬಟ್ಟಲನ್ನು ಹೊತ್ತ ಸಹೋದರಿ



ಪುರೋಹಿತರ ಸಮ್ಮುಖದಲ್ಲಿ ವಧುವು ವರನಿಗೆ ಮಾಲೆ ಹಾಕುತ್ತಿರುವುದು



ಪುರೋಹಿತರ ಸಮ್ಮುಖದಲ್ಲಿ ವರನು ವಧುವಿಗೆ ತಾಳಿ ಕಟ್ಟುತ್ತಿರುವುದು



ಪುರೋಹಿತರ ಸಮ್ಮುಖದಲ್ಲಿ ವಧುವಿಗೆ ತಂದೆ ಧಾರೆ ಎರೆಯುತ್ತಿರುವುದು



ಅಂಕೋಲದ ಕೆ.ಎಲ್.ಇ. ಸೊಸೈಟಿಯ ಡಿ.ಎಡ್ ತರಬೇತಿ ಕಾಲೇಜಿನ ಹಾಲಕ್ಕಿ ವಿದ್ಯಾರ್ಥಿಗಳು



ಅಂಕೋಲದ ಕೆ.ಎಲ್.ಇ. ಸೊಸೈಟಿಯ ಬಿ.ಎಡ್ ತರಬೇತಿ ಕಾಲೇಜಿನ ಹಾಲಕ್ಕಿ ವಿದ್ಯಾರ್ಥಿನಿಯರು
೨೦೦೯



ಅಂಕೋಲದ ಕೆ.ಎಲ್.ಇ. ಸೊಸೈಟಿಯ ಬಿ.ಎಡ್ ತರಬೇತಿ ಕಾಲೇಜಿನ ಹಾಲಕ್ಕಿ ವಿದ್ಯಾರ್ಥಿಗಳು
೨೦೦೯



ಅಂಕೋಲದ ಸರಕಾರಿ ಪ್ರಥಮ ದರ್ಜೆ ಕಾಲೇಜಿನ ಬಿ.ಎ. ದ್ವಿತೀಯ ತರಗತಿಯ ಹಾಲಕ್ಕಿ ವಿದ್ಯಾರ್ಥಿನಿಯರು (೨೦೦೯)



ಅಂಕೋಲದ ಕೆ.ಎಲ್.ಇ. ಸೊಸೈಟಿಯ ವಿ.ಕೆ.ಗರ್ಲ್ಸ್ ಹೈಸ್ಕೂಲಿನ ಹತ್ತನೇ ತರಗತಿಯ ಹಾಲಕ್ಕಿ ವಿದ್ಯಾರ್ಥಿಗಳು (೨೦೦೯)



ಅಂಕೋಲದ ಬೆಳಸೆ ಗ್ರಾಮದ ಶ್ರೀಮತಿ ಅಮ್ಮಕ್ಕ ಗೌಡ (ದಾಖಲಾತಿ ಚಿತ್ರ)



ಅಂಕೋಲದ ಹಡಾವ್ರ ಗ್ರಾಮದ ಶ್ರೀ ನಾಗು ಗೌಡ ಅವರು ತಮ್ಮ ಮನೆಯ ಮುಂದೆ



ಬಾಲಕೃಷ್ಣರ ಪಕ್ಕದ ಅಂಗಡಿ



ಮಾಲೀಕರ ಟೀಯ ಅಂಗಡಿ



[illegible] ಮಾರುತ್ತಿರುವ ಹಾಲಕ್ಕಿ ಮಹಿಳೆ



ಮಾವಿನ ಹಣ್ಣು ಮಾರುತಿರುವ ಹಾಲಕಿ ಮಹಿಳೆ



ತರಕಾರಿ ಮಾರುತ್ತಿರುವ ಹಾಲಕ್ಕಿ ಮಹಿಳೆ



ಮಾವಿನ ಹಣ್ಣು ಮಾರುತ್ತಿರುವ ಹಾಲಕ್ಕಿ ಮಹಿಳೆ



ತರಕಾರಿ ಮಾರುತ್ತಿರುವ ಹಾಲಕ್ಕಿ ಮಹಿಳೆ



ತರಕಾರಿ ಮಾರುತ್ತಿರುವ ಹಾಲಕ್ಕಿ ಮಹಿಳೆ



ಹಾಲಕ್ಕಿಗಳ ತುಳಸಿ ಮನೆ



ಹಾಲಕ್ಕಿಗಳ ಸುಗ್ಗಿ ಕುಣಿತ (೨೦೦೮)



ಜಾನಪದಶ್ರೀ ಶ್ರೀಮತಿ ಕುಕ್ಕಿ ದೊಮ್ಮಗೌಡ



ಶ್ರೀಮತಿ ಪಾರ್ವತಿ ಗೌಡ, ಶಿರಸಿ

049234

AKSHARA GRANTHALAYA

ACC.NO.049234